ಗುರುವಾರ, ನವೆಂಬರ್ 23, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 323 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸ್ಪರ್ಧಾವಾಣಿ
ಬಗೆಯ ಪಾರಂಪರಿಕ ವೃತ್ತಿಗಳಿಗೆ ಪ್ರಧಾನಮಂತ್ರಿ ವಿಶ್ವಕರ್ಮ ಯೋಜನೆ ಅನ್ವಯವಾಗಲಿದೆ

ಆಳ-ಅಗಲ
ಕರಾವಳಿ ಕಂಬಳದ 'ಸೀಮೋಲ್ಲಂಘನ'

ಅನ್ನದಾತರ ಸಿಟ್ಟು ಅಧಿಕಾರಕ್ಕೆ ಪೆಟ್ಟು 11

ಅರ್ಹರಿಗೆ ಡಿ. 31ರೊಳಗೆ 'ಗ್ಯಾರಂಟಿ' 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,023 ▲	19,811 ▲	₹63,260 (ಬೆಂಗಳೂರು) ▲	₹75,300 (ಬೆಂಗಳೂರು)	83.32 ▼

2015ರ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯ ದತ್ತಾಂಶ ಆಧರಿಸಿ ಹೊಸ ವರದಿಗೆ ಸಿದ್ಧತೆ

ಜಾತಿಗಣತಿ ಮೂಲ ವರದಿ ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್. ಕಾಂತರಾಜ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯ (ಜಾತಿ ಜನಗಣತಿ) ದತ್ತಾಂಶ ಆಧರಿಸಿ ಸಿದ್ಧಪಡಿಸಿದ್ದ ವರದಿಯ ಮೂಲಪ್ರತಿ (ಹಸ್ತಪ್ರತಿ) ಆಯೋಗದ ಕಚೇರಿಯಿಂದಲೇ ನಾಪತ್ತೆಯಾಗಿದೆ. ಈ ವಿಚಾರವನ್ನೇ 'ಪ್ರಬಲ ಅಸ್ತ್ರ' ಮಾಡಿಕೊಂಡು ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ನಾಯಕರು ವಾಗ್ದಾಳಿ ನಡೆಸಿದ್ದಾರೆ.

'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ- 2015ರ ವರದಿ ಸ್ವೀಕರಿಸುವ ನನ್ನ ನಿರ್ಧಾರ ಅಚಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ ಬೆನ್ನಲ್ಲೆ, ಮೂಲಪ್ರತಿ (ಹಸ್ತಪ್ರತಿ) ಕಣ್ಮರೆಯಾಗಿರುವ ಸಂಗತಿ ಚರ್ಚೆಯಾಗುತ್ತಿದೆ.

ಮೂಲಪ್ರತಿ ನಾಪತ್ತೆಯ ಬೆನ್ನಲ್ಲೇ, ಕಾಂತರಾಜ ನೇತೃತ್ವದ ಆಯೋಗ ನಡೆಸಿದ್ದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯ ದತ್ತಾಂಶಗಳನ್ನು ವಿಶ್ಲೇಷಿಸಿ ಕೆ. ಜಯಪ್ರಕಾಶ ಹೆಗ್ಡೆ ನೇತೃತ್ವದ ಹಾಲಿ ಆಯೋಗ ವರದಿ ಸಿದ್ಧಪಡಿಸುತ್ತಿದೆ.

ಕಾಂತರಾಜ ನೇತೃತ್ವದ ಆಯೋಗ ಸಿದ್ಧಪಡಿಸಿದ್ದ ವರದಿಯ ಮೂಲಪ್ರತಿ (ಜಾತಿಗಳ ಮರುವರ್ಗೀಕರಣ ಮತ್ತು ಶಿಫಾರಸುಗಳನ್ನು ಒಳಗೊಂಡ ವರದಿ) ನಾಪತ್ತೆ ಆಗಿರುವುದು ಮತ್ತು ಅದೇ ದತ್ತಾಂಶಗಳನ್ನು ಬಳಸಿಕೊಂಡು 10 ವರ್ಷಗಳ ಬಳಿಕ ಜಯಪ್ರಕಾಶ ಹೆಗ್ಡೆ ನೇತೃತ್ವದ ಆಯೋಗ ಹೊಸ ವರದಿ ಸಿದ್ಧಪಡಿಸಲು ಮುಂದಾಗಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಹೊಸತಾಗಿ ಸಿದ್ಧಪಡಿಸುವ ವರದಿಗೆ ಕಾನೂನು ರಕ್ಷಣೆ ಸಿಗಬಹುದೇ ಎಂಬ ಜಿಜ್ಞಾಸೆಯೂ ಮೂಡಿದೆ.

5ನೇ ಪುಟ ನೋಡಿ

ವರದಿ ಕೊಡುವ ಮುನ್ನವೇ ಏಕೆ ವಿರೋಧ: ಸಿ.ಎಂ

'ಜಾತಿ ಜನಗಣತಿ ಸ್ವೀಕರಿಸದಂತೆ ಒಕ್ಕಲಿಗರ ಸಂಘ ಮನವಿ ಸಲ್ಲಿಸಿದೆ. ವರದಿ ಕೊಡುವ ಮುನ್ನವೇ ಏಕೆ ವಿರೋಧಿಸುತ್ತಿದ್ದೀರಿ ಎಂದು ನಾನು ಹೇಳಿದ್ದೇನೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಜಾತಿ ಜನಗಣತಿ ವರದಿ ಇನ್ನೂ ನಮ್ಮ ಕೈ ಸೇರಿಲ್ಲ. ಕೊಟ್ಟ ಮೇಲೆ ತೀರ್ಮಾನ ಕೈಗೊಳ್ಳಲಾಗುವುದು' ಎಂದರು.

'ನನ್ನನ್ನು ಭೇಟಿಯಾಗಿ ವರದಿ ಸಲ್ಲಿಸುವುದಾಗಿ ಆಯೋಗದ ಅಧ್ಯಕ್ಷರು ತಿಳಿಸಿದ್ದಾರೆ. ಅಲ್ಲಿಯವರೆಗೆ ಅವಧಿ ವಿಸ್ತರಣೆ ಮಾಡುವಂತೆಯೂ ಮನವಿ ಮಾಡಿದ್ದಾರೆ. ₹162 ಕೋಟಿ ವೆಚ್ಚ ಮಾಡಿ ವರದಿ ತಯಾರಿಸಲಾಗಿದೆ. ವರದಿಯಲ್ಲಿ ಏನಿದೆ ಎಂದು ತಿಳಿದಿಲ್ಲ. ಡಿಸೆಂಬರ್‌ನಲ್ಲಿ ವರದಿ ಸಲ್ಲಿಸುವ ನಿರೀಕ್ಷೆ ಇದೆ. ವರದಿ ಬಂದ ನಂತರ ಎಲ್ಲ ಸಂಶಯಗಳು ನಿವಾರಣೆ ಆಗಲಿದೆಯೋ ಇಲ್ಲವೋ ನೋಡೋಣ' ಎಂದರು.

ನಾನು ಸಹಿ ಮಾಡಬಾರದೇ?: ಡಿಕೆಶಿ

'ಜಾತಿ ಜನಗಣತಿ ವರದಿ ಸ್ವೀಕರಿಸದಂತೆ ಒಕ್ಕಲಿಗರ ಸಂಘವು ಮುಖ್ಯಮಂತ್ರಿಗೆ ಸಲ್ಲಿಸಿದ ಮನವಿ ಪತ್ರಕ್ಕೆ ನಾನು ಸಹಿ ಮಾಡಬಾರದೇ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು. ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಜಾತಿ ಜನಗಣತಿ ವಿಚಾರದಲ್ಲಿ ಎಷ್ಟು ಜನ ಸಚಿವರು ಸಭೆ ಮಾಡಿಲ್ಲ? ಅದೇ ರೀತಿ ನಾನು ಕೂಡಾ ರಾಜಕೀಯ ಪಕ್ಕಕ್ಕಿಟ್ಟು ನಮ್ಮ ಸಮಾಜ, ಅದರ ಗೌರವ, ಅಭಿಮಾನ ಉಳಿಸಿಕೊಳ್ಳಬೇಕು ಎಂದು ನನ್ನ ಸಮುದಾಯದ (ಒಕ್ಕಲಿಗ) ಸಭೆಯಲ್ಲಿ ಭಾಗವಹಿಸಿದ್ದೇನೆ. ಇಂಥ ಸಭೆಯಲ್ಲಿ ಭಾಗವಹಿಸಬೇಕು ಎನ್ನುವುದು ಎಲ್ಲ ನಾಯಕರಲ್ಲೂ ಇರುತ್ತದೆ' ಎಂದರು.

'ಜಾತಿ ಗಣತಿ ಮಾಡಿ ಸಾಮಾಜಿಕ ನ್ಯಾಯ ಒದಗಿಸಬೇಕು ಎಂಬುದು ನಮ್ಮ ಪಕ್ಷದ ನಿಲುವು. ಆ ನಿಲುವಿಗೆ ನಾವು ಬದ್ಧರಾಗಿದ್ದೇವೆ. ಆದರೆ, ಜಾತಿ ಜನಗಣತಿ ಸಮೀಕ್ಷೆ ವೈಜ್ಞಾನಿಕವಾಗಿ ಆಗಬೇಕು ಎಂದು ವಿವಿಧ ಸಮುದಾಯಗಳು ಆಗ್ರಹಿಸಿವೆ' ಎಂದರು.

'ಜನಸಂಖ್ಯೆ ಆಧಾರದಲ್ಲಿ ಮೀಸಲಾತಿ ಸಿಗಬೇಕು ಎಂದು ಅನೇಕ ಸಮುದಾಯಗಳು ಆಗ್ರಹಿಸಿವೆ. ಪರಿಶಿಷ್ಟರು, ಪಂಚಮಸಾಲಿ, ವೀರಶೈವರು, ಒಕ್ಕಲಿಗರು ಸೇರಿದಂತೆ ಹಲವರು ಪಕ್ಷಬೇಧ ಮರೆತು ಈ ವಿಚಾರದಲ್ಲಿ ಹೋರಾಟ ಮಾಡುತ್ತಿದ್ದಾರೆ. ಕೆಲವು ಸಮುದಾಯಗಳು ಮತ್ತು ಅದರ ನಾಯಕರು ಜಾತಿ ಜನಗಣತಿ ಸಮೀಕ್ಷೆ ವೇಳೆ ನಮ್ಮನ್ನು ಸಂಪರ್ಕಿಸಿಲ್ಲ. ಸಮೀಕ್ಷೆಯನ್ನು ವೈಜ್ಞಾನಿಕವಾಗಿ ಮಾಡಬೇಕು ಎಂದು ಕೇಳುತ್ತಿದ್ದಾರೆ' ಎಂದರು.



ಮೂಲಪ್ರತಿ ಕಾಣೆಯಾಗಿದೆ ಎಂಬ ಜಯಪ್ರಕಾಶ ಹೆಗ್ಡೆ ಹೇಳಿಕೆ ಬಗ್ಗೆ ನನಗೆ ಗೊತ್ತಿಲ್ಲ. ಆಯೋಗದ ಅವಧಿ ವಿಸ್ತರಿಸುವಂತೆ ಅವರು ಮನವಿ ಮಾಡಿದ್ದು, ವರದಿ ಕೊಡುವಲ್ಲಿವರೆಗೆ ಅವಧಿ ವಿಸ್ತರಣೆಯಾಗಲಿದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ



ಜಾತಿ ಗಣತಿ ವರದಿ ಸ್ವೀಕರಿಸಲು ಮುಖ್ಯಮಂತ್ರಿ ನಿರ್ಧರಿಸಿರುವುದು ಸರ್ವರಿಗೂ ಸಮಪಾಲು– ಸಮಬಾಳು ಕಲ್ಪಿಸುವ ಉದ್ದೇಶದಿಂದ ಅಲ್ಲ. ಅವರ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಮೆಚ್ಚಿಸಲು
ಎಚ್.ಡಿ.ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ



ಹಿಂದೆ ಸಿದ್ಧಪಡಿಸಿದ್ದ ವರದಿಯ ಮೂಲಪ್ರತಿ ಇಲ್ಲ. ಅದು ವಿಷಯವೇ ಅಲ್ಲ. ಸಮೀಕ್ಷೆಯ ಎಲ್ಲ ದತ್ತಾಂಶಗಳು ಇವೆ. ಅದನ್ನು ಆಧರಿಸಿ ನಾವು ವರದಿ ಸಿದ್ಧಪಡಿಸುತ್ತಿದ್ದೇವೆ. ಆದಷ್ಟು ಬೇಗ ವರದಿ ಸಲ್ಲಿಸುತ್ತೇವೆ
ಕೆ. ಜಯಪ್ರಕಾಶ ಹೆಗ್ಡೆ
ಅಧ್ಯಕ್ಷ, ಹಿಂದುಳಿದ ವರ್ಗಗಳ ಆಯೋಗ



ಸಿಲ್ಕ್ಯಾರಾ ಸುರಂಗದಲ್ಲಿ ನಡೆಯುತ್ತಿರುವ ರಕ್ಷಣಾ ಕಾರ್ಯಾಚರಣೆ ವೇಳೆ ಕ್ರೇನ್ ಬಳಸಿ ಡ್ರಿಲ್ಲಿಂಗ್ ಯಂತ್ರ ಸಾಗಿಸಲಾಯಿತು —ಎಎಫ್‌ಪಿ ಚಿತ್ರ

ಕಾರ್ಮಿಕರ ತಲುಪಲು 12 ಮೀಟರ್ ಬಾಕಿ

ರಕ್ಷಣೆ ಕಾರ್ಯ ಕೊನೆ ಹಂತಕ್ಕೆ

ಉತ್ತರಕಾಶಿ (ಉತ್ತರಾಖಂಡ) (ಪಿಟಿಐ): ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿಕೊಂಡಿರುವ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆ ಮಹತ್ವದ ಘಟ್ಟ ತಲುಪಿದೆ. ಇನ್ನು 12 ಮೀಟರ್‌ನಷ್ಟು ಕೊರೆದರೆ ಕಾರ್ಮಿಕರನ್ನು ತಲುಪಬಹುದು ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಕಾರ್ಮಿಕರ ರಕ್ಷಣೆಗಾಗಿ ಹಗಲು–ರಾತ್ರಿ ವಿವಿಧ ಆಯಾಮಗಳಿಂದ ನಡೆಯುತ್ತಿರುವ ಕಾರ್ಯಾಚರಣೆ 11ನೇ ದಿನ ಪ್ರವೇಶಿಸಿದೆ. ಯಾವುದೇ ಅಡೆತಡೆಯಿಲ್ಲದೆ ಕಾರ್ಯಾಚರಣೆ ಸಾಗಿದರೆ ಕಾರ್ಮಿಕರು ಶೀಘ್ರವೇ ಸುರಂಗದಿಂದ ಹೊರ ಬರುವ ನಿರೀಕ್ಷೆ ಇದೆ.

ರಕ್ಷಣೆಗಾಗಿ ಸುರಂಗ ಕೊರೆಯುವುದು ಪೂರ್ಣಗೊಂಡ ನಂತರ, ಕಾರ್ಮಿಕರು 800 ಮಿಲಿ ಮೀಟರ್ ವ್ಯಾಸದ ಸ್ಟೀಲ್ ಪೈಪ್‌ಗಳ ಮೂಲಕ ತೆವಳಿಕೊಂಡು ಹೊರ ಬರಬೇಕಾಗುತ್ತದೆ.

ಮುಖ್ಯಾಂಶಗಳು
- ಅಂತರರಾಷ್ಟ್ರೀಯ ತಜ್ಞರ ಸಮನ್ವಯದಲ್ಲಿ ಕಾರ್ಯಾಚರಣೆ
- ವೈದ್ಯಕೀಯ ತಂಡ ಮತ್ತು ಆಂಬುಲೆನ್ಸ್ ಸಜ್ಜು

ಘಟನಾ ಸ್ಥಳದಲ್ಲಿ 15 ವೈದ್ಯರ ತಂಡ ನಿಯೋಜಿಸಲಾಗಿದೆ. ನಿಯಂತ್ರಣ ಕೊಠಡಿಯಲ್ಲಿ ಎಂಟು ಹಾಸಿಗೆಗಳ ಆಸ್ಪತ್ರೆ ಸಿದ್ಧಪಡಿಸಲಾಗಿದೆ. ಹಲವಾರು ಆಂಬುಲೆನ್ಸ್‌ಗಳು ಮತ್ತು ಹೆಲಿ-ಕಾಪ್ಟರ್‌ಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಲಾಗಿದೆ. ಚಿನ್ಯಾಲಿಸೌರ್ ಸಮುದಾಯ ಆರೋಗ್ಯ ಕೇಂದ್ರದಲ್ಲಿ 41 ಹಾಸಿಗೆಗಳ ಆಸ್ಪತ್ರೆ ಸಿದ್ಧಪಡಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪರ್ಯಾಯ ಯೋಜನೆ ರೂಪಿಸಿರುವ ರಕ್ಷಣಾ ಸಿಬ್ಬಂದಿ, ಉತ್ತರಾಖಂಡ ಚಾರ್ ಧಾಮ್ ಮಾರ್ಗದಲ್ಲಿ ನಿರ್ಮಾಣ ಹಂತದಲ್ಲಿದ್ದ ಸುರಂಗದ ಇನ್ನೊಂದು ತುದಿಯಿಂದ ಸುಮಾರು ಎಂಟು ಮೀಟರ್ ಅಗೆದಿದ್ದರು.

800 ಮಿಲಿ ಮೀಟರ್ ವ್ಯಾಸದ ಉಕ್ಕಿನ ಪೈಪ್‌ಅನ್ನು ಕುಸಿದುಬಿದ್ದಿರುವ ಕಲ್ಲುಮಣ್ಣಿನ ಮೂಲಕ 45 ಮೀಟರ್‌ವರೆಗೆ ಅಳವಡಿಸಲಾಗಿದೆ. ಇನ್ನು 12 ಮೀಟರ್‌ನಷ್ಟು ಕೊರೆದರೆ ರಕ್ಷಣಾ ಸಿಬ್ಬಂದಿಗೆ ಕಾರ್ಮಿಕರನ್ನು ತಲುಪಲು ಸಾಧ್ಯವಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

11ನೇ ಪುಟ ನೋಡಿ

54 ಸಾವಿರ ಪಹಣಿ ಲೋಪ

ಬೆಂಗಳೂರು: ಪಹಣಿ ಲೋಪದ (3 ಮತ್ತು 9ನೇ ಕಾಲಂನಲ್ಲಿ ವ್ಯತ್ಯಾಸ) 54,175 ಪ್ರಕರಣಗಳು ರಾಜ್ಯದಲ್ಲಿ ದಾಖಲಾಗಿವೆ. ಇಂತಹ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚಿಸಿದರು. 7

ಗಾಜಾ: ಕದನ ವಿರಾಮಕ್ಕೆ ಸಹಮತ

ಜೆರುಸಲೇಂ (ಪಿಟಿಐ): ಗಾಜಾ ಪಟ್ಟಿಯಲ್ಲಿ ಮಾನವೀಯ ದೃಷ್ಟಿಯಿಂದ ನಾಲ್ಕು ದಿನ ತಾತ್ಕಾಲಿಕ ಕದನ ವಿರಾಮಕ್ಕೆ ಇಸ್ರೇಲ್ ನಾಯಕರು ಹಾಗೂ ಹಮಾಸ್ ಬಂಡುಕೋರರು ಬುಧವಾರ ಒಪ್ಪಿಗೆ ಸೂಚಿಸಿದ್ದಾರೆ.

ಕದನ ವಿರಾಮ ಘೋಷಿಸುವಂತೆ ವಿಶ್ವಸಂಸ್ಥೆ ಹಾಗೂ ಜಾಗತಿಕ ಮಾನವ ಹಕ್ಕುಗಳ ಸಂಘಟನೆಗಳಿಂದ ಒತ್ತಡ ಹೆಚ್ಚಿತ್ತು. ಇದರ ನಡುವೆಯೇ ಕತಾರ್, ಈಜಿಪ್ಟ್ ಹಾಗೂ ಅಮೆರಿಕ ಹೆಣೆದಿದ್ದ ಮಧ್ಯಸ್ಥಿಕೆಯ ಸೂತ್ರ ಫಲ ನೀಡಿದೆ. ಯುದ್ಧ ಆರಂಭವಾದ 47 ದಿನಗಳ ಬಳಿಕ ರಾಜತಾಂತ್ರಿಕ ಮಾತುಕತೆಗೆ ಸಿಕ್ಕಿದ ಮೊದಲ ಜಯ ಇದಾಗಿದೆ.

ಹಮಾಸ್‌ನ ರಾಜಕೀಯ ಕಚೇರಿಯು ಕತಾರ್‌ನ ದೋಹಾದಲ್ಲಿದೆ. ಕದನ ವಿರಾಮ ಕುರಿತ ಒಪ್ಪಂದದ ಮಾಹಿತಿಯು ಈ ಕಚೇರಿ ತಲುಪಿದೆ. ಗುರುವಾರ ಬೆಳಿಗ್ಗೆ 10 ಗಂಟೆಯಿಂದ ಕದನ ವಿರಾಮ ಜಾರಿಯಾಗಲಿದೆ. ಅಲ್ಲದೇ, ಅಗತ್ಯಕ್ಕೆ ತಕ್ಕಂತೆ ವಿರಾಮವನ್ನು ವಿಸ್ತರಿಸುವ ಅವಕಾಶವೂ ಇದೆ ಎಂದು ಕತಾರ್ ಖಚಿತಪಡಿಸಿದೆ.

ಗಾಜಾ ಪಟ್ಟಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಾನವೀಯ ನೆರವಿನ ಕಾರ್ಯಕರ್ತರ ಪ್ರವೇಶ, ಪರಿಹಾರ ಸಾಮಗ್ರಿ ಹಾಗೂ ಇಂಧನ ಪೂರೈಕೆಗೆ ಈ ಒಪ್ಪಂದವು ನೆರವಾಗಲಿದೆ ಎಂದು ಪ್ರತಿಪಾದಿಸಿದೆ.



ದಕ್ಷಿಣ ಗಾಜಾ ಪಟ್ಟಿಯಲ್ಲಿ ಇಸ್ರೇಲ್ ನಡೆಸಿದ ವಾಯುದಾಳಿಗೆ ನೆಲಸಮಗೊಂಡಿರುವ ಮನೆಯ ಅವಶೇಷದ ಮೇಲೆ ನಿವಾಸಿಯೊಬ್ಬರು ದುಃಖತಪ್ತರಾಗಿ ಕುಳಿತಿದ್ದರು —ಎಎಫ್‌ಪಿ ಚಿತ್ರ

50 ಒತ್ತೆಯಾಳು ಬಿಡುಗಡೆ: ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ನಡೆಸಿದ ದಾಳಿಯ ವೇಳೆ ಮಹಿಳೆಯರು, ಮಕ್ಕಳು ಸೇರಿದಂತೆ 240 ಇಸ್ರೇಲ್ ನಾಗರಿಕರನ್ನು ಹಮಾಸ್ ಬಂಡುಕೋರರು ಗಾಜಾದಲ್ಲಿ ಒತ್ತೆಯಾಳುಗಳಾಗಿ ಇಟ್ಟುಕೊಂಡಿದ್ದಾರೆ. ಕದನ ವಿರಾಮದ ಅವಧಿಯಲ್ಲಿ ಈ ಪೈಕಿ 50 ಒತ್ತೆಯಾಳುಗಳ ಸುರಕ್ಷಿತ ಬಿಡುಗಡೆಗೆ ಬಂಡುಕೋರರು ಒಪ್ಪಿದ್ದಾರೆ.

ಅಲ್ಲದೇ, ಇಸ್ರೇಲ್ ಜೈಲುಗಳಲ್ಲಿ ಇರುವ 150 ಪ್ಯಾಲೆಸ್ಟೀನ್ ನಾಗರಿಕರ ಬಿಡುಗಡೆಗೂ ಸಮ್ಮತಿಸಲಾಗಿದೆ.

ಇನ್ನೊಂದು ಸುದ್ದಿ 11

ಕರ್ನಾಟಕ ಮೂಲದ ಕ್ಯಾಪ್ಟನ್ ಸೇರಿ ನಾಲ್ವರು ಹುತಾತ್ಮ

ರಜೌರಿ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಗಡಿಯಲ್ಲಿ ಭಯೋತ್ಪಾದಕರು ಮತ್ತು ಭದ್ರತಾ ಪಡೆಗಳ ನಡುವೆ ಬುಧವಾರ ನಡೆದ ಗುಂಡಿನ ಚಕಮಕಿಯಲ್ಲಿ ಸೇನೆಯ ಇಬ್ಬರು ಕ್ಯಾಪ್ಟನ್‌ಗಳು, ಹವಾಲ್ದಾರ್ ಮತ್ತು ಯೋಧರೊಬ್ಬರು ಹುತಾತ್ಮರಾಗಿದ್ದಾರೆ.

ಸೇನೆಯ ಮೇಜರ್ ಹಾಗೂ ಮತ್ತೊಬ್ಬ ಯೋಧ ಗಾಯಗೊಂಡಿದ್ದು ಅವರನ್ನು ಉಧಂಪುರದ ಸೇನಾ ಕಮಾಂಡ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಹುತಾತ್ಮರಾದವರ ಪೈಕಿ, 63–ರಾಷ್ಟ್ರೀಯ ರೈಫಲ್ಸ್‌ನ ಕ್ಯಾಪ್ಟನ್ ಎಂ.ವಿ.ಪ್ರಾಂಜಲ್ ಅವರು ಮಂಗಳೂರು ರಿಫೈನರಿ ಅಂಡ್ ಪೆಟ್ರೊಕೆಮಿಕಲ್ಸ್ ಲಿಮಿಟೆಡ್‌ನ (ಎಂಆರ್‌ಪಿಎಲ್) ಮಾಜಿ ನಿರ್ದೇಶಕ ಎಂ.ವೆಂಕಟೇಶ್ ಅವರ ಪುತ್ರ ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ. ಪ್ರಾಂಜಲ್, ಎಂಆರ್‌ಪಿಎಲ್‌ನ ದೆಹಲಿ ಪಬ್ಲಿಕ್ ಸ್ಕೂಲ್ ಹಳೆ ವಿದ್ಯಾರ್ಥಿಯಾಗಿದ್ದರು ಎಂದೂ ತಿಳಿಸಿವೆ.

ಬಾಜಿಮಾಲ್‌ನ ಅರಣ್ಯ ಪ್ರದೇಶದಲ್ಲಿ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಹಾಗೂ ಸೇನೆ ಜಂಟಿಯಾಗಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾಗ ಅಲ್ಲಿ ಅವಿತಿದ್ದ ಉಗ್ರರು ಗುಂಡಿನ ದಾಳಿ ನಡೆಸಿದ್ದಾರೆ. ಭಾರಿ ಶಸ್ತ್ರಾಸ್ತ್ರ ಹೊಂದಿರುವ ಇಬ್ಬರು ಉಗ್ರರು ಅರಣ್ಯದಲ್ಲಿ ಅವಿತಿರುವ ಸಾಧ್ಯತೆ ಇದ್ದು, ಹೆಚ್ಚುವರಿ ಪಡೆಗಳನ್ನು ಸ್ಥಳಕ್ಕೆ ಕಳುಹಿಸಲಾಗಿದೆ.

'ಗುಪ್ತಚರ ಇಲಾಖೆಯ ಮಾಹಿತಿ ಅನ್ವಯ ಗುಲಬರ್ಗ್ ಅರಣ್ಯ ಪ್ರದೇಶದ ಕಾಲಕೋಟ್‌ನಲ್ಲಿ ಭಾನುವಾರದಿಂದಲೇ ಶೋಧ ಕಾರ್ಯಾಚರಣೆ ಆರಂಭಿಸಲಾಗಿತ್ತು' ಎಂದು ಸೇನೆಯು 'ಎಕ್ಸ್' ವೇದಿಕೆಯಲ್ಲಿ ತಿಳಿಸಿದೆ.

ಅರಣ್ಯದಲ್ಲಿ ಅವಿತುಕೊಂಡಿರುವ ಭಯೋತ್ಪಾದಕರೂ ಗಾಯಗೊಂಡಿದ್ದಾರೆ. ಈ ಪ್ರದೇಶವನ್ನು ಭದ್ರತಾಪಡೆ ಸುತ್ತುವರಿದಿದೆ. ಎನ್‌ಕೌಂಟರ್ ನಡೆದ ಪ್ರದೇಶದಲ್ಲಿರುವ ಇಬ್ಬರು ಉಗ್ರರು ವಿದೇಶಿಯರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿ. 23ಕ್ಕೆ ಪಿಎಸ್‌ಐ ಲಿಖಿತ ಮರುಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳ (ಪಿಎಸ್‌ಐ) 545 ಹುದ್ದೆಗಳ ನೇಮಕಾತಿಗೆ ಡಿ.23ರಂದು ಲಿಖಿತ ಮರುಪರೀಕ್ಷೆ ನಡೆಯಲಿದೆ.

ಹೈಕೋರ್ಟ್ ಆದೇಶದಂತೆ ಮರುಪರೀಕ್ಷೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ದಿನಾಂಕ ನಿಗದಿ ಮಾಡಿದ್ದು, ಇದೇ ಹುದ್ದೆಗಳಿಗೆ ಹಿಂದೆ ನಡೆದಿದ್ದ ಪರೀಕ್ಷೆಗೆ ಅರ್ಹರಾಗಿದ್ದವರು ಈ ಮರುಪರೀಕ್ಷೆಗೂ ಅರ್ಹತೆ ಪಡೆಯುತ್ತಾರೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಹೇಳಿದ್ದಾರೆ.

2021ರ ಜ.21ರಂದು 545 ಪಿಎಸ್‌ಐ ಹುದ್ದೆಗಳ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. ಅದೇ ವರ್ಷದ ಅ.3 ರಂದು ಲಿಖಿತ ಪರೀಕ್ಷೆ ನಡೆದಿತ್ತು.

ಪರೀಕ್ಷಾ ಅಕ್ರಮ ಬೆಳಕಿಗೆ ಬಂದು ಎಡಿಜಿಪಿ ದರ್ಜೆಯ ಅಧಿಕಾರಿ ಸೇರಿದಂತೆ ಹಲವರನ್ನು ಬಂಧಿಸಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ್ದ ಕೋರ್ಟ್ ಮರುಪರೀಕ್ಷೆ ನಡೆಸುವಂತೆ ಸೂಚಿಸಿತ್ತು.

'ಕೆಂಪು ಡೈರಿ ಉಲ್ಲೇಖವೇ ಅಸಂಬದ್ಧ'

ಜೈಪುರ (ಪಿಟಿಐ); ಚುನಾವಣಾ ಪ್ರಚಾರದ ವೇಳೆ ಬಿಜೆಪಿ ನಾಯಕರು ಪ್ರಸ್ತಾಪಿಸಿರುವ 'ಕೆಂಪು ಡೈರಿ' ವಿಚಾರ ಅಸಂಬದ್ಧ ಎಂದು ಹೇಳಿರುವ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಅವರ ಆರೋಪದಲ್ಲಿ ಯಾವುದೇ ಹುರುಳಿದ್ದರೆ, ಡೈರಿಯನ್ನು ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ ಅಥವಾ ಸಿಬಿಐಗೆ ಹಸ್ತಾಂತರಿಸಬೇಕು ಎಂದು ಹೇಳಿದ್ದಾರೆ. 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು

ಕೆವೈಸಿ ದುರ್ಬಳಕೆ: ಠಾಣೆ ಮೆಟ್ಟಿಲೇರಿದ ಪ್ರಾಧ್ಯಾಪಕ • ಬ್ಯಾಂಕ್, ಏಜೆನ್ಸಿಗಳು ಭಾಗಿ ಶಂಕೆ

ಅರ್ಜಿ ಸಲ್ಲಿಸದಿದ್ದರೂ ₹35 ಲಕ್ಷ ಸಾಲ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಆಧಾರ್, ಪಾನ್ ಕಾರ್ಡ್ ಹಾಗೂ ಇತರೆ ಕೆವೈಸಿ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ಬ್ಯಾಂಕ್‌ಗಳಿಂದ ಲಕ್ಷಗಟ್ಟಲೆ ಸಾಲ ಪಡೆಯುತ್ತಿರುವ ಜಾಲ ರಾಜ್ಯದಲ್ಲಿ ಸಕ್ರಿಯವಾಗಿದ್ದು, ಜಾಲದ ಸುಳಿಯಲ್ಲಿ ಸಿಲುಕಿದ ಹಲವರು ಪೊಲೀಸ್ ಠಾಣೆ ಮೆಟ್ಟಿಲೇರುತ್ತಿದ್ದಾರೆ.

ಬ್ಯಾಂಕ್‌ಗಳಲ್ಲಿ ವೇತನ ಖಾತೆ ತೆರೆದಿರುವ ಕಾಲೇಜು ಪ್ರಾಧ್ಯಾಪಕರು, ಸರ್ಕಾರಿ ಹಾಗೂ ಖಾಸಗಿ ಕಂಪನಿ ನೌಕರರು ಹಾಗೂ ಇತರರನ್ನು ಗುರಿಯಾಗಿಸಿಕೊಂಡು ವಂಚನೆ ಮಾಡುತ್ತಿರುವ ಜಾಲದ ರೂವಾರಿಗಳು, ಸಾಲ ಪಡೆದು ಪರಾರಿಯಾಗುತ್ತಿದ್ದಾರೆ.

ಅರ್ಜಿ ಸಲ್ಲಿಸದಿದ್ದರೂ ಸಾಲ ಮಂಜೂರು ಹೇಗಾಯಿತು ಎಂದು ಪ್ರಶ್ನಿಸಿ ಸಂತ್ರಸ್ತರು ಬ್ಯಾಂಕ್‌ಗಳಿಗೆ ಅಲೆದಾಡುತ್ತಿದ್ದಾರೆ. 'ಗೋಪ್ಯ ಮಾಹಿತಿ' ಅಸ್ತ್ರ ಬಳಸುತ್ತಿರುವ ಬ್ಯಾಂಕ್ ಸಿಬ್ಬಂದಿ, ಸಾಲ ಮಂಜೂರು ಬಗ್ಗೆ ವೈಯಕ್ತಿಕ ದಾಖಲೆಗಳನ್ನು ನೀಡಲು ಹಿಂದೇಟು ಹಾಕುತ್ತಿದ್ದಾರೆ. ಸಂತ್ರಸ್ತರು ಪೊಲೀಸರಿಗೆ ದೂರು ನೀಡುತ್ತಿದ್ದು, ಬ್ಯಾಂಕ್‌ಗಳು ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಾಗುತ್ತಿವೆ.

'ಕೆವೈಸಿ ದುರುಪಯೋಗಪಡಿಸಿಕೊಂಡು ಸಾಲ ಪಡೆಯುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ಕೆಲವರು ಠಾಣೆಗೆ ದೂರು ನೀಡುತ್ತಿದ್ದಾರೆ. ಹಲವರು, ಬ್ಯಾಂಕ್ ಹಾಗೂ ಆರ್‌ಬಿಐ ವೇದಿಕೆಯಲ್ಲಿ ಪರಿಹಾರಕ್ಕೆ ಪ್ರಯತ್ನಿಸುತ್ತಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪ್ರಾಧ್ಯಾಪಕರ ಹೆಸರಿನಲ್ಲಿ ₹35 ಲಕ್ಷ ಸಾಲ: ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜೊಂದರ ಪ್ರಾಧ್ಯಾಪಕರ ಆಧಾರ್ ಹಾಗೂ ಪಾನ್ ಕಾರ್ಡ್ ದುರುಪಯೋಗಪಡಿಸಿಕೊಂಡು ಎರಡು ಬ್ಯಾಂಕ್‌ಗಳಲ್ಲಿ ₹35 ಲಕ್ಷ ಸಾಲ ಮಂಜೂರು ಮಾಡಲಾಗಿದ್ದು, ಈ ಬಗ್ಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಕೋಣನಕುಂಟೆಯ ಚುಂಚಘಟ್ಟ ಮುಖ್ಯರಸ್ತೆ ನಿವಾಸಿಯಾಗಿರುವ 45 ವರ್ಷದ ಪ್ರಾಧ್ಯಾಪಕರೊಬ್ಬರು ದೂರು ನೀಡಿದ್ದಾರೆ. ಆಕ್ಸಿಸ್ ಬ್ಯಾಂಕ್‌ನ ಜಯನಗರ 4ನೇ ಹಂತದ ಶಾಖೆ ಅಧಿಕಾರಿಗಳು ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ತಮ್ಮದಲ್ಲದ ತಪ್ಪಿಗೆ ಅಲೆದಾಟ: 'ನನ್ನ ವೇತನ ಬ್ಯಾಂಕ್ ಖಾತೆಗೆ ಜಮೆ ಆಗುತ್ತದೆ. ಗೃಹ ಸಾಲ ಪಡೆಯಲು ಬ್ಯಾಂಕ್‌ಗೆ ಹೋಗಿದ್ದೆ. ಸಿಬಿಲ್ ಸ್ಕೋರ್ ಪರಿಶೀಲಿಸಿದ್ದ ಸಿಬ್ಬಂದಿ, 'ನಿಮ್ಮ ಹೆಸರಿನಲ್ಲಿ ₹10 ಲಕ್ಷ ಹಾಗೂ ₹25 ಲಕ್ಷದ ಎರಡು ವೈಯಕ್ತಿಕ ಸಾಲಗಳಿವೆ. ಕಂತು ಪಾವತಿ ಬಾಕಿ ಇದ್ದು, ಸಿಬಿಲ್ ಸ್ಕೋರ್ ಕಡಿಮೆ ಇದೆ. ಗೃಹ ಸಾಲ ಸಿಗುವುದಿಲ್ಲ' ಎಂಬುದಾಗಿ ಹೇಳಿದ್ದರು' ಎಂದು ದೂರುದಾರ ಪ್ರಾಧ್ಯಾಪಕ 'ಪ್ರಜಾವಾಣಿ'ಗೆ ತಿಳಿಸಿದರು.

'ಸಾಲ ನೀಡಿದವರು ಯಾರು ಹಾಗೂ ತೆಗೆದುಕೊಂಡವರು ಯಾರು ಎಂಬುದನ್ನು ಬ್ಯಾಂಕ್‌ನವರು ಆರಂಭದಲ್ಲಿ ಹೇಳಿರಲಿಲ್ಲ. ಅದನ್ನು ತಿಳಿಯಲು ಅಲೆದಾಟ ಆರಂಭವಾಯಿತು. ಕೆಲ ದಿನಗಳ ನಂತರ, ₹10 ಲಕ್ಷ ಸಾಲ ಮಂಜೂರು ಮಾಡಿದ್ದ ಬ್ಯಾಂಕ್ ಹೆಸರು ತಿಳಿಯಿತು. ಅಲ್ಲಿ ವಿಚಾರಿಸಿದಾಗ, ಸಿಬ್ಬಂದಿ ತಪ್ಪೊಪ್ಪಿಕೊಂಡರು. ಸಾಲ ಮರುಪಾವತಿ ಮಾಡದಂತೆ ತಿಳಿಸಿದ್ದಾರೆ' ಎಂದು ಹೇಳಿದರು.

'ಆಕ್ಸಿಸ್ ಬ್ಯಾಂಕ್‌ನಿಂದ ₹25 ಲಕ್ಷ ಸಾಲ ಮಂಜೂರಾಗಿದ್ದು ಗೊತ್ತಾಯಿತು. ಬ್ಯಾಂಕ್ ವ್ಯವಸ್ಥಾಪಕರು ಹಾಗೂ ಸಿಬ್ಬಂದಿಯನ್ನು ವಿಚಾರಿಸಿದಾಗ, ಯಾವುದೇ ಮಾಹಿತಿ ನೀಡಲಿಲ್ಲ. ಆಕ್ಸಿಸ್ ಬ್ಯಾಂಕ್‌ನಲ್ಲಿ ನನ್ನ ಖಾತೆಯಿಲ್ಲ. ಯಾವುದೇ ಸಾಲಕ್ಕೂ ಅರ್ಜಿ ಸಲ್ಲಿಸಿಲ್ಲ. ಹೇಗೆ ಸಾಲ ನೀಡಿದ್ದೀರಾ ಎಂದು ಪ್ರಶ್ನಿಸಿದ್ದೆ. ಸಾಲ ಮಂಜೂರು ದಾಖಲೆ ಕೇಳಿದ್ದೆ. 'ಗೋಪ್ಯ ಮಾಹಿತಿ' ಎಂದು ಸಬೂಬು ಹೇಳಿ ಬ್ಯಾಂಕ್‌ನವರು ದಾಖಲೆ ನೀಡಲಿಲ್ಲ. ಈ ಬಗ್ಗೆ ಆರ್‌ಬಿಐಗೂ ದೂರು ನೀಡಿದ್ದೇನೆ' ಎಂದು ತಿಳಿಸಿದರು. 'ವಕೀಲರ ಸಲಹೆಯಂತೆ ಠಾಣೆಗೆ ದೂರು ನೀಡಿದ್ದೇನೆ. ಸಾಲದ ವಿಚಾರ ಇತ್ಯರ್ಥವಾಗಿಲ್ಲ. ಆಕ್ಸಿಸ್ ಬ್ಯಾಂಕ್ ವಿರುದ್ಧ ಕಾನೂನು ಹೋರಾಟ ಮುಂದುವರಿದಿದೆ' ಎಂದು ಹೇಳಿದರು.

ವ್ಯವಸ್ಥಿತ ಜಾಲದಲ್ಲಿ ಹಲವರು ಭಾಗಿ: 'ಅಗತ್ಯ ಸೇವೆಗಳು ಹಾಗೂ ಇತರೆ ಉದ್ದೇಶಕ್ಕಾಗಿ ಜನರು ನೀಡಿರುವ ದಾಖಲೆಗಳನ್ನು ದುರುಪಯೋಗಪಡಿಸಿಕೊಂಡು ಸಾಲ ಪಡೆಯುತ್ತಿರುವ ಜಾಲದಲ್ಲಿ ಕೆಲ ಬ್ಯಾಂಕ್ ಸಿಬ್ಬಂದಿ ಹಾಗೂ ಕೆಲ ಏಜೆನ್ಸಿಯವರು ಭಾಗಿಯಾಗಿರುವ ಶಂಕೆ ಇದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಪ್ರಾಧ್ಯಾಪಕರ ಪ್ರಕರಣದಲ್ಲಿ ಬ್ಯಾಂಕ್ ಸಿಬ್ಬಂದಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗಿದೆ. ಅಪರಿಚಿತ ವ್ಯಕ್ತಿಯೊಬ್ಬ, ಪ್ರಾಧ್ಯಾಪಕರ ದಾಖಲೆಗಳನ್ನು ಬ್ಯಾಂಕ್‌ಗೆ ನೀಡಿ ಸಾಲ ಪಡೆದಿರುವುದು ಗೊತ್ತಾಗಿದೆ. ಪ್ರಕರಣದ ಹಿಂದೆ ಯಾರೆಲ್ಲ ಇದ್ದಾರೆ ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ತಿಳಿಸಿವೆ.

ಪ್ರಕರಣದ ಬಗ್ಗೆ ಮಾಹಿತಿ ಪಡೆಯಲು ಆಕ್ಸಿಸ್ ಬ್ಯಾಂಕ್ ಅಧಿಕಾರಿಗಳು ಲಭ್ಯರಾಗಲಿಲ್ಲ.

ಸಾಲ ಪರೀಕ್ಷೆ ಹೇಗೆ?

'ಸಾರ್ವಜನಿಕರು ತಮ್ಮ ಹೆಸರಿನಲ್ಲಿ ಯಾವುದಾದರೂ ಸಾಲ ಇದೆಯೇ ಎಂಬುದನ್ನು ತಿಳಿಯಲು ಸಿಬಿಲ್ ಸ್ಕೋರ್ ಪರಿಶೀಲನೆ ಮಾಡಬೇಕು. ಅದರಲ್ಲಿ ಸಾಲ ಹಾಗೂ ಅದರ ಪ್ರಾಥಮಿಕ ವಿವರಣೆ ಇರುತ್ತದೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು. 'ಅಕಸ್ಮಾತ್ ಅರ್ಜಿ ಸಲ್ಲಿಸದಿದ್ದರೂ ಸಾಲ ಮಂಜೂರು ಆಗಿದ್ದರೆ ಅಥವಾ ತಮ್ಮ ಹೆಸರಿನಲ್ಲಿ ಬೇರೆ ಯಾರಾದರೂ ಸಾಲ ಪಡೆದಿದ್ದರೆ ಸಂಬಂಧಪಟ್ಟ ಬ್ಯಾಂಕ್ ಶಾಖೆ ಸಂಪರ್ಕಿಸಬಹುದು. ಆರ್‌ಬಿಐ ಶಾಖೆಗೂ ದೂರು ನೀಡಬಹುದು. ಜೊತೆಗೆ, ಪೊಲೀಸ್ ಠಾಣೆಗೂ ದೂರು ನೀಡಲು ಅವಕಾಶವಿದೆ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಅಮಾನತು ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಲು ಇಬ್ರಾಹಿಂ ನಿರ್ಧಾರ

ಬೆಂಗಳೂರು: 'ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಅಮಾನತು ಮಾಡಿರುವ ಕ್ರಮ ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರುತ್ತಿರುವೆ' ಎಂದು ಸಿ.ಎಂ. ಇಬ್ರಾಹಿಂ ಹೇಳಿದರು.

ಬುಧವಾರ ನಡೆದ ಮುಲಾಯಂ ಸಿಂಗ್ ಯಾದವ್ ಜನ್ಮದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಅವರು ತೆಗೆದುಕೊಂಡ ನಿರ್ಧಾರ ಪಕ್ಷದ ನಿಯಮಗಳಿಗೆ ವಿರುದ್ಧ. ಇದೇ ನ. 23 ರಂದು ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗುವುದು ಎಂದರು.

ಈ ಕುರಿತು ಹಾಗೂ ಬಿಜೆಪಿ ಜತೆಗಿನ ಸಖ್ಯ ಸೇರಿದಂತೆ ಪಕ್ಷದ ಈಚಿನ ಬೆಳವಣಿಗೆಗಳ ಕುರಿತು ಚರ್ಚಿಸಲು ಡಿ.9 ರಂದು ಬೆಂಗಳೂರಿನಲ್ಲಿ ಜೆಡಿಎಸ್ ರಾಷ್ಟ್ರೀಯ ನಾಯಕರ ಸಭೆ ಹಮ್ಮಿಕೊಳ್ಳಲಾಗಿದೆ. ಸಭೆ ನಂತರ ಮುಂದಿನ ಹೆಜ್ಜೆಗಳ ಕುರಿತು ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದರು.

ಅಪೌಷ್ಟಿಕ ಸೂಚ್ಯಂಕ ಏರುತ್ತಿದೆ ಏಕೆ?



ಬೆಂಗಳೂರು: ಅಪೌಷ್ಟಿಕತೆಯಲ್ಲಿ ಗುಜರಾತ್ ರಾಜ್ಯ ಮತ್ತು ಭಾರತದ ಸೂಚ್ಯಂಕ ಏರುತ್ತಲೇ ಇದೆ. ಏಕೆ ಹೀಗಾಯಿತು ಎಂಬುದರ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಉತ್ತರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದಲ್ಲಿ ಬುಧವಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯೋಜಿಸಿದ್ದ 'ಅನೀಮಿಯ ಮುಕ್ತ ಪೌಷ್ಟಿಕ ಕರ್ನಾಟಕ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಆರೋಗ್ಯ ಸಮೀಕ್ಷೆ 4 ಮತ್ತು 5ರಲ್ಲಿ ಇರುವ ಅಂಕಿ ಅಂಶಗಳನ್ನು ತುಲನೆ ಮಾಡಿದರೆ ರಾಜ್ಯಗಳ ಸ್ಥಿತಿ ಗೊತ್ತಾಗುತ್ತದೆ. ಗುಜರಾತ್ ತೀರಾ ಹಿಂದುಳಿದಿದ್ದು, ಈ ಸ್ಥಿತಿ ಮಾದರಿಯಾಗಲು ಸಾಧ್ಯವೇ ಎಂದು ಪ್ರಶ್ನಿಸಿದರು.

ಬಡತನ, ಅನಕ್ಷರತೆ ಹೋಗದೆ ಎಲ್ಲರಿಗೂ ಉತ್ತಮ ಆರೋಗ್ಯ ಸಿಗುವುದಿಲ್ಲ. ಆದ್ದರಿಂದ ಈ ಪಿಡುಗುಗಳಿಗೆ ಚಿಕಿತ್ಸೆ ನೀಡುವುದು ನಮ್ಮ ಸರ್ಕಾರದ ಪ್ರಥಮ ಆದ್ಯತೆ. ಪ್ರತಿಯೊಬ್ಬರ ಮನೆ ಬಾಗಿಲಿಗೆ ಆರೋಗ್ಯದ ಸವಲತ್ತು ತಲುಪಿಸಲಾಗುವುದು. ಅದಕ್ಕೆ ಅಗತ್ಯ ಇರುವ ಅನುದಾನ ಮಂಜೂರು ಮಾಡಲಾಗುವುದು ಎಂದು ತಿಳಿಸಿದರು. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಇದ್ದರು.

'ಗೋ ಗ್ರೀನ್ ಅಭಿಯಾನ'ಕ್ಕೆ ಸೂಚನೆ

ಎನ್‌ಜಿಟಿ ರಾಜ್ಯಮಟ್ಟದ ಉಸ್ತುವಾರಿ ಸಮಿತಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 'ಗೋ ಗ್ರೀನ್ ಅಭಿಯಾನ' ಆಯೋಜಿಸಲು ಬಿಬಿಎಂಪಿಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ರಾಜ್ಯಮಟ್ಟದ ಉಸ್ತುವಾರಿ ಸಮಿತಿ ಅಧ್ಯಕ್ಷ ಸುಭಾಷ್ ಬಿ.ಅಡಿ ಸೂಚಿಸಿದರು.

ಘನತ್ಯಾಜ್ಯ ನಿರ್ವಹಣಾ ನಿಯಮಗಳನ್ನು (2016) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಭಿಯಾನ ಆಯೋಜಿಸಬೇಕು ಎಂದು ವಲಯ ಆಯುಕ್ತರು, ಜಂಟಿ ಆಯುಕ್ತರು, ಘನತ್ಯಾಜ್ಯ ನಿರ್ವಹಣೆ ವಿಭಾಗದ ಅಧಿಕಾರಿಗಳಿಗೆ ಬುಧವಾರ ನಡೆದ ವಿಡಿಯೊ ಸಂವಾದದಲ್ಲಿ ಸೂಚನೆ ನೀಡಿದರು.

ಧಾರ್ಮಿಕ ಕೇಂದ್ರಗಳು, ಸರ್ಕಾರಿ ಕಚೇರಿಗಳು, ಕ್ಲಬ್‌ಗಳು, ಟೆಕ್ ಪಾರ್ಕ್, ಶೈಕ್ಷಣಿಕ ಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳು, ಇತರೆ ತ್ಯಾಜ್ಯ ಉತ್ಪಾದಿತ ಸ್ಥಳಗಳಲ್ಲಿ 'ಗೋ ಗ್ರೀನ್ ಅಭಿಯಾನ' ಹಮ್ಮಿಕೊಳ್ಳಬೇಕು. ಉತ್ಪತ್ತಿಯಾಗುವ ಸ್ಥಳದಲ್ಲೇ ತ್ಯಾಜ್ಯ ಸಂಸ್ಕರಿಸುವುದು, ಮಳೆ ನೀರು ಸಂರಕ್ಷಣೆ, ಇಂಧನ ಸಂರಕ್ಷಣೆಯಂತಹ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

'ನಗರದಲ್ಲಿ ಪ್ರತಿನಿತ್ಯ ಸುಮಾರು 5,500 ಮೆಟ್ರಿಕ್ ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಬಹುತೇಕ ಕಡೆ ಹಸಿ, ಒಣ ಹಾಗೂ ಸ್ಯಾನಿಟರಿ ತ್ಯಾಜ್ಯವನ್ನು ವಿಂಗಡಿಸದೇ ನೀಡಲಾಗುತ್ತಿದೆ. ವೈಜ್ಞಾನಿಕ ಪದ್ಧತಿ ಅನುಸರಿಸದಿರುವುದರಿಂದ ತ್ಯಾಜ್ಯ ವಿಲೇವಾರಿಯಲ್ಲಿ ಸಮಸ್ಯೆಯುಂಟಾಗುತ್ತಿದೆ. ಆದ್ದರಿಂದ, ಎಲ್ಲ ವಲಯಗಳಲ್ಲೂ ಶೇ 100 ರಷ್ಟು ತ್ಯಾಜ್ಯ ವಿಂಗಡಣೆಯಾಗುವಂತೆ ಕ್ರಮ ಕೈಗೊಳ್ಳಬೇಕು. ವಿಕೇಂದ್ರೀಕೃತ ವ್ಯವಸ್ಥೆ ಅಳವಡಿಸಿಕೊಳ್ಳಬೇಕು' ಎಂದು ಸೂಚಿಸಿದರು.

ರಸ್ತೆ ಬದಿಗಳು ಬ್ಲ್ಯಾಕ್ ಸ್ಪಾಟ್‌ಗಳಾಗುವುದನ್ನು ತಡೆಯಬೇಕು. ಅಪಾರ್ಟ್‌ಮೆಂಟ್‌ಗಳಿಂದ ಅನಧಿಕೃತವಾಗಿ ತ್ಯಾಜ್ಯ ವಿಲೇವಾರಿ ಆಗುತ್ತಿದ್ದು, ಇದೆಲ್ಲವನ್ನು ನಿರ್ಬಂಧಿಸಲು ಕ್ರಮ ಕೈಗೊಳ್ಳಬೇಕು. ಬೆಂಗಳೂರು ನಗರವನ್ನು ತ್ಯಾಜ್ಯ ಮುಕ್ತ, ಸ್ವಚ್ಛ ಹಾಗೂ ಸುಂದರ ನಗರವನ್ನಾಗಿಸುವ ದಿಕ್ಕಿನಲ್ಲಿ ಸಾಗುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ, ಹೆಚ್ಚೆಚ್ಚು ಮಾಹಿತಿ, ಶಿಕ್ಷಣ ಮತ್ತು ಸಂವಹನ(ಐಇಸಿ) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ನಾಗರಿಕರ ಸಹಯೋಗದೊಂದಿಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಕಟ್ಟಡ ತ್ಯಾಜ್ಯ ಸಂಗ್ರಹ: ನಗರದ ರಸ್ತೆ ಬದಿ, ಪಾದಚಾರಿ ಮಾರ್ಗದಲ್ಲಿ ಅನಧಿಕೃತವಾಗಿ ಕಟ್ಟಡ ತ್ಯಾಜ್ಯ ವಿಲೇವಾರಿಯನ್ನು ತಡೆಯಬೇಕು. ಕಟ್ಟಡ ತ್ಯಾಜ್ಯ ಸಂಗ್ರಹಣೆ, ಸಾಗಣೆ ಮತ್ತು ವಿಲೇವಾರಿಯ ಕುರಿತು ತ್ಯಾಜ್ಯ ನಿರ್ವಹಣಾ ಯೋಜನೆಯನ್ನು ಪಾಲಿಕೆಯಿಂದ ಅನುಮೋದನೆ ಪಡೆದುಕೊಳ್ಳಬೇಕು. ಆಯಾ ವಲಯ ವ್ಯಾಪ್ತಿಯಲ್ಲಿ ಅಗತ್ಯ ಕ್ರಮಗಳನ್ನು ಕೈಗೊಂಡು ಕಟ್ಟಡ ತ್ಯಾಜ್ಯವನ್ನು ನಿಗದಿತ ಸ್ಥಳದಲ್ಲಿ ವಿಲೇವಾರಿ ಮಾಡುವಂತೆ ಜಾಗೃತಿ ಮೂಡಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ರಾಜ್ಯಮಟ್ಟದ ಉಸ್ತುವಾರಿ ಸಮಿತಿ ಸದಸ್ಯ ಕಾರ್ಯದರ್ಶಿ ಪಿ.ಸಿ ರೇ, ಬಿಬಿಎಂಪಿ ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಕೆ. ಹರೀಶ್ ಕುಮಾರ್ ಇದ್ದರು.

ಕಲ್ಯಾಣ ಮಂಟಪಗಳ ನೋಂದಣಿ ಕಡ್ಡಾಯ

ನಗರದಲ್ಲಿರುವ ಕಲ್ಯಾಣ ಮಂಟಪಗಳು ಆಯಾ ವಲಯ ವ್ಯಾಪ್ತಿಯ ಕಚೇರಿಯಲ್ಲಿ ನೋಂದಣಿ ಮಾಡಿಕೊಳ್ಳುವುದನ್ನು ಕಡ್ಡಾಯಗೊಳಿಸಬೇಕು ಎಂದು ಸುಭಾಷ್ ಅಡಿ ಸೂಚಿಸಿದರು.

ಕಲ್ಯಾಣ ಮಂಪಟಗಳು ತ್ಯಾಜ್ಯ ನಿರ್ವಹಣಾ ಯೋಜನೆಯನ್ನು ಸೇವಾ ಶುಲ್ಕದೊಂದಿಗೆ ಸಲ್ಲಿಸಬೇಕು. ಅದನ್ನು ಅನುಮೋದನೆ ಪಡೆದು ಕಾರ್ಯಕ್ರಮಗಳನ್ನು ನಿರ್ವಹಿಸುವ ಪದ್ಧತಿಯನ್ನು ಜಾರಿಗೆ ತರಬೇಕು ಎಂದರು.

ನಗರದಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಅನ್ನು ಸಂಪೂರ್ಣ ನಿಷೇಧಿಸಬೇಕು. ಈ ಬಗ್ಗೆ ಹೆಚ್ಚು ಜಾಗೃತಿ ಮತ್ತು ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಮಳಿಗೆ, ಹೋಟೆಲ್, ಮಾರುಕಟ್ಟೆ ಸೇರಿದಂತೆ ಇನ್ನಿತರೆ ಕಡೆ ಅನಿರೀಕ್ಷಿತ ತಪಾಸಣೆ ನಡೆಸಿ ಪ್ಲಾಸ್ಟಿಕ್ ಜಪ್ತಿ ಮಾಡಿ ದಂಡ ವಿಧಿಸಬೇಕು. ಅದನ್ನು ಮೀರಿಯೂ ಪ್ಲಾಸ್ಟಿಕ್ ಬಳಸಿದಲ್ಲಿ ಬಿಬಿಎಂಪಿ ಕಾಯ್ದೆಯಂತೆ ಉದ್ದಿಮೆ ಪರವಾನಗಿಯನ್ನು ರದ್ದುಪಡಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ

ಬೆಂಗಳೂರು: ಜಸ್ಟೀಸ್ ಹೊಂಬೇಗೌಡ ಸೇವಾ ಸಮಿತಿ ಐ.ಟಿ.ಐ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2023ನೇ ಸಾಲಿನ ಪಿ.ಯು.ಸಿ ಪರೀಕ್ಷೆಯಲ್ಲಿ ಶೇ 85ರಷ್ಟು ಅಂಕ ಪಡೆದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ, ತುಮಕೂರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳು ಡಿಸೆಂಬರ್ 10ರೊಳಗೆ ಅರ್ಜಿ ಸಲ್ಲಿಸಬಹುದು.

ವಿಳಾಸ: ವಿ. ಶ್ರೀನಿವಾಸ ಬಾಬು, ನಂ. 28, 4ನೇ ಮುಖ್ಯರಸ್ತೆ, ಕೆ.ಎಚ್.ಎಂ., ಬ್ಲಾಕ್, ಗಂಗಾನಗರ, ಬೆಂಗಳೂರು-560032, **ಮಾಹಿತಿಗೆ:** 94807 96838ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನೀರಾವರಿ ಪಂಪ್‌ಸೆಟ್: ₹1,500 ಕೋಟಿ ಟೆಂಡರ್ ಅಂತಿಮ

ಕಾರ್ಯಾದೇಶ ನೀಡಲು ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತ ನೀರಾವರಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿ, ಮೂಲಸೌಕರ್ಯ ಒದಗಿಸುವ ಕಾಮಗಾರಿಗೆ ಕಾರ್ಯಾದೇಶ ನೀಡಬೇಕು ಎಂದು ಎಲೆಕ್ಟ್ರಿಕಲ್ ಇಪಿಸಿ ಕಾಂಟ್ರಾಕ್ಟರ್ಸ್ ಅಸೋಸಿಯೇಷನ್ ಆಗ್ರಹಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ರಾಮಕೃಷ್ಣ ಎಚ್.ಎನ್., 'ರಾಜ್ಯದಲ್ಲಿರುವ ಅನಧಿಕೃತ ಕೃಷಿ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಿ, ಮೂಲಸೌಲಭ್ಯ ಕಲ್ಪಿಸಲು 2022ರ ಮೇ 31ರಂದು ಟೆಂಡರ್ ಆಹ್ವಾನಿಸಲಾಗಿತ್ತು. ಅರ್ಹ ಗುತ್ತಿಗೆದಾರರೊಂದಿಗೆ ದ್ವಿಪಕ್ಷೀಯ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಪಂಪ್‌ಸೆಂಟ್‌ಗಳಿಗೆ ಮೂಲಸೌಕರ್ಯ ಒದಗಿಸಲು ಎಲ್ಲ ಎಸ್ಕಾಂಗಳು ವಿಸ್ತೃತ ಆದೇಶಗಳನ್ನು ನೀಡಿವೆ. ಆದರೆ, ಪ್ರತ್ಯೇಕ ಕಾರ್ಯಾದೇಶ ನೀಡಲು ಸರ್ಕಾರ ಮೀನಮೀಷ ಎಣಿಸುತ್ತಿದೆ' ಎಂದರು.

'ರಾಜ್ಯದಲ್ಲಿರುವ ಎಲ್ಲ ಎಸ್ಕಾಂಗಳು ಅನುದಾನ ಹೊಂದಾಣಿಕೆ ಮಾಡಿಕೊಂಡಿವೆ. ಹೆಸ್ಕಾಂ, ಬೆಸ್ಕಾಂ ಮತ್ತು ಸೆಸ್ಕ್‌ನ ವ್ಯಾಪ್ತಿಯಲ್ಲಿ ₹1,500 ಕೋಟಿ ಟೆಂಡರ್ ಆಹ್ವಾನಿಸಲಾಗಿತ್ತು. ಇದಕ್ಕೆ ಬಜೆಟ್‌ನಲ್ಲಿ ಹಣ ನಿಗದಿಯಾಗಿದೆ ಎಂಬ ಕಾರಣಕ್ಕೆ ಹೆಸ್ಕಾಂ ವ್ಯಾಪ್ತಿಯಲ್ಲಿ ಸುಮಾರು ₹ 200 ಕೋಟಿಯ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಹಣ ಬಿಡುಗಡೆಯಾಗದ ಕಾರಣ ಗುತ್ತಿಗೆದಾರರು ಸಾಲದ ಸುಳಿಗೆ ಸಿಲುಕಿಕೊಂಡಿದ್ದಾರೆ. ಆದ್ದರಿಂದ, ಸರ್ಕಾರ ಕೂಡಲೇ ಟೆಂಡರ್ ಹಣ ಬಿಡುಗಡೆಗೊಳಿಸಿ ಕಾಮಗಾರಿ ಪ್ರಾರಂಭಿಸಲು ಆದೇಶಿಸಿಬೇಕು' ಎಂದು ಒತ್ತಾಯಿಸಿದರು.

ಅಸೋಸಿಯೇಷನ್ ಸದಸ್ಯ ಎಂ.ಎಸ್. ಮಂಜುನಾಥ್, 'ಹೆಸ್ಕಾಂ, ಬೆಸ್ಕಾಂ ಮತ್ತು ಸೆಸ್ಕ್‌ನ ಆದೇಶವಿದೆ ಎಂಬ ಕಾರಣಕ್ಕೆ ಟೆಂಡರ್ ಪಡೆದುಕೊಂಡಿರುವ ಗುತ್ತಿಗೆದಾರರು, ₹ 500 ಕೋಟಿಗೂ ಹೆಚ್ಚಿನ ಬಂಡವಾಳ ಹೂಡಿ ಅಗತ್ಯವಿರುವ ಸಾಮಗ್ರಿಗಳನ್ನು ಖರೀದಿಸಿ ದಾಸ್ತಾನು ಮಾಡಿಕೊಂಡಿದ್ದಾರೆ. ಈ ಸಾಮಗ್ರಿಗಳ ಖರೀದಿಗಾಗಿ ಬ್ಯಾಂಕ್‌ಗಳಿಂದ ಸಾಲ ಮಾಡಿಕೊಂಡು, ಬಡ್ಡಿ ಪಾವತಿ ಮಾಡುತ್ತಿದ್ದೇವೆ. ಆದರೆ ಸರ್ಕಾರ ಮಾತ್ರ ಕಾರ್ಯಾದೇಶ ನೀಡಲು ಸತಾಯಿಸುತ್ತಿದೆ' ಎಂದರು. 'ಬಿಲ್ ಪಾವತಿಸಲು ಹಿಂದೆ ಅಧಿಕಾರಿಗಳು ಕಮಿಷನ್ ಕೇಳುತ್ತಿದ್ದರು. ಈಗ ಕಾರ್ಯಾದೇಶ ನೀಡಲು ಹಣದ ಬೇಡಿಕೆ ಇಡುತ್ತಿದ್ದಾರೆ. ಇದರಿಂದ, 200 ಗುತ್ತಿಗೆದಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ತಿಳಿಸಿದರು.

ಕಾಮಗಾರಿಗೆ ಮತ್ತೆ ಟೆಂಡರ್

'ಕರ್ನಾಟಕ ರಾಜ್ಯ ವಿದ್ಯುತ್ ಪ್ರಸರಣ ನಿಗಮ (ಕೆಪಿಟಿಸಿಎಲ್) 2023ರ ಮಾರ್ಚ್ ಅಂತ್ಯಕ್ಕೆ ₹10 ಸಾವಿರ ಕೋಟಿಯ ಕಾಮಗಾರಿಗಳಿಗೆ ಮತ್ತೆ ಟೆಂಡರ್ ಆಹ್ವಾನಿಸಿದೆ. ಆದರೆ, ಬಜೆಟ್‌ನಲ್ಲಿ ಕೇವಲ ₹3,562 ಕೋಟಿ ಮಾತ್ರ ಇದೆ. ಉಳಿದ ₹6,500 ಕೋಟಿಯನ್ನು ಸರ್ಕಾರ ಹೇಗೆ ಹೊಂದಾಣಿಕೆ ಮಾಡಿಕೊಳ್ಳಲಿದೆ? ಆದ್ದರಿಂದ, ಅನುದಾನದ ಲಭ್ಯತೆ ಅನುಸಾರವಾಗಿ ಟೆಂಡರ್ ಆಹ್ವಾನಿಸಬೇಕು' ಎಂದು ಎಂ.ಎಸ್. ಮಂಜುನಾಥ್ ಒತ್ತಾಯಿಸಿದರು.

ಅಂಟಾರ್ಕ್ಟಿಕದಲ್ಲಿ ದೊಡ್ಡ ಓಝೋನ್ ರಂಧ್ರ

ನವದೆಹಲಿ(ಪಿಟಿಐ): ದಕ್ಷಿಣ ಧ್ರುವದ ಅಂಟಾರ್ಕ್ಟಿಕ ಭಾಗದ ವಾಯುಮಂಡಲದಲ್ಲಿರುವ ಓಝೋನ್ ಪದರದ ರಂಧ್ರವು ಈ ಮೊದಲು ಗ್ರಹಿಸಿದ್ದಕ್ಕಿಂತ ದೊಡ್ಡದೇ ಇದೆ. ಅದರಲ್ಲೂ, ಕಳೆದ ಮೂರು ವರ್ಷಗಳ ಅವಧಿಯಲ್ಲಿ ದಾಖಲಾಗಿರುವ ರಂಧ್ರಗಳ ಪೈಕಿ, ಇದೇ ದೊಡ್ಡದು ಎಂದು ಹೊಸ ಸಂಶೋಧನೆಯಿಂದ ತಿಳಿದುಬಂದಿದೆ.

ಅಂಟಾರ್ಕ್ಟಿಕ್ಟ ಭಾಗದಲ್ಲಿರುವ ಈ ಓಝೋನ್ ಪದರ ದೊಡ್ಡದು ಮಾತ್ರವಲ್ಲ, ಕಳೆದ ನಾಲ್ಕು ವರ್ಷಗಳಿಂದಲೂ ಅಸ್ತಿತ್ವದಲ್ಲಿದೆ ಎಂದು ನ್ಯೂಜಿಲೆಂಡ್‌ನ ಒಟಾಗೊ ವಿಶ್ವವಿದ್ಯಾಲಯದ ಸಂಶೋಧಕ ಹನ್ನಾ ಕೆಸೆನಿಕ್ ನೇತೃತ್ವದ ತಂಡ ಕೈಗೊಂಡಿರುವ ಅಧ್ಯಯನದಿಂದ ತಿಳಿದುಬಂದಿದೆ.

ಈ ಅಧ್ಯಯನ ವರದಿಯು ವೈಜ್ಞಾನಿಕ ನಿಯತಕಾಲಿಕ 'ನೇಚರ್ ಕಮ್ಯುನಿಕೇಷನ್ಸ್ 'ನಲ್ಲಿ ಪ್ರಕಟವಾಗಿದೆ.

ಓಝೋನ್ ಪದರ ಸವಕಳಿಯಾಗುವುದಕ್ಕೆ ಕ್ಲೋರೊಫ್ಲೋರೊಕಾರ್ಬನ್ ರಾಸಾಯನಿಕಗಳು (ಸಿಎಫ್‌ಸಿ) ಮಾತ್ರ ಕಾರಣವಲ್ಲ ಎಂದು ಸಂಶೋಧಕರು ಹೇಳಿದ್ದಾರೆ.

ಜಾತಿಗಣತಿ ವರದಿ ಕಳ್ಳತನಕ್ಕೆ ಸರ್ಕಾರ ಕಾರಣವೇ: ಬಿಜೆಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜಾತಿ ಗಣತಿಯ ಮೂಲಪ್ರತಿ ಕಳ್ಳತನ ಆಗಿದೆ ಎಂದು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಸರ್ಕಾರಕ್ಕೆ ಪತ್ರ ಬರೆದಿರುವುದು ಗಂಭೀರ ವಿಷಯ. ವರದಿ ಕಳ್ಳತನ ಆಗಿದ್ದರೆ ಸರ್ಕಾರ ಕಳ್ಳತನ ಮಾಡಿದೆಯೇ? ಆಯೋಗ ಕಳ್ಳತನ ಮಾಡಿದೆಯೇ? ಅಥವಾ ಗೃಹ ಇಲಾಖೆಯವರು ಕಳ್ಳತನ ಮಾಡಿದ್ದಾರೆಯೆ' ಎಂದು ಬಿಜೆಪಿ ಶಾಸಕ ವಿ.ಸುನಿಲ್‌ಕುಮಾರ್ ಪ್ರಶ್ನಿಸಿದ್ದಾರೆ.

ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವರದಿಯ ಮೂಲ ಪ್ರತಿ ಕಳುವಾಗಿದ್ದರೆ, ಯಾವ ಪ್ರತಿಯನ್ನು ಇಟ್ಟುಕೊಂಡು ವಾದ-ಪ್ರತಿವಾದ ನಡೆಸುತ್ತಿದ್ದಾರೆ ಎಂಬ ಬಗ್ಗೆಯೂ ಮುಖ್ಯಮಂತ್ರಿಯವರು ಮಾಹಿತಿ ನೀಡಬೇಕು' ಎಂದು ಆಗ್ರಹಿಸಿದರು.

'ಒಂದು ಕಡೆ ವರದಿ ಸರಿ ಇಲ್ಲ ಎಂದು ಉಪಮುಖ್ಯಮಂತ್ರಿ ಹೇಳಿದರೆ, ವರದಿಯನ್ನು ಸ್ವೀಕರಿಸಲು ಸಿದ್ಧ ಎಂದು ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಆದರೆ, ಆಯೋಗದ ಅಧ್ಯಕ್ಷರು ವರದಿ ಕಳೆದು ಹೋಗಿದೆ ಎಂದಿದ್ದಾರೆ. ಯಾರ ಮಾತನ್ನು ನಂಬಬೇಕು' ಎಂದು ಪ್ರಶ್ನಿಸಿದರು.

'ಈ ಎಲ್ಲ ಗೊಂದಲಗಳ ಕುರಿತು ಸರ್ಕಾರದಲ್ಲಿ ಒಬ್ಬೊಬ್ಬರ ನಿಲುವು ಒಂದೊಂದು ರೀತಿ ಇದೆ. ರಾಜ್ಯದ ಜನ ಯಾರ ಮಾತನ್ನು ನಂಬಬೇಕು? ಕೇವಲ ಲೋಕಸಭಾ ಚುನಾವಣೆ ದೃಷ್ಟಿಯಿಂದ, ಮತಗಳ ದೃಷ್ಟಿಕೋನದಿಂದ ಪರಿಶಿಷ್ಟ ಜಾತಿ ಮತ್ತು ಪಂಗಡದವರನ್ನು ಕತ್ತಲಲ್ಲಿ ಇಡುವ ಪ್ರಯತ್ನ ನಡೆದಿದೆ' ಎಂದರು.

'ಬೆಳಗಾವಿ ಅಧಿವೇಶನಕ್ಕೂ ಮೊದಲು ಸರ್ಕಾರ ತನ್ನ ನಿಲುವು ಸ್ಪಷ್ಟಪಡಿಸಬೇಕು. 10 ವರ್ಷಗಳ ಹಿಂದೆ ಈ ವರದಿ ಕೊಡಲಾಗಿದೆ. ಇದಕ್ಕೆ ರಾಜ್ಯ ಸರ್ಕಾರದ ಸಚಿವರೇ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಇದರಿಂದ ಅನುಮಾನಕ್ಕೆಡೆ ಮಾಡಿದೆ. ಹಿಂದುಳಿದ ವರ್ಗಗಳನ್ನು ಕತ್ತಲಲ್ಲಿ ಇಡುವ ಪ್ರಯತ್ನ ಸರ್ಕಾರ ನಡೆಸಿದೆ' ಎಂದು ಸುನಿಲ್‌ಕುಮಾರ್ ಟೀಕಿಸಿದರು.

ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟುಡೆಂಟ್ ಆರ್ಗನೈಸೇಷನ್ ಪ್ರತಿಭಟನೆ

ವಿದ್ಯಾರ್ಥಿವೇತನ ಬಿಡುಗಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ನೀಡುವ 2022-23ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿವೇತನವನ್ನು ಕೂಡಲೇ ಬಿಡುಗಡೆಗೊಳಿಸಬೇಕು' ಎಂದು ಆಗ್ರಹಿಸಿ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟುಡೆಂಟ್ ಆರ್ಗನೈಸೇಷನ್‌ನ (ಎಐಡಿಎಸ್‌ಒ) ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

'ಪರಿಶಿಷ್ಟ ಜಾತಿ ಮತ್ತು ಪಂಗಡ, ಇತರೆ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳು 2022-23ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದ್ದರೂ ಇದುವರೆಗೂ ಮಂಜೂರಾಗಿಲ್ಲ. ಜೊತೆಗೆ ಕಾರ್ಮಿಕ ಇಲಾಖೆ ನೀಡುತ್ತಿದ್ದ ವಿದ್ಯಾರ್ಥಿವೇತನದಲ್ಲಿ ಭಾರಿ ಕಡಿತಗೊಳಿಸಲಾಗಿದ್ದು, ಈ ಹಿಂದೆ ಪ್ರತಿ ವಿದ್ಯಾರ್ಥಿಗೆ ವಾರ್ಷಿಕ ₹ 5 ಸಾವಿರದಿಂದ ₹ 60 ಸಾವಿರದವರೆಗೆ ನೀಡಲಾಗುತ್ತಿತ್ತು. ಆದರೆ, ಈಗ ಈ ಮೊತ್ತವನ್ನು ₹ 1100 ದಿಂದ ₹11 ಸಾವಿರಕ್ಕೆ ಕಡಿತಗೊಳಿಸಲಾಗಿದೆ' ಎಂದು ಪ್ರತಿಭಟನಾಕಾರರು ದೂರಿದರು.

'ಎಲ್ಲ ಹಂತದ ಶಿಕ್ಷಣ ವ್ಯಾಪಾರೀಕರಣಗೊಳಿಸಿ ಶುಲ್ಕಗಳನ್ನು ಹೆಚ್ಚಿಸಲಾಗಿದೆ. ಇಂತಹ ಸಂದರ್ಭದಲ್ಲಿ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯುವುದೇ ದುಸ್ತರವಾಗಿದೆ. ಸರ್ಕಾರ ನೀಡುತ್ತಿದ್ದ ವಿದ್ಯಾರ್ಥಿವೇತನವು ಬಡ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಪಡೆದುಕೊಳ್ಳಲು ಸಹಕಾರಿಯಾಗಿತ್ತು. ವಿದ್ಯಾರ್ಥಿವೇತನ ಕಡಿತಗೊಳಿಸಿರುವ ಸರ್ಕಾರ ವಿತರಣೆಯಲ್ಲೂ ವಿಳಂಬ ನೀತಿ ಅನುಸರಿಸಲಾಗುತ್ತಿದೆ ಎಂದು ಪ್ರತಿಭಟನಾಕಾರರ ಆಕ್ರೋಶ ವ್ಯಕ್ತಪಡಿಸಿದರು.


ವಿವಿಧ ಇಲಾಖೆಗಳ ಬಾಕಿ ಇರುವ ವಿದ್ಯಾರ್ಥಿವೇತನವನ್ನು ಕೂಡಲೇ ಬಿಡುಗಡೆಗೊಳಿಸುವಂತೆ ಸರ್ಕಾರ ನಿರ್ದೇಶನ ನೀಡಬೇಕು. ಕಟ್ಟಡ ಕಾರ್ಮಿಕರ ಮಕ್ಕಳ ಶಿಷ್ಯವೇತನದ ಮೊತ್ತವನ್ನು ಹೆಚ್ಚಿಸಬೇಕು. ಈ ಮೂಲಕ ಬಡ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸಲು ನೆರವಾಗಬೇಕೆಂದು ಎಂದು ಒತ್ತಾಯಿಸಿದರು.



ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟುಡೆಂಟ್ ಆರ್ಗನೈಸೇಷನ್‌ನ ಸದಸ್ಯರು ಪ್ರಜಾವಾಣಿ ಚಿತ್ರ

ನ್ಯಾ. ದಿನೇಶ್ ಕುಮಾರ್ ನೇಮಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ 15ನೇ ಕಾರ್ಯನಿರ್ವಾಹಕ ಅಧ್ಯಕ್ಷರನ್ನಾಗಿ ಹೈಕೋರ್ಟ್‌ನ ಹಿರಿಯ ನ್ಯಾಯ ಮೂರ್ತಿ ಪಿ.ಎಸ್.ದಿನೇಶ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

'ಈ ನೇಮಕದ ಆದೇಶ ಇದೇ 27 ರಿಂದ ಜಾರಿಗೆ ಬರಲಿದೆ' ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋತ್ ಅವರು ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ವಿದ್ಯುತ್ ತಂತಿ ತುಳಿದು ತಾಯಿ, ಮಗು ಸಾವು • ವಿಚಾರಣೆ ಆರಂಭ

‘ಲೋಕಾ’ ಸ್ವಯಂಪ್ರೇರಿತ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೋಪ್ ಫಾರ್ಮ್ ಬಳಿಯ ವೈಟ್ ಫೀಲ್ಡ್ ಮುಖ್ಯ ರಸ್ತೆಯಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ತಾಯಿ ಮತ್ತು ಮಗು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ಆರಂಭಿಸಿದ್ದಾರೆ.

ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಅಡಿಯಲ್ಲಿ ಸ್ವಯಂಪ್ರೇರಿತ ವಿಚಾರಣೆ ಆರಂಭಿಸಿರುವ ಲೋಕಾಯುಕ್ತರು, ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂನ ಬೆಂಗಳೂರು ಮಹಾನಗರ ಪ್ರದೇಶ ವ್ಯಾಪ್ತಿಯ ಮುಖ್ಯ ಎಂಜಿನಿಯರ್, ಪೂರ್ವ ವೃತ್ತದ ಸೂಪರಿಂಟೆಂಡಿಂಗ್ ಎಂಜಿನಿಯರ್, ವೈಟ್‌ಫೀಲ್ಡ್ ವಿಭಾಗದ ಕಾರ್ಯನಿ-ರ್ವಾಹಕ ಎಂಜಿನಿಯರ್, ಇ-4 ಉಪ ವಿಭಾಗದ ಸಹಾಯಕ ಕಾರ್ಯನಿರ್ವಾ-ಹಕ ಎಂಜಿನಿಯರ್ ಮತ್ತು ದುರ್ಘಟನೆ ಸಂಭವಿಸಿದ ಸ್ಥಳದ ವ್ಯಾಪ್ತಿಯ ಸಹಾಯಕ ಎಂಜಿನಿಯರ್‌ಗೆ ನೋಟಿಸ್ ಜಾರಿಗೊಳಿಸಿದ್ದಾರೆ.

‘ವಿದ್ಯುತ್ ಮಾರ್ಗಗಳ ನಿರ್ವ-ಹಣೆಯಲ್ಲಿನ ಲೋಪದಿಂದಾಗಿಯೇ ದುರ್ಘಟನೆ ಸಂಭವಿಸಿರುವು-ದಕ್ಕೆ ಮೇಲ್ನೋಟಕ್ಕೆ ಸಾಕ್ಷ್ಯಗಳು ಕಂಡುಬರುತ್ತಿವೆ. ಇದನ್ನು ‘ದುರಾಡಳಿತ’ದ ವ್ಯಾಪ್ತಿಯಲ್ಲಿ ಪರಿಗಣಿಸಿ ವಿಚಾರಣೆ ಆರಂಭಿಸಲಾಗಿದೆ’ ಎಂದು ಲೋಕಾಯುಕ್ತರು ಮಂಗಳವಾರ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

‘ಬೆಸ್ಕಾಂ ಸ್ಥಳೀಯ ಕಚೇರಿಯಿಂದ 100 ಮೀಟರ್ ದೂರದಲ್ಲೇ ದುರ್ಘಟನೆ ಸಂಭವಿಸಿದೆ. ರಾತ್ರಿಯೇ ವಿದ್ಯುತ್ ತಂತಿ ತುಂಡಾಗಿ ಬಿದ್ದಿತ್ತು. ಅದೇ ಮಾರ್ಗದಲ್ಲಿ ವಿದ್ಯುತ್ ಹರಿಸಿದ್ದರಿಂದ ಇಬ್ಬರ ಸಾವು ಸಂಭವಿಸಿದೆ’ ಎಂದು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ನಿಯಮಿತವಾಗಿ ವಿದ್ಯುತ್ ಮಾರ್ಗಗಳನ್ನು ಪರಿಶೀಲಿಸುವುದು ಮತ್ತು ತುಕ್ಕು ಹಿಡಿದ, ತುಂಡಾಗುವ ಸ್ಥಿತಿಯಲ್ಲಿರುವ ತಂತಿಗಳನ್ನು ಬದಲಿಸ-ಬೇಕಿರುವುದು ಬೆಸ್ಕಾಂ ಅಧಿಕಾರಿಗಳ ಜವಾಬ್ದಾರಿ. ಆದರೆ, ಆ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಪಾದಚಾರಿ ಮಾರ್ಗಗಳಲ್ಲೂ ವಿದ್ಯುತ್ ತಂತಿಗಳು ಜೋತು ಬಿದ್ದಿರುವುದನ್ನು ಕಾಣಬಹುದು. ಇವೆಲ್ಲವೂ ದುರಾಡಳಿತ ಮತ್ತು ಕರ್ತವ್ಯಲೋಪಕ್ಕೆ ಸಾಕ್ಷಿ ಎಂದು ಹೇಳಿದ್ದಾರೆ.

ಪೊಲೀಸ್ ತನಿಖೆಗೂ ಆದೇಶ: ದುರ್ಘಟನೆಗೆ ಸಂಬಂಧಿಸಿದಂತೆ ಸ್ಥಳ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಲೋಕಾಯುಕ್ತದ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕದ ಎಸ್‌ಪಿಯವರಿಗೆ ಲೋಕಾಯುಕ್ತರು ನಿರ್ದೇಶನ ನೀಡಿದ್ದಾರೆ. ಮುಂದಿನ ವಿಚಾರಣೆ ಡಿಸೆಂಬರ್ 8 ಕ್ಕೆ ನಿಗದಿಯಾಗಿದ್ದು, ಅಷ್ಟರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಪ್ರತಿವಾದಿಗಳಿಗೆ ಗಡುವು ನೀಡಿದ್ದಾರೆ.

ಜಾರ್ಜ್ ರಾಜೀನಾಮೆಗೆ ಒತ್ತಾಯ

ಬೆಂಗಳೂರು: ತಾಯಿ, ಮಗು ಬಲಿ ಪಡೆದ ವಿದ್ಯುತ್ ಅವಘಡ ಪ್ರಕರಣ ಕುರಿತು ಸಬೂಬು ಹೇಳದೆ ನೈತಿಕ ಹೊಣೆ ಹೊತ್ತು ಇಂಧನ ಸಚಿವ ಕೆ.ಜೆ. ಜಾರ್ಜ್ ರಾಜೀನಾಮೆ ನೀಡಬೇಕು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಒತ್ತಾಯಿಸಿದ್ದಾರೆ.

‘ತಂತಿಗೆ ಇಲಿ ಕಚ್ಚಿ ಘಟನೆ ಸಂಭವಿಸಿದೆ ಎಂಬ ನೆಪ ಹೇಳಿ ತಿಪ್ಪೆ ಸಾರಿಸುವ ಮಟ್ಟಕ್ಕೆ ಸಚಿವರು ಇಳಿದಿದ್ದಾರೆ. ವ್ಯವಸ್ಥೆಯ ಸಮರ್ಪಕ ನಿರ್ವಹಣೆ ಕೊರತೆಯೇ ದುರಂತಕ್ಕೆ ಕಾರಣ. ಆದರೂ, ಹೊಣೆಗಾರಿಕೆಯಿಂದ ನುಣುಚಿಕೊಂಡು ಸಂವೇ-ದನಾರಹಿತರಾಗಿ ವರ್ತಿಸುತ್ತಿದ್ದಾರೆ’ ಎಂದು ಟೀಕಿಸಿದ್ದಾರೆ.

ತನಿಖೆಗೆ ನಾಲ್ಕು ಸಮಿತಿ ರಚಿಸಿರುವುದಾಗಿ ಜಾರ್ಜ್ ಅವರೇ ಹೇಳಿದ್ದಾರೆ. ತನಿಖೆ ಆರಂಭಕ್ಕೂ ಮೊದಲೇ ಇಲಿಯನ್ನು ಆರೋಪಿಯಾಗಿಸಿದ್ದಾರೆ. ತನಿಖೆಯ ಹಾದಿ ತಪ್ಪಿಸುವ ಯತ್ನ ಸ್ಪಷ್ಟವಾಗಿದೆ. ಪ್ರಕರಣದಲ್ಲಿ ಮುಖ್ಯಮಂತ್ರಿ ಮಧ್ಯ ಪ್ರವೇಶಿಸಬೇಕು. ಜಾರ್ಜ್ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದಿದ್ದಾರೆ.

ರಾಜೀನಾಮೆ ಹಾಗೂ ಮೃತರ ಕುಟುಂಬಕ್ಕೆ ₹25 ಲಕ್ಷ ಪರಿಹಾರ ನೀಡಬೇಕು ಎಂದು ಒತ್ತಾಯಿಸಿ ಬೆಳಗಾವಿ ಅಧಿವೇಶನದಲ್ಲಿ ಹೋರಾಟ ನಡೆಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ವಿದ್ಯಾರ್ಥಿವೇತನ ಕಡಿತ: 28ರಿಂದ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಮಿಕ ಇಲಾಖೆಯಲ್ಲಿ ನೀಡುತ್ತಿರುವ ವಿದ್ಯಾರ್ಥಿವೇತನ ಕಡಿತಗೊಳಿಸಿರುವುದನ್ನು ಖಂಡಿಸಿ ಇದೇ 28 ಮತ್ತು 29ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘಟನೆಗಳ ಸಮನ್ವಯ ಸಮಿತಿ ತಿಳಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ಸದಸ್ಯ ಕೆ. ಮಹಾಂತೇಶ್, ‘ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ ಶೈಕ್ಷಣಿಕ ಧನಸಹಾಯ ನೀಡುವ ಕಲಿಕಾ ಭಾಗ್ಯ ಯೋಜನೆಯನ್ನು ದುರ್ಬಲಗೊಳಿ-ಸಲಾಗಿದೆ. ಶೇ 75ರಷ್ಟು ವಿದ್ಯಾರ್ಥಿ-ವೇತನವನ್ನು ಕಡಿತಗೊಳಿಸಲಾಗಿದೆ. ಇದರಿಂದ, ಕಾರ್ಮಿಕರ ಮಕ್ಕಳು ಶಾಲಾ-ಕಾಲೇಜು ಶಿಕ್ಷಣದಿಂದ ವಂಚಿ-ತರಾಗುತ್ತಿದ್ದಾರೆ’ ಎಂದು ದೂರಿದರು.

‘ಮಂಡಳಿಯಲ್ಲಿ ಹಣವಿಲ್ಲ ಎಂದು ಹೇಳುವ ಕಾರ್ಮಿಕ ಸಚಿವರು ₹70 ಸಾವಿರ ಮೌಲ್ಯದ ಹತ್ತು ಸಾವಿರ ಲ್ಯಾಪ್‌ಟಾಪ್‌ಗಳನ್ನು ಹೇಗೆ ಖರೀದಿಸಿದ್ದಾರೆ? ಇದರ ಬದಲು 2020-21ನೇ ಸಾಲಿನ ಬಾಕಿ ಉಳಿಸಿಕೊಂಡಿರುವ ವಿದ್ಯಾರ್ಥಿವೇತನ ಬಿಡುಗಡೆಗೊಳಿಸಬೇಕಿತ್ತು’ ಎಂದು ತಿಳಿಸಿದರು.

ರಸ್ತೆ ವಿಸ್ತರಣೆ: ಡಿಸಿಎಂಗೆ ಲಹರ್ ಸಿಂಗ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬಾಕಿ ಇರುವ ರಸ್ತೆ ವಿಸ್ತರಣೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಸಂಚಾರ ದಟ್ಟಣೆಯಿಂದ ಜನರನ್ನು ಪಾರು ಮಾಡಿ’ ಎಂದು ರಾಜ್ಯಸಭೆ ಸದಸ್ಯ ಲಹರ್ ಸಿಂಗ್ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

'ಮೇಖ್ರಿ ವೃತ್ತದಿಂದ ನಗರಕ್ಕೆ ಮತ್ತು ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣಕ್ಕೆ ಪ್ರಯಾಣಿಸುವವರ ಅನುಕೂಲಕ್ಕಾಗಿ ರಸ್ತೆ ವಿಸ್ತರಣೆ ಯೋಜನೆಗಳನ್ನು ತ್ವರಿ-ತಗೊಳಿಸಬೇಕು. ಈ ಯೋಜನೆಗಳು ‘ಬ್ರ್ಯಾಂಡ್ ಬೆಂಗಳೂರಿನ’ ಗುರಿಗೆ ಅನುಗುಣವಾಗಿವೆ. ಮೇಖ್ರಿ ವೃತ್ತ ಹಾಗೂ ಕಾವೇರಿ ವೃತ್ತದ ಸೌಂದ-ರ್ಯೀಕರಣಕ್ಕೆ ಸಂಸದರ ನಿಧಿಯಿಂದ ಅನುದಾನ ನೀಡುತ್ತೇನೆ’ ಎಂದು ಬಿಜೆಪಿ ಸಂಸದ ಲಹರ್ ಸಿಂಗ್ ತಿಳಿಸಿದ್ದಾರೆ.

‘ಹೆಬ್ಬಾಳ ಕಡೆಯಿಂದ ಮೇಖ್ರಿ ವೃತ್ತದ ಕಡೆಗಿರುವ ರಸ್ತೆ ವಿಸ್ತಾರವಾಗಿದೆ. ಆದರೆ ಮೇಖ್ರಿ ವೃತ್ತದ ಅಂಡರ್‌ಪಾಸ್ ದಾಟಿ ನಗರದ ಕಡೆಗಿರುವ 6 ಪಥಗಳಿದ್ದ ರಸ್ತೆ 4 ಪಥಗಳಾಗಿ ಕಿರಿದಾಗುತ್ತದೆ. ಈ ಜಾಗದಲ್ಲಿ ಉಂಟಾಗುವ ಅಡಚಣೆಯು ನಿರಂತರ ಟ್ರಾಫಿಕ್ ಜಾಮ್‌ಗೆ ಕಾರಣವಾಗಿ ವಾಹನಗಳು ದೂರದವರೆಗೆ ಸರತಿಯಲ್ಲಿ ನಿಲ್ಲುವಂತಾಗಿದೆ’ ಎಂದಿದ್ದಾರೆ.

‘ಮೇಖ್ರಿ ವೃತ್ತದಿಂದ ಕಂಟೋನ್ಮೆಂಟ್ ನಿಲ್ದಾಣದವರೆಗೆ ಹೆಚ್ಚು ಸಂಚಾರ ದಟ್ಟಣೆ ಉಂಟಾಗುತ್ತಿದೆ. ಈ ಭಾಗದಲ್ಲಿ ರಸ್ತೆ ವಿಸ್ತರಣೆಗೆ ಬಿಬಿಎಂಪಿಗೆ ಸುಪ್ರೀಂ ಕೋರ್ಟ್ ಅನುಮೋದನೆ ನೀಡಿದ್ದರೂ, ಕಾಮಗಾರಿ ವಿಳಂಬ-ವಾಗುತ್ತಿದೆ. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು’ ಎಂದು ಒತ್ತಾಯಿಸಿ-ದ್ದಾರೆ.

ಬಸವತತ್ವದ ಮೇಲಿನ ದಾಳಿ ಎದುರಿಸಲು ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಣೇಹಳ್ಳಿ ಪಂಡಿತಾರಾಧ್ಯ ಸ್ವಾಮೀಜಿ ಸೇರಿದಂತೆ ಧಾರ್ಮಿಕ ಗುರುಗಳು, ಚಿಂತಕರು, ಸಾಹಿತಿಗಳು, ಹೋರಾಟಗಾರರನ್ನು ಹೀಯಾಳಿಸಿ ಬಸವತತ್ವದ ಮೇಲೆ ದಾಳಿ ಮಾಡಲಾಗುತ್ತಿದ್ದು, ಇಂಥವುಗಳನ್ನು ರಚನಾತ್ಮಕ ಕಾರ್ಯಕ್ರಮಗಳ ಮೂಲಕ ಎದುರಿಸಲು ಕರ್ನಾಟಕ ಪ್ರಜ್ಞಾವಂತರ ‘ಅನುಭವ ಮಂಟಪ’ ತೀರ್ಮಾನಿಸಿದೆ.

ಗಾಂಧಿಭವನದಲ್ಲಿ ಬುಧವಾರ ಸಭೆ ನಡೆಸಿದ ಬಳಿಕ ‘ಅನುಭವ ಮಂಟಪ’ದ ಸದಸ್ಯ ಸಿದ್ದನಗೌಡ ಪಾಟೀಲರು ಸುದ್ದಿ-ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಕರ್ನಾಟಕದ ಘನತೆ ಮತ್ತು ಅಸ್ಮಿತೆಯನ್ನು ನಾಶಪಡಿಸುವ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಾ ಬಂದಿದೆ. ಇದೇ ಕಾರಣಕ್ಕೆ ಎಂ.ಎಂ. ಕಲಬುರ್ಗಿ, ಗೌರಿ ಲಂಕೇಶ್ ಹತ್ಯೆ ಮಾಡಲಾಗಿತ್ತು. ಸಾಣೇಹಳ್ಳಿ ಪಂಡಿತಾರಾಧ್ಯ ಸ್ವಾಮೀಜಿ ಮೇಲೆ ನಡೆಯುತ್ತಿರುವ ದಾಳಿಯಲ್ಲಿಯೂ ಇಂಥ ಛಾಯೆ ಇದೆ. ವಿದ್ವಾಂಸರಿಗೆ, ವಿಚಾರವಾದಿಗಳಿ-ಗೆ ಕೊಲೆ ಬೆದರಿಕೆ ಪತ್ರ ಬರೆಯುತ್ತಿದ್ದ ಆರೋಪದಲ್ಲಿ ಬಂಧಿತನಾಗಿರುವ ವ್ಯಕ್ತಿಗೂ ಕಲಬುರ್ಗಿ, ಗೌರಿ ಹತ್ಯೆ ಆರೋಪಿಗಳಿಗೂ ಸಂಬಂಧವಿರುವ ಬಗ್ಗೆ ಪೊಲೀಸರು ಮಾಹಿತಿ ಕಲೆ ಹಾಕಿದ್ದಾರೆ. ಈ ಕಾರಣಗಳಿಂದ ಎಲ್ಲರೂ ಎಚ್ಚರ ವಹಿಸಬೇಕಿದೆ’ ಎಂದು ತಿಳಿಸಿದರು.

ಭಿನ್ನ ಅಭಿಪ್ರಾಯ ಹೊಂದಿರುವವರಿಗೆ ಕೊಲೆ ಬೆದರಿಕೆ, ಹೀಯಾಳಿಕೆ, ತೇಜೋವಧೆ ಮಾಡುವ ಶಕ್ತಿಗಳನ್ನು ಸರ್ಕಾರ ನಿಗ್ರಹಿಸಬೇಕು. ಬಸವಣ್ಣ ಅವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಬೇಕು. ಎಲ್ಲ ಶಾಲೆಗಳಲ್ಲಿ ವಚನಗಳ ಓದನ್ನು ಶೈಕ್ಷಣಿಕ ಭಾಗವಾಗಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

12ನೇ ಶತಮಾನದ ಶರಣರ ಪ್ರಜಾಸತ್ತಾತ್ಮಕ ಆಶಯಗಳ ದಾರಿಯಲ್ಲಿ ‘ಅನುಭವ ಮಂಟಪ’ ಸಂಘಟನೆಯು ಕೆಲಸ ಮಾಡಲಿದೆ. ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ಸಂವಾದ, ವಿಚಾರ ಕಮ್ಮಟಗಳನ್ನು ಹಮ್ಮಿಕೊಳ್ಳಲಾಗುವುದು ಎಂದು ವಿವರಿಸಿದರು.

‘ಅನುಭವ ಮಂಟಪ’ದ ಸದಸ್ಯರಾದ ಎಸ್.ಜಿ. ಸಿದ್ದರಾಮಯ್ಯ, ಜಯಪ್ರಕಾಶ್ ಬಂಜಗೆರೆ, ಮಾವಳ್ಳಿ ಶಂಕರ್, ಲೀಲಾ ಸಂಪಿಗೆ, ಸಿದ್ಧಪ್ಪ ಮೂಲಗೆ ಇದ್ದರು.

ಕಳಪೆ ಕಾಮಗಾರಿ: ಎಚ್ಚರಿಕೆ

ಪ್ರಜಾವಾಣಿ ವಾರ್ತೆ



ಕಮ್ಮಗೊಂಡನಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್‌. ಮುನಿರಾಜು ಚಾಲನೆ ನೀಡಿದರು

ಪೀಣ್ಯ ದಾಸರಹಳ್ಳಿ: ‘ನನ್ನ ಕ್ಷೇತ್ರದಲ್ಲಿ ಅಭಿವೃದ್ಧಿ ವಿಚಾರವಾಗಿ ಎಲ್ಲೂ ಕಳಪೆ ಕಾಮಗಾರಿ ನಡೆಯಬಾರದು. ಹಾಗೇನಾದರೂ ಕಂಡು ಬಂದರೆ ಸೂಕ್ತ ಕ್ರಮ ಜರುಗಿಸಲಾಗುವುದು' ಎಂದು ಶಾಸಕ ಎಸ್. ಮುನಿರಾಜು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಕಮ್ಮಗೊಂಡನಹಳ್ಳಿಯಲ್ಲಿ ಒಂದು ಕೋಟಿ ರೂಪಾಯಿ ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

’ಸಾರ್ವಜನಿಕರಿಂದ ಯಾವುದೇ ದೂರು ಬರದಂತೆ ರಸ್ತೆ, ಚರಂಡಿ ಅಭಿವೃದ್ಧಿ ಆಗಬೇಕು. ಕೆಲವೊಂದು ರಸ್ತೆಗಳ ಪಕ್ಕದ ಚರಂಡಿಗಳಲ್ಲಿ ಜಲ್ಲಿಕಲ್ಲು, ಮಣ್ಣು ತುಂಬಿ ನೀರು ಹರಿಯುತ್ತಿಲ್ಲ. ಕೂಡಲೇ ಅದನ್ನು ತೆಗೆಸುವ ಕೆಲಸ ಆಗಬೇಕು' ಎಂದು ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

‘ಜನರು ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ವಿಶ್ವಾಸ ಇಟ್ಟಿದ್ದಾರೆ. ಅದನ್ನು ಹುಸಿಗೊ-ಳಿಸಬಾರದು. ಗುಣಮಟ್ಟದ ರಸ್ತೆ ಅಭಿ-ವೃದ್ಧಿಯಾಗಬೇಕು. ಎಲ್ಲೂ ಕಳಪೆಯಿಂದ ಕೂಡಿರಬಾರದು' ಎಂದರು.

ಈ ಸಂದರ್ಭದಲ್ಲಿ ದಾಸರಹಳ್ಳಿ ಮಂಡಲ ಬಿಜೆಪಿ ಅಧ್ಯಕ್ಷ ಸೋಮಶೇಖರ್, ಶೆಟ್ಟಿಹಳ್ಳಿ ವಾರ್ಡ್ ಬಿಜೆಪಿ ಅಧ್ಯಕ್ಷ ರಮೇಶ್ ಯಾದವ್ ಮೊದಲಾದವರು ಇದ್ದರು.

ಕಲಬುರ್ಗಿ ಟ್ರಸ್ಟ್‌ಗೆ ಸಮಿತಿ ರಚನೆ

ಬೆಂಗಳೂರು: ಕನ್ನಡ ಸಾಹಿತ್ಯ ಲೋಕಕ್ಕೆ ಅನುಪಮ ಸೇವೆ ಸಲ್ಲಿಸಿರುವ ಎಂ.ಎಂ. ಕಲಬುರ್ಗಿ ಟ್ರಸ್ಟ್‌ಗೆ ರಾಜ್ಯ ಸರ್ಕಾರವು ಸಮಿತಿಯನ್ನು ರಚಿಸಿ ಆದೇಶ ಹೊರಡಿಸಿದೆ.

ಅಧ್ಯಕ್ಷರಾಗಿ ವೀರಣ್ಣ ರಾಜೂರ, ಸದಸ್ಯರಾಗಿ ಶ್ರೀವಿಜಯ ಕಲಬುರ್ಗಿ, ಶಶಿಧರ ತೋಡ್ಕರ, ಹನುಮಾಕ್ಷಿ ಗೋಗಿ, ಎಚ್‌.ಎಸ್. ಮೇಲಿನಮನಿ, ಬಾಳಣ್ಣ ಶೀಗೀಹಳ್ಳಿ, ಸಿದ್ಧನಗೌಡ ಪಾಟೀಲ, ಚಂದ್ರಶೇಖರ ವಸ್ತ್ರದ ಅವರನ್ನು ನೇಮಕ ಮಾಡಲಾಗಿದೆ. ಧಾರವಾಡದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿ ಇರಲಿದ್ದಾರೆ.

ಮೃದಂಗ ವಾದಕ ರಾಜಗೋಪಾಲ್ ನಿಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹಿರಿಯ ಮೃದಂಗ ವಾದಕ ವಿದ್ವಾನ್ ವಿ.ಎಸ್. ರಾಜಗೋಪಾಲ್ (87) ಅವರು ಬುಧವಾರ ಬೆಳಿಗ್ಗೆ 7.30 ಗಂಟೆಗೆ ನಿಧನರಾದರು.


ಅವರಿಗೆ ಒಬ್ಬ ಪುತ್ರ ಹಾಗೂ ಪುತ್ರಿ ಇದ್ದಾರೆ. ಆಕಾಶವಾಣಿಯ ಟಾಪ್ ಗ್ರೇಡ್ ಕಲಾವಿದರಾಗಿದ್ದ ಅವರು ಸುಮಾರು ಇಪ್ಪತ್ತು ವರ್ಷಗಳ ಕಾಲ (1976–1996) ಆಕಾಶವಾಣಿಯಲ್ಲಿ ಸೇವೆ ಸಲ್ಲಿಸಿದ್ದರು.

ನಾಡಿನ ಹಿರಿಯ ಕಲಾವಿದರಾಗಿದ್ದ ವಿದ್ವಾನ್ ಆರ್.ಕೆ. ಶ್ರೀಕಂಠನ್, ವೀಣೆ ದೊರೆಸ್ವಾಮಿ ಅಯ್ಯಂಗಾರ್, ನಾಗಮಣಿ ಶ್ರೀನಾಥ್, ಡಿ. ಬಾಲಕೃಷ್ಣ, ಎಸ್. ಶಂಕರ್ ಮುಂತಾದವರ ಕರ್ನಾಟಕ ಶಾಸ್ತ್ರೀಯ ಗಾಯನಕ್ಕೆ ರಾಜಗೋಪಾಲ್ ಅವರು ಮೃದಂಗ ಪಕ್ಕವಾದ್ಯ ನುಡಿಸಿ ಹೆಸರಾಗಿದ್ದರು.

ಮೈಸೂರು ದಸರಾ ಸಂದರ್ಭದಲ್ಲಿ ರಾಜ್ಯ ಸರ್ಕಾರ ನೀಡುವ ‘ಆಸ್ಥಾನ ವಿದ್ವಾನ್’ ಪುರಸ್ಕಾರಕ್ಕೆ ರಾಜಗೋಪಾಲ ಅವರು ಭಾಜನರಾಗಿದ್ದರು.

ಸುಗಮ ಕಲಾಪಕ್ಕೆ ಹೊರಟ್ಟಿ ಆಗ್ರಹ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬೆಳಗಾವಿಯಲ್ಲಿ ಡಿಸೆಂಬರ್ 4ರಿಂದ ಆರಂಭವಾಗುವ ವಿಧಾನಮಂಡಲ ಅಧಿವೇಶನ-ದಲ್ಲಿ ಗದ್ದಲ, ಪ್ರತಿಭಟನೆಗಳನ್ನು ನಿಯಂತ್ರಿಸಿ ಉತ್ತರ ಕರ್ನಾಟಕದ ಜ್ವಲಂತ ಸಮಸ್ಯೆಗಳ ಕುರಿತ ಚರ್ಚೆಗೆ ಅವಕಾಶ ಕಲ್ಪಿಸಬೇಕು ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರತಿಭಟ-ನೆಯನ್ನು ತಡೆಯಲು ಬಾಕಿ ಇರುವ ಬೇಡಿಕೆಗಳನ್ನು ಈಡೇರಿಸಲು ಪ್ರಯತ್ನಿ-ಸುವಂತೆ ಉನ್ನತ ಶಿಕ್ಷಣ, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ, ಕಂದಾಯ ಹಾಗೂ ಕೃಷಿ ಸಚಿವರು ಮತ್ತು ಮುಖ್ಯಮಂತ್ರಿ-ಯವರಿಗೆ ಪತ್ರ ಬರೆದು ಒತ್ತಾಯಿಸಿದ್ದೇನೆ’ ಎಂದರು.

ಸರ್ಕಾರವು ಪ್ರತಿಭಟನಾಕಾರರಿಗೆ ಉತ್ತೇಜನ ನೀಡುವಂತೆ ವರ್ತಿಸಬಾರದು ಎಂದು ಕೋರಲಾಗಿದೆ. ಪ್ರತಿಭಟನೆ, ಧರಣಿ ನಡೆಯುತ್ತಿದ್ದರೆ ಸಚಿವರು ಮತ್ತು ಶಾಸಕರು ಸಕ್ರಿಯವಾಗಿ ಕಲಾಪದಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.

2022 ರ ಡಿಸೆಂಬರ್ ತಿಂಗಳಲ್ಲಿ ಬೆಳಗಾವಿಯಲ್ಲಿ 10 ದಿನಗಳ ಕಾಲ ವಿಧಾನಮಂಡಲದ ಅಧಿವೇಶನ ನಡೆದಿತ್ತು. ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ 102 ಸಂಘಟನೆಗಳು ಮನವಿ ಸಲ್ಲಿಸಿದ್ದವು. ಆ ಪೈಕಿ 64 ಸಂಘಟನೆಗಳು ಪ್ರತಿಭಟನೆ-ಗಳನ್ನು ನಡೆಸಿದ್ದವು. 65,000 ದಿಂದ 80,000 ದಷ್ಟು ಜನರು ಪ್ರತಿಭಟನೆಗ-ಳನ್ನು ಭಾಗಿಯಾಗಿದ್ದರು ಎಂದು ವಿವರ ನೀಡಿದರು.

ಈ ಅಧಿವೇಶನದಲ್ಲಿ ಐದರಿಂದ ಆರು ದಿನಗಳನ್ನು ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತು ಚರ್ಚೆಗೆ ಮೀಸ-ಲಿಡಲಾಗುವುದು. ಮಂಡನೆಗೂ ಮೊದಲು ಮಸೂದೆಗಳ ಪ್ರತಿಗಳನ್ನು ಒದಗಿಸುವುದು ಕಡ್ಡಾಯ. ತರಾತುರಿಯಲ್ಲಿ ಮಸೂದೆ ಮಂಡನೆಗೆ ಅವಕಾಶ ನೀಡುವುದಿಲ್ಲ ಎಂದರು.

ಬೆಳಗಾವಿಯಲ್ಲಿ ಶಾಸಕರ ಭವನ ನಿರ್ಮಾಣಕ್ಕೆ ಗುರುತಿಸಿರುವ 20 ಎಕರೆ ಜಮೀನಿನಲ್ಲಿ ತಾರಾ ಹೋಟೆಲ್ ನಿರ್ಮಾಣದ ಪ್ರಸ್ತಾವಕ್ಕೆ ಸರ್ಕಾರ ಒಪ್ಪಿಗೆ ನೀಡಬೇಕು. ಇದರಿಂದ ಆರ್ಥಿಕ ಹೊರೆ ತಗ್ಗುತ್ತದೆ ಎಂದು ಹೊರಟ್ಟಿ ಹೇಳಿದರು.

ಮುಲಾಯಂ ಸಿಂಗ್ ಜನ್ಮದಿನ ಕಾರ್ಯಕ್ರಮದಲ್ಲಿ ಇಬ್ರಾಹಿಂ ಹೇಳಿಕೆ

ವಿಪಕ್ಷಗಳ ಕಿತ್ತಾಟ; ಕತ್ತೆಗೆ ಸಿಂಹಾಸನ

ಪ್ರಜಾವಾಣಿ ವಾರ್ತೆ



ಬೆಂಗಳೂರಿನಲ್ಲಿ ಬುಧವಾರ ಸಮಾಜವಾದಿ ಪಕ್ಷ ಆಯೋಜಿಸಿದ್ದ ಮುಲಾಯಂ ಸಿಂಗ್ ಯಾದವ್ ಜನ್ಮದಿನ ಕಾರ್ಯಕ್ರಮದಲ್ಲಿ ಆಮ್ ಆದ್ಮಿ ಪಾರ್ಟಿಯ ರಾಷ್ಟ್ರೀಯ ವಕ್ತಾರ ಬ್ರಿಜೇಶ್ ಕಾಳಪ್ಪ, ಕೇಂದ್ರದ ಮಾಜಿ ಸಚಿವ ಸಿ.ಎಂ ಇಬ್ರಾಹಿಂ, ವಿಧಾನ ಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್, ಪತ್ರಕರ್ತ ಮಲ್ಲಿಕಾರ್ಜುನಯ್ಯ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ದೇಶದ ವಿರೋಧ ಪಕ್ಷಗಳು ನಾಯಿಗಳಂತೆ ಕಿತ್ತಾಡುತ್ತಿ-ರುವ ಕಾರಣ ಕತ್ತೆ ಸಿಂಹಾಸನದಲ್ಲಿ ಕುಳಿತು ರಾಜ್ಯಭಾರ ನಡೆಸುವಂತಾಗಿದೆ’ ಎಂದು ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಹೇಳಿದರು.

ಸಮಾಜವಾದಿ ಪಕ್ಷ ಬುಧವಾರ ಹಮ್ಮಿಕೊಂಡಿದ್ದ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಅವರ ಜನ್ಮದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕರ್ನಾಟಕದ ದೇವೇಗೌಡರೂ ದೇಶದ ಪ್ರಧಾನಿಯಾಗಿದ್ದರು. ನಾನೂ ಕೇಂದ್ರ ಸಚಿವನಾಗಿದ್ದೆ. ನಮ್ಮನ್ನೂ ಸೇರಿದಂತೆ ಹಿಂದೆ ಆಡಳಿತ ನಡೆಸಿದ ಯಾವ ಸರ್ಕಾರವೂ ಈ ಪರಿಯಾಗಿ ಸರ್ಕಾರದ ಆಸ್ತಿ ಮಾರಾಟ ಮಾಡಿರಲಿಲ್ಲ. ಒಂದಡಿ ಜಾಗ ಮಾರಿರಲಿಲ್ಲ. ಲಾಭದಾಯಕ ಉದ್ಯಮಗಳು, ವಿಮಾನ ನಿಲ್ದಾಣಗಳು, ಬಂದರುಗಳನ್ನೂ ಖಾಸಗಿ ಪಾಲು ಮಾಡಿದ್ದಾರೆ’ ಎಂದು ದೂರಿದರು.

‘ದ್ವಿಪಕ್ಷ ವ್ಯವಸ್ಥೆಗಿಂತ ಕನಿಷ್ಠ ಮೂರು ಪಕ್ಷಗಳು ಪ್ರಬಲವಾಗಿದ್ದರೆ ದೇಶಕ್ಕೆ ಇಂತಹ ಸ್ಥಿತಿ ಬರುತ್ತಿರಲಿಲ್ಲ. ಇದನ್ನು ಮನಗೊಂಡು ಮುಲಾಯಂ ಅವರಂತಹ ನಾಯಕರು ತೃತೀಯರಂಗ ಕಟ್ಟಿದರು. ಇಂದು ಕೇಜ್ರಿವಾಲ್ ಅಂಥವರು ಒಂದಷ್ಟು ಪೈಪೋಟಿ ನೀಡುತ್ತಿದ್ದಾರೆ. ತೃತೀಯ ರಂಗ ಪ್ರಬಲವಾಗದಿದ್ದರೆ ಪ್ರಜಾಪ್ರಭುತ್ವ ಗಟ್ಟಿಯಾಗದು’ ಎಂದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಮುಲಾಯಂ ಕೂಡ ನೆಹರೂ ಅವರಂತೆ ಸಮಾಜವಾದಿಯಾಗಿದ್ದರು. ಬಿಜೆಪಿ ಜತೆ ರಾಜಿ ಮಾಡಿಕೊಳ್ಳದೆ ರಾಜಕೀಯ ಮಾಡಿದರು. ಪ್ರಾದೇಶಿಕ ಪಕ್ಷಗಳಿಗೂ ಅಭಿವೃದ್ಧಿಯ ಬದ್ಧತೆ ಇದೆ ಎನ್ನುವುದು ದೇಶಕ್ಕೇ ತೋರಿಸಿದರು ಎಂದು ಶ್ಲಾಘಿಸಿದರು.

ಆಮ್ ಆದ್ಮಿ ಪಕ್ಷದ ರಾಷ್ಟ್ರೀಯ ವಕ್ತಾರ ಬ್ರಿಜೇಶ್ ಕಾಳಪ್ಪ, ಸಮಾಜವಾದಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎನ್.ಮಂಜಪ್ಪ, ಸಮಾಜವಾ-ದಿಗಳಾದ ಬಿ.ಆರ್.ರಾಮೇಗೌಡ, ವಿ.ಜಿ. ಪರಶುರಾಮ್, ಕೆ.ಎಸ್.ನಾಗರಾಜ್, ವಕೀಲ ಎಸ್.ಜಿ.ಮಠ, ಪತ್ರಕರ್ತ ಮಲ್ಲಿಕಾರ್ಜುನಯ್ಯ ಉಪಸ್ಥಿತರಿದ್ದರು.

60 ಪರ್ಸೆಂಟ್ ಕಮಿಷನ್ ಸರ್ಕಾರ: ಅಶೋಕ

ಪ್ರಜಾವಾಣಿ ವಾರ್ತೆ

ಬೀದರ್: 'ರಾಜ್ಯದಲ್ಲಿ 60 ಪರ್ಸೆಂಟ್ ಕಮಿಷನ್ ಸರ್ಕಾರವಿದೆ. ಭ್ರಷ್ಟಾಚಾರಕ್ಕೆ 'ಹಲೋ ಅಪ್ಪಾ' ಕ್ಕಿಂತ ದೊಡ್ಡ ಸಾಕ್ಷಿ ಬೇಕಾ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರಶ್ನಿಸಿದರು.

ತಾಲ್ಲೂಕಿನ ಮರಕಲ್, ಚಾಂಬೋಳ ಗ್ರಾಮದಲ್ಲಿ ಬರದಿಂದ ಬೆಳೆ ಹಾನಿಯಾದ ರೈತರ ಹೊಲ ಗಳಿಗೆ ಬುಧವಾರ ಭೇಟಿ ನೀಡಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದರು.

'ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಇತ್ತೀಚೆಗೆ ಗುತ್ತಿಗೆದಾರರಿಗೆ ₹750 ಕೋಟಿ ಬಿಡುಗಡೆಗೊಳಿಸಿದ್ದಾರೆ. ಇದಾದ ನಂತರ ಒಂದು ಕಡೆ ₹50 ಕೋಟಿ, ಇನ್ನೊಂದು ಕಡೆ ₹54 ಕೋಟಿ ಐ.ಟಿ. ದಾಳಿಯಲ್ಲಿ ಸಿಕ್ಕಿದೆ. ಈ ಹಣ ಕಾಂಗ್ರೆಸ್‌ನ ಮಾಜಿ ಎಂಎಲ್‌ಸಿಗೆ ಸೇರಿದ್ದು ಎಂದು ಗುತ್ತಿಗೆದಾರರೇ ಹೇಳಿದ್ದಾರೆ. ಹಿಂದೆ ಬಿಜೆಪಿ ಸರ್ಕಾರದ ವಿರುದ್ಧ ಆರೋಪ ಮಾಡಿದ್ದ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಕೂಡ ಕಮಿಷನ್ ನಡೆಯುತ್ತಿದೆ ಎಂದು ಹೇಳಿದ್ದಾರೆ.' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಧಾನಿ ಸ್ಥಾನಕ್ಕೆ ಅಗೌರವ: 'ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತ ಸೋತಿರಬಹುದು. ಆದರೆ, ಉತ್ತಮ ಪ್ರದರ್ಶನದಿಂದ ಅವರೆಲ್ಲ ಹೀರೋಗಳಾಗಿದ್ದಾರೆ. ಕ್ರೀಡೆಯಲ್ಲಿ ಸೋಲು-ಗೆಲುವು ಸಹಜ. ಆದರೆ, ಪ್ರಧಾನಿ ಮೋದಿಯವರಿಗೆ 'ಪನೌತಿ' (ಅಪಶಕುನ) ಎಂದು ಹೇಳುವ ಮೂಲಕ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ಪ್ರಧಾನಿ ಸ್ಥಾನಕ್ಕೆ ಅಗೌರವ ತಂದಿದ್ದಾರೆ. ಇದರ ವಿರುದ್ಧ ಎಲ್ಲಾ ಕ್ರೀಡಾಪಟುಗಳು ಪ್ರತಿಭಟಿಸಬೇಕು' ಎಂದು ಆರ್. ಅಶೋಕ ಮನವಿ ಮಾಡಿದರು.

ಲೇಬರ್ ಲೈನ್ ಸಹಾಯವಾಣಿಗೆ 2,780 ದೂರು

ಕಾರ್ಮಿಕರ ವಂಚನೆ ಹೆಚ್ಚಳ

• ವರುಣ ಹೆಗಡೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಗರದಲ್ಲಿ ಕಾರ್ಮಿಕ ವಂಚನೆ ಪ್ರಕರಣಗಳು ಹೆಚ್ಚಳ ವಾಗುತ್ತಿದ್ದು, ಕಾರ್ಮಿಕರಿಗಾಗಿಯೇ ರೂಪಿಸಿರುವ 'ಇಂಡಿಯಾ ಲೇಬರ್ ಲೈನ್' ಸಹಾಯವಾಣಿಯಡಿ 2,780 ದೂರುಗಳು ದಾಖಲಾಗಿವೆ.

ಕಾರ್ಮಿಕರ ಸಮಸ್ಯೆ ಗಳಿಗೆ ಪರಿಹಾರ ಒದಗಿಸಲು ವರ್ಕಿಂಗ್ ಪೀಪಲ್ಸ್ ಚಾರ್ಟರ್ (ಡಬ್ಲ್ಯುಪಿಸಿ) ಮತ್ತು ಆಜೀವಿಕ ಬ್ಯೂರೊ ಸಂಸ್ಥೆ ಜಂಟಿಯಾಗಿ 2021ರ ಜುಲೈನಲ್ಲಿ ಈ ಸಹಾಯವಾಣಿ ಪ್ರಾರಂಭಿಸಿವೆ. ಇದಕ್ಕೆ ಪ್ರತಿನಿತ್ಯ ಸರಾಸರಿ 10ರಿಂದ 15 ಕರೆಗಳು ಕಾರ್ಮಿಕರಿಂದ ಬರುತ್ತಿವೆ. ಇಂಡಿಯಾ ಲೇಬರ್ ಲೈನ್ ತಂಡವು ಅವುಗಳಲ್ಲಿನ ಸತ್ಯಾಸತ್ಯತೆ ಪರಿಶೀಲಿಸಿ, ದೂರುಗಳನ್ನು ದಾಖಲಿಸಿಕೊಳ್ಳುತ್ತಿದೆ. ಈ ತಂಡವು ವಕೀಲರು ಸೇರಿ ಕ್ಷೇತ್ರ ತಜ್ಞರನ್ನು ಒಳಗೊಂಡಿದೆ.

2020ರ ಮಾರ್ಚ್‌ನಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ವಿವಿಧ ಕಾಮಗಾರಿಗಳು ಸ್ಥಗಿತಗೊಂಡಿದ್ದವು. ಸರ್ಕಾರವು ನಿರ್ಬಂಧಗಳನ್ನು ವಿಧಿಸಿದ್ದರಿಂದ ಹಲವರು ಕೆಲಸ ಕಳೆದುಕೊಂಡಿದ್ದರು. ಆ ವೇಳೆ ವೇತನ ವಂಚನೆಯಂತಹ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ವರದಿಯಾಗಿದ್ದವು. ಹಲವರಿಗೆ ಬಾಕಿ ವೇತನ ಪಾವತಿಯಾಗಿರಲಿಲ್ಲ. ಹೀಗಾಗಿ, ಇಂಡಿಯಾ ಲೇಬರ್ ಲೈನ್ ಸಹಾಯವಾಣಿಯನ್ನು ಪ್ರಾರಂಭಿಸಲಾಗಿತ್ತು. ಸದ್ಯ ದೇಶದ 16 ನಗರಗಳಲ್ಲಿ ಈ ಸಹಾಯವಾಣಿ ಕಾರ್ಯ-ನಿರ್ವಹಿಸುತ್ತಿದೆ.

ವೇತನಕ್ಕೆ ಮನವಿ: ನಗರದಲ್ಲಿ ನೆಲೆಸಿರುವ ಕಾರ್ಮಿಕರಲ್ಲಿ ಉತ್ತರ ಭಾರತ ಹಾಗೂ ಉತ್ತರ ಕರ್ನಾಟಕ ಭಾಗದವರು ಹೆಚ್ಚಿನ ಸಂಖ್ಯೆಯಲ್ಲಿ ಸಹಾಯವಾಣಿಗೆ ಕರೆ ಮಾಡಿ, ಸಮಸ್ಯೆ ಹೇಳಿಕೊಂಡಿದ್ದಾರೆ. ಮಾಲೀಕರ ವರ್ತನೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ, ವೇತನ ಕೊಡಿಸುವಂತೆ ಮನವಿ ಮಾಡಿಕೊಂಡಿದ್ದಾರೆ.

'ಸಹಾಯವಾಣಿಗೆ ಕರೆ ಮಾಡಿದ ಕಾರ್ಮಿಕರಿಗೆ ಕಾನೂನು ಸೇರಿ ಎಲ್ಲ ರೀತಿಯ ನೆರವನ್ನು ಒದಗಿಸಲಾಗುತ್ತಿದೆ. ಕೆಲ ಪ್ರಕರಣಗಳಲ್ಲಿ ಮಾಲೀಕರು ಹಾಗೂ ಗುತ್ತಿಗೆದಾರರ ಭಯದ ಕಾರಣ ಕಾರ್ಮಿಕರು ದೂರನ್ನು ವಾಪಸ್ ಪಡೆಯುತ್ತಿದ್ದಾರೆ. ಇನ್ನೂ ಕೆಲ ಪ್ರಕರಣಗಳಲ್ಲಿ ಪರಸ್ಪರ ಒಪ್ಪಂದ ಮಾಡಿಕೊಂಡು ಇತ್ಯರ್ಥ ಮಾಡಿಕೊಂಡಿದ್ದಾರೆ. ಸಾವಿರಕ್ಕೂ ಅಧಿಕ ಪ್ರಕರಣಗಳನ್ನು ಕಾನೂನಿನ ಅಡಿ ಇತ್ಯರ್ಥ ಮಾಡಿಸಲಾಗಿದೆ. ಎಲ್ಲ ಸೇವೆಯೂ ಉಚಿತವಾಗಿದ್ದು, ಕಾರ್ಮಿಕರಿಗೆ ನ್ಯಾಯ ಒದಗಿಸಲು ನಾವು ಶ್ರಮಿಸುತ್ತಿದ್ದೇವೆ' ಎಂದು ಸಹಾಯವಾಣಿಯ ಸಹಾಯಕ ರಾಜ್ಯ ಸಂಯೋಜಕಿ ಗಾಯತ್ರಿ ರಘು ಕುಮಾರ್ ತಿಳಿಸಿದರು.

ಯಾರೆಲ್ಲ ಕರೆ ಮಾಡಬಹುದು?

'ಅಸಂಘಟಿತ ವಲಯಗಳಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕ್ಷೇತ್ರ, ಮನೆ ಕೆಲಸ, ಸ್ವಚ್ಛತೆ, ಗಾರ್ಮೆಂಟ್ಸ್, ಸಣ್ಣ ಕೈಗಾರಿಕೆಗಳು, ಕಾರ್ಖಾನೆಗಳು, ಭದ್ರತೆ, ಸೇವಾ ವಲಯಗಳಾದ ನರ್ಸಿಂಗ್, ಹೋಮ್ ನರ್ಸಿಂಗ್ ಹಾಗೂ ಇನ್ನಿತರೆ ಅಸಂಘಟಿತ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರು ಈ ಸಹಾಯವಾಣಿಗೆ ಕರೆ ಮಾಡಬಹುದು. ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 8ರಿಂದ ಸಂಜೆ 6ರವರೆಗೆ ಸಹಾಯವಾಣಿ ಸಕ್ರಿಯವಾಗಿ ಇರಲಿದೆ. ಬೇರೆ ಅವಧಿಯಲ್ಲಿ ಕರೆ ಮಾಡಿದರೂ, ಕಾರ್ಯಾವಧಿಯಲ್ಲಿ ಸಂಪರ್ಕಿಸಲಾಗುತ್ತದೆ. ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸಹಾಯವಾಣಿಯನ್ನೂ ರೂಪಿಸಲಾಗಿದೆ' ಎಂದು ಸಹಾಯವಾಣಿಯ ರಾಜ್ಯ ಸಂಯೋಜಕ ಮುನಿರಾಜು ಟಿ. ತಿಳಿಸಿದರು.

ಉಚಿತ ಸಹಾಯವಾಣಿ ಸಂಖ್ಯೆ: 18008339020, ಬೆಂಗಳೂರು ನಗರದ ಸಹಾಯವಾಣಿ: 080 46805780

1,160 ದೂರು ಇತ್ಯರ್ಥ

ಇಂಡಿಯಾ ಲೇಬರ್ ಲೈನ್ ಸಹಾಯವಾಣಿಯಡಿ ಈಗಾಗಲೇ ದಾಖಲಾದ ದೂರುಗಳಲ್ಲಿ 1,160 ದೂರುಗಳನ್ನು ಕಾನೂನಿನ ಅಡಿ ಇತ್ಯರ್ಥಗೊಳಿಸಲಾಗಿದ್ದು, ₹ 2.62 ಕೋಟಿ ಹಣವನ್ನು ಕಾರ್ಮಿಕರಿಗೆ ಮರಳಿಸಲಾಗಿದೆ. ಭವಿಷ್ಯ ನಿಧಿ (ಪಿಎಫ್) ಮತ್ತು ಗ್ರಾಚ್ಯುಟಿ (ಉಪಧನ) ಸಮಸ್ಯೆ, ವೇತನ ತಾರತಮ್ಯ, ಕೆಲಸದ ಸ್ಥಳದಲ್ಲಿ ಹಿಂಸೆ, ಅಧಿಕ ಅವಧಿ ದುಡಿಮೆ, ಅಪಘಾತ ಪರಿಹಾರ ನಿರಾಕರಣೆ ಹಾಗೂ ವೇತನ ವಿಳಂಬದ ಬಗ್ಗೆ ಹೆಚ್ಚಿನ ಕಾರ್ಮಿಕರು ಸಹಾಯವಾಣಿ ಸಂಪರ್ಕಿಸಿದ್ದಾರೆ.



ಸಹಿ ಚಳವಳಿ ಅಭಿಯಾನದಲ್ಲಿ ಭಾಗವಹಿಸಿದ್ದ ವಿವಿಧ ಕಾರ್ಖಾನೆಗಳ ಕಾರ್ಮಿಕರು

ಇಎಸ್‌ಐ ವೇತನ ಮಿತಿ ಹೆಚ್ಚಳಕ್ಕೆ ಸಹಿಸಂಗ್ರಹ ಚಳವಳಿ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: ಕಾರ್ಮಿಕರು ಇಎಸ್‌ಐ ಸೌಲಭ್ಯ ಪಡೆಯಲು ಇರುವ ವೇತನ ಮಿತಿಯನ್ನು ಹೆಚ್ಚಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿ 25 ಲಕ್ಷ ಜನರ ಸಹಿಸಂಗ್ರಹ ಚಳವಳಿಗೆ ಭಾನುವಾರ ಚಾಲನೆ ನೀಡಲಾಯಿತು.

'ಕರ್ನಾಟಕ ವರ್ಕರ್ಸ್ ಯೂನಿಯನ್' ಸಂಘಟನೆಯು ಬೊಮ್ಮಸಂದ್ರದಲ್ಲಿ ಈ ಚಳವಳಿ ಹಮ್ಮಿಕೊಂಡಿತ್ತು.

ಕಾರ್ಮಿಕರು ಇಎಸ್‌ಐ ವ್ಯಾಪ್ತಿಗೆ ಒಳಪಡಲು ಈಗಿರುವ ₹ 21,000 ವೇತನದ ಮಿತಿಯನ್ನು ಹೆಚ್ಚಿಸಬೇಕು. ಸೇವಾ ಅವಧಿ ಹೆಚ್ಚಿದಂತೆ ವೇತನದಲ್ಲಿಯೂ ಹೆಚ್ಚಳ ಆಗುವುದರಿಂದ ಕಾರ್ಮಿಕರು ಇಎಸ್‌ಐ ವ್ಯಾಪ್ತಿಯಿಂದ ಹೊರಗುಳಿಯುತ್ತಾರೆ. ಇದರಿಂದ ಆರೋಗ್ಯ ಸೇವೆ ದುಬಾರಿಯಾಗಿರುವ ಈ ದಿನಗಳಲ್ಲಿ ಕಾರ್ಮಿಕರು ಅಭದ್ರತೆಗೆ ಸಿಲುಕುತ್ತಿದ್ದಾರೆ ಎಂದು ಯೂನಿಯನ್ ಪ್ರಧಾನ ಕಾರ್ಯದರ್ಶಿ ಇಕೆಎನ್ ರಾಜನ್ ಹೇಳಿದರು.

'ಖಾಸಗಿ ಸಂಸ್ಥೆಗಳ ಆರೋಗ್ಯ ವಿಮೆ ಯೋಜನೆಗಳು ಜನರಿಂದ ವಸೂಲಿಬಾಜಿ ನಡೆಸುತ್ತವೆಯೇ ಹೊರತು, ಗ್ರಾಹಕರ ಆರೋಗ್ಯದ ಕಾಳಜಿಗೆ ಆದ್ಯತೆ ನೀಡುತ್ತಿಲ್ಲ. ಹೀಗಾಗಿ ಯಾವುದೇ ವೇತನ ಮಿತಿ ಇಲ್ಲದೇ ಎಲ್ಲ ಕಾರ್ಮಿಕರನ್ನು ಇಎಸ್‌ಐ ವ್ಯಾಪ್ತಿಗೆ ತರಬೇಕು ಎಂದು ಕೇಂದ್ರ ಸರ್ಕಾರವನ್ನು ಆಗ್ರಹಿಸಲು ಸಹಿ ಸಂಗ್ರಹ ಚಳವಳಿ ಆರಂಭಿಸಲಾಗಿದೆ' ಎಂದು ಕಾರ್ಮಿಕ ಮುಖಂಡ ಮಿಲ್ಕಿಯೋರ್ ಹೇಳಿದರು.

ವರ್ಷದ 15 ದಿನಗಳ ಸೇವೆಯನ್ನು ಗ್ರ್ಯಾಚುಟಿಗೆ ಪರಿಗಣಿಸಲಾ-ಗುತ್ತಿದ್ದು, ವರ್ಷಕ್ಕೆ 60 ದಿನಗಳವರೆಗೆ ಹೆಚ್ಚಿಸಬೇಕು. ಗುತ್ತಿಗೆ ಪದ್ಧತಿ ರದ್ದಾಗಬೇಕು. ಅಗತ್ಯ ವಸ್ತುಗಳ ಬೆಲೆ ನಿಯಂತ್ರಿಸಬೇಕು ಎಂಬ ಬೇಡಿಕೆಗಳನ್ನು ಒಳಗೊಂಡು ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ಮುಖ್ಯಸ್ಥೆ ಛಾಯಾದೇವಿ ಹೇಳಿದರು.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಸಂಚಾಲಕ ಕೆ.ವಿ.ಭಟ್, ಬ್ಯಾಂಕ್ ನೌಕರರ ಸಂಘಟನೆಯ ಮುಖಂಡ ರೇವಣ್ಣ ಇದ್ದರು. ಉಪಾಧ್ಯಕ್ಷ ರಾಮಮೂರ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಜಾಗೃತಿಗಾಗಿ ಜಾಥಾ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: 'ವಿಶ್ವ ಮಧುಮೇಹ' ದಿನದ ಅಂಗವಾಗಿ ನೆಲಮಂಗಲ ತಾಲ್ಲೂಕು ಟಿ.ಬೇಗೂರಿನ ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆ್ಯಂಡ್ ರಿಸರ್ಚ್ ಸೆಂಟರ್ ವತಿಯಿಂದ ದಾಬಸ್ ಪೇಟೆಯಲ್ಲಿ 'ಮಧುಮೇಹಕ್ಕಾಗಿ ನಡೆಯಿರಿ' ಎಂಬ ಘೋಷಣೆಯೊಂದಿಗೆ ಜಾಗೃತಿ ಜಾಥಾ ನಡೆಸಿದರು.

ರೋಗ ಬಾರದಂತೆ ವಹಿಸಬೇಕಾದ ಎಚ್ಚರಿಕೆ, ರೋಗ ಬಂದರೆ ಕೈಗೊಳ್ಳಬೇಕಾದ ಕ್ರಮಗಳ ಮಾಹಿತಿ ಒಳಗೊಂಡ ಭಿತ್ತಿಪತ್ರ ಹಿಡಿದ ನೂರಾರು ವಿದ್ಯಾರ್ಥಿಗಳು ದಾಬಸ್ ಪೇಟೆ ಸರ್ಕಾರಿ ಆಸ್ಪತ್ರೆಯಿಂದ ಹೊರಟು ಉದ್ದನೇಶ್ವರ ವೃತ್ತ, ಶಿವಗಂಗೆ ವೃತ್ತದ ಮೂಲಕ ಸಾಗಿ ಮತ್ತೆ ಆಸ್ಪತ್ರೆವರಿಗೆ ಬಂದು ಜನರಲ್ಲಿ ಅರಿವು ಮೂಡಿಸಿದರು.



ಮಧುಮೇಹ ದಿನದ ಅಂಗವಾಗಿ ದಾಬಸ್ ಪೇಟೆ ಪಟ್ಟಣದಲ್ಲಿ ಸಿದ್ಧಾರ್ಥ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಂದ ಜಾಥಾ ನಡೆಯಿತು

ಅಜಯ್ ಕುಮಾರ್ ವರ್ಮ ಸೂಚನೆ

'ಅರ್ಹ ಮತದಾರರ ಕೈಬಿಡದಿರಿ'

ಪ್ರಜಾವಾಣಿ ವಾರ್ತೆ

ಯಲಹಂಕ: ಕೇಂದ್ರ ಚುನಾವಣಾ ಆಯೋಗದ ಕಾರ್ಯದರ್ಶಿ ಅಜಯ್ ಕುಮಾರ್ ವರ್ಮ ಹಾಗೂ ಅಧೀನ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರು ಬೆಂಗಳೂರು ನಗರ ಜಿಲ್ಲೆಯ ಯಲಹಂಕ ವಿಧಾನಸಭಾ ಕ್ಷೇತ್ರಕ್ಕೆ ಬುಧವಾರ ಭೇಟಿ ನೀಡಿದ್ದರು.

2024ರ ಚುನಾವಣೆ ಹಾಗೂ ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ತಾಲ್ಲೂಕು ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಸಭೆಯಲ್ಲಿ ಯುವ ಮತದಾರರ ನೋಂದಣಿಗೆ ಕ್ರಮವಹಿಸುವುದರ ಜೊತೆಗೆ ಅಂಗವಿಕಲರ ಮತ್ತು ಲಿಂಗತ್ವ ಅಲ್ಪಸಂಖ್ಯಾತರ ಹೆಚ್ಚುವರಿ ನೋಂದಣಿಗೆ ಅಗತ್ಯಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಮತದಾರರ ಪಟ್ಟಿಯಲ್ಲಿ ಉತ್ತಮ ಗುಣಮಟ್ಟದ ಛಾಯಾಚಿತ್ರ ಇರುವಂತೆ ಕ್ರಮ ವಹಿಸಬೇಕು. ಅರ್ಹ ಮತದಾರರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಬೇಕು ಎಂದು ಸೂಚಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಬೆಂಗಳೂರು ಉತ್ತರ ಉಪವಿಭಾಗಾಧಿಕಾರಿ ಪ್ರಮೋದ್ ಪಾಟೀಲ್, ಯಲಹಂಕ ಮತ್ತು ಬೆಂಗಳೂರು ಉತ್ತರ ತಾಲ್ಲೂಕು ತಹಶೀಲ್ದಾರ್‌ಗಳಾದ ಅನಿಲ್ ಕುಮಾರ್ ಅರೋಲಿಕರ್, ವಿಜಯಕುಮಾರ್, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಅಪೂರ್ವ ಕುಲಕರ್ಣಿ ಸೇರಿ ಬಿಬಿಎಂಪಿ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.



ಚುನಾವಣಾ ಆಯೋಗದ ಕಾರ್ಯದರ್ಶಿ ಅಜಯ್ ಕುಮಾರ್ ವರ್ಮ ಹಾಗೂ ಅಧೀನ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರು ಯಲಹಂಕ ತಾಲ್ಲೂಕು ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು

ಆದಾಯ ಮೀರಿ ಆಸ್ತಿ ಗಳಿಕೆ ಆರೋಪ • ಸಿಬಿಐ ತನಿಖೆ ಆದೇಶ ಪ್ರಶ್ನಿಸಿ ಮನವಿ

ಡಿಕೆಶಿ ಅರ್ಜಿ ವಿಚಾರಣೆ 29ಕ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಆದಾಯ ಮೀರಿದ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆಗೆ ಆದೇಶಿಸಿದ್ದ ಈ ಹಿಂದಿನ ಸರ್ಕಾರದ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಲ್ಲಿಸಿರುವ ಮೇಲ್ಮನವಿ ವಿಚಾರಣೆಯನ್ನು ಹೈಕೋರ್ಟ್ ಇದೇ 29ಕ್ಕೆ ನಿಗದಿಪಡಿಸಿದೆ.

ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠದಲ್ಲಿ ಅರ್ಜಿ ವಿಚಾರಣೆಗೆ ನಿಗದಿಯಾಗಿತ್ತು. ಬುಧವಾರ ಬೆಳಗಿನ ಕಲಾಪ ಆರಂಭವಾಗುತ್ತಿದ್ದಂತೆ ಸಿಬಿಐ ಪರ ಕೇಂದ್ರ ಸರ್ಕಾರದ ಸಹಾಯಕ ಸಾಲಿಸಿಟರ್ ಜನರಲ್ ಸೂರ್ಯಪ್ರಕಾಶ್ ವಿ.ರಾಜು ಹಾಜರಾಗಿ, ಸಿಬಿಐ ವಾದ ಮಂಡನೆಗೆ ಇದೇ 27 ರಂದು ದಿನಾಂಕ ನಿಗದಿಪಡಿಸುವಂತೆ ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಇಂದು (ಬುಧವಾರ) ಮಧ್ಯಾಹ್ನ ಮೇಲ್ಮನವಿದಾರರ ಪರ ವಕೀಲರ ವಾದ ಆಲಿಸಲಾಗುವುದು. ನಂತರ ಸಿಬಿಐ ವಾದ ಆಲಿಸಲು ಸೂಕ್ತ ದಿನಾಂಕ ನಿಗದಿಪಡಿಸಲಾಗುವುದು ಎಂದು ತಿಳಿಸಿ, ಮಧ್ಯಾಹ್ನಕ್ಕೆ ವಿಚಾರಣೆ ನಿಗದಿಪಡಿಸಿತು. ಆದರೆ, ಮಧ್ಯಾಹ್ನದ ಕಲಾಪದ ವೇಳೆ ಸಿಬಿಐ ಮತ್ತು ಮೇಲ್ಮ-ನವಿದಾರರ ಪರ ವಕೀಲರು ಹಾಜರಾಗಿ, ವಾದ ಮಂಡನೆಗೆ ಇನ್ನಷ್ಟು ಕಾಲಾವಕಾಶ ನೀಡುವಂತೆ ಜಂಟಿ ಮನವಿ ಸಲ್ಲಿಸಿದರು. ಇದನ್ನು ಪರಿಗಣಿಸಿದ ನ್ಯಾಯಪೀಠ, ಇದೇ 29 ಕ್ಕೆ ವಿಚಾರಣೆ ಮುಂದೂಡಿತು.

'ಈ ಹಿಂದಿನ ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ಅನುಮತಿ ನೀಡಿ 2021 ರ ಸೆಪ್ಟೆಂಬರ್ 25ರಂದು ಹೊರಡಿಸಿರುವ ಆದೇಶ ರದ್ದುಪಡಿಸಬೇಕು' ಎಂದು ಕೋರಿ ಶಿವಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠವು 2023ರ ಏಪ್ರಿಲ್‌ನಲ್ಲಿ ವಜಾಗೊಳಿಸಿತ್ತು.

ಇದನ್ನು ಪ್ರಶ್ನಿಸಿ ಶಿವಕುಮಾರ್ ವಿಭಾಗೀಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಿದ್ದರು. ಮೇಲ್ಮನವಿ ವಿಚಾರಣೆ ನಡೆಸಿದ್ದ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ, ಏಕಸದಸ್ಯ ನ್ಯಾಯಪೀಠದ ಆದೇಶ ಮತ್ತು ಸಿಬಿಐ ತನಿಖೆಗೆ ಮಧ್ಯಂತರ ತಡೆ ನೀಡಿತ್ತು.

ಇದಕ್ಕೆ ಪ್ರತಿಯಾಗಿ ಸಿಬಿಐ: ತನಿಖೆಗೆ ನೀಡಿರುವ ತಡೆ ತೆರವುಗೊಳಿಸುವಂತೆ ಕೋರಿ ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿತ್ತು. ಇದರ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, 'ತನಿಖೆಗೆ ನೀಡಿರುವ ತಡೆ ತೆರವು ಕೋರಿ ಸಿಬಿಐ ಸಲ್ಲಿಸಿರುವ ಮಧ್ಯಂತರ ಅರ್ಜಿ ಹಾಗೂ ಡಿ.ಕೆ.ಶಿವಕುಮಾರ್ ಸಲ್ಲಿಸಿರುವ ಮೇಲ್ಮನವಿಯನ್ನು ಎರಡು ವಾರಗಳಲ್ಲಿ ಇತ್ಯರ್ಥಪಡಿಸಿ' ಎಂದು ಹೈಕೋರ್ಟ್‌ಗೆ ನಿರ್ದೇಶಿಸಿತ್ತು.





ತೆಂಪೆರೆದ ಮಳೆ... ನಗರದ ಮಲ್ಲೇಶ್ವರದಲ್ಲಿ ಬುಧವಾರ ಸಂಜೆ ಸುರಿದ ಮಳೆಯಲ್ಲಿ ಸೈಕಲ್ ಹಾಗೂ ಬೈಕ್ ಸವಾರರು ಸಾಗಿದರು (ಎಡಚಿತ್ರ). ನಗರದ ಬಿ.ಎನ್. ಗರುಡಾಚಾರ್ ವೃತ್ತದಲ್ಲಿ ಸುರಿದ ಜೋರು ಮಳೆಯಲ್ಲಿ ಬೈಕ್ ಸವಾರರು ಸಾಗಿದರು. – ಪ್ರಜಾವಾಣಿ ಚಿತ್ರ

ದಾವೆಗಳ ನಿವೇದನಾ ಗುಣಮಟ್ಟ ಕ್ಷೀಣ: ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಕೀಲರು ಕೋರ್ಟ್‌ಗೆ ಸಲ್ಲಿಸುವ ವಕಾಲತ್ತುಗ-ಳಲ್ಲಿನ ನಿವೇದನೆಯ ಪ್ರತಿಪಾದನಾ ಗುಣಮಟ್ಟ ಇತ್ತೀಚೆಗೆ ಕುಸಿಯುತ್ತಿದೆ' ಎಂದು ಹೈಕೋರ್ಟ್ ತೀವ್ರ ಕಳವಳ ವ್ಯ-ಕ್ತಪಡಿಸಿದೆ.

'ಎಲ್‌ಒಸಿ (ಲುಕ್ ಔಟ್ ಸರ್ಕ್ಯುಲರ್) ಹಿಂಪಡೆದು ವಿದೇಶ ಪ್ರವಾಸ ಕೈಗೊಳ್ಳಲು ಅನುವಾಗುವಂತೆ ವಲಸೆ ಅಧಿಕಾರಿಗಳಿಗೆ ನಿರ್ದೇಶಿಸಬೇಕು' ಎಂದು ಕೋರಲಾದ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಪ್ರಕರಣದಲ್ಲಿ ಹಾಜರಾಗಿದ್ದ ಹಿರಿಯ ವಕೀಲ ಬಿ.ವಿ.ಆಚಾರ್ಯ ಅವರನ್ನು ಉದ್ದೇಶಿಸಿದ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರು, 'ಇಂದಿನ ದಿನಮಾನ-ಗಳಲ್ಲಿ ಸಾಕಷ್ಟು ದಾವೆಗಳ ಕೋರಿಕೆಗಳಲ್ಲಿ ಗುಣಮಟ್ಟ ಕ್ಷೀಣಿಸುತ್ತಿದೆ. ಇದರಿಂದ ವಕೀಲರ ವಾದ ಪರಿಣಾಮಕಾರಿ ಎನಿಸುತ್ತಿಲ್ಲ. ಹಾಗೆಂದು ಇದನ್ನೆಲ್ಲಾ ಹಿರಿಯ ವಕೀಲರು ಸುಧಾರಿಸಲಾಗದು. ಏಕೆಂದರೆ, ಅವರು ಪ್ರಕರಣಗಳ ವಕಾಲತ್ತು ವಹಿಸಿದ ಕಿರಿಯ ವಕೀಲರ ಕ್ಲುಪ್ತ ಮಾಹಿತಿ ಆಧರಿಸಿ ವಾದ ಮಂಡಿ-ಸಬೇಕಾಗುತ್ತದೆ' ಎಂದರು.

'ಈ ವಿಷಯದ ಬಗ್ಗೆ ನಾನು ಮುಕ್ತ ನ್ಯಾಯಾಲಯದಲ್ಲಿ ಪದೇಪದೇ ಹೇಳುತ್ತಲೇ ಬರುತ್ತಿದ್ದೇನೆ. ಪ್ರತಿಬಾರಿಯೂ ಕಳಪೆ ವಕಾಲತ್ತು-ಗಳನ್ನು ಗಮನಿಸಿದಾಗ ನನಗೆ ಈ ಅಂಶವನ್ನು ಹೇಳದೇ ಇರಲು ಆಗುತ್ತಿಲ್ಲ. ಆದಾಗ್ಯೂ, ಈ ಮಾತಿಗೆ ಅಪವಾದ ಎಂಬಂತಹ ಬಹಳಷ್ಟು ವಕೀಲರಿದ್ದಾರೆ. ಈ ದಾವೆಯಲ್ಲಿ ಪ್ರತಿವಾದಿ ಬ್ಯಾಂಕ್‌ಗಳನ್ನು ಪ್ರತಿನಿಧಿಸಿರುವ ವಕೀಲ ಮನು ಕುಲಕರ್ಣಿ ಅವರ ದಾವೆಯ ನಿವೇದನೆ ಬಗ್ಗೆ ಖುಷಿಯಿದೆ' ಎಂದು ಶ್ಲಾಘಿಸಿದರು.

'ನಿವೇದನೆಗಳಲ್ಲಿ ಕಿರಿಯ ವಕೀಲರ ಸಂಶೋಧನಾ ಪ್ರವೃತ್ತಿ ಸೃಜನಾತ್ಮಕ ಸ್ಪರ್ಶವಿಲ್ಲದೆ ಸೊರಗುತ್ತಿದೆ. ನಿವೇದನೆಯನ್ನು ಸರಿಯಾಗಿ ಪ್ರಸ್ತುತ-ಪಡಿಸಲಿಲ್ಲ ಎಂದರೆ ನೀವು ಕಕ್ಷಿದಾರ ರನ್ನು ಹೇಗೆ ರಕ್ಷಿಸುತ್ತೀರಿ' ಎಂದು ಕಿರಿಯ ವಕೀಲರನ್ನು ಪ್ರಶ್ನಿಸಿದ ಅವರು, 'ವಕೀಲರು ಜನರ ಮೂಲಭೂತ ಹಕ್ಕುಗಳ ರಕ್ಷಕರಾಗಿ ವಾದ ಮಂಡಿಸುವ ಜೊತೆ ಜೊತೆಗೇ ದಾವೆಯ ನಿವೇದನಾ ಮಿತಿಗೆ ಒಳಪಟ್ಟಿರಬೇಕಾಗುತ್ತದೆ. ಇಲ್ಲಿ ಸಂಘರ್ಷವಿರುತ್ತದೆ. ಹೀಗಾಗಿ, ಜನರ ಸಾಂವಿಧಾನಿಕ ಹಕ್ಕುಗಳ ರಕ್ಷಕನಾದ ನ್ಯಾಯಾಲಯದ ಪ್ರಯತ್ನ ಋಣಾತ್ಮಕವಾಗಿರಬೇಕಾಗುತ್ತದೆ. ಈ ನಿಟ್ಟಿನಲ್ಲಿ ವಕೀಲ ವೃಂದದ (ಬಾರ್) ಗುಣಮಟ್ಟ ಸುಧಾರಿಸುವ ಅವಶ್ಯಕತೆ ಇದೆ' ಎಂದರು.

ನಕಲಿ ಪಿಎಚ್‌.ಡಿ ಪ್ರಾಂಶುಪಾಲರ ವಿರುದ್ಧ ಪ್ರಕರಣ

ತುಮಕೂರು: ನಕಲಿ ಪಿಎಚ್‌.ಡಿ ಪದವಿ ಪ್ರಮಾಣ ಪತ್ರ ಸಲ್ಲಿಸಿ ಪ್ರಾಂಶುಪಾಲರ ಹುದ್ದೆ ಗಿಟ್ಟಿಸಿಕೊಂಡಿದ್ದಾರೆ ಎಂಬ ಆರೋಪದ ಮೇರೆಗೆ ನಗರದ ಶಿರಾಗೇಟ್ ರಸ್ತೆ ಕೆಎಸ್‌ಇಎಫ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಬಿ.ಸುಕನ್ಯಾ ವಿರುದ್ಧ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉತ್ತರ ಪ್ರದೇಶದ ಬುಂದೇಲಖಂಡ ವಿ.ವಿ.ಯಿಂದ ಪಿಎಚ್‌.ಡಿ ಪಡೆದಿರುವುದಾಗಿ ಪದವಿ ಪ್ರಮಾಣ ಪತ್ರ ನೀಡಿ ಪ್ರಾಂಶುಪಾಲರಾಗಿ ಆಯ್ಕೆಯಾಗಿದ್ದರು. ವಿ.ವಿಯಲ್ಲಿ ವಿಚಾರಿಸಿದಾಗ ಇದು ಸುಳ್ಳು ಎಂದು ಗೊತ್ತಾಗಿದೆ.

ಜಿಲ್ಲಾ ನ್ಯಾಯಾಧೀಶರ ಹುದ್ದೆ: ಕ್ರಿಮಿನಲ್ ವಿವರ ಮುಚ್ಚಿಟ್ಟ ಆರೋಪ

ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭದ್ರತೆಯಿರುವ ಉದ್ಯೋಗವು ಮೌಲ್ಯಯುತವಾದ ಆಸ್ತಿಗೆ ಸಮಾನ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಜಿಲ್ಲಾ ನ್ಯಾಯಾಧೀಶರ ಹುದ್ದೆಗೆ ಅರ್ಜಿ ಸಲ್ಲಿಸುವಾಗ ತಮ್ಮ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿವರವನ್ನು ಮರೆಮಾಚಿದ ಆರೋಪ ಎದುರಿಸುತ್ತಿರುವ ವಕೀಲರೊಬ್ಬರ ವಿರುದ್ಧದ ದೋಷಾರೋಪ ಪಟ್ಟಿ ರದ್ದುಪಡಿಸಲು ನಿರಾಕರಿಸಿದೆ.

'ನನ್ನ ವಿರುದ್ಧ ಬೆಂಗಳೂರಿನ 39ನೇ ಹೆಚ್ಚುವರಿ ಎಸಿಎಂಎಂ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ದೋಷಾರೋಪ ಪಟ್ಟಿ ರದ್ದುಪಡಿಸಬೇಕು' ಎಂದು ಕೋರಿ ಸೋಮವಾರಪೇಟೆ ತಾಲ್ಲೂಕಿನ ವಕೀಲ ಎಸ್.ಎಸ್.ಫಾಲಾಕ್ಷ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, 'ವ್ಯಕ್ತಿಯೊಬ್ಬ ಯಾವುದೇ ಸ್ವತ್ತನ್ನು ಮೋಸದಿಂದ ತನ್ನ-ಲ್ಲಿಟ್ಟುಕೊಳ್ಳುವುದು ವಂಚನೆಗೆ ಸಮ' ಎಂದು ಹೇಳಿದೆ.

'ಗ್ರೂಪ್ ಡಿ ನೌಕರಿಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ತಪ್ಪಾಗಿದೆ ಎಂದರೆ ಪರವಾಗಿಲ್ಲ. ಆದರೆ, ಸತತ 13 ವರ್ಷಗಳ ಕಾಲ ವಕೀಲಿಕೆ ನಡೆಸಿದವರು ಜಿಲ್ಲಾ ನ್ಯಾಯಾಧೀಶರ ಹುದ್ದೆಗೆ ಅರ್ಜಿ ಸಲ್ಲಿಸುವಾಗ ಇಂತಹ ತಪ್ಪು ಆಗದಂತೆ ನೋಡಿಕೊಳ್ಳಬೇಕಿತ್ತು. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಆಗಿರುವ ಕಣ್ತಪ್ಪು ಎಂಬ ಸಬೂಬನ್ನು ಒಪ್ಪಿಕೊಳ್ಳಲಾಗುವುದಿಲ್ಲ' ಎಂದು ನ್ಯಾಯಪೀಠ ಹೇಳಿದೆ.

'ಇದು ಭಾರತೀಯ ದಂಡ ಸಂಹಿತೆ–1860ರ ಕಲಂ 415ರ ಪ್ರಕಾರ ಅಪರಾಧ. ಹೀಗಾಗಿ, ಭದ್ರತೆಯಿರುವ ಉದ್ಯೋಗವೂ ಒಂದು ಮೌಲ್ಯಯುತ ಸ್ವತ್ತು. ಇದನ್ನು ಪಡೆಯುವುದಕ್ಕಾಗಿ ಸುಳ್ಳು ಮಾಹಿತಿ ನೀಡುವುದು ವಂಚನೆ ಮಾಡಿದಂತೆ' ಎಂದು ಹೇಳಿದೆ.

ಪ್ರಕರಣವೇನು?: ಜಿಲ್ಲಾ ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಲು ಹೈಕೋರ್ಟ್ 2019ರ ಸೆಪ್ಟೆಂಬರ್ 15 ರಂದು ಅರ್ಜಿ ಆಹ್ವಾನಿಸಿತ್ತು. 13 ವರ್ಷಗಳಿಂದ ವಕೀಲಿಕೆ ನಡೆಸುತ್ತಿರುವ ಅರ್ಜಿದಾರ ಫಾಲಾಕ್ಷ ಅವರು ಪೂರ್ವಭಾವಿ, ಮುಖ್ಯ ಹಾಗೂ ಮೌಖಿಕ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದರು. ಜಿಲ್ಲಾ ನ್ಯಾಯಾಧೀಶರಾಗಿ ಆಯ್ಕೆಯಾಗಿದ್ದ ಒಟ್ಟು ಮೂವರು ಅಭ್ಯರ್ಥಿಗಳಲ್ಲಿ ಇವರೂ ಒಬ್ಬರೆನಿಸಿದ್ದರು.

ಏತನ್ಮಧ್ಯೆ, ಹೈಕೋರ್ಟ್‌ಗೆ ಬಂದ ಅನಾಮಧೇಯ ದೂರೊಂದರಲ್ಲಿ ಫಾಲಾಕ್ಷ ವಿರುದ್ಧ ಕ್ರಿಮಿನಲ್ ಪ್ರಕರಣ ವಿಚಾರಣೆಗೆ ಬಾಕಿ ಇರುವ ಮಾಹಿತಿ ಬಯಲಾಗಿತ್ತು. ಈ ಕುರಿತಂತೆ ವಿವರಣೆ ನೀಡಲು ಹೈಕೋರ್ಟ್ ಅರ್ಜಿದಾರರಿಗೆ ಷೋಕಾಸ್ ನೋಟಿಸ್ ಜಾರಿ ಮಾಡಿತ್ತು.

ಮೌಖಿಕ ವಿಚಾರಣೆಗೆ ಹಾಜರಾಗಿದ್ದ ಅರ್ಜಿದಾರರು, 'ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಎಲ್ಲ ಪ್ರಕರಣ ಇತ್ಯ-ರ್ಥವಾಗಿವೆ. ಕೇವಲ ಒಂದು ಪ್ರಕರಣ ಬಾಕಿಯಿದೆ. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಚಾತುರ್ಯದಿಂದ ತಪ್ಪಾಗಿದೆ' ಎಂಬ ವಿವರಣೆ ನೀಡಿದ್ದರು. ಇದನ್ನು ಒಪ್ಪದ ಹೈಕೋರ್ಟ್ ರಿಜಿಸ್ಟ್ರಾರ್, ವಿಧಾನಸೌಧ ಪೊಲೀಸ್ ಠಾಣೆಗೆ ಅರ್ಜಿದಾರರ ವಿರುದ್ಧ ವಂಚನೆ ಆರೋಪದಡಿ ದೂರು ದಾಖಲಿಸಿದ್ದರು.

ಎಡಪಂಥೀಯರಿಗೆ ಆದ್ಯತೆ: ಶಹಾಪುರ

ಪ್ರಜಾವಾಣಿ ವಾರ್ತೆ

ವಿಜಯಪುರ: 'ರಾಜ್ಯ ಸರ್ಕಾರ ನೂತನ ಶಿಕ್ಷಣ ನೀತಿ ರೂಪಿಸುವ ಸಂಬಂಧ ರಚಿಸಿರುವ ಸಮಿತಿಯಲ್ಲಿ ಶಿಕ್ಷಣ ತಜ್ಞರಾಗಿರುವುದಕ್ಕಿಂತ ಹೆಚ್ಚಾಗಿ ಎಡಪಂಥೀಯ ವಿಚಾರಧಾರೆಗಳನ್ನು ಪ್ರತಿಪಾದಿಸುವವರನ್ನು ನೇಮಕ ಮಾಡಿದ್ದಾರೆ' ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಹಾಪುರ ಆರೋಪಿಸಿದರು.

ನಗರದಲ್ಲಿ ಬುಧವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯ ಶಿಕ್ಷಣ ನೀತಿ ರೂಪಿಸುವ ಸಂಬಂಧ ಸರ್ಕಾರ ರಚಿಸಿರುವ ಸಮಿತಿಯಲ್ಲಿ ಕರ್ನಾಟಕದವರಿಗೆ ಆದ್ಯತೆ ಸಿಕ್ಕಿಲ್ಲ. ಕರ್ನಾಟಕೇತರರಿಗೆ ಸಮಿತಿಯ ನೇತೃತ್ವ ವಹಿಸಲಾಗಿದೆ. ಅರ್ಧಕ್ಕಿಂತ ಹೆಚ್ಚು ಜನ ಅನ್ಯ ರಾಜ್ಯದವರಿದ್ದಾರೆ. ಸರ್ಕಾರಿ, ಖಾಸಗಿ ವಲಯ, ಎಲ್ಲ ವಿಚಾರಗಳನ್ನು ಒಳಗೊಂಡವರನ್ನು ನೇಮಿಸುತ್ತಾರೆ ಎಂಬ ನಂಬಿಕೆ ಹುಸಿಯಾಗಿದೆ. ಸಮಿತಿ ರಚನೆಯಲ್ಲಿ ಸಮಗ್ರತೆ ಇಲ್ಲ' ಎಂದು ಅವರು ಆಕ್ಷೇಪಿಸಿದರು.

ತರಕಾರಿಗಳಲ್ಲಿ ಭಾರದ ಲೋಹ: ಪರೀಕ್ಷೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಮಾರಾಟವಾಗುವ ತರಕಾರಿಗಳಲ್ಲಿ ಸುರಕ್ಷತಾ ಮಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಭಾರದ ಲೋಹಗಳ ಉಪಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ), ಇವುಗಳನ್ನು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಯೋಗಾಲ-ಯದಲ್ಲಿ ಸಮಗ್ರ ವಿಶ್ಲೇಷಣೆ ನಡೆಸಿ ವರದಿ ಸಲ್ಲಿಸಬೇಕು ಎಂದು ಸೂಚಿಸಿದೆ.

ಮಾಧ್ಯಮ ವರದಿಗಳ ಆಧಾರದಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ-ಕೊಂಡಿರುವ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ನೇತೃತ್ವದ ಪ್ರಧಾನ ಪೀಠ, 'ಪರಿಸರಕ್ಕೆ ಸಂಬಂಧಿಸಿ ಇದೊಂದು ಗಂಭೀರ ಪ್ರಕರಣ' ಎಂದು ಹೇಳಿದೆ.

ಪರಿಸರ ನಿರ್ವಹಣೆ ಹಾಗೂ ನೀತಿ ಸಂಶೋಧನಾ ಸಂಸ್ಥೆಯ (ಎಂಪ್ರಿ) ಅಧ್ಯಯನ ವರದಿಗಳನ್ನು ಉಲ್ಲೇಖಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನ್ಯಾಯಮಂಡಳಿಗೆ ಕಿರು ವರದಿ ಸಲ್ಲಿಸಿದೆ. ತರಕಾರಿಗಳ ಮಾಲಿನ್ಯದ ಪ್ರಮಾಣವನ್ನು ಅರ್ಥ ಮಾಡಿಕೊಳ್ಳಲು ಹಾಗೂ ಅದರ ಮೂಲದ ಕುರಿತು ರಾಜ್ಯ ಮಟ್ಟದಲ್ಲಿ ಆಳ ಹಾಗೂ ಸಮಗ್ರವಾದ ತನಿಖೆ ನಡೆಸಬೇಕು ಹಾಗೂ ಇದಕ್ಕೆ ವಿವಿಧ ಇಲಾಖೆಗಳ ಸಹಯೋಗ ಪಡೆಯಬೇಕು ಎಂದು ಮಂಡಳಿಯು ವರದಿಯಲ್ಲಿ ತಿಳಿಸಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಎಂಪ್ರಿಯನ್ನು ಪ್ರತಿವಾದಿಗಳನ್ನಾಗಿ ಪೀಠ ಸೇರ್ಪಡೆ ಮಾಡಿದೆ. ಈ ವಿಷಯದ ಬಗ್ಗೆ ತಳಮಟ್ಟದ ವಾಸ್ತವ ಸ್ಥಿತಿಯ ಪರಿಶೀಲನೆ ನಡೆಸಬೇಕು ಹಾಗೂ ಎಂಪ್ರಿ ವರದಿಯನ್ನು ಸಮರ್ಪಕವಾಗಿ ಪರಿಶೀಲಿಸಿ ವರದಿ ನೀಡಬೇಕು ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸೂಚಿಸಿದೆ. ಪ್ರಕರಣವನ್ನು ದಕ್ಷಿಣ ವಲಯ ಪೀಠಕ್ಕೆ ವರ್ಗಾಯಿಸಿರುವ ಪ್ರಧಾನ ಪೀಠವು ವಿಚಾರಣೆಯನ್ನು 2024ರ ಜನವರಿ 10ಕ್ಕೆ ಮುಂದೂಡಿದೆ.

ಸರ್ಕಾರಿ ಶಾಲೆಗೆ ಗೋದಾಮಿನ ಕಲುಷಿತ ನೀರು

ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿ ಜಿಲ್ಲೆ ರಾಯಬಾಗ ತಾಲ್ಲೂಕಿನ ಹುಬ್ಬರವಾಡಿಯಲ್ಲಿರುವ, ಗಂಗಾ ಕಾವೇರಿ ಗೋದಾವರಿ ಫರ್ಟಿಲೈಸರ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಗೊಬ್ಬರದ ಗೋದಾಮಿಗೆ ಹೊಂದಿಕೊಂಡಿರುವ ಸರ್ಕಾರಿ ಪ್ರಾಥಮಿಕ ಶಾಲೆ, ಅಂಗನವಾಡಿಯ ಕೊಳವೆ ಬಾವಿ ನೀರು ಕಲುಷಿತಗೊಳ್ಳುತ್ತಿದೆ' ಎಂದು ಆಕ್ಷೇಪಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಸ್ಥಳೀಯ ನಿವಾಸಿ ಪಾಂಡುರಂಗ ಮಹದೇವ ಕಾಂಬ್ಳೆ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎನ್.ಆರ್. ಹರೀಶ್ ವಾದ ಆಲಿಸಿದ ನ್ಯಾಯಪೀಠ, 'ಇದೊಂದು ಗಂಭೀರ ವಿಚಾರ' ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆ ಕಾರ್ಯದರ್ಶಿ, ರಾಯಬಾಗ ತಹಶೀಲ್ದಾರ್ ಹಾಗೂ ಗಂಗಾ ಕಾವೇರಿ ಗೋದಾವರಿ ಫರ್ಟಿಲೈಸರ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ನಾಲ್ಕು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಲು ನಿರ್ದೇಶಿಸಿದ ನ್ಯಾಯಪೀಠ, 2024ರ ಜನವರಿ 8ಕ್ಕೆ ವಿಚಾರಣೆ ಮುಂದೂಡಿತು.

ಬರ್ಚಿ ಅರಣ್ಯ ವಲಯದಲ್ಲಿ ಹುಲಿ ಸಾವು

ರಾಜ್ಯಕ್ಕೆ ಎನ್‌ಟಿಸಿಎ ತರಾಟೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಕನ್ನಡ ಜಿಲ್ಲೆಯ ಬರ್ಚಿ ಅರಣ್ಯ ವಲಯದಲ್ಲಿ ಹುಲಿ ಮೃತಪಟ್ಟ ಪ್ರಕರಣದ ಬಗ್ಗೆ ಸಮಗ್ರ ತನಿಖೆ ನಡೆಸದ ಕರ್ನಾಟಕ ಅರಣ್ಯ ಇಲಾಖೆಯನ್ನು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ತರಾಟೆಗೆ ತೆಗೆದುಕೊಂಡಿದೆ.

ಈ ಸಂಬಂಧ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಅವರಿಗೆ ಪತ್ರ ಬರೆದಿರುವ ಪ್ರಾಧಿಕಾರದ ಉಪ ಮಹಾ ನಿರ್ದೇಶಕ ರಾಜೇಂದ್ರ ಸಿ.ಗರ್‌ವಾಡ್, 'ಹುಲಿಯ ಅನುಮಾನಾಸ್ಪದ ಸಾವಿನ ಕುರಿತು ಮರು ತನಿಖೆ ನಡೆಸಿ ಪ್ರಾಧಿಕಾರಕ್ಕೆ ಶೀಘ್ರದಲ್ಲಿ ವರದಿ ಸಲ್ಲಿಸಬೇಕು' ಎಂದು ತಾಕೀತು ಮಾಡಿದ್ದಾರೆ.

'ನಾನಾಕೇಸರೊಡ್ಡಾ ಗ್ರಾಮದ ಬಳಿ ಗಂಡು ಹುಲಿ ಕಳೇಬರವು 2022ರ ಡಿಸೆಂಬರ್ 18ರಂದು ಪತ್ತೆಯಾಗಿತ್ತು. ಅದರ ತಲೆ ಹಾಗೂ ನಾಲ್ಕು ಕಾಲುಗಳನ್ನು ಕತ್ತರಿಸಿ ಅಪರಿಚಿತರು ಕೊಂಡೊಯ್ದಿದ್ದರು. ಹುಲಿ ಸಾವಿನ ಕುರಿತು ಹಳಿಯಾಳ ಡಿಸಿಎಫ್ ಅವರು ಪ್ರಾಧಿಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಹುಲಿ ಅಥವಾ ಇತರ ಪ್ರಾಣಿಗಳ ಜತೆಗಿನ ಕಾದಾಟದಲ್ಲಿ ಮೃತಪಟ್ಟಿದೆ ಎಂದು ವರದಿಯಲ್ಲಿ ತಿಳಿಸಿದ್ದಾರೆ. ಆದರೆ, ಹುಲಿಯ ತಲೆ ಹಾಗೂ ಕಾಲುಗಳನ್ನು ಕತ್ತರಿಸಿದವರ ಬಗ್ಗೆ ಉಲ್ಲೇಖಿಸಿಲ್ಲ. ಅವರನ್ನು ಪತ್ತೆ ಹಚ್ಚಿ ಕ್ರಮ ಕೈಗೊಂಡಿರುವ ಬಗ್ಗೆಯೂ ಪ್ರಸ್ತಾಪಿಸಿಲ್ಲ. ಹಳಿಯಾಳ ವಿಭಾಗದ ಅರಣ್ಯ ಅಧಿಕಾರಿಗಳು ಅಪೂರ್ಣ ತನಿಖೆ ನಡೆಸಿ ಕೈತೊಳೆದುಕೊಂಡಿದ್ದಾರೆ. ಈ ಬಗ್ಗೆ ಮರು ತನಿಖೆ ನಡೆಸಲು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು' ಎಂದೂ ಅವರು ಸೂಚಿಸಿದ್ದಾರೆ.

'ಕೆನರಾ ವೃತ್ತದ ಅರಣ್ಯಾಧಿಕಾರಿಗ-ಳು ಸರಿಯಾಗಿ ತನಿಖೆ ನಡೆಸದೆ ಹುಲಿಯ ಸಾವನ್ನು ನೈಸರ್ಗಿಕವೆಂದು ತೀರ್ಮಾನಿಸಿ ಅಂತಿಮ ವರದಿ ಸಲ್ಲಿಸಿದ್ದಾರೆ. ಇದು ಗಂಭೀರ ಕರ್ತವ್ಯ ಲೋಪ. ಹುಲಿ ಮೃತಪಟ್ಟ ಕೆಲವೇ ದಿನಗಳ ನಂತರ ಇದೇ ವಿಭಾಗ ಹಾಗೂ ಉಪ ವಿಭಾಗ ವ್ಯಾಪ್ತಿಯ ಜಗಲಪೇಟ್ ವಲಯದಲ್ಲಿ ಚಿರತೆಯೊಂದು ಉರುಳಿಗೆ ಸಿಲುಕಿ ಸತ್ತಿತ್ತು. ಈ ವರ್ಷದ ಆರಂಭದಲ್ಲಿ ಹಳಿಯಾಳ ವಿಭಾಗದ ಮುರುಕವಾಡ ಬಳಿ ಚಿರತೆಯೊಂದನ್ನು ಗುಂಡಿಟ್ಟು ಕೊಲ್ಲಲಾಗಿತ್ತು. ಕೆಲವು ತಿಂಗಳುಗಳ ಹಿಂದೆ ಕಾಳಿ ಹುಲಿ ಯೋಜನೆ ವ್ಯಾಪ್ತಿಯಲ್ಲಿ ಕಾಡುಕೋಣವೊಂದ-ನ್ನು ಹತ್ಯೆ ಮಾಡಲಾಗಿತ್ತು. ಈ ಎಲ್ಲ ಪ್ರಕರಣಗಳ ತನಿಖೆ ನಡೆಸಿಲ್ಲ' ಎಂದು ಪಶ್ಚಿಮ ಘಟ್ಟ ಹೋರಾಟಗಾರ ರಾಮ್ ದೂರಿದ್ದಾರೆ.

'ಕಳೆದ ಎರಡು ವರ್ಷಗಳಲ್ಲಿ ಕೆನರಾ ವೃತ್ತದಲ್ಲಿ ಹಲವು ಅಕ್ರಮಗಳು ನಡೆದಿವೆ. ಈ ಬಗ್ಗೆಯೂ ತನಿಖೆ ನಡೆಸಬೇಕು. ಇದಕ್ಕಾಗಿ ಉನ್ನತ ಮಟ್ಟದ ತನಿಖಾ ಸಮಿತಿ ರಚಿಸಿ ವರದಿ ಪಡೆದು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಸಂಪ್ ಸ್ವಚ್ಛತೆಗೆ ಇಳಿದ ಇಬ್ಬರು ಕಾರ್ಮಿಕರ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಹೆಬ್ಬಗೋಡಿ ಪೊಲೀಸ್ ಠಾಣೆ ವ್ಯಾಪ್ತಿಯ ತಿರುಪಾಳ್ಯದಲ್ಲಿ ಬುಧವಾರ ಸಂಜೆ ನೀರಿನ ಸಂಪ್ ಸ್ವಚ್ಛಗೊಳಿಸುವ ಸಂದರ್ಭದಲ್ಲಿ ಉಸಿರುಗಟ್ಟಿ ಇಬ್ಬರು ಕಾರ್ಮಿಕರು ಮೃತಪಟ್ಟಿದ್ದು, ಅಸ್ವಸ್ಥಗೊಂಡಿರುವ ಮತ್ತಿಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಿಹಾರ ಮೂಲದ ಚಂದನ್ ರಾಜವಂಶಿ (29) ಮತ್ತು ಪಿಂಟು ರಾಜವಂಶಿ (21) ಮೃತರು.

ತಿರುಪಾಳ್ಯದ ಶ್ರೀನಿವಾಸರೆಡ್ಡಿ ಎಂಬುವರಿಗೆ ಸೇರಿದ ಸನ್‌ಶೈನ್ ಹೋಲ್ಡಿಂಗ್ ಕಂಪನಿಯ ನೀರಿನ ಸಂಪ್ ಸ್ವಚ್ಛಗೊಳಿಸಲು ಇಬ್ಬರು ಕಾರ್ಮಿಕರನ್ನು ಸಂಪ್‌ಗೆ ಇಳಿಸಲಾಗಿತ್ತು. ಅವರನ್ನು ರಕ್ಷಿಸಲು ಹೋದ ಕಂಪನಿ ಮಾಲೀಕ ಶ್ರೀನಿವಾಸರೆಡ್ಡಿ ಮತ್ತು ಕಾರ್ಮಿಕ ಜಗದೀಶ್ ಕೂಡ ಅಸ್ವಸ್ಥಗೊಂಡಿದ್ದಾರೆ. ತಕ್ಷಣ ಸ್ಥಳದಲ್ಲಿದ್ದ ಉಳಿದ ಕಾರ್ಮಿಕರು ಈ ಇಬ್ಬರನ್ನು ಆಸ್ಪತ್ರೆಗೆ ದಾಖಲು ಮಾಡಿದ್ದಾರೆ.

ಹೆಬ್ಬಗೋಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸ್ಥಳಕ್ಕೆ ಬೆಂಗಳೂರು ಗ್ರಾಮಾಂತರ ಪೊಲೀಸ್ ವರಿಷ್ಠಾಧಿಕಾರಿ ಎಸ್‌.ಪಿ. ಮಲ್ಲಿಕಾರ್ಜುನ ಬಾಲದಂಡಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.



ಹೆಬ್ಬಗೋಡಿಯಲ್ಲಿ ಇಬ್ಬರು ಕಾರ್ಮಿಕರು ಮೃತಪಟ್ಟ ಸಂಪ್

ಭಾರತಕ್ಕೆ ಎಚ್ಚರಿಕೆ ನೀಡಿದ್ದ ಅಮೆರಿಕ: ಶಂಕಿತನ ವಿರುದ್ಧ ಆರೋಪ ಪಟ್ಟಿ

‘ಪನ್ನೂ ಹತ್ಯೆ ಯತ್ನ ವಿಫಲ’

ನವದೆಹಲಿ (ರಾಯಿಟರ್ಸ್): ಅಮೆರಿಕದಲ್ಲಿ ನಡೆದಿದ್ದ ಸಿಖ್ ಪ್ರತ್ಯೇಕತಾವಾದಿ ನಾಯಕನೊಬ್ಬನ ಹತ್ಯೆ ಯತ್ನವನ್ನು ಅಮೆರಿಕದ ಅಧಿಕಾರಿಗಳು ವಿಫಲಗೊಳಿಸಿದ್ದರು. ಇದರಲ್ಲಿ ಭಾರತದ ಕೈವಾಡವಿತ್ತು ಎಂಬ ಕಳವಳ ವ್ಯಕ್ತಪಡಿಸಿದ್ದ ಅಮೆರಿಕ, ಈ ವಿಚಾರವಾಗಿ ಭಾರತಕ್ಕೆ ಎಚ್ಚರಿಕೆಯನ್ನೂ ನೀಡಿತ್ತು ಎಂದು ಮೂಲಗಳನ್ನು ಉಲ್ಲೇಖಿಸಿ ಬ್ರಿಟನ್‌ನ ಫೈನಾನ್ಶಿಯಲ್ ಟೈಮ್ಸ್ ವರದಿ ಮಾಡಿದೆ.

ಘೋಷಿತ ಖಾಲಿಸ್ತಾನಿ ಉಗ್ರ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಕೋರರ ಗುರಿಯಾಗಿದ್ದ ಎಂದೂ ಫೈನಾನ್ಶಿಯಲ್ ಟೈಮ್ಸ್ ತನ್ನ ವರದಿಯಲ್ಲಿ ಹೇಳಿದೆ.

ಇನ್ನೊಂದೆಡೆ, ‘ರಾಜತಾಂತ್ರಿಕ ವಿಷಯಗಳು, ಗುಪ್ತಚರ ಸೇರಿದಂತೆ ವಿವಿಧ ಸಂಸ್ಥೆಗಳ ವಿಚಾರವಾಗಿ ತನ್ನ ಪಾಲುದಾರ ರಾಷ್ಟ್ರಗಳೊಂದಿಗೆ ನಡೆಸಿರುವ ಮಾತುಕತೆ ಕುರಿತು ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂಬುದಾಗಿ ಭಾರತದಲ್ಲಿನ ಅಮೆರಿಕ ರಾಯಭಾರ ಕಚೇರಿ ತಿಳಿಸಿದೆ’ ಎಂದಿದೆ.

ರಾಜತಾಂತ್ರಿಕ ಮಟ್ಟದಲ್ಲಿ ಪ್ರತಿಭಟನೆ ದಾಖಲಿಸುವ ಜೊತೆಗೆ, ಕನಿಷ್ಠ ಒಬ್ಬ ಶಂಕಿತನ ವಿರುದ್ಧ ನ್ಯೂಯಾರ್ಕ್ ಜಿಲ್ಲಾ ನ್ಯಾಯಾಲಯದಲ್ಲಿ ಸರ್ಕಾರಿ ವಕೀಲರು ಆರೋಪ ಪಟ್ಟಿ ಸಲ್ಲಿಸಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ಜೂನ್‌ನಲ್ಲಿ ಅಮೆರಿಕಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಈ ವಿಚಾರವಾಗಿ ಅಧ್ಯಕ್ಷ ಜೋ ಬೈಡನ್ ಪ್ರತಿಭಟನೆ ದಾಖಲಿಸಿದ್ದರು.

ನಿಜ್ಜರ್ ಹತ್ಯೆ ವಿಚಾರವಾಗಿ ಭಾರತದ ವಿರುದ್ಧ ಕೆನಡಾ ಆರೋಪಗಳನ್ನು ಮಾಡಿದ ನಂತರ, ತನ್ನ ನೆಲದಲ್ಲಿ ಸಿಖ್ ಪ್ರತ್ಯೇಕತಾವಾದಿ ನಾಯಕನ ಹತ್ಯೆ ಯತ್ನವನ್ನು ವಿಫಲಗೊಳಿಸಿದ್ದರ ಕುರಿತ ವಿವರಗಳನ್ನು ಮಿತ್ರರಾಷ್ಟ್ರಗಳೊಂದಿಗೆ ಅಮೆರಿಕ ಹಂಚಿಕೊಂಡಿದೆ ಎಂದೂ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಗಂಭೀರವಾಗಿ ಪರಿಗಣನೆ: ಭಾರತ

ನವದೆಹಲಿ(ಪಿಟಿಐ): ‘ಭದ್ರತೆ ವಿಚಾರವಾಗಿ ಅಮೆರಿಕ ನೀಡಿರುವ ಮಾಹಿತಿಯು ದೇಶದ ಭದ್ರತೆಯ ಮೇಲೂ ಪರಿಣಾಮ ಬೀರುವ ಕಾರಣ ಈ ಮಾಹಿತಿಯನ್ನು ಭಾರತ ಗಂಭೀರವಾಗಿ ಪರಿಗಣಿಸುತ್ತದೆ’ ಎಂದು ವಿದೇಶಾಂಗ ಸಚಿವಾಲಯ ಬುಧವಾರ ಪ್ರತಿಕ್ರಿಯಿಸಿದೆ.

ತನ್ನ ನೆಲದಲ್ಲಿ ಖಾಲಿಸ್ತಾನಿ ಉಗ್ರ ಗುರುಪತ್ವಂತ್ ಸಿಂಗ್ ಪನ್ನೂ ಹತ್ಯೆಗೆ ನಡೆಸಿದ್ದ ಯತ್ನವನ್ನು ಅಮೆರಿಕ ವಿಫಲಗೊಳಿಸಿತ್ತು ಎಂಬುದಾಗಿ ಬ್ರಿಟನ್‌ನ ಫೈನಾನ್ಶಿಯಲ್ ಟೈಮ್ಸ್ ಪತ್ರಿಕೆ ಪ್ರಕಟಿಸಿದ್ದ ವರದಿಗೆ ಸಂಬಂಧಿಸಿ, ಸಚಿವಾಲಯ ಈ ಪ್ರತಿಕ್ರಿಯೆ ನೀಡಿದೆ. ‘ಭದ್ರತೆ ವಿಚಾರವಾಗಿ ಸಹಕಾರ ಕುರಿತು ಭಾರತ ಮತ್ತು ಅಮೆರಿಕ ನಡುವೆ ಇತ್ತೀಚೆಗೆ ಮಾತುಕತೆ ನಡೆದಿತ್ತು. ಸಂಘಟಿತ ಅಪರಾಧಿಗಳು, ಶಸ್ತ್ರಾಸ್ತ್ರಗಳ ಮಾರಾಟಗಾರರು ಹಾಗೂ ಉಗ್ರರ ನಡುವಿನ ನಂಟಿನ ಕುರಿತು ಈ ಮಾತುಕತೆ ವೇಳೆ ಉಭಯ ದೇಶಗಳ ನಡುವೆ ಮಾಹಿತಿ ವಿನಿಮಯ ನಡೆದಿತ್ತು’ ಎಂದು ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

‘ಮಾತುಕತೆ ವೇಳೆ ಹಂಚಿಕೆಯಾದ ಮಾಹಿತಿ ಕುರಿತು ಕಳವಳ ವ್ಯಕ್ತಪಡಿಸಿದ್ದ ಉಭಯ ದೇಶಗಳ ನಾಯಕರು, ಈ ವಿಚಾರವಾಗಿ ಕಠಿಣ ಕ್ರಮ ಕೈಗೊಳ್ಳಲು ನಿರ್ಧರಿಸಿದ್ದರು’ ಎಂದೂ ಹೇಳಿದ್ದಾರೆ. ಅಮೆರಿಕ ನೀಡಿರುವ ಮಾಹಿತಿ ಕುರಿತಾಗಿ ಸಂಬಂಧಪಟ್ಟ ಇಲಾಖೆಗಳು ಈಗಾಗಲೇ ಪರಾಮರ್ಶೆ ನಡೆಸುತ್ತಿವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸುದ್ದಿ 2 ನಿಮಿಷ

ನಿಶ್ಚಿತಾರ್ಥ ಉಂಗುರ ಕಳೆದಿದ್ದಕ್ಕೆ ಯುವಕ ಆತ್ಮಹತ್ಯೆ: ದೂರು ದಾಖಲು

ತುಮಕೂರು: ನಿಶ್ಚಿತಾರ್ಥದ ಉಂಗುರ ಕಳೆದು ಹೋಗಿದ್ದಕ್ಕೆ ಮನನೊಂದು ನಗರದ ದೇವರಾಯಪಟ್ಟಣದಲ್ಲಿ ಯುವಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಮಲೇಶ್ (36) ಆತ್ಮಹತ್ಯೆ ಮಾಡಿಕೊಂಡ ಯುವಕ. ನ.17ರಂದು ವಿಷ ಸೇವಿಸಿದ್ದರು. ಮಂಗಳವಾರ ರಾತ್ರಿ ಚಿಕಿತ್ಸೆಗೆ ಸ್ಪಂದಿಸದೆ ಜಿಲ್ಲಾ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ. ನ.21 ಮತ್ತು 22ರಂದು ವಿವಾಹ ನಡೆಯಬೇಕಿತ್ತು. ಮದುವೆಗೆ ಒಂದು ದಿನ ಬಾಕಿ ಇರುವಾಗಲೇ ಮೃತಪಟ್ಟಿದ್ದಾರೆ. ಮೂರು ತಿಂಗಳ ಹಿಂದೆ ವಿವಾಹ ನಿಶ್ಚಯವಾಗಿತ್ತು. ನಿಶ್ಚಿತಾರ್ಥದ ಸಮಯದಲ್ಲಿ ನೀಡಿದ್ದ ಉಂಗುರ ಕಳೆದುಕೊಂಡಿದ್ದರು. ಇದನ್ನು ಮನೆಯವರಿಗೆ ತಿಳಿಸಲು ಹೆದರಿ ವಿಷ ಸೇವಿಸಿದ್ದರು. ಕ್ಯಾತ್ಸಂದ್ರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಲಕರ ಪಿ.ಯು ಕಾಲೇಜುಗಳ ಅಥ್ಲೆಟಿಕ್ ಕೂಟಕ್ಕೆ ಚಾಲನೆ



ಬೆಂಗಳೂರು: ನಗರದ ಕಂಠೀರವ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ ಬಾಲಕರ ರಾಜ್ಯಮಟ್ಟದ ಪದವಿಪೂರ್ವ ಕಾಲೇಜುಗಳ ಅಥ್ಲೆಟಿಕ್ ಕೂಟವನ್ನು ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕಿ ಬಿ. ಸಿಂಧು ರೂಪೇಶ್ ಉದ್ಘಾಟಿಸಿದರು.

ಬೆಂಗಳೂರು ಉತ್ತರ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ ಶಿಕ್ಷಣ) ಆಯೋಜಿಸಿರುವ ಅಥ್ಲೆಟಿಕ್ ಕೂಟದಲ್ಲಿ ಮಾತನಾಡಿದ ಅವರು, ‘ಈ ವರ್ಷದ ಏಷ್ಯನ್ ಕ್ರೀಡಾಕೂಟದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ನಮ್ಮ ದೇಶದ ಅಥ್ಲೀಟ್‌ಗಳು ಇಂಥ ಶಾಲಾ–ಕಾಲೇಜುಗಳ ಕ್ರೀಡಾಂಗಣದಲ್ಲೇ ತರಬೇತಿ ಪಡೆದವರು. ಮುಂದಿನ ಎರಡು ದಿನಗಳಲ್ಲಿ ಇಲ್ಲಿ ನೀವು ಮಾಡುವ ಸಾಧನೆ ನಿಮ್ಮನ್ನು ರಾಷ್ಟ್ರೀಯ, ಅಂತರರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳಿಗೆ ತಯಾರು ಮಾಡುತ್ತದೆ’ ಎಂದು ಹೇಳಿದರು.

2023ರ ಏಷ್ಯನ್ ಗೇಮ್ಸ್‌ನ ಬೆಳ್ಳಿ ಪದಕ ವಿಜೇತ ಅಥ್ಲೀಟ್ ಶಿವಾಜಿ ಪಿ.ಎಂ ಮಾತನಾಡಿ, ‘ಸಾವಿರಕ್ಕೂ ಹೆಚ್ಚು ಅಥ್ಲೀಟ್‌ಗಳು ಇಲ್ಲಿಗೆ ಬಂದಿದ್ದೀರಿ. ನಿಮ್ಮಲ್ಲಿ ಕೆಲವರಿಗೆ ಮಾತ್ರ ಗೆಲುವು ಸಿಗುತ್ತದೆ. ಆದರೆ, ಸೋತವರಿಗೆ ಗೆಲ್ಲಲು ಸಾಕಷ್ಟು ಅವಕಾಶಗಳಿರುತ್ತವೆ ಎಂಬುದನ್ನು ಮರೆಯಬಾರದು’ ಎಂದು ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಉತ್ತರ ಜಿಲ್ಲೆ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಎನ್. ರಾಜು ಮತ್ತಿತರರು ಉಪಸ್ಥಿತರಿದ್ದರು.

ಎರಡು ದಿನಗಳು ಅಥ್ಲೆಟಿಕ್ ಕೂಟ ನಡೆಯಲಿದೆ. ರಾಜ್ಯದ 35 ಶೈಕ್ಷಣಿಕ ಜಿಲ್ಲೆಗಳ 1,350 ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದಾರೆ.

ಎಳನೀರು ಕದ್ದು ಸಿಕ್ಕಿಬಿದ್ದ ಉಬರ್ ಚಾಲಕ!

ಆನ್‌ಲೈನ್ ಗೇಮ್‌ನಲ್ಲಿ ಹಣ ಕಳೆದುಕೊಂಡಿದ್ದ ತಮಿಳುನಾಡು ಮೂಲದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ನಗರದ ವಿವಿಧೆಡೆ ರಸ್ತೆಬದಿಯಲ್ಲಿ ಮಾರಾಟಕ್ಕೆ ಇಟ್ಟಿದ್ದ ಎಳನೀರಿಗೆ ಕನ್ನ ಹಾಕುತ್ತಿದ್ದ ಉಬರ್ ಚಾಲಕ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ. ತಮಿಳುನಾಡಿನ ಮೋಹನ್ ಕುಮಾರ್(35) ಎಂಬಾತನನ್ನು ಗಿರಿನಗರ ಪೊಲೀಸರು ಬಂಧಿಸಿದ್ದಾರೆ.

‘ಈತ ಮೂರು ತಿಂಗಳಿಂದ ಎಳನೀರು ಕಳ್ಳತನ ಮಾಡುತ್ತಿದ್ದ. ಮಡಿವಾಳದಲ್ಲಿ ಆರೋಪಿಯನ್ನು ಬಂಧಿಸಲಾಯಿತು’ ಎಂದು ಪೊಲೀಸರು ಹೇಳಿದರು.

‘ಆರೋಪಿಯಿಂದ ನೂರಾರು ಎಳನೀರು, ಕಾರು, ಬುಲೆಟ್ ಸೇರಿದಂತೆ ₹8 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಹೇಳಿದರು.

ರಾಜಣ್ಣ ಎಂಬುವರು ಗಿರಿನಗರದ ಉದ್ಯಾನದ ಬಳಿಯ ಪಾದಚಾರಿ ಮಾರ್ಗದಲ್ಲಿ ಎಳನೀರು ಮಾರಾಟ ನಡೆಸುತ್ತಿದ್ದರು. ನ.6ರಂದು ಸಂಜೆ 1,150 ಎಳನೀರನ್ನು ಮಂಡ್ಯದಿಂದ ತರಿಸಿಕೊಂಡು ದಾಸ್ತಾನು ಮಾಡಿಕೊಂಡಿದ್ದರು. ರಾತ್ರಿ ಎಳನೀರಿಗೆ ಟಾರ್ಪಲ್ ಮುಚ್ಚಿ ಮನೆಗೆ ತೆರಳಿದ್ದರು. ಅದೇ ದಿನ ರಾತ್ರಿ ಸ್ಥಳಕ್ಕೆ ಕಾರಿನಲ್ಲಿ ಬಂದ ಆರೋಪಿ, ಎಳನೀರು ಕಳವು ಮಾಡಿಕೊಂಡು ಕೊಂಡೊಯ್ದಿದ್ದ. ಮರುದಿನ ಬೆಳಿಗ್ಗೆ ಸ್ಥಳಕ್ಕೆ ಬಂದ ರಾಜಣ್ಣ ಅವರು ಪರಿಶೀಲಿಸಿದಾಗ ಎಳನೀರು ನಾಪತ್ತೆಯಾಗಿದ್ದವು. ತಕ್ಷಣವೇ ಗಿರಿನಗರ ಠಾಣೆಗೆ ದೂರು ನೀಡಿದ್ದರು.

ಸ್ಥಳಕ್ಕೆ ಬಂದ ಪೊಲೀಸರು ವಿವಿಧ ಮಳಿಗೆಗಳಲ್ಲಿ ಅಳವಡಿಸಿದ್ದ ಸಿಸಿ ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ ವ್ಯಕ್ತಿಯೊಬ್ಬ ಎಳನೀರು ಕೊಂಡೊಯ್ಯುತ್ತಿರುವುದು ಪತ್ತೆಯಾಗಿತ್ತು.

‘ಆರೋಪಿ ಮೋಹನ್ ನಗರದ ಮಡಿವಾಳದಲ್ಲಿ ನೆಲೆಸಿದ್ದ. ಆನ್‌ಲೈನ್ ಗೇಮ್‌ನಲ್ಲಿ ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದ. ಇದರಿಂದ ಸಾಲ ಮಾಡಿಕೊಂಡಿದ್ದ. ಸಾಲ ತೀರಿಸಲು ಎಳನೀರು ಕಳ್ಳತನ ಮಾಡುತ್ತಿದ್ದ. ರಾತ್ರಿ ವೇಳೆ ಟ್ಯಾಕ್ಸಿ ಚಾಲನೆ ವೇಳೆ ಎಳನೀರು ಇಟ್ಟಿರುವುದನ್ನು ಗಮನಿಸುತ್ತಿದ್ದ. ರಾತ್ರಿ 11 ಗಂಟೆ ನಂತರ ಆರೋಪಿ ಟಾರ್ಪಲ್‌ನಿಂದ ಮುಚ್ಚಿಟ್ಟಿದ್ದ ಎಳನೀರು ಕದ್ದು ಕಾರಿನಲ್ಲಿ ತುಂಬಿಕೊಂಡು ತನ್ನ ಬಾಡಿಗೆ ಮನೆಗೆ ಕೊಂಡೊಯ್ಯುತ್ತಿದ್ದ. ಮರುದಿನ ಮಡಿವಾಳ, ಎಲೆಕ್ಟ್ರಾನಿಕ್ ಸಿಟಿಯಲ್ಲಿ ಎಳನೀರು ಮಾರಾಟಗಾರರಿಗೆ ಮಾರಾಟ ಮಾಡುತ್ತಿದ್ದ’ ಎಂದು ಹೇಳಿದರು.



ಮೋಹನ್

‘ಕೆಲವು ಭಾಗದಲ್ಲಿ 50ರಿಂದ 100 ಎಳನೀರು ಕಳವು ಮಾಡುತ್ತಿದ್ದ. ಆ ವ್ಯಾಪಾರಸ್ಥರಿಗೆ ಅನುಮಾನ ಬಂದಿರಲಿಲ್ಲ. ದೂರು ಸಹ ನೀಡಿರಲಿಲ್ಲ. ಆದರೆ, ನ.6ರಂದು ಸಾವಿರಕ್ಕೂ ಅಧಿಕ ಎಳನೀರು ಕಳವು ಮಾಡಿದ್ದ’

‘ಆರೋಪಿ ಈ ಹಿಂದೆ ಎಳನೀರು ವ್ಯಾಪಾರ ಮಾಡುತ್ತಿದ್ದ’ ಎಂದು ಹೇಳಿದರು.

ಶಾಲಾ ವಾಹನ: 994 ಪ್ರಕರಣ ದಾಖಲು

ಬೆಂಗಳೂರು: ನಿಗದಿಗಿಂತ ಹೆಚ್ಚು ಶಾಲಾ ಮಕ್ಕಳನ್ನು ಕರೆದೊಯ್ಯುತ್ತಿದ್ದ ಶಾಲಾ ಹಾಗೂ ಖಾಸಗಿ ವಾಹನಗಳ ವಿರುದ್ಧ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ಸಂಚಾರ ಪೊಲೀಸರು ಒಟ್ಟು 994 ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮಂಗಳವಾರ ಮಧ್ಯಾಹ್ನ ಈ ವಿಶೇಷ ಕಾರ್ಯಾಚರಣೆ ನಡೆಸಲಾಯಿತು.

ವಾಹನಗಳಲ್ಲಿ ನಿಗದಿ ಪಡಿಸಿದ ಸಂಖ್ಯೆಗಿಂತ ಹೆಚ್ಚಿನ ಶಾಲಾ ಮಕ್ಕಳನ್ನು ಚಾಲಕರು ಕರೆದೊಯ್ಯುತ್ತಿದ್ದಾರೆ ಎಂಬ ದೂರು ಬಂದಿತ್ತು. ದೂರು ಆಧರಿಸಿ ಈ ಕಾರ್ಯಾಚರಣೆ ನಡೆಸಲಾಗಿದೆ.

ಒಟ್ಟು 2,050 ವಾಹನಗಳ ಪರಿಶೀಲನೆ ನಡೆಸಲಾಯಿತು. ನಿಯಮ ಉಲ್ಲಂಘಿಸಿದ 319 ಬಸ್‌, 122 ಆಟೊ, 133 ಓಮ್ನಿ, 332 ವ್ಯಾನ್‌, 88 ಇತರೆ ವಾಹನಗಳ ಚಾಲಕರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ.

ಶಾಲಾ ಮಕ್ಕಳ ಜೀವಕ್ಕೆ ಆಪತ್ತು ತರುವ ರೀತಿಯಲ್ಲಿ ಶಾಲಾ ಮಕ್ಕಳನ್ನು ಕರೆದೊಯ್ಯಲಾಗುತ್ತಿತ್ತು. ಚಾಲಕರಿಗೆ ಎಚ್ಚರಿಕೆ ನೀಡಿದರೂ ಸುಧಾರಣೆ ಆಗಿರಲಿಲ್ಲ. ಹೀಗಾಗಿ ವಿಶೇಷ ಕಾರ್ಯಾಚರಣೆ ನಡೆಸಲಾಯಿತು ಎಂದು ಸಂಚಾರ ಪೊಲೀಸರು ಹೇಳಿದರು.

‘ಹಲವು ಚಾಲಕರು ಹಣದ ಆಸೆಗೆ ನಿಗದಿಗಿಂತ ಹೆಚ್ಚು ಮಕ್ಕಳನ್ನು ವಾಹನದಲ್ಲಿ ಹತ್ತಿಸಿಕೊಳ್ಳುತ್ತಿದ್ದಾರೆ. ಕೆಲವರಂತೂ ಉಸಿರಾಡಲು ಸಾಧ್ಯವಾಗದ ರೀತಿಯಲ್ಲಿ ಮಕ್ಕಳನ್ನು ವಾಹನದಲ್ಲಿ ಕೂರಿಸಿರುತ್ತಾರೆ. ಅಂತಹ ವಾಹನಗಳನ್ನು ಪತ್ತೆಹಚ್ಚಲಾಗಿದೆ. ಉಪ್ಪಾರಪೇಟೆ, ಹೈಗ್ರೌಂಡ್ಸ್, ಮಲ್ಲೇಶ್ವರ, ಶೇಷಾದ್ರಿಪುರ, ರಿಚ್ಮಂಡ್ ವೃತ್ತ, ಅಶೋಕ ನಗರ, ಹಲಸೂರು, ಯಶವಂತಪುರ ಸೇರಿದಂತೆ ಹಲವು ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಲಾಯಿತು’ ಎಂದು ಪೊಲೀಸರು ಹೇಳಿದರು.

ಪತ್ನಿಗೆ ಪೆಟ್ರೋಲ್ ಸುರಿದು ಕೊಲೆಗೆ ಯತ್ನಿಸಿದ್ದ ಪತಿ ಸೆರೆ

ಬೆಂಗಳೂರು: ಪತ್ನಿಗೆ ಪೆಟ್ರೋಲ್ ಸುರಿದು ಬೆಂಕಿಹಚ್ಚಿ ಕೊಲೆಗೆ ಯತ್ನಿಸಿದ್ದ ಪತಿಯನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕದಿರೇನಹಳ್ಳಿ ನಿವಾಸಿ ಶ್ರೀನಿವಾಸ್ ಬಂಧಿತ. ಗಾಯಗೊಂಡಿರುವ ಪುಷ್ಪ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶ್ರೀನಿವಾಸ್ 18 ವರ್ಷಗಳ ಹಿಂದೆ ಪುಷ್ಪ ಅವರನ್ನು ಮದುವೆಯಾಗಿದ್ದ. ದಂಪತಿಗೆ ಇಬ್ಬರು ಮಕ್ಕಳು ಇದ್ದಾರೆ. ಶ್ರೀನಿವಾಸ್ ಪ್ಲಂಬರ್ ಕೆಲಸ ಮಾಡುತ್ತಿದ್ದು, ಪುಷ್ಪ ಆಸ್ಪತ್ರೆಯಲ್ಲಿ ಹೌಸ್‌ಕೀಪಿಂಗ್ ಕೆಲಸ ಮಾಡಿಕೊಂಡಿದ್ದಾರೆ. ದಂಪತಿ ನಡುವೆ ಗಲಾಟೆ ನಡೆಯುತ್ತಿತ್ತು. ನವೆಂಬರ್ 16ರಂದು ಮದ್ಯದ ಅಮಲಿನಲ್ಲಿ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದ. ಬಳಿಕ ಆತನೇ ಬೆಂಕಿ ನಂದಿಸಲು ಪಯತ್ನಿಸಿದ್ದ. ಸ್ಥಳೀಯರ ನೆರವಿನಿಂದ ಪತ್ನಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದ. ಪುಷ್ಪ ಅವರು ಚೇತರಿಸಿಕೊಳ್ಳುತ್ತಿದ್ದಾರೆ.

ಮೊಬೈಲ್, ಬೈಕ್ ಕಳವು: ಐವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ್ಪಾರಪೇಟೆ ಹಾಗೂ ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿರುವ ಪ್ರತ್ಯೇಕ ಮೊಬೈಲ್ ಹಾಗೂ ಬೈಕ್ ಕಳವು ಪ್ರಕರಣಗಳಲ್ಲಿ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಮೆಜೆಸ್ಟಿಕ್ ಸುತ್ತಮುತ್ತಲಿನ ಪ್ರದೇಶದಲ್ಲಿ ಸಂಚರಿಸುವ ಪಾದಚಾರಿಗಳ ಮೊಬೈಲ್ ಕಸಿದು ಪರಾರಿಯಾಗುತ್ತಿದ್ದ ಮೂವರನ್ನು ಉಪ್ಪಾರಪೇಟೆ ಪೊಲೀಸರು ಬಂಧಿಸಿದ್ದಾರೆ. ಟಿಪ್ಪುನಗರದ 1ನೇ ಕ್ರಾಸ್ (ವಿನಾಯಕ ಚಿತ್ರಮಂದಿರದ ಬಳಿ) ನಿವಾಸಿ ಅಫ್ರೋಜ್ ಖಾನ್, ಭದ್ರಾವತಿ ತಾಲ್ಲೂಕು ಹೊಸಹಳ್ಳಿ ಗ್ರಾಮದ ಸೋಮನಾಯಕ, ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆ ಸೈದಾಪುರದ ಪ್ರೇಮ್‌ಕುಮಾರ್ ಬಂಧಿತರು.

‘ಮೂವರು ಆರೋಪಿಗಳು ಪರಿಚಯಸ್ಥರಾಗಿದ್ದರು. ಮೆಜೆಸ್ಟಿಕ್ ಸುತ್ತಮುತ್ತ ಸಂಜೆ ಹಾಗೂ ರಾತ್ರಿವೇಳೆ ಓಡಾಟ ನಡೆಸಿ ಪಾದಚಾರಿಗಳ ಮೊಬೈಲ್ ಕಸಿದು ಪರಾರಿಯಾಗುತ್ತಿದ್ದರು. ವೃದ್ಧರನ್ನೇ ಹೆಚ್ಚು ಗುರಿಯಾಗಿಸಿ ಕಳ್ಳತನ ನಡೆಸುತ್ತಿದ್ದರು. ಮೆಜೆಸ್ಟಿಕ್‌ನಲ್ಲಿ ಪೊಲೀಸರು ಗಸ್ತು ತಿರುಗುತ್ತಿದ್ದಾಗ ಪರಾರಿಯಾಗಲು ಪ್ರಯತ್ನಿಸಿದ್ದರು. ಅವರನ್ನು ಹಿಂಬಾಲಿಸಿ ಹಿಡಿದು ವಿಚಾರಣೆ ನಡೆಸಿದಾಗ ಮೊಬೈಲ್ ಕಳ್ಳತನ ನಡೆಸುತ್ತಿರುವುದು ಗೊತ್ತಾಯಿತು’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳಿಂದ ₹2.40 ಲಕ್ಷ ಮೌಲ್ಯದ ವಿವಿಧ ಕಂಪನಿ ಮೊಬೈಲ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದರು.



ಅಫ್ರೋಜ್ ಖಾನ್



ಸೋಮ ನಾಯಕ



ಪ್ರೇಮ್ ಕುಮಾರ್



ವಿನೋದ್ ರಾಜ್



ನಂಜುಂಡ

ಹ್ಯಾಂಡಲ್ ಲಾಕ್ ತೆಗೆದು ಕಳ್ಳತನ: ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ಬೈಕ್‌ಗಳ ಹ್ಯಾಂಡಲ್‌ನ ಲಾಕ್ ಅನ್ನು ನಕಲಿ ಕೀ ಬಳಸಿ ತೆಗೆದು ಬೈಕ್ ಕಳವು ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಜ್ಞಾನಭಾರತಿ ಪೊಲೀಸರು ಬಂಧಿಸಿದ್ದಾರೆ.

ಮಂಡ್ಯ ಜಿಲ್ಲೆ ಮದ್ದೂರು ಪಟ್ಟಣದ ವಿನೋದ್‌ರಾಜ್ ಹಾಗೂ ನಂಜುಂಡ ಬಂಧಿತ ಆರೋಪಿಗಳು. ಬಂಧಿತರಿಂದ ₹3 ಲಕ್ಷ ಮೌಲ್ಯದ 8 ಬೈಕ್ ಜಪ್ತಿ ಮಾಡಿಕೊಳ್ಳಲಾಗಿದೆ. ‘ವಿನೋದ್ ಎಂಬಾತ ನಗರದ ಹಳೆಗುಡ್ಡದಹಳ್ಳಿ ಜನತಾ ಕಾಲೊನಿಯಲ್ಲಿ ನೆಲೆಸಿದ್ದ. ಇಬ್ಬರೂ ವಿವಿಧೆಡೆ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ಬೈಕ್‌ಗಳನ್ನು ಕಳವು ಮಾಡಿ ಪರಾರಿಯಾಗುತ್ತಿದ್ದರು. ಇವರು ಪರಿಚಯಸ್ಥರಾಗಿದ್ದರು. ಆಗಾಗ್ಗೆ ಒಂದೆಡೆ ಸೇರಿಕೊಂಡು ಬೈಕ್ ಕಳವು ನಡೆಸುತ್ತಿದ್ದರು.

ಇಬ್ಬರ ಬಂಧನದಿಂದ ಜ್ಞಾನಭಾರತಿ, ಚಂದ್ರಾ ಲೇಔಟ್, ಅನ್ನಪೂರ್ಣೇಶ್ವರಿ, ಬ್ಯಾಟರಾಯನಪುರ, ಸುಬ್ರಹ್ಮಣ್ಯನಗರ, ಮೈಸೂರು ನಗರದ ಲಷ್ಕರ್ ಪೊಲೀಸ್ ಠಾಣೆಗಳಲ್ಲಿ ತಲಾ ಒಂದೊಂದು ಕಳವು ಪ್ರಕರಣ ಪತ್ತೆಯಾಗಿವೆ’ ಎಂದು ಹೇಳಿದರು.

ಮುಖ್ಯಮಂತ್ರಿ ವಿರುದ್ಧ ಆಡಿಯೊ; ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಉಜಿರೆ: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಆಡಿಯೊ ಹರಿಬಿಟ್ಟ ಆರೋಪದ ಮೇರೆಗೆ ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡ ಗ್ರಾಮದ ಕೋರಿಗದ್ದೆ ನಿವಾಸಿ ರಂಜಿತ್ ಕೊಕ್ಕಡ ವಿರುದ್ಧ ಧರ್ಮಸ್ಥಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಗ್ರೆಸ್ ಕಾರ್ಯಕರ್ತ ಹಕಿಮ್ ಕೊಕ್ಕಡ ಅವರು, ಸೆಲೂನ್‌ನಲ್ಲಿ ಕೆಲಸ ಮಾಡುತ್ತಿರುವ ರಂಜಿತ್ ವಿರುದ್ಧ ದೂರು ನೀಡಿದ್ದರು.



ಕೋಣಗಳಿಗೆ ಪೂಜೆ

‘ಬೆಂಗಳೂರು ಕಂಬಳ ನಮ್ಮ ಕಂಬಳ’ ಹೆಸರಿನಡಿ ನ.25ರಿಂದ ಎರಡು ದಿನ ನಡೆಯಲಿರುವ ಕಂಬಳದಲ್ಲಿ ಭಾಗವಹಿಸಲು ಕರೆತಂದ ಕೋಣಗಳನ್ನು ಮಹಿಳೆಯರು ಸಾಂಪ್ರದಾಯಿಕವಾಗಿ ಸ್ವಾಗತಿಸಿದರು –ಪ್ರಜಾವಾಣಿ ಚಿತ್ರ

ಅನಿಲ ಸೋರಿಕೆಯಿಂದ ಸ್ಫೋಟ: 7 ಮಂದಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಣನಕುಂಟೆ ವೀವರ್ಸ್ ಕಾಲೊನಿಯ ಮಾರುತಿ ನಗರದಲ್ಲಿ ಬುಧವಾರ ಬೆಳಿಗ್ಗೆ ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿ ಮನೆಯಲ್ಲಿದ್ದ ಏಳು ಮಂದಿ ಗಾಯಗೊಂಡಿದ್ದಾರೆ.

ಉತ್ತರ ಪ್ರದೇಶದ ಬನಾರಸ್‌ನ ಜಮಾಲ್ (33), ಅವರ ಪತ್ನಿ ನಾಜಿಯಾ (23) ಹಾಗೂ ಇರ್ಫಾನ್(22) ಮತ್ತು ಅವರ ಪತ್ನಿ ಗುಲಾಬ್(19), ಶಹಜಾದ್(9) ಸೇರಿದಂತೆ ಇಬ್ಬರು ಮಕ್ಕಳು ಗಾಯಗೊಂಡಿದ್ದಾರೆ.

ಜಮಾಲ್ ಮತ್ತು ನಾಜಿಯಾ ಹಾಗೂ ಇಬ್ಬರು ಚಿಕ್ಕ ಮಕ್ಕಳ ಸ್ಥಿತಿ ಗಂಭೀರವಾಗಿದ್ದು, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಹುಳಿಮಾವು ನಿವಾಸಿ ಮಾರ್ಟಿನ್ ಅವರಿಗೆ ಸೇರಿದ ಬಾಡಿಗೆ ಮನೆಯಲ್ಲಿ ಏಳು ಮಂದಿ ನೆಲೆಸಿದ್ದರು.

ಜಮಾಲ್ ಮತ್ತು ಇರ್ಫಾನ್ ದಂಪತಿ ವೀವರ್ಸ್ ಕಾಲೊನಿ ಸಮೀಪದಲ್ಲೇ ಕೈಮಗ್ಗ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು.

‘ಕಾರ್ಖಾನೆಯಲ್ಲಿ ಮಂಗಳವಾರ ಕೆಲಸ ಮುಗಿಸಿಕೊಂಡು ಮನೆಗೆ ಬಂದಿದ್ದವರು ಅಡುಗೆ ತಯಾರಿಸಿ ಊಟ ಮಾಡಿದ್ದರು. ಅದಾದ ಮೇಲೆ ಸಿಲಿಂಡರ್ ಆಫ್ ಮಾಡಿರಲಿಲ್ಲ. ರಾತ್ರಿಯಿಡೀ ಅಡುಗೆ ಅನಿಲ ಸೋರಿಕೆಯಾಗಿತ್ತು. ಅಡುಗೆ ಕೋಣೆಯ ಬಾಗಿಲು ಹಾಗೂ ಕಿಟಕಿ ಮುಚ್ಚಿದ್ದರಿಂದ ಅನಿಲ್ ಸೋರಿಕೆಯಾಗುತ್ತಿರುವುದು ಮನೆಯವರ ಅರಿವಿಗೆ ಬಂದಿರಲಿಲ್ಲ. ಬುಧವಾರ ಬೆಳಿಗ್ಗೆ 5.30ರ ಸುಮಾರಿಗೆ ನಾಜಿಯಾ ಅಡುಗೆ ಕೋಣೆಯ ವಿದ್ಯುತ್ ಸ್ವಿಚ್ ಆನ್ ಮಾಡಿದಾಗ ಸ್ಫೋಟ ಸಂಭವಿಸಿದೆ. ಎಲ್ಲರಿಗೂ ಸುಟ್ಟ ಗಾಯಗಳಾಗಿವೆ’ ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

ಸ್ಫೋಟದ ತೀವ್ರತೆಗೆ ಮನೆಯ ಬಾಗಿಲು, ಮೂರು ಕಿಟಕಿಗಳು, ಹೊರಾಂಗಣದಲ್ಲಿದ್ದ ಕಬ್ಬಿಣದ ಕಂಬಿಗಳು ಛಿದ್ರಗೊಂಡು ಹೊರಗಡೆ ಬಿದ್ದಿವೆ. ಮನೆಯ ವಸ್ತುಗಳೆಲ್ಲ ಚೆಲ್ಲಾಪಿಲ್ಲಿಯಾಗಿವೆ. ಎದುರು ಮನೆಯ ಮೇಲೆ ಸಿಲಿಂಡರ್ ಮತ್ತು ಕಿಟಕಿ ಬಿದ್ದು ಚಾವಣಿಗೆ ಹಾನಿಯಾಗಿದೆ. ಪಕ್ಕದ ಮನೆ ಈಶ್ವರಮ್ಮ ಅವರಿಗೂ ಸಣ್ಣ ಪ್ರಮಾಣದ ಗಾಯವಾಗಿದೆ.

ಪಕ್ಕದ ಮನೆಯ ನಿವಾಸಿಗಳು ಕರೆ ಮಾಡಿ ತಿಳಿಸಿದ ಮೇರೆಗೆ ಸ್ಥಳಕ್ಕೆ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಅಸ್ವಸ್ಥಗೊಂಡಿದ್ದ ಏಳು ಮಂದಿಯನ್ನು ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದರು.



ಅಡುಗೆ ಅನಿಲ ಸೋರಿಕೆಯಿಂದ ಸ್ಫೋಟ ಸಂಭವಿಸಿದ್ದ ಮನೆ

ಅತ್ಯಾಚಾರ: ಅಪರಾಧಿಗೆ 20 ವರ್ಷ ಜೈಲು ಶಿಕ್ಷೆ

ಬೆಂಗಳೂರು: ರಾಜಗೋಪಾಲನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಬಾಲಕಿ ಅತ್ಯಾಚಾರ ಪ್ರಕರಣದ ಅಪರಾಧಿಗೆ 2ನೇ ತ್ವರಿತ ವಿಶೇಷ ನ್ಯಾಯಾಲಯ 20 ವರ್ಷ ಜೈಲು ಶಿಕ್ಷೆ ಹಾಗೂ ₹10 ಸಾವಿರ ದಂಡ ವಿಧಿಸಿ ಆದೇಶಿಸಿದೆ.



ಸಿದ್ದರಾಜು

ಸಿದ್ದರಾಜು (24) ಶಿಕ್ಷೆಗೆ ಒಳಗಾದ ಅಪರಾಧಿ.

ಠಾಣಾ ವ್ಯಾಪ್ತಿಯ ಬಡಾವಣೆಯೊಂದರಲ್ಲಿ 2019ರ ನವೆಂಬರ್ 28ರಂದು ಬಾಲಕಿಯೊಬ್ಬಳು ಕಾಣೆಯಾಗಿದ್ದಳು. ಪೋಷಕರ ದೂರು ಆಧರಿಸಿ, ತನಿಖೆ ಕೈಗೊಳ್ಳಲಾಗಿತ್ತು. ಕೆಲವು ದಿನಗಳ ನಂತರ ತಾಯಿ ಜತೆಗೆ ಬಾಲಕಿ ಠಾಣೆಗೆ ಹಾಜರಾಗಿದ್ದರು. ಅಂದು ಬಾಲಕಿಯ ಹೇಳಿಕೆ ಪಡೆದುಕೊಂಡಾಗ ಅತ್ಯಾಚಾರ ನಡೆದಿರುವುದು ಗೊತ್ತಾಗಿತ್ತು. ಅಪರಾಧಿ ವಿರುದ್ಧ ಪೋಕ್ಸೊ ಕಾಯ್ದೆ ಹಾಗೂ ಬಾಲ್ಯವಿವಾಹ ನಿಷೇಧ ಕಾಯ್ದೆ ಅಡಿ ಪ್ರಕರಣ ದಾಖಲು ಮಾಡಿಕೊಂಡು ಆರೋಪಿಯನ್ನು ಬಂಧಿಸಲಾಗಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಕರಣದ ತನಿಖೆ ನಡೆಸಿ ಸಾಕ್ಷ್ಯಾಧಾರ ಕಲೆಹಾಕಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಲಾಗಿತ್ತು. ಪ್ರಕರಣದ ವಿಚಾರಣೆ ನಡೆದು ಮಂಗಳವಾರ ಅಪರಾಧಿಗೆ ನ್ಯಾಯಾಲಯವು ಶಿಕ್ಷೆ ವಿಧಿಸಿದೆ. ಸಂತ್ರಸ್ತ ಬಾಲಕಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ₹4 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿದೆ. ಸರ್ಕಾರಿ ವಕೀಲರಾಗಿ ಎ.ವಿ. ಮಧು ಅವರು ವಾದ ಮಂಡಿಸಿದ್ದರು.

ತಂದೆ ಕಣ್ಣು ಕಿತ್ತಿದ್ದ ಪುತ್ರನಿಗೆ 9 ವರ್ಷ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ವರ್ಗಾವಣೆ ವಿಚಾರದಲ್ಲಿ ನಡೆದ ಗಲಾಟೆ ವೇಳೆ ತಂದೆಯ ಕಣ್ಣು ಕಿತ್ತು ಹಾಕಿದ್ದ ಪ್ರಕರಣದಲ್ಲಿ ಪುತ್ರನಿಗೆ ಇಲ್ಲಿನ 57ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವು 9 ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು ₹ 42 ಸಾವಿರ ದಂಡ ವಿಧಿಸಿ ಆದೇಶಿಸಿದೆ.

ಅಭಿಷೇಕ್ ಚೇತನ್ (44) ಶಿಕ್ಷೆಗೆ ಒಳಗಾದ ಅಪರಾಧಿ. ತಂದೆಯ ಮೇಲೆ ಹಲ್ಲೆ ನಡೆಸಿ, ಕಣ್ಣು ಕಿತ್ತು ಹಾಕಿರುವುದು ಸಾಕ್ಷ್ಯಾಧಾರಗಳ ಸಮೇತ ದೃಢಪಟ್ಟಿದೆ ಎಂದು ನ್ಯಾಯಾಲಯ ತೀರ್ಮಾನಿಸಿ ಶಿಕ್ಷೆ ವಿಧಿಸಿದೆ. ನ್ಯಾಯಾಧೀಶ ಟಿ.ಗೋವಿಂದಯ್ಯ ಅವರು ಆದೇಶ ಮಾಡಿದ್ದಾರೆ. ‘ತನ್ನ ಹೆಸರಿಗೆ ಆಸ್ತಿ ವರ್ಗಾವಣೆ ಮಾಡಿಲ್ಲ’ ಎಂಬ ಕಾರಣಕ್ಕೆ ಅಭಿಷೇಕ್, 66 ವರ್ಷದ ತಂದೆ ಪರಮೇಶ್ ಅವರ ಮೇಲೆ ಹಲ್ಲೆ ನಡೆಸಿ ಕಣ್ಣು ಕಿತ್ತುಹಾಕಿದ್ದ. 2018ರ ಆ.29ರಂದು ಬನಶಂಕರಿಯ ಶಾಕಾಂಬರಿನಗರದಲ್ಲಿ ಈ ಘಟನೆ ನಡೆದಿತ್ತು.

ಜೆ.ಪಿ. ನಗರ ಠಾಣಾ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಯನ್ನು ಬಂಧಿಸಿದ್ದರು. ನಂತರ ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ನಂತರ, ಜಾಮೀನಿನ ಮೇಲೆ ಹೊರ ಬಂದಿದ್ದ ಅಭಿಷೇಕ್, ನ್ಯಾಯಾಲಯಕ್ಕೆ ಹಾಜರಾಗದೆ ತಲೆಮರೆಸಿಕೊಂಡಿದ್ದ. ತಲೆಮರೆಸಿಕೊಂಡಿದ್ದ ಅಪರಾಧಿಯನ್ನು ಪೊಲೀಸರು ಮತ್ತೆ ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು.

ಅಪರಾಧಿಯು ದಂಡ ಪಾವತಿಸಲು ವಿಫಲವಾದರೆ ಮತ್ತೆ ಒಂದು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಅನುಭವಿಸಬೇಕು ಎಂದು ನ್ಯಾಯಾಧೀಶರು ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಅಪರಾಧಿಗೆ 5 ವರ್ಷ ಸಜೆ

ಬೆಂಗಳೂರು: ಬುದ್ಧಿಮಾಂದ್ಯ ಬಾಲಕಿಗೆ ಲೈಂಗಿಕ ದೌರ್ಜನ್ಯ ಎಸಗಿದ್ದ ಅಪರಾಧಿ 1ನೇ ತ್ವರಿತ ವಿಶೇಷ ನ್ಯಾಯಾಲಯ 5 ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ಆದೇಶಿಸಿದೆ.

ನಾಯಂಡಹಳ್ಳಿ ಚಂದ್ರಶೇಖರ್ ಶಿಕ್ಷೆಗೆ ಒಳಗಾದ ಅಪರಾಧಿ.

ನೊಂದ ಬಾಲಕಿಗೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ ₹1 ಲಕ್ಷ ಪರಿಹಾರ ನೀಡುವಂತೆಯೂ ನ್ಯಾಯಾಧೀಶೆ ಕೆ.ಎನ್. ರೂಪಾ ಆದೇಶಿಸಿದ್ದಾರೆ. ಸರ್ಕಾರಿ ವಕೀಲರಾಗಿ ಪಿ.ಕೃಷ್ಣವೇಣಿ ವಾದ ಮಂಡಿಸಿದ್ದರು.

2022ರ ಏಪ್ರಿಲ್ 14ರಂದು ಸಂಜೆ ಬಾಲಕಿ ಮನೆಗೆ ತೆರಳಿದ್ದ ಅಪರಾಧಿ, ಪ್ರೀತಿಸುವಂತೆ ಬಲವಂತ ಮಾಡಿದ್ದ. ಅದೇ ವೇಳೆಯಲ್ಲಿ ಲೈಂಗಿಕ ದೌರ್ಜನ್ಯ ಎಸಗಿದ್ದ. ಈ ಸಂಬಂಧ ಬಾಲಕಿಯ ತಾಯಿ ಹುಳಿಮಾವು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ ಆರೋಪಿಯನ್ನು ಬಂಧಿಸಿದ್ದ ಪೊಲೀಸರು, ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಕೀಳು ಅಭಿರುಚಿಯ ಪೋಸ್ಟರ್: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಅವರ ವಿರುದ್ಧ ನಗರದ ವಿವಿಧೆಡೆ ಕೀಳು ಅಭಿರುಚಿಯ ಪೋಸ್ಟರ್ ಅಂಟಿಸಿದ್ದ ಆರೋಪಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಜೆಡಿಎಸ್ ಮುಖಂಡರು ಬುಧವಾರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದರು.

ದೂರು ಆಧರಿಸಿ ಶ್ರೀರಾಂಪುರ ಪೊಲೀಸರು ಎಸ್‌.ಮನೋಹರ್, ಡಿ.ಎಸ್. ಕಾರ್ತಿಕ್ ಗೌಡ, ಎಚ್‌.ಡಿ. ದರ್ಶನ್ ಗೌಡ, ಅರ್ಜುನ್ ಡಿ. ಗೌಡ, ಸಂತೋಷ್ ಎನ್ನುವವರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಅವರ ವಿರುದ್ಧ ಬೆಂಗಳೂರು ನಗರ ಪೊಲೀಸ್ ಆಯುಕ್ತ ದಯಾನಂದ ಅವರಿಗೆ ದೂರು ಸಲ್ಲಿಸಿದ ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್‌.ಎಂ. ರಮೇಶ್ ಗೌಡ, ವಿಧಾನ ಪರಿಷತ್ ಮಾಜಿ ಸದಸ್ಯ ಚೌಡರೆಡ್ಡಿ ತೂಪಲ್ಲಿ, ಜೆಡಿಎಸ್ ರಾಜ್ಯ ಕಾನೂನು ಘಟಕದ ಅಧ್ಯಕ್ಷ ಎ.ಪಿ. ರಂಗನಾಥ್ ಮತ್ತಿತರರು ಆರೋಪಿಗಳನ್ನು ಬಂಧಿಸಬೇಕು ಎಂದು ಒತ್ತಾಯಿಸಿದರು.

ಮನೋಹರ್ ಹಿಂದಿನಿಂದಲೂ ಇದೇ ರೀತಿಯಲ್ಲಿ ಕೀಳು ಅಭಿರುಚಿಯ ಪೋಸ್ಟರ್ ಅಂಟಿಸಿ, ವಿರೋಧ ಪಕ್ಷದ ನಾಯಕರನ್ನು ತೇಜೋವಧೆ ಮಾಡುತ್ತಾ ಬಂದಿದ್ದಾರೆ. ಈಗ ಕುಮಾರಸ್ವಾಮಿ ಅವರ ವಿರುದ್ಧ ಜೆಡಿಎಸ್ ಕಚೇರಿ ಬಳಿಯೂ ಪೋಸ್ಟರ್ ಅಂಟಿಸಿದ್ದಾರೆ. ಮುಖ್ಯಮಂತ್ರಿಯ ಮುಖ್ಯ ಸಲಹೆಗಾರ ಸುನಿಲ್ ಕನುಗೋಳ ಅವರೂ ಹಿಂದೆ ಬಿಜೆಪಿ ಸರ್ಕಾರ ವಿದ್ದಾಗ ಮುಖ್ಯಮಂತ್ರಿ ವಿರುದ್ಧ ಪೋಸ್ಟರ್ ಅಂಟಿಸಿದ ಪ್ರಕರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರ ವಿರುದ್ಧವೂ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಆರ್‌ಟಿಪಿಎಸ್–ವೈಟಿಪಿಎಸ್‌ಗೆ ತನಿಖಾ ತಂಡ ಭೇಟಿ

ಕಲ್ಲಿದ್ದಲು ಅಕ್ರಮ ಸಂಗ್ರಹ ಆರೋಪ

ಪ್ರಜಾವಾಣಿ ವಾರ್ತೆ

ಶಕ್ತಿನಗರ (ರಾಯಚೂರು ಜಿಲ್ಲಾ): ಕಲ್ಲಿದ್ದಲು ಅಕ್ರಮ ಸಂಗ್ರಹ ಹಾಗೂ ಮಾರಾಟಕ್ಕೆ ಸಂಬಂಧಿಸಿದಂತೆ ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ವಿದ್ಯುತ್ ಘಟಕಗಳಿಗೆ ಬೆಂಗಳೂರಿನಿಂದ ತನಿಖಾ ತಂಡ ಬುಧವಾರ ಭೇಟಿ ನೀಡಿ ಪರಿಶೀಲಿಸಿತು.

ಆರ್‌ಟಿಪಿಎಸ್ ಮತ್ತು ವೈಟಿಪಿಎಸ್ ವಿದ್ಯುತ್ ಘಟಕಗಳಿಗೆ ಸರಬರಾಜು ಮಾಡುವ ಕಲ್ಲಿದ್ದಲು ಅನಧಿಕೃತ ಜಾಗದಲ್ಲಿ ಸಂಗ್ರಹವಾಗಿದ್ದ ಸ್ಥಳಕ್ಕೆ ತನಿಖಾ ತಂಡದ ಅಧಿಕಾರಿ ಯತಿರಾಜ್ ರಘುನಾಥ, ಅಜಯ ಮತ್ತು ಕೃಷ್ಣಮೂರ್ತಿ ಅವರು ಭೇಟಿ ನೀಡಿ ಪರಿಶೀಲಿಸಿದರು.

ಕಲ್ಲಿದ್ದಲು ವ್ಯಾಗಿನ್ ಸ್ವಚ್ಛತಾ ಕಾರ್ಯದ ಗುತ್ತಿಗೆಯನ್ನು ಮೂರು ವರ್ಷಗಳ ಅವಧಿಯವರೆಗೆ ಆಂಧ್ರ ಪ್ರದೇಶದ ಗುಂತಕಲ್‌ನ ಗುತ್ತಿಗೆದಾರೊಬ್ಬರಿಗೆ ನೀಡಲಾಗಿತ್ತು. ಗುತ್ತಿಗೆದಾರ ಮತ್ತು ಅಧಿಕಾರಿಗಳ ಒಳ ಒಪ್ಪಂದದಿಂದ ಕಲ್ಲಿದ್ದಲನ್ನು ಅನಧಿಕೃತ ಜಾಗದಲ್ಲಿ ಸಂಗ್ರಹ ಮಾಡಲಾಗುತ್ತಿದೆ ಎಂಬ ಆರೋಪ ಕೇಳಿ ಬಂದಿತ್ತು.

‘ವ್ಯಾಗನ್‌ನಲ್ಲಿ ತುಂಬಿದ್ದ ಕಲ್ಲಿದ್ದಲನ್ನು ವೈಟಿಪಿಎಸ್ ಮತ್ತು ಆರ್‌ಟಿಪಿಎಸ್ ಪ್ರಾಂಗಣದಲ್ಲಿ ಸಂಪೂರ್ಣವಾಗಿ ಸುರಿಯಬೇಕು. ವ್ಯಾಗನ್ ಖಾಲಿಯಾದ ನಂತರವೇ ಅಲ್ಲಿಂದ ರೈಲು ಚಲಿಸಲು ಹಸಿರು ನಿಶಾನೆ ನೀಡಬೇಕು. ಆದರೆ, ವ್ಯಾಗನ್‌ಗಳಲ್ಲಿ ದೊಡ್ಡ ಪ್ರಮಾಣದ ಕಲ್ಲಿದ್ದಲುನ್ನು ಉಳಿಸಿ, ವಾಪಸ್ ಕಳುಹಿಸಲಾಗುತ್ತಿತ್ತು ಎಂಬ ವಿಷಯ ಬಹಿರಂಗವಾಗಿದೆ. ಈ ಸಂಬಂಧ ವರದಿಯನ್ನು ಮೂರು ದಿನದೊಳಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ತನಿಖಾ ತಂಡ ನೀಡಲಿದೆ’ ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

ತನಿಖಾ ತಂಡದ ಅಧಿಕಾರಿಗಳು, ಆರ್‌ಟಿಪಿಎಸ್ ಮುಖ್ಯ ಕಾರ್ಯ ನಿರ್ವಾಹಕ ನಿರ್ದೇಶಕ ಸುರೇಶಬಾಬು ಅವರೊಂದಿಗೂ ಚರ್ಚಿಸಿದರು.



ತನಿಖಾ ತಂಡದ ಅಧಿಕಾರಿಗಳು ಆರ್‌ಟಿಪಿಎಸ್ ಮುಖ್ಯ ಕಾರ್ಯ ನಿರ್ವಾಹಕ ನಿರ್ದೇಶಕ ಸುರೇಶಬಾಬು ಅವರೊಂದಿಗೆ ಚರ್ಚಿಸಿದರು

ಸಂಕ್ಷಿಪ್ತ ಸುದ್ದಿ

ಆಂಧ್ರ ಪ್ರದೇಶದ ಜಗನ್ನಾದ ರಾವ್‌ಗೆ ನಾಗೇಗೌಡ ಪ್ರಶಸ್ತಿ



ರಾಮನಗರ: ಜಾನಪದ ಲೋಕದ ರೂವಾರಿ ನಾಡೋಜ ಎಚ್.ಎಲ್. ನಾಗೇಗೌಡ ಅವರ ಸ್ಮರಣಾರ್ಥ ಕರ್ನಾಟಕ ಜಾನಪದ ಪರಿಷತ್ತು ನೀಡುವ 'ನಾಡೋಜ ಎಚ್.ಎಲ್. ನಾಗೇಗೌಡ ರಾಷ್ಟ್ರೀಯ ಪ್ರಶಸ್ತಿ'ಗೆ ಆಂಧ್ರಪ್ರದೇಶದ ತೂರ್ಪು ಭಾಗವತಂ (ಪೂರ್ವ ಭಾಗವತ) ಮೃದಂಗ ಕಲಾವಿದ ದೇವಗುಪ್ತಪು ವೀರವೆಂಕಟ ಜಗನ್ನಾದ ರಾವ್ ಆಯ್ಕೆಯಾಗಿದ್ದಾರೆ.

ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನ. 27ರಂದು ಸಾಹಿತಿ ಡಾ. ಚಂದ್ರಶೇಖರ ಕಂಬಾರ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಪ್ರಶಸ್ತಿಯು ₹1 ಲಕ್ಷ ನಗದು, ಪ್ರಮಾಣಪತ್ರ ಒಳಗೊಂಡಿದೆ.

ತೂರ್ಪು ಭಾಗವತಂ ಆಂಧ್ರಪ್ರದೇಶದ ವಿಶಾಖಪಟ್ಟಣ ಮತ್ತು ವಿಜಯನಗರ ಸುತ್ತಮುತ್ತ ಪ್ರಚಲಿತ ದಲ್ಲಿರುವ ಪ್ರಾಚೀನ ಜನಪದ ಕಲೆ. ಇದಕ್ಕೆ 'ವೀದಿ ನಾಟಕಂ' ಎಂದೂ ಕರೆಯುತ್ತಾರೆ.

ನಶಿಸುವ ಹಂತದಲ್ಲಿರುವ ಈ ಕಲೆಯನ್ನು ಆರಾಧಿಸಿಕೊಂಡು ಬಂದಿರುವ 12ನೇ ತಲೆಮಾರಿನ ಕಲಾವಿದ ದೇವಗುಪ್ತಪು ವೀರವೆಂಕಟ ಜಗನ್ನಾದರಾವ್. ಇವರು ಏಕಕಾಲಕ್ಕೆ ಮೂರು ಮೃದಂಗ ನುಡಿಸುವ ಏಕೈಕ ಕಲಾವಿದ. ಕಾರ್ಯಕ್ರಮದಲ್ಲಿ ಜಗನ್ನಾದರಾವ್ ಅವರು 'ಸತ್ಯಭಾಮಾ ಕಲಾಪ' ಪ್ರಸಂಗದ ಪ್ರದರ್ಶನ ನೀಡಲಿದ್ದಾರೆ ಎಂದು ಪರಿಷತ್ತಿನ ಕಾರ್ಯಾಧ್ಯಕ್ಷ ಪ್ರೊ. ಹಿ.ಚಿ. ಬೋರಲಿಂಗಯ್ಯ ತಿಳಿಸಿದ್ದಾರೆ.

ಡಿ.4ರಂದು ಮಹಾಮೇಳಾವ್

ಬೆಳಗಾವಿ: ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ವಿಧಾನಮಂಡಲ ಚಳಿಗಾಲದ ಅಧಿವೇಶನ ಆರಂಭ ವಾಗಲಿರುವ ಡಿ.4ರಂದು 'ಮಹಾಮೇಳಾವ್' ಆಯೋಜಿಸಲು ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ತೀರ್ಮಾನಿಸಿದೆ.

ನಗರದಲ್ಲಿ ಬುಧವಾರ ನಡೆದ ಸಭೆ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಎಂಇಎಸ್ ಪ್ರಧಾನ ಕಾರ್ಯದರ್ಶಿ ಮಾಲೋಜಿ ಅಷ್ಟೇಕರ್, 'ಈ ಬಾರಿ ಮಹಾಮೇಳಾವ್ ಯಶಸ್ವಿಗೊಳಿಸಲು ಮತ್ತು ತೊಡಕುಗಳನ್ನು ನಿವಾರಿಸಲು ನಿರ್ಧರಿಸಿದ್ದೇವೆ' ಎಂದರು.

ಅರ್ಹರಿಗೆ ಡಿ. 31ರೊಳಗೆ 'ಗ್ಯಾರಂಟಿ'

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ಬೆಂಗಳೂರು: ರಾಜ್ಯ ಸರ್ಕಾರಕ್ಕೆ ಆರು ತಿಂಗಳು ತುಂಬಿದ ಹಿನ್ನೆಲೆಯಲ್ಲಿ, ನಾಲ್ಕು 'ಗ್ಯಾರಂಟಿ' ಯೋಜನೆಗಳ ಅನುಷ್ಠಾನದ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಎಲ್ಲ ಅರ್ಹ ಫಲಾನುಭವಿಗಳಿಗೆ ಡಿ. 31ರ ಒಳಗೆ ಯೋಜನೆಗಳ ಸೌಲಭ್ಯ ದೊರಕುವಂತೆ ಕ್ರಮ ಕೈಗೊಳ್ಳಬೇಕು' ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಶಕ್ತಿ' (ಮಹಿಳೆಯರಿಗೆ ಉಚಿತ ಸಾರಿಗೆ) ಯೋಜನೆ ಜಾರಿ ಆದಾಗಿನಿಂದ ಇದೇ 21ರವರೆಗೆ ಒಟ್ಟು 99.75 ಕೋಟಿ ಪ್ರಯಾಣಿಕರು ಈ ಸೌಲಭ್ಯದ ಸದುಪಯೋಗ ಪಡೆದುಕೊಂಡಿದ್ದಾರೆ. ಇನ್ನೆರಡು ದಿನಗಳಲ್ಲಿ ಈ ಸಂಖ್ಯೆ 100 ಕೋಟಿ ದಾಟಲಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಪ್ರಯಾಣಿಕರ ಸಂಖ್ಯೆ ಏಪ್ರಿಲ್ 2023ರಲ್ಲಿ 84.17 ಲಕ್ಷ ಇತ್ತು. 'ಶಕ್ತಿ' ಜಾರಿಯಾದ ಬಳಿಕ 1.08 ಕೋಟಿಯಿಂದ 1.15 ಕೋಟಿವರೆಗೆ ಹೆಚ್ಚಳವಾಗಿದೆ. ನಾಲ್ಕೂ ಸಾರಿಗೆ ನಿಗಮಗಳಿಗೆ ಒಟ್ಟು 828 ಸಾಮಾನ್ಯ ಹಾಗೂ 145 ವಿದ್ಯುತ್ ಚಾಲಿತ ಬಸ್‌ಗಳನ್ನು ಸೇರ್ಪಡೆಗೊಳಿಸಲಾಗುತ್ತಿದೆ. ಬಸ್‌ಗಳ ಖರೀದಿ ಪ್ರಕ್ರಿಯೆಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಮುಖ್ಯಮಂತ್ರಿ ಸೂಚಿಸಿದರು.

'ಅನ್ನಭಾಗ್ಯ' ಯೋಜನೆಯಡಿ ಅಕ್ಟೋಬರ್ ತಿಂಗಳಲ್ಲಿ 1.10 ಕೋಟಿ ಕಾರ್ಡುದಾರರಿಗೆ ಡಿಬಿಟಿ (ನೇರ ನಗದು ವರ್ಗಾವಣೆ) ಮಾಡಲಾಗಿದೆ. ಈವರೆಗೆ ಒಟ್ಟು ₹ 2,444.11 ಕೋಟಿ ಡಿಬಿಟಿ ಮೂಲಕ ವರ್ಗಾಯಿಸಲಾಗಿದೆ 12.95 ಲಕ್ಷ ಪಡಿತರ ಚೀಟಿದಾರರ ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಮಾಡುವ ಮೂಲಕ ಯೋಜನೆಗೆ ಸೇರ್ಪಡೆಗೊಳಿಸಲಾಗಿದೆ. 2.60 ಲಕ್ಷ ಹೊಸ ಖಾತೆಗಳನ್ನು ಅಂಚೆ ಕಚೇರಿಗಳಲ್ಲಿ ತೆರೆಯಲಾಗಿದೆ ಎಂದು ಆಹಾರ ಇಲಾಖೆಯ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

7.67 ಲಕ್ಷ ಅನರ್ಹ ಪಡಿತರ ಚೀಟಿಗಳ ವಿಷಯದಲ್ಲಿ ಸಮಸ್ಯೆಗಳನ್ನು ಗುರುತಿಸಿ ಬಗೆಹರಿಸಬೇಕು. ಬಹುತೇಕ ಪ್ರಕರಣಗಳಲ್ಲಿ ಯಜಮಾನರು ಊರಿನಲ್ಲಿ ಇಲ್ಲದ ಕಾರಣ ತಾಂತ್ರಿಕ ಸಮಸ್ಯೆ ಆಗಿರುವುದರಿಂದ, ಎರಡನೇ ಹಿರಿಯ ವ್ಯಕ್ತಿಯ ಖಾತೆಗೆ ಹಣ ವರ್ಗಾಯಿಸುವ ಕುರಿತಂತೆ ಸಚಿವ ಸಂಪುಟದ ಮುಂದೆ ಪ್ರಸ್ತಾವ ಮಂಡಿಸಲು ಮುಖ್ಯಮಂತ್ರಿ ಸೂಚಿಸಬೇಕು ಎಂದರು.

'ಗೃಹಜ್ಯೋತಿ' ಯೋಜನೆಯಡಿ ಈವರೆಗೆ 1.62 ಕೋಟಿ ಮಂದಿ ನೋಂದಾಯಿಸಿಕೊಂಡಿದ್ದು, 1.50 ಕೋಟಿ ಕುಟುಂಬಗಳಿಗೆ ಈ ಯೋಜನೆಯ ಸೌಲಭ್ಯ ದೊರೆಯುತ್ತಿದೆ. ಈ ಯೋಜನೆಯಡಿ ಆಗಸ್ಟ್‌ನಿಂದ ಈವರೆಗೆ ₹ 2,900 ಕೋಟಿ ಭರಿಸಲಾಗಿದೆ. ಕುಟೀರ ಜ್ಯೋತಿ, ಭಾಗ್ಯ ಜ್ಯೋತಿ, ಅಮೃತ ಜ್ಯೋತಿ ಯೋಜನೆಯ ಫಲಾನುಭವಿಗಳನ್ನು ಇಲಾಖೆಯಲ್ಲಿರುವ ದತ್ತಾಂಶಗಳ ಆಧಾರದಲ್ಲಿ ಗೃಹ ಜ್ಯೋತಿ ಯೋಜನೆಯಡಿ ಸೇರ್ಪಡೆಗೊಳಿಸಲಾಗಿದೆ. ಅರ್ಹ ಫಲಾನುಭವಿಗಳು ಗೃಹ ಜ್ಯೋತಿಯಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು' ಎಂದು ಮುಖ್ಯಮಂತ್ರಿ ನಿರ್ದೇಶನ ನೀಡಿದರು.

'ಗೃಹಲಕ್ಷ್ಮಿ' ಯೋಜನೆಯಲ್ಲಿ ನವೆಂಬರ್‌ವರೆಗೆ 1.17 ಕೋಟಿ ಫಲಾನುಭವಿಗಳು ನೋಂದಣಿಯಾಗಿದ್ದು, 1.10 ಕೋಟಿ ಫಲಾನುಭವಿಗಳಿಗೆ ನೆರವು ವರ್ಗಾವಣೆ ಮಾಡಲಾಗಿದೆ. 2 ಲಕ್ಷ ಫಲಾನುಭವಿಗಳಿಗೆ ಸಂಬಂಧಿಸಿದ ತೊಡಕು ನಿವಾರಿಸಲಾಗುತ್ತಿದೆ. ಖಾತೆಯ ಮಾಹಿತಿಯಲ್ಲಿ ಗೊಂದಲ, ಆಧಾರ್ ಲಿಂಕ್ ಆಗದಿರುವುದು ಮತ್ತಿತರ ಕಾರಣಗಳಿಂದ ಹಣ ವರ್ಗಾವಣೆಗೆ ತೊಡಕಾಗಿದೆ. ಕೆಲವೇ ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸಬೇಕು. ಅಲ್ಲದೆ, ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗೃಹ ಲಕ್ಷ್ಮಿ ಅದಾಲತ್ ಆಯೋಜಿಸಿ, ಸಮಸ್ಯೆ ಬಗೆಹರಿಸಲು ಕ್ರಮ ಕೈಗೊಳ್ಳಬೇಕು' ಎಂದರು.



ಬೇಡಿಕೆ ಈಡೇರಿಸಲು ಆಗ್ರಹಿಸಿ, 'ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಸ್ವತಂತ್ರ ಸಂಘಟನೆ' ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರ ಬೃಹತ್ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ/ ರಂಜು ಪಿ.

'6ನೇ ಗ್ಯಾರಂಟಿ' ಜಾರಿಗೆ ಆಗ್ರಹಿಸಿ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ವೇತನ ನಿಗದಿಯೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸ್ವತಂತ್ರ ಸಂಘಟನೆಯ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬುಧವಾರದಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದರು.

ವಿವಿಧ ಜಿಲ್ಲೆಗಳಿಂದ ದೊಡ್ಡ ಸಂಖ್ಯೆಯಲ್ಲಿ ಬಂದಿದ್ದ ಪ್ರತಿಭಟನಕಾರರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

'ಸಮಗ್ರ ಶಿಶು ಅಭಿವೃದ್ಧಿ ಯೋಜನೆ' ಅಡಿ ದೇಶದಾದ್ಯಂತ ಲಕ್ಷಾಂತರ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ದುಡಿಯುತ್ತಿದ್ದಾರೆ. ರಾಜ್ಯದಲ್ಲೂ 1.32 ಲಕ್ಷ ಮಂದಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ ಕನಿಷ್ಠ ಸೌಲಭ್ಯ ದೊರೆಯುತ್ತಿಲ್ಲ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ಕಾರ್ಯಕರ್ತೆಯರು, ಸಹಾಯಕಿಯರಿಗೆ ₹21 ಸಾವಿರ ಕನಿಷ್ಠ ವೇತನ ನೀಡಬೇಕು. ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್ ಮುಖಂಡರು 6ನೇ ಗ್ಯಾರಂಟಿ ರೂಪದಲ್ಲಿ ಕಾರ್ಯಕರ್ತೆಯರಿಗೆ ₹ 15 ಸಾವಿರ, ಸಹಾಯಕಿಯರಿಗೆ ₹ 10 ಸಾವಿರ ನೀಡುವುದಾಗಿ ಘೋಷಣೆ ಮಾಡಿದ್ದರು. ಅದನ್ನು ತಕ್ಷಣವೇ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.


'ಎಲ್ಲ ಮಿನಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಬೇಕು. ನಿವೃತ್ತರಾದ ಸಿಬ್ಬಂದಿಗೆ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಗ್ರಾಚ್ಯುಟಿ ನೀಡಬೇಕು' ಎಂದು ಸಂಘಟನೆ ರಾಜ್ಯ ಅಧ್ಯಕ್ಷೆ ಬಿ.ಪ್ರೇಮಾ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಗೌರವಾಧ್ಯಕ್ಷೆ ಬಿ.ಆರ್.ಜಯಲಕ್ಷ್ಮಿ, ಕಾರ್ಯದರ್ಶಿ ಉಮಾವಾಣಿ, ಖಜಾಂಚಿ ವಿಶಾಲಾಕ್ಷಿ, ಉಪಾಧ್ಯಕ್ಷೆ ಬಿ.ಎಸ್.ನಿರ್ಮಲಾ, ಸಹ ಕಾರ್ಯದರ್ಶಿ ಶಾಂತಾ, ಸಲಹೆಗಾರರಾದ ಭಾರತಿ ಇದ್ದರು.

ಮನವಿ ಸಲ್ಲಿಕೆ: ಇದಾದ ನಂತರ ಪ್ರತಿಭಟನಕಾರರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರ ಗೃಹಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

'ಇಲಾಖಾ ಹಂತದಲ್ಲಿರುವ ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಲಾಗುವುದು. ಉಳಿದ ಬೇಡಿಕೆಗಳ ಕುರಿತು ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸಿ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಸಚಿವರು ಭರವಸೆ ನೀಡಿದರು.

ಕರ್ತವ್ಯ ಲೋಪ: ಸಿಪಿಐ ಅಮಾನತು



ಪಂಡಿತ ವಿ. ಸಗರ

ಕಲಬುರಗಿ: ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ನೇಮಕಾತಿ ಪರೀಕ್ಷೆ ಅಕ್ರಮ ಪ್ರಕರಣದ ಪ್ರಮುಖ ಆರೋಪಿ ಆರ್.ಡಿ. ಪಾಟೀಲನನ್ನು ಬಂಧಿಸುವಲ್ಲಿ ವಿಳಂಬ ಮಾಡಿ, ತಪ್ಪಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ ಎಂಬ ಆರೋಪ ಎದುರಿಸುತ್ತಿದ್ದ ಅಫಜಲಪುರ ಪೊಲೀಸ್ ಠಾಣೆಯ ಸಿಪಿಐ ಪಂಡಿತ ವಿ. ಸಗರ ಅವರನ್ನು ಅಮಾನತು ಮಾಡಲಾಗಿದೆ. ಕರ್ತವ್ಯ ನಿರ್ಲಕ್ಷ್ಯ ಆರೋಪದ ಅಡಿಯಲ್ಲಿ ಪಂಡಿತ ವಿ. ಸಗರ ಅವರನ್ನು ಅಮಾನತು ಮಾಡಿ ಕಲಬುರಗಿ ಐಜಿಪಿ ಅಜಯ್ ಹಿಲೋರಿ ಅವರು ಆದೇಶ ಹೊರಡಿಸಿದ್ದಾರೆ.

ಆರ್.ಡಿ. ಪಾಟೀಲ, ನಗರದ ಅಪಾರ್ಟ್‌ಮೆಂಟ್ ಒಂದರಲ್ಲಿ ವಾಸವಾಗಿದ್ದ. ಈ ಬಗ್ಗೆ ಮಾಹಿತಿ ಲಭಿಸಿದರೂ ಬಂಧಿಸಲು ತಕ್ಷಣ ತೆರಳದೇ ವಿಳಂಬ ಮಾಡಿದ್ದ ಆರೋಪ ಕೇಳಿಬಂದಿತ್ತು.

ಪ್ರಶಸ್ತಿ ಹಿಂಪಡೆದ ಮೈಸೂರು ಜಿಲ್ಲಾಡಳಿತ

ಕಾಂಗ್ರೆಸ್ ಮುಖಂಡ ಎಂ.ಕೆ. ಅಶೋಕ ಅವರ ಪೂರ್ವಾಪರ ಪರಿಶೀಲಿಸದೇ ಗೌರವಿಸಿದ್ದಕ್ಕೆ ಆಕ್ರೋಶ

ರೌಡಿಶೀಟರ್‌ಗೆ ರಾಜ್ಯೋತ್ಸವ ಪುರಸ್ಕಾರ!

ಮೈಸೂರು: ರೌಡಿಶೀಟರ್, ಕಾಂಗ್ರೆಸ್ ಮುಖಂಡ ಎಂ.ಕೆ. ಅಶೋಕ ಅವರಿಗೆ ನೀಡಿದ್ದ ಜಿಲ್ಲಾಮಟ್ಟದ ರಾಜ್ಯೋತ್ಸವ ಪುರಸ್ಕಾರವನ್ನು ಜಿಲ್ಲಾಡಳಿತ ಬುಧವಾರ ಹಿಂಪಡೆದಿದೆ.

ಈ ವರ್ಷ ನ.1ರಂದು ನಡೆದ ಜಿಲ್ಲಾ ಮಟ್ಟದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾಡಳಿತ 55 ಮಂದಿಗೆ ಜಿಲ್ಲಾಮಟ್ಟದ ರಾಜ್ಯೋತ್ಸವ ಪುರಸ್ಕಾರ ನೀಡಿತ್ತು. ಖುದ್ದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಪ್ರದಾನ ಮಾಡಿದ್ದರು. ಸಮಾಜ ಸೇವೆ ವಿಭಾಗದಲ್ಲಿ ಇಲ್ಲಿನ ಜನನಿ ಸೇವಾ ಟ್ರಸ್ಟ್‌ನ ಅಶೋಕ್ ಅವರಿಗೂ ಪ್ರಶಸ್ತಿ ದೊರೆತಿತ್ತು. ಮುನ್ನಾದಿನ 50 ಮಂದಿಗೆ ಪುರಸ್ಕಾರ ಘೋಷಿಸಲಾಗಿತ್ತು. ಕಾರ್ಯಕ್ರಮದ ದಿನದಂದು ಮತ್ತೆ ಐವರನ್ನು ಪಟ್ಟಿಗೆ ಸೇರಿಸಲಾಗಿತ್ತು.

ಅಶೋಕ್ ವಿರುದ್ಧ ಇಲ್ಲಿನ ಲಷ್ಕರ್ ಹಾಗೂ ದೇವರಾಜ ಪೊಲೀಸ್ ಠಾಣೆಯಲ್ಲಿ ಅಪರಾಧ ಪ್ರಕರಣಗಳು ದಾಖಲಾಗಿದ್ದು, ಪೊಲೀಸರು ರೌಡಿಶೀಟ್ ತೆರೆದಿದ್ದಾರೆ. ಹೀಗಿದ್ದೂ ಪೂರ್ವಾಪರ ವಿಚಾರಿಸದೇ ಅವರನ್ನು ಪರಿಗಣಿಸಿದ ಜಿಲ್ಲಾಡಳಿತದ ಕ್ರಮದ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಪುರಸ್ಕಾರಕ್ಕೆ ಆಯ್ಕೆಗೆ ಪ್ರತ್ಯೇಕ ಉಪಸಮಿತಿಯೇ ಇದೆ. ಹಿರಿಯ ಅಧಿಕಾರಿಗಳು ಈ ಸಮಿತಿಯಲ್ಲಿ ಇದ್ದಾರೆ. ಪ್ರಶಸ್ತಿ ಕೋರಿ ಬರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹರನ್ನು ಆಯ್ಕೆ ಮಾಡುವುದು ಈ ಸಮಿತಿಯ ಜವಾಬ್ದಾರಿ. ಹೀಗಿದ್ದೂ, ಪರಿಶೀಲಿಸದೇ ಪುರಸ್ಕಾರ ನೀಡಲಾಗಿತ್ತು. ಇದಕ್ಕೆ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ಜಿಲ್ಲಾಡಳಿತ, 22 ದಿನಗಳ ಬಳಿಕ ವಾಪಸ್ ಪಡೆದಿದೆ. 'ಸನ್ಮಾನಿತರ ಆಯ್ಕೆ ಹಿನ್ನೆಲೆಯ ಕುರಿತು ಪೊಲೀಸರಿಂದ ಮಾಹಿತಿ ಪಡೆಯಬೇಕಿತ್ತು. ಆದರೆ, ಕಾಲಾವಕಾಶದ ಕೊರತೆಯಿಂದ ಈ ಅಚಾತುರ್ಯವಾಗಿದೆ' ಎಂದು ಸಬೂಬು ನೀಡಿದೆ.

ಸನ್ಮಾನ ಸಂದರ್ಭದಲ್ಲಿ ನೀಡಲಾದ ಪ್ರಮಾಣಪತ್ರ ಹಾಗೂ ಫಲಕವನ್ನು ಕೂಡಲೇ ಹಾಜರಾಗಿ ಹಿಂತಿರುಗಿಸುವಂತೆ ಅಶೋಕ ಅವರಿಗೆ ಸನ್ಮಾನ ಉಪ ಸಮಿತಿಯ ಸದಸ್ಯ ಕಾರ್ಯದರ್ಶಿ ಎಂ.ಡಿ. ಸುದರ್ಶನ್ ಪತ್ರ ಬರೆದಿದ್ದಾರೆ.

ನ. 28ಕ್ಕೆ ಸುಕೇಶ್ ಕಾರುಗಳ ಹರಾಜು

₹308 ಕೋಟಿ ಬಾಕಿ ವಸೂಲಿಗೆ ಮುಂದಾದ ಆದಾಯ ತೆರಿಗೆ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಕಾನೂನು ಸಚಿವಾಲಯದ ಅಧಿಕಾರಿ ಎಂಬುದಾಗಿ ಬಿಂಬಿಸಿಕೊಂಡು ನೂರಾರು ಕೋಟಿ ರೂಪಾಯಿಗಳನ್ನು ವಂಚಿಸಿರುವ ಆರೋಪದಡಿ ದೆಹಲಿ ಕಾರಾಗೃಹದಲ್ಲಿ ಬಂಧನದಲ್ಲಿರುವ ಸುಕೇಶ್ ಚಂದ್ರಶೇಖರ್ ಬಾಕಿ ಇರಿಸಿಕೊಂಡಿರುವ ತೆರಿಗೆ ವಸೂಲಿಗೆ ಆತನ 12 ಐಷಾರಾಮಿ ವಾಹನಗಳನ್ನು ಆದಾಯ ತೆರಿಗೆ ಇಲಾಖೆ ಇದೇ 28 ರಂದು ಹರಾಜು ಮಾಡುತ್ತಿದೆ.

ರ್‍ಯಾನ್‌ಬ್ಯಾಕ್ಸಿ ಔಷಧ ಉತ್ಪಾದನಾ ಕಂಪನಿಯ ಪ್ರವರ್ತಕರಿಗೆ ಜಾಮೀನು ಕೊಡಿಸುವುದಾಗಿ ನಂಬಿಸಿ ಅವರ ಪತ್ನಿಯರಿಂದ ₹ 200 ಕೋಟಿ ಸುಲಿಗೆ ಮಾಡಿದ ಆರೋಪ ಸುಕೇಶ್ ಮೇಲಿದೆ. ಈ ಪ್ರಕರಣದಲ್ಲಿ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ. ಹಣದ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ) ಕೂಡ ಸುಕೇಶ್ ವಿರುದ್ಧ ತನಿಖೆ ನಡೆಸುತ್ತಿದೆ.

ಆರೋಪಿಯು ಸರ್ಕಾರದ ವಿವಿಧ ಸಂಸ್ಥೆಗಳಿಗೆ ಬಾಕಿ ಇರಿಸಿಕೊಂಡಿರುವ ತೆರಿಗೆ ಮತ್ತು ಶುಲ್ಕಗಳನ್ನು ವಸೂಲಿ ಮಾಡುವುದಕ್ಕಾಗಿ ಆದಾಯ ತೆರಿಗೆ ಇಲಾಖೆಯು ಆತನ ಹಲವು ಸ್ವತ್ತುಗಳನ್ನು ಜಪ್ತಿ ಮಾಡಿತ್ತು. ಅವುಗಳಲ್ಲಿ ಸೇರಿರುವ 12 ಕಾರುಗಳನ್ನು ಹರಾಜು ಮೂಲಕ ಮಾರಾಟ ಮಾಡಲು ಬಿಡ್ ಆಹ್ವಾನಿಸಿದೆ.



ಆದಾಯ ತೆರಿಗೆ ಇಲಾಖೆ ವಶದಲ್ಲಿರುವ ಕಾರುಗಳು

ಬಿಎಂಡಬ್ಲ್ಯು–5, ರೇಂಜ್ ರೋವರ್, ಜಾಗ್ವಾರ್ ಎಕ್ಸ್‌ಕೆಆರ್ ಕೂಪೆ, ಪೋರ್ಷೆ, ಬೆಂಟ್ಲಿ, ರೋಲ್ಸ್ ರಾಯ್ಸ್, ಲ್ಯಾಂಬೋರ್ಗಿನಿ, ಡುಕಾಟಿ ಡಿಯಾವೆಲ್, ಟೊಯೊಟಾ ಪ್ರಾಡೊ, ಫಾರ್ಚೂನರ್, ಇನ್ನೊವಾ, ನಿಸ್ಸಾನ್ ಟಿಯಾನ ಕಾರುಗಳು ಹರಾಜಿಗಿಟ್ಟ ವಾಹನಗಳಲ್ಲಿ ಸೇರಿವೆ. ನಿಸಾನ್ ಟಿಯಾನ ಕಾರಿಗೆ ಕನಿಷ್ಠ ₹ 2.03 ಲಕ್ಷ ದರ ನಿಗದಿಪಡಿಸಿದ್ದರೆ, ರೋಲ್ಸ್ ರಾಯ್ಸ್‌ಗೆ ₹ 1.74 ಕೋಟಿ ಕನಿಷ್ಠ ದರ ನಿಗದಿ ಮಾಡಲಾಗಿದೆ.

₹308 ಕೋಟಿ ಬಾಕಿ: 'ಸುಕೇಶ್ ಚಂದ್ರಶೇಖರ್ 2012ರಿಂದ 2018ರವರೆಗಿನ ಅವಧಿಗೆ ಸಂಬಂಧಿಸಿದಂತೆ ₹308.48 ಕೋಟಿ ಬಾಕಿ ಇರಿಸಿಕೊಂಡಿದ್ದ. ಈ ಮೊತ್ತವನ್ನು ವಸೂಲಿ ಮಾಡುವುದಕ್ಕಾಗಿ ಆತನ ಕಾರುಗಳನ್ನು ಹರಾಜು ಮಾಡಲಾಗುತ್ತಿದೆ. ತಮಿಳುನಾಡು, ಕೇರಳ ಸೇರಿದಂತೆ ಹಲವೆಡೆ ವಶಪಡಿಸಿಕೊಂಡ ವಾಹನಗಳನ್ನು ಬೆಂಗಳೂರಿಗೆ ತಂದು, ಆದಾಯ ತೆರಿಗೆ ಕಚೇರಿಯಲ್ಲಿ ಇರಿಸಲಾಗಿದೆ. ಎಲ್ಲ ವಾಹನಗಳೂ ಸುಸ್ಥಿತಿಯಲ್ಲಿವೆ' ಎಂದು ಆದಾಯ ತೆರಿಗೆ ಇಲಾಖೆ ಮೂಲಗಳು ತಿಳಿಸಿವೆ.

ಪರಿಶೀಲನೆಗೆ ಅವಕಾಶ

ವಾಹನಗಳ ಸ್ಥಿತಿ ಕುರಿತು ಆಸಕ್ತರು ಖುದ್ದು ಪರಿಶೀಲನೆ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಬಿಡ್ ಸಲ್ಲಿಸಲು ಆಸಕ್ತರಾಗಿರುವ ಹಲವರು ಬುಧವಾರ ಕಚೇರಿಗೆ ಭೇಟಿ ನೀಡಿ ವಾಹನಗಳನ್ನು ವೀಕ್ಷಿಸಿದ್ದಾರೆ. ಇನ್ನೂ ಎರಡು ದಿನಗಳ ಕಾಲ ವಾಹನಗಳ ವೀಕ್ಷಣೆ, ಪರಿಶೀಲನೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಆದಾಯ ತೆರಿಗೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಜಾತಿಗಣತಿ ಮೂಲ ವರದಿ ನಾಪತ್ತೆ

ಒಂದನೇ ಪುಟದಿಂದ...

ಪೆಟ್ಟಿಗೆಗಳಿಂದಲೇ ನಾಪತ್ತೆ: ಕಾಂತರಾಜ ನೇತೃತ್ವದ ಆಯೋಗ ಸಿದ್ಧಪಡಿಸಿ, ಆಯೋಗದ ಕಚೇರಿಯಲ್ಲಿ ನಾಲ್ಕು ಮುಚ್ಚಿದ ಪೆಟ್ಟಿಗೆಗಳಲ್ಲಿ ಭದ್ರವಾಗಿ ಇಟ್ಟಿದ್ದ ಮುಖ್ಯ ವರದಿಯ ಮೂಲ (ಹಸ್ತ) ಪ್ರತಿ ನಾಪತ್ತೆಯಾಗಿರುವುದು ಮತ್ತು ಲಭ್ಯವಿರುವ ಆ ಮೂಲಪ್ರತಿಯ ಮುದ್ರಿತ ಅಥವಾ ನಕಲು ಪ್ರತಿಯಲ್ಲಿ (ಜೆರಾಕ್ಸ್) ಕಾಂತರಾಜ ಮತ್ತು ಎಲ್ಲ ಸದಸ್ಯರ ಸಹಿಗಳು ಇವೆ. ಆದರೆ, ಅಂದಿನ ಸದಸ್ಯ ಕಾರ್ಯದರ್ಶಿ ಎನ್.ವಿ. ಪ್ರಸಾದ್ ಅವರ ಹೆಸರಷ್ಟೇ ನಮೂದಿಸಲಾಗಿದ್ದು, ಸಹಿ ಇಲ್ಲದಿರುವುದು ಬಹಿರಂಗವಾಗಿದೆ.

ಆಯೋಗದ ಹಾಲಿ ಅಧ್ಯಕ್ಷ ಜಯಪ್ರಕಾಶ ಹೆಗ್ಡೆ ಹಾಗೂ ಸದಸ್ಯರು ಮತ್ತು ಸದಸ್ಯ ಕಾರ್ಯದರ್ಶಿ ಕೆ.ಎ. ದಯಾನಂದ ಅವರು 2021ರ ಆಗಸ್ಟ್ 26ರಂದು ಮುಚ್ಚಿದ ಪೆಟ್ಟಿಗೆಗಳನ್ನು ತೆರೆದಾಗ, ಅಂಕಿಅಂಶಗಳನ್ನು ಒಳಗೊಂಡ ಮುದ್ರಿತ ಪುಸ್ತಕಗಳು, ಮುಖ್ಯ ವರದಿಯ ಮುದ್ರಿತ ಪ್ರತಿ ಮತ್ತು ಎರಡು ಸಿ.ಡಿಗಳು ಇದ್ದುವು.

2021ರ ಅ. 5ರಂದೇ ಸರ್ಕಾರಕ್ಕೆ (ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ) ಪತ್ರ ಬರೆದಿದ್ದ ಜಯಪ್ರಕಾಶ ಹೆಗ್ಡೆ , 'ಮುಖ್ಯ ವರದಿಯ ಮೂಲ ಅಥವಾ ಹಸ್ತಪ್ರತಿ ಮುಚ್ಚಿದ ಪೆಟ್ಟಿಗೆಯಲ್ಲಿ ಲಭ್ಯ ಇಲ್ಲ. ಅಲ್ಲದೆ, ಮುದ್ರಿತ ಮುಖ್ಯ ವರದಿಯ ಪ್ರತಿಯಲ್ಲಿ ಸದಸ್ಯ ಕಾರ್ಯದರ್ಶಿಯ ಸಹಿಯೂ ಇಲ್ಲ. ಹೀಗಾಗಿ, ಹಸ್ತಪ್ರತಿಯನ್ನು ತಕ್ಷಣ ಆಯೋಗದ ಕಚೇರಿಗೆ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ಮುಂದೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಯಾವ ರೀತಿ ಕ್ರಮ ಕೈಗೊಳ್ಳಬೇಕು' ಎಂದು ಸ್ಪಷ್ಟನೆ ಕೋರಿದ್ದರು.

ಆಯೋಗದ ಸಭೆಯಲ್ಲಿ ನಿರ್ಣಯಿಸಿದಂತೆ, ಹಾಲಿ ಸದಸ್ಯ ಕಾರ್ಯದರ್ಶಿ ಕೆ.ಎ. ದಯಾನಂದ ಅವರು ಹಿಂದಿನ ಸದಸ್ಯ ಕಾರ್ಯದರ್ಶಿ ಎನ್.ವಿ. ಪ್ರಸಾದ್ (ಹಾಲಿ ಸಾರಿಗೆ ಇಲಾಖೆಯ ಕಾರ್ಯದರ್ಶಿ) ಅವರಿಗೆ 2022ರ ಮಾರ್ಚ್ 5ರಂದು ಪತ್ರ ಬರೆದು,' ಮುಖ್ಯ ವರದಿಯ ಮೂಲ ಹಸ್ತಪ್ರತಿ ಕಚೇರಿಯಲ್ಲಿ ಲಭ್ಯ ಇಲ್ಲ. ವರದಿಯ ಝೆರಾಕ್ಸ್ ಪ್ರತಿಯ ಕುರಿತು ಕಚೇರಿಯಿಂದ ಯಾವುದೇ ಪತ್ರ ವ್ಯವಹಾರವಾಗಲಿ ಹಣ ಪಾವತಿಯಾಗಲಿ ಮಾಡಿಲ್ಲ. ಹೀಗಾಗಿ, ಈ ಬಗ್ಗೆ ಹೆಚ್ಚಿನ ವಿವರಗಳ ಸಹಿತ ತಮ್ಮ ಅಭಿಪ್ರಾಯವನ್ನು ಆಯೋಗಕ್ಕೆ ನೀಡಬೇಕು' ಎಂದು ಕೋರಿದ್ದರು.

ಸಿಗದ ಪ್ರತಿಕ್ರಿಯೆ: ಈ ಪತ್ರಕ್ಕೆ ಎನ್.ವಿ. ಪ್ರಸಾದ್ ಸ್ಪಂದಿಸದ ಕಾರಣ, ಅದೇ ವರ್ಷ ಆಗಸ್ಟ್ 12ರಂದು ಮತ್ತೊಂದು ಪತ್ರ ಬರೆದ ದಯಾನಂದ, 'ಒಂದು ವಾರದಲ್ಲಿ ತಮ್ಮ ಅಭಿಪ್ರಾಯ ನೀಡದೇ ಇದ್ದರೆ, 'ಆಯೋಗದ ಮುಖ್ಯ ವರದಿಯ ತಯಾರಿಕೆಯ ವಿವರ ಮತ್ತು ಮುದ್ರಿತ ಮುಖ್ಯ ವರದಿಯಲ್ಲಿ ಸಹಿ ಇಲ್ಲದೇ ಇರುವುದು ತಮ್ಮ ಗಮನಕ್ಕೆ ಬಂದಿರುತ್ತದೆ. ಆದಾಗ್ಯೂ ತಮಗೆ ಸಹಮತವಿಲ್ಲದೆ ಸಹಿ ಮಾಡಿರುವುದಿಲ್ಲ' ಎಂದು ಪರಿಗಣಿಸಲಾಗುವುದು ಎಂದು ತಿಳಿಸಲು ಆಯೋಗದ ಅಧ್ಯಕ್ಷರಿಂದ ನಿರ್ದೇಶಿಸಲ್ಪಟ್ಟಿದ್ದೇನೆ' ಎಂದು ಉಲ್ಲೇಖಿಸಿದ್ದರು. ಆ ಪತ್ರಕ್ಕೂ ಪ್ರಸಾದ್ ಅವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ ಎಂದು ಆಯೋಗದ ಮೂಲಗಳು ತಿಳಿಸಿವೆ. ಆ ಬಳಿಕ, ಕಾಂತರಾಜ ನೇತೃತ್ವದ ಆಯೋಗ ನಡೆಸಿದ್ದ ಸಮೀಕ್ಷೆಯ ಅಂಕಿಅಂಶಗಳನ್ನು (ದತ್ತಾಂಶ) ಆಧರಿಸಿ, ತಜ್ಞರ ನೆರವು ಪಡೆದು ವರದಿ ತಯಾರಿಸುವಂತೆ ಹಾಲಿ ಆಯೋಗಕ್ಕೆ ರಾಜ್ಯ ಸರ್ಕಾರ ನಿರ್ದೇಶನ ನೀಡಿತ್ತು ಎಂದು ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಆಯೋಗದ ಅವಧಿ 3 ತಿಂಗಳು ವಿಸ್ತರಣೆ?

ಹಾಲಿ ಆಯೋಗದ ಅಧಿಕಾರದ ಅವಧಿ ಇದೇ 26 ರಂದು ಮುಕ್ತಾಯವಾಗುತ್ತಿದೆ. ಹೀಗಾಗಿ, ಮುಖ್ಯಮಂತ್ರಿಗೆ ಬುಧವಾರ (ನ.22) ಪತ್ರ ಬರೆದಿರುವ ಜಯಪ್ರಕಾಶ ಹೆಗ್ಡೆ, 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ತಯಾರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ವರದಿಯನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಸಲ್ಲಿಸಲು ಕಾಲಾವಕಾಶ ಬೇಕಾಗಿದೆ. ಹೀಗಾಗಿ ಹಾಲಿ ಆಯೋಗವನ್ನು ಮುಂದುವರಿಸಬೇಕು' ಎಂದು ಮನವಿ ಮಾಡಿದ್ದಾರೆ. ಆಯೋಗದ ಅವಧಿಯನ್ನು ಮೂರು ತಿಂಗಳು ವಿಸ್ತರಿಸುವ ಸಾಧ್ಯತೆಯಿದ್ದು, ಗುರುವಾರ (ನ.23) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ತೆಗೆದು ಕೊಳ್ಳಬಹುದು ಎಂದು ಸರ್ಕಾರದ ಮೂಲಗಳು ತಿಳಿಸಿವೆ.

'ಮೂಲಪ್ರತಿ ಎನ್ನುವುದು ವರ್ಕ್‌ಶೀಟ್ ಮಾತ್ರ'

'ಕಾಂತರಾಜ ಆಯೋಗ ಸಿದ್ಧಪಡಿಸಿದ್ದ ವರದಿಯ ಮೂಲ ಪ್ರತಿ ಇಲ್ಲ. ಅದರ ಮುದ್ರಿತ ಪ್ರತಿ ನಮ್ಮ ಬಳಿಯಿದೆ. ಈ ಬಗ್ಗೆ ಈ ಹಿಂದಿನ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಆದರೆ, ನಮಗೆ ಉತ್ತರ ಬಂದಿಲ್ಲ. ಈ ಸರ್ಕಾರ (ಕಾಂಗ್ರೆಸ್) ಬಂದ ಬಳಿಕ ಮತ್ತೆ ಪತ್ರ ಬರೆದಿದ್ದೆವು. ಇರುವ ದತ್ತಾಂಶಗಳ ಮೇಲೆ ವರದಿ ಕೊಡುವಂತೆ ಸರ್ಕಾರ ಹೇಳಿದೆ' ಎಂದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಮೂಲ ಪ್ರತಿ ಎನ್ನುವುದು ವರ್ಕ್ ಶೀಟ್ ಮಾತ್ರ. ಆ ವರ್ಕ್ ಶೀಟ್ ಇಲ್ಲದೇ ಇರುವುದು ವಿಷಯವೇ ಅಲ್ಲ. ಸಂಗ್ರಹಿಸಿರುವ ದತ್ತಾಂಶಗಳ ಡಿಜಿಟಲ್ ಪ್ರತಿ ಮತ್ತು ಮುದ್ರಿತ ಪ್ರತಿ ನಮ್ಮ ಬಳಿ ಇವೆ. ಪ್ರತಿ ಜಿಲ್ಲಾಧಿಕಾರಿಗಳ ಬಳಿಯೂ ಆ ದತ್ತಾಂಶಗಳು ಇವೆ. ದತ್ತಾಂಶ ಕಳೆದುಹೋಗಿದೆ ಎಂದು ಯಾರೂ ತಪ್ಪು ತಿಳುವಳಿಕೆ ಮೂಡಿಸಬಾರದು. ದತ್ತಾಂಶಗಳ ಮೇಲೆ ನಾವು ವರದಿ ತಯಾರಿಸುತ್ತಿದ್ದೇವೆ. ಆ ಪ್ರಕ್ರಿಯೆ ಈಗಲೂ ನಡೆಯುತ್ತಿದೆ. ಡಿಸೆಂಬರ್ ಒಳಗೆ ವರದಿಯನ್ನು ಮುಖ್ಯಮಂತ್ರಿಗೆ ಕೊಡುತ್ತೇವೆ' ಎಂದರು.

'ಆಯೋಗದ ಅವಧಿ ಮುಂದುವರಿಯಲಿದೆಯೇ ಎಂಬ ಪ್ರಶ್ನೆಗೆ, 'ಅದು ಮುಖ್ಯಮಂತ್ರಿ ಮತ್ತು ನಮ್ಮ ನಡುವೆ ನಡೆದಿರುವ ವಿಚಾರ. ಅದನ್ನು ನಾನು ಬಹಿರಂಗಪಡಿಸುವುದಿಲ್ಲ' ಎಂದರು.

ಸಂಪುಟ ಉಪಸಮಿತಿ

ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಿದ್ಧಪಡಿಸುತ್ತಿರುವ ರಾಜ್ಯದ ಎಲ್ಲ ಕುಟುಂಬಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನಗಣತಿ) ವರದಿಯ ಅಧ್ಯಯನಕ್ಕಾಗಿ ಸಂಪುಟ ಉಪ ಸಮಿತಿ ರಚಿಸುವ ಕುರಿತು ಸರ್ಕಾರ ಚಿಂತನೆ ನಡೆಸಿದೆ.

ಜಾತಿ ಜನಗಣತಿ ವರದಿಯನ್ನು ಸರ್ಕಾರ ಸ್ವೀಕರಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಾಗಲೇ ಪ್ರಕಟಿಸಿದ್ದಾರೆ. ವರದಿಯನ್ನು ಸ್ವೀಕರಿಸಿದ ಬಳಿಕ ಸಂಪುಟ ಉಪ ಸಮಿತಿಯಿಂದ ಅಧ್ಯಯನ ವರದಿ ಪಡೆದು, ಅನುಷ್ಠಾನಕ್ಕೆ ತರುವ ಬಗ್ಗೆ ಚರ್ಚೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಆಯೋಗದ ವರದಿಯ ಆಧಾರದಲ್ಲಿ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಮತ್ತು ರಾಜಕೀಯವಾಗಿ ಪ್ರಬಲವಾಗಿರುವ ಸಮುದಾಯಗಳು ಹಾಗೂ ದುರ್ಬಲವಾಗಿರುವ ಸಮುದಾಯಗಳನ್ನು ಗುರುತಿಸುವ ಹೊಣೆಯನ್ನು ಸಂಪುಟ ಉಪ ಸಮಿತಿಗೆ ವಹಿಸುವ ಸಾಧ್ಯತೆ ಇದೆ. ಎಲ್ಲ ಸಮುದಾಯಗಳಲ್ಲಿರುವ ಪ್ರಬಲರು ಮತ್ತು ದುರ್ಬಲರಿಗೆ ಪ್ರತ್ಯೇಕವಾದ ಯೋಜನೆಗಳನ್ನು ರೂಪಿಸುವ ಕುರಿತೂ ಶಿಫಾರಸು ನೀಡುವಂತೆ ಉಪ ಸಮಿತಿಯನ್ನು ಕೋರುವ ಚಿಂತನೆ ನಡೆದಿದೆ ಎಂದು ಮೂಲಗಳು ಹೇಳಿವೆ.

ನಾಪತ್ತೆ ಹಿಂದೆ ಷಡ್ಯಂತ್ರ: ಯತ್ನಾಳ ಕಿಡಿ

'ರಾಜ್ಯ ಸರ್ಕಾರ 2015ರಲ್ಲಿ ₹180 ಕೋಟಿ ಖರ್ಚು ಮಾಡಿ ತಯಾರಿಸಿದ ಸಮೀಕ್ಷೆಯ ಮೂಲಪ್ರತಿಯೇ ಕಳೆದುಹೋಗಿರುವುದು ಮತ್ತು ಲಭ್ಯವಿರುವ ವರದಿಯಲ್ಲಿ ಸದಸ್ಯ ಕಾರ್ಯದರ್ಶಿಯ ಸಹಿ ಇಲ್ಲದೆ ಇರುವುದು ಆಯೋಗದ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಹಿಡಿದ ಕೈಗನ್ನಡಿ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆಯೋಗದ ಅಧ್ಯಕ್ಷ ಜಯಪ್ರಕಾಶ ಹೆಗ್ಡೆ ಅವರಿಗೆ ಬರೆದ ಪತ್ರವನ್ನು ತಮ್ಮ 'X' (ಟ್ವಿಟರ್) ಖಾತೆಯಲ್ಲಿ ಅವರು ಹಂಚಿಕೊಂಡಿದ್ದಾರೆ. ಪತ್ರದಲ್ಲಿ ಅವರು, 'ಮುಖ್ಯ ವರದಿಯ ಮೂಲಪ್ರತಿಯು ಕಳೆದು ಹೋಗಿರುವುದನ್ನು ಸರ್ಕಾರದ ಕಾರ್ಯದರ್ಶಿಗೆ ಪತ್ರ ಬರೆದು ತಿಳಿಸಿದ್ದೀರಿ. ವರದಿಯೇ ಕಳೆದು ಹೋಗಿರುವುದು ಪೂರ್ವನಿಯೋಜಿತ ಷಡ್ಯಂತ್ರವೆಂದು ಮೇಲ್ನೋಟಕ್ಕೆ ಕಾಣಿಸುತ್ತದೆ. ಮೂಲ ಪ್ರತಿಯೇ ಕಳೆದು ಹೋಗಿದ್ದರೂ ತಾವು ಅಥವಾ ತಮ್ಮ ಆಯೋಗದ ಅಧಿಕಾರಿಗಳು ಈವರೆಗೂ ದೂರು ನೀಡದಿರುವುದು ಆಚ್ಚರಿ' ಎಂದಿದ್ದಾರೆ.

'ಮೂಲಪ್ರತಿ ಕಳೆದು ಹೋಗಿರುವುದರ ಕುರಿತು ನಿಮ್ಮ ಹಿಂದಿನ ಆಯೋಗದ ಅಧ್ಯಕ್ಷರ ಆಪ್ತ ಕಾರ್ಯದರ್ಶಿಯವರಿಗೆ ನೋಟಿಸ್ ನೀಡಿ ನಂತರ ತನಿಖೆಯನ್ನೇ ಮುಂದುವರಿಸಲಿಲ್ಲ. ಹಿಂದಿನ ಅಧ್ಯಕ್ಷರನ್ನು ಪ್ರಶ್ನೆ ಮಾಡುವ ಕೆಲಸವನ್ನೂ ಮಾಡಲಿಲ್ಲ. ರಾಜಕೀಯ ಒತ್ತಡಗಳಿಗೆ ಮಣಿದು ಸದಸ್ಯ ಕಾರ್ಯದರ್ಶಿಯ ಸಹಿ ಇಲ್ಲದ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಲು ಮುಂದಾಗಿರುವುದು ಈ ವರದಿಯ ನೈಜತೆಯನ್ನೇ ಪ್ರಶ್ನೆ ಮಾಡುವಂಥದ್ದು. ಮೂಲ ಪ್ರತಿ ಕಳೆದುಹೋಗಿರುವ ಕುರಿತು ಸರ್ಕಾರದ ಜೊತೆ ತಾವು ನಡೆಸಿರುವ ಪತ್ರ ವ್ಯವಹಾರದ ಸಂಪೂರ್ಣ ಮಾಹಿತಿ ನೀಡಬೇಕು. ಅಲ್ಲದೆ, ಈ ನಿರ್ಲಕ್ಷ್ಯಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕ್ರಿನಿನಲ್ ಮೊಕದ್ದಮೆ ದಾಖಲಿಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಅಳವಂಡಿ: ವಿದ್ಯಾರ್ಥಿನಿಯರು, ಶಿಕ್ಷಕರ ಪರದಾಟ

ಸರ್ಕಾರಿ ಪ್ರೌಢಶಾಲೆಯಲ್ಲಿ ಶೌಚಕ್ಕೆ ಬಯಲೇ ಗತಿ

• ಜುನಸಾಬ ವಡ್ಡಟ್ಟಿ

ಅಳವಂಡಿ (ಕೊಪ್ಪಳ ಜಿಲ್ಲೆ): ಇಲ್ಲಿನ ಮುದುಕನಗೌಡ ಗಾಳಿ ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಶೌಚಾಲಯ ಸೌಲಭ್ಯವಿಲ್ಲದ ಕಾರಣ ವಿದ್ಯಾರ್ಥಿನಿಯರು ಹಾಗೂ ಶಿಕ್ಷಕರು ಶೌಚಕ್ಕೆ ಬಯಲನ್ನೇ ಆಶ್ರಯಿಸುವಂತಾಗಿದೆ.

ಈ ಪ್ರೌಢಶಾಲೆಯಲ್ಲಿ 8ನೇ ತರಗತಿಯಿಂದ 10ನೇ ತರಗತಿವರೆಗೆ 305 ವಿದ್ಯಾರ್ಥಿನಿಯರು ಓದುತ್ತಿದ್ದಾರೆ. ಹತ್ತು ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಶೌಚಾಲಯ ಇಲ್ಲದಿರುವುದರಿಂದ ಬಯಲು ಹಾಗೂ ಗಿಡಗಂಟಿಗಳ ಮರೆಯೇ ಶೌಚದ ತಾಣವಾಗಿದೆ.

ಈ ಹಿಂದೆ ನಿರ್ಮಿಸಿದ ಶಾಲೆಯ ಶೌಚಾಲಯಗಳು ಶಿಥಿಲಗೊಂಡಿವೆ. ಗೋಡೆಗಳು ಬಿರುಕು ಬಿಟ್ಟು ಬೀಳುವ ಸ್ಥಿತಿಯಲ್ಲಿವೆ. ನಂತರ, ತಾಲ್ಲೂಕು ಪಂಚಾಯಿತಿ ವತಿಯಿಂದ ಶೌಚಾಲಯ ನಿರ್ಮಾಣ ಕಾರ್ಯ ಕೈಗೆತ್ತಿಗೊಳ್ಳಲಾಗಿತ್ತು. ಕಾಮಗಾರಿ ಅಪೂರ್ಣಗೊಂಡಿದ್ದು, ಶಿಕ್ಷಕರು ಹಾಗೂ ವಿದ್ಯಾರ್ಥಿನಿಯರಿಗೆ ಸದ್ಯಕ್ಕೆ ಶೌಚಾಲಯ ಇಲ್ಲದಂತಾಗಿದೆ.



ಬಾಲಕಿಯರ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಥಿಲಗೊಂಡ ಶೌಚಾಲಯ

ಶಾಲೆಗೆ ಶೌಚಾಲಯ ನಿರ್ಮಿಸಲು ಸಂಬಂಧಪಟ್ಟವರು ಮುಂದಾಗಬೇಕು ಎಂದು ವಿದ್ಯಾರ್ಥಿನಿಯರ ಪಾಲಕರು ಒತ್ತಾಯಿಸಿದ್ದಾರೆ.

'ನರೇಗಾ ಯೋಜನೆಯಡಿ ಶೌಚಾಲಯ ನಿರ್ಮಾಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ವಾರದೊಳಗೆ ಶೌಚಾಲಯ ನಿರ್ಮಾಣ ಕಾಮಗಾರಿ ಪ್ರಾರಂಭಿಸಲಾಗುವುದು' ಎಂದು ಅಳವಂಡಿ ಗ್ರಾಮ ಪಂಚಾಯಿತಿ ಪ್ರಭಾರ ಪಿಡಿಒ ಕೊಟ್ರಪ್ಪ ತಿಳಿಸಿದರು.

'ಶೌಚಾಲಯ ನಿರ್ಮಿಸಿ ಪುಣ್ಯ ಕಟ್ಕೊಳ್ಳಿ'

'ನಮ್ಮ ಶಾಲೆಯಲ್ಲಿ ಶೌಚಾಲಯ ಇಲ್ಲದಿರುವುದರಿಂದ ಬಯಲನ್ನೇ ಅವಲಂಬಿಸಿದ್ದೇವೆ. ಬಯಲಿನಲ್ಲಿ ಬಹಳಷ್ಟು ಮುಳ್ಳು ಕಂಟಿಗಳು ಬೆಳೆದು ನಿಂತಿವೆ. ಇದರಿಂದ ಭಯದ ವಾತಾವರಣ ನಿರ್ಮಾಣವಾಗಿದೆ. ಕೂಡಲೇ ಶಾಲೆಯಲ್ಲಿ ಶೌಚಾಲಯ ನಿರ್ಮಿಸಿ' ಎಂದು ವಿದ್ಯಾರ್ಥಿನಿಯರು ಒತ್ತಾಯಿಸಿದ್ದಾರೆ.

ಶೌಚಾಲಯ ನಿರ್ಮಿಸುವಂತೆ ಹಲವಾರು ಬಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇವೆ. ನಿರ್ಮಾಣಕ್ಕೆ ಕೂಡಲೇ ಕ್ರಮ ಕೈಗೊಳ್ಳಬೇಕು

ಸುರೇಂದ್ರಗೌಡ ಪಾಟೀಲ, ಮುಖ್ಯ ಶಿಕ್ಷಕ

ಶಾಲೆಯ ನಿರ್ವಹಣೆಗೆ ಇತ್ತೀಚೆಗೆ ಹಣ ನೀಡಲಾಗಿದೆ. ಈ ಹಣದಲ್ಲಿ ಶೌಚಾಲಯ ದುರಸ್ತಿ ಮಾಡಿಕೊಳ್ಳಬೇಕು. ಪ್ರತಿಸಲವೂ ಹೊಸದಾಗಿ ನಿರ್ಮಿಸಿಕೊಡಲು ಹೇಗೆ ಸಾಧ್ಯ?

ಶ್ರೀಶೈಲ ಬಿರಾದಾರ, ಡಿಡಿಪಿಐ, ಕೊಪ್ಪಳ

ಸ್ಪರ್ಧಾ ವಾಣಿ



ಪಿಎಂ ವಿಶ್ವಕರ್ಮ ಯೋಜನೆ

ಮಂಜುನಾಥ್ ಭದ್ರಶೆಟ್ಟಿ

ಪಿಎಂ ವಿಶ್ವಕರ್ಮ ಯೋಜನೆಯು ದೇಶದ ಕೋಟ್ಯಂತರ ಕುಶಲಕರ್ಮಿಗಳ ಮೊಗದಲ್ಲಿ ಮಂದಹಾಸ ಮೂಡಿಸಿದೆ. ಇದರ ಸಂಪೂರ್ಣ ವಿವರಗಳನ್ನು ಇಲ್ಲಿ ತಿಳಿಯೋಣ. ಮುಂಬರಲಿರುವ ಅನೇಕ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಈ ಮಾಹಿತಿ ಸಹಾಯಕವಾಗಲಿದೆ.

ಕರಕುಶಲಿಗಳ ಸಮುದಾಯ ಒಂದು ಬಹುದೊಡ್ಡ ಅಸಂಘಟಿತ ಸಮುದಾಯ. ಇದೀಗ ಕೇಂದ್ರ ಸರ್ಕಾರವು, ಈ ಸಮುದಾಯದ ಅಭಿವೃದ್ಧಿಗೆ 'ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ-2023' ಎಂಬ ಪ್ರಮುಖ ಯೋಜನೆ ಜಾರಿಗೊಳಿಸಿದೆ.

ಕೇಂದ್ರ ಸರ್ಕಾರದ 2023-24ನೇ ಸಾಲಿನ ಬಜೆಟ್‌ನಲ್ಲಿ 'ಪ್ರಧಾನ ಮಂತ್ರಿ ವಿಶ್ವಕರ್ಮ ಯೋಜನೆ' ಅಥವಾ 'ಪಿಎಂ ವಿಶ್ವಕರ್ಮ ಯೋಜನೆಯನ್ನು' ಪ್ರಸ್ತಾಪಿಸಲಾಗಿತ್ತು. ಅದರಂತೆ ಆಗಸ್ಟ್ 15ರಂದು ಕೆಂಪು ಕೋಟೆಯ ಮೇಲೆ ನರೇಂದ್ರ ಮೋದಿ ಅವರು ಪಿಎಂ ವಿಶ್ವಕರ್ಮ ಯೋಜನೆ ಘೋಷಣೆ ಮಾಡಿದರು. ಘೋಷಣೆಯ ಭರವಸೆಯಂತೆ ಕಳೆದ ಸೆಪ್ಟೆಂಬರ್ 17ರಂದು ವಿಶ್ವಕರ್ಮ ಜಯಂತಿಯಂದು ಪಿಎಂ ವಿಶ್ವಕರ್ಮ ಯೋಜನೆಯನ್ನು ಜಾರಿಗೊಳಿಸಿದರು.

ಏನಿದು ಯೋಜನೆ?: ದೇಶದ ಸಾಂಪ್ರದಾಯಿಕ ಕಲೆಗಳಿಗೆ ಉತ್ತೇಜನ ನೀಡುವ ಜೊತೆಗೆ, ಕುಶಲಕರ್ಮಿಗಳ ಅಭ್ಯುದಯಕ್ಕೆ ನೆರವು ಕಲ್ಪಿಸಲು 13 ಸಾವಿರ ಕೋಟಿ ರೂಪಾಯಿ ಮೊತ್ತದ ಯೋಜನೆ ಇದಾಗಿದೆ.

ದೇಶದಾದ್ಯಂತ ಇರುವ ಗ್ರಾಮೀಣ ಹಾಗೂ ನಗರ ಪ್ರದೇಶದ 18 ವರ್ಗದ ಕುಶಲಕರ್ಮಿಗಳಿಗೆ ಈ ಯೋಜನೆಯಡಿ ಕೌಶಲ ಅಭಿವೃದ್ಧಿ ತರಬೇತಿ, ತಾಂತ್ರಿಕ ಜ್ಞಾನ, ಹೊಸ ಉಪಕರಣ ಹಾಗೂ ಬ್ಯಾಂಕ್ ಖಾತರಿ ರಹಿತ ಸಾಲ ಸೌಲಭ್ಯ ದೊರೆಯಲಿದೆ. ಅವರು ತಯಾರಿಸುವ ಉತ್ಪನ್ನಗಳಿಗೆ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆ ಸೌಲಭ್ಯ ಒದಗಿಸುವುದು ಯೋಜನೆಯ ಮೂಲ ಗುರಿಯಾಗಿದೆ.

ಕೇಂದ್ರ ಸರ್ಕಾರವೇ ಸಂಪೂರ್ಣವಾಗಿ ಈ ಯೋಜನೆಯ ಅನುದಾನವನ್ನು ಭರಿಸಲಿದೆ. ಹಿಂದುಳಿದ ವರ್ಗಗಳಿಗೆ ಸೇರಿದ ಒಟ್ಟು 30 ಲಕ್ಷಕ್ಕೂ ಅಧಿಕ ಕುಟುಂಬಗಳಿಗೆ ಇದರ ಪ್ರಯೋಜನ ಸಿಗಲಿದೆ ಎನ್ನಲಾಗಿದೆ.

ಕೇಂದ್ರ ಸರ್ಕಾರದ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಉದ್ಯಮಗಳ ಸಚಿವಾಲಯವು ಈ ಯೋಜನೆಯ ನೋಡಲ್ ಏಜೆನ್ಸಿಯಾಗಿರುತ್ತದೆ. ಮುಖ್ಯವಾಗಿ ವಾಣಿಜ್ಯ ಬ್ಯಾಂಕ್‌ಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು, ಸಣ್ಣ ಪ್ರಮಾಣದ ಬ್ಯಾಂಕ್‌ಗಳು, ಸಹಕಾರ ಬ್ಯಾಂಕ್‌ಗಳು, ಬ್ಯಾಂಕೇತರ ಹಣಕಾಸು ಕಂಪನಿಗಳು, ಸಣ್ಣ ಹಣಕಾಸು ಸಂಸ್ಥೆಗಳಿಂದ ವಿಶ್ವಕರ್ಮ ಯೋಜನೆ ಫಲಾನುಭವಿಗಳಿಗೆ ಸಾಲ ಸೌಲಭ್ಯ ಸಿಗಲಿದೆ.

ಫಲಾನುಭವಿಗಳಿಗೆ ಶೇ 5ರಷ್ಟು ಬಡ್ಡಿದರ ನಿಗದಿಪಡಿಸಲಾಗಿದೆ. ಕೇಂದ್ರ ಸರ್ಕಾರವು ಸಂಬಂಧಪಟ್ಟ ಬ್ಯಾಂಕ್‌ಗಳು ಅಥವಾ ಇತರೆ ಹಣಕಾಸು ಸಂಸ್ಥೆಗಳಿಗೆ ಶೇ 8ರಷ್ಟು ಬಡ್ಡಿ ಸಹಾಯಧನ ನೀಡಲಿದೆ.

ಫಲಾನುಭವಿಗೆ ಟೂಲ್ ಕಿಟ್ ಖರೀದಿಗಾಗಿ ಯೋಜನೆಯಡಿ ₹15 ಸಾವಿರ ಮೌಲ್ಯದ ಇ-ವೋಚರ್ಸ್ ಅಥವಾ ಇ-ರುಪಿ ನೀಡಲಾಗುತ್ತದೆ. ಸರ್ಕಾರದ ಪರವಾಗಿ ಈ ಪ್ರೋತ್ಸಾಹಧನದ ವೋಚರ್ಸ್‌ಗಳನ್ನು ಬ್ಯಾಂಕ್ ಮೂಲಕ ನೀಡಲಾಗುತ್ತದೆ. ಯೋಜನೆಯಡಿ ನೋಂದಣಿಯಾದ ಕುಶಲಕರ್ಮಿಗಳಿಗೆ ಜಿಲ್ಲಾ ಮಟ್ಟದ ಸಮಿತಿಯಿಂದ ಕುಶಲಕರ್ಮಿ ಎಂದು ದೃಢೀಕರಿಸಿದ ನಂತರ 5 ರಿಂದ 7 ದಿನಗಳ ತರಬೇತಿಯನ್ನು ನೀಡಲಾಗುತ್ತದೆ.

ಶೇ 5ರಷ್ಟು ಬಡ್ಡಿದರದ ಅಡಿ ಒಟ್ಟು 3 ಲಕ್ಷ ರೂಪಾಯಿಯ ಖಾತರಿ ರಹಿತ ಬ್ಯಾಂಕ್ ಸಾಲ ದೊರೆಯಲಿದೆ. ಮೊದಲ ಕಂತಿನಲ್ಲಿ ದೊರೆತ 1 ಲಕ್ಷ ರೂಪಾಯಿ ಸಾಲಕ್ಕೆ 18 ತಿಂಗಳ ಮರುಪಾವತಿ ಗಡುವು ನೀಡಲಾಗುತ್ತದೆ. ಎರಡನೇ ಕಂತಿನಲ್ಲಿ ದೊರೆತ 2 ಲಕ್ಷ ರೂಪಾಯಿ ಸಾಲ ಮರುಪಾವತಿಗೆ 30 ತಿಂಗಳ ಗಡುವು ನೀಡಲಾಗುತ್ತದೆ.

ಈ ಯೋಜನೆಗೆ ನೋಂದಣಿ ಹೇಗೆ?

ಫಲಾನುಭವಿಯು ಗ್ರಾಮ ಪಂಚಾಯಿತಿ ಹಾಗೂ ನಗರ ಮಟ್ಟದ ಸಾಮಾನ್ಯ ಸೇವಾ ಕೇಂದ್ರಗಳಿಗೆ ತೆರಳಿ ಬಯೊಮೆಟ್ರಿಕ್ ಆಧಾರಿತ 'ಪಿಎಂ ವಿಶ್ವಕರ್ಮ' ವೆಬ್ ಪೋರ್ಟಲ್ www.pmvishwakarma.gov.in ನಲ್ಲಿ ಹೆಸರು ನೋಂದಣಿ ಮಾಡಿಕೊಳ್ಳಬೇಕು.

ನೋಂದಣಿಯಾದವರಿಗೆ ಪಿಎಂ ವಿಶ್ವಕರ್ಮ ಪ್ರಮಾಣ ಪತ್ರ ಮತ್ತು ಗುರುತಿನ ಚೀಟಿ ಲಭಿಸಲಿದೆ. ನೋಂದಣಿ ದಿನದ ವೇಳೆಗೆ ಫಲಾನುಭವಿಯ ವಯಸ್ಸು 18 ವರ್ಷ ಪೂರ್ಣಗೊಂಡಿರಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸ್ವಉದ್ಯೋಗ ಅಥವಾ ವ್ಯಾಪಾರ ಅಭಿವೃದ್ಧಿಗೆ ಸಾಲ ಸೌಲಭ್ಯ ಪಡೆದವರಿಗೆ ಈ ಯೋಜನೆಯಡಿ ಮತ್ತೆ ಸಾಲ ಸಿಗುವುದಿಲ್ಲ.

ಒಂದು ಕುಟುಂಬದಲ್ಲಿ ಒಬ್ಬ ಸದಸ್ಯರಷ್ಟೇ ಯೋಜನೆಯ ಸೌಲಭ್ಯ ಪಡೆಯಲು ಅರ್ಹರು. ಸರ್ಕಾರಿ ನೌಕರ ಹಾಗೂ ಅವರ ಕುಟುಂಬದ ಸದಸ್ಯರಿಗೆ ಸೌಲಭ್ಯ ಸಿಗುವುದಿಲ್ಲ ಎಂಬುವುದು ಗಮನಿಸಬೇಕಾದ ಸಂಗತಿ. ಮೊದಲ ವರ್ಷ ಐದು ಲಕ್ಷ ಕುಟುಂಬಗಳನ್ನು ಇದು ಒಳಗೊಳ್ಳುತ್ತದೆ. ಮುಂದಿನ ಐದು ವರ್ಷಗಳಲ್ಲಿ 30 ಲಕ್ಷ ಕುಟುಂಬಗಳಿಗೆ ಇದರ ಲಾಭ ಸಿಗಲಿದೆ ಎನ್ನಲಾಗಿದೆ. ❖

ನೋಂದಣಿಗೆ ಅರ್ಹತೆಗಳೇನು?

ಅರ್ಜಿ ಸಲ್ಲಿಸಲು ಬಯಸುವವರು 18 ವೃತ್ತಿಗಳಲ್ಲಿ ಯಾವುದಾದರೂ ಒಂದರಲ್ಲಿ ಸ್ವಯಂ ಉದ್ಯೋಗಿಯಾಗಿದ್ದು, 18 ವರ್ಷ ಮೇಲ್ಪಟ್ಟವರಾಗಿರಬೇಕು. ಒಂದು ಕುಟುಂಬದಲ್ಲಿ ಒಬ್ಬ ಸದಸ್ಯರು ಮಾತ್ರ ನೊಂದಣಿಗೆ ಅರ್ಹರು.

ಕುಟುಂಬದಲ್ಲಿ ಯಾವುದೇ ಸದಸ್ಯರು ಸರ್ಕಾರಿ ಕೆಲಸದಲ್ಲಿರಬಾರದು, ಕಳೆದ 5 ವರ್ಷಗಳಲ್ಲಿ ಪಿಎಂ ಇಜಿಪಿ/ಮುದ್ರಾ ಮತ್ತು ಪಿಎಂ-ಸ್ವನಿಧಿ ಸಾಲಗಳನ್ನು ಪಡೆದಿರಬಾರದು. ಆದರೆ, ಮುದ್ರಾ ಮತ್ತು ಪಿಎಂ-ಸ್ವನಿಧಿ ಯೋಜನೆಗಳಲ್ಲಿ ಸಾಲ ಪಡೆದು ಪೂರ್ಣ ಮರುಪಾವತಿ ಮಾಡಿದ ಕುಶಲಕರ್ಮಿಗಳು ವಿಶ್ವಕರ್ಮ ಯೋಜನೆಯ ಲಾಭ ಪಡೆಯಲು ಅರ್ಹರಾಗಿರುತ್ತಾರೆ.

ಅರ್ಜಿ ಸಲ್ಲಿಕೆ, ಪರಿಶೀಲನೆ ಹಾಗೂ ಏನಾದರೂ ಸಂದೇಹಗಳಿದ್ದರೆ ಪಿಎಂ ವಿಶ್ವಕರ್ಮ ವೆಬ್‌ಸೈಟ್ pmvishwakarma.gov.in ಭೇಟಿ ನೀಡಿ.

ಈ ಯೋಜನೆಯ ವ್ಯಾಪ್ತಿಗೆ ಒಳಪಡುವ 18 ಬಗೆಯ ಕುಶಲಕರ್ಮಿಗಳು

- ಬಡಿಗ ಅಥವಾ ಮರಗೆಲಸದವರು
- ದೋಣಿ ತಯಾರಕರು
- ಸಾಂಪ್ರದಾಯಿಕ ಶಸ್ತ್ರಗಳನ್ನು ತಯಾರಿಸುವವರು
- ಕುಂಬಾರರು
- ಸುತ್ತಿಗೆ ಹಾಗೂ ಇತರ ವಸ್ತುಗಳ ತಯಾರಕರು
- ಬೀಗ ಹಾಗೂ ಕೀಲಿ ತಯಾರಕರು
- ಅಕ್ಕಸಾಲಿಗರು
- ಕಮ್ಮಾರರು
- ಶಿಲ್ಪಿಗಳು ಮತ್ತು ಕಲ್ಲು ಒಡೆಯುವವರು
- ಸಾಂಪ್ರದಾಯಿಕವಾಗಿ ಪಾದರಕ್ಷೆ ತಯಾರಿಸುವವರು
- ಕಲ್ಲು ಕುಟಿಗರು ಅಥವಾ ರಾಜಮೇಸ್ತ್ರಿಗಳು
- ಸಾಂಪ್ರದಾಯಿಕವಾಗಿ ಬುಟ್ಟಿ, ಚಾಪೆ, ಪೊರಕೆ, ತೆಂಗಿನನಾರಿನ ಹಗ್ಗ ತಯಾರಕರು
- ಸಾಂಪ್ರದಾಯಿಕವಾಗಿ ಗೊಂಬೆ ಮತ್ತು ಆಟಿಕೆ ತಯಾರಕರು
- ಕ್ಷೌರಿಕರು
- ಹೂಮಾಲೆ ತಯಾರಕರು
- ಅಗಸರು ಅಥವಾ ಬಟ್ಟೆ ತೊಳೆಯುವವರು
- ದರ್ಜಿಗಳು
- ಮೀನಿನ ಬಲೆ ತಯಾರಕರು

ಬಾಂಗ್ಲಾ ವಿಮೋಚನಾ ಹೋರಾಟ

ಯು.ಟಿ.ಆಯಿಶ ಫರ್ಝಾನ

ಬಾಂಗ್ಲಾ ದೇಶದ ಸೃಷ್ಟಿಗೆ ಕಾರಣವಾದ ಬಾಂಗ್ಲಾ ವಿಮೋಚನಾ ಹೋರಾಟದ ಬಗ್ಗೆಗಿನ ಮಾಹಿತಿ ಇಲ್ಲಿದೆ.

ಅಕ್ಟೋಬರ್ 26, 2023ರಂದು ದೆಹಲಿಯಲ್ಲಿ ರಕ್ಷಣಾ ಖಾತೆಯ ರಾಜ್ಯ ಸಚಿವರಾದ ಅಜಯ್ ಭಟ್ 1971ರ ಬಾಂಗ್ಲಾದೇಶ ವಿಮೋಚನೆ ಯುದ್ಧದಲ್ಲಿ ಹುತಾತ್ಮರಾದ ಭಾರತೀಯ ಸೈನಿಕರಿಗೆ ಗೌರವ ಸಲ್ಲಿಸಿದರು. ಈ ಸಮಾರಂಭವನ್ನು ಬಾಂಗ್ಲಾದೇಶದ ಹೈಕಮಿಷನ್ ಆಯೋಜಿಸಿತ್ತು.

ಬಾಂಗ್ಲಾ ವಿಮೋಚನೆ: 1971ರ ಬಾಂಗ್ಲಾದೇಶ ವಿಮೋಚನಾ ಹೋರಾಟವು ದಕ್ಷಿಣ ಏಷ್ಯಾದ ಇತಿಹಾಸದಲ್ಲಿಯೇ ಪ್ರಮುಖ ಘಟನೆಯಾಗಿದ್ದು, ಇದು ಬಂಗಾಳೀಯರು ತಮ್ಮ ಸ್ವಾತಂತ್ರ್ಯಕ್ಕಾಗಿ ನಡೆಸಿದ ಸುದೀರ್ಘ ಹೋರಾಟ ಕಥನವಾಗಿದೆ.

- ಈ ಹೋರಾಟವು ತನ್ನದೇ ಆದ ಐತಿಹಾಸಿಕ, ರಾಜಕೀಯ ಮತ್ತು ಸಾಮಾಜಿಕ ಆಯಾಮಗಳನ್ನು ಹೊಂದಿದೆ.

ಹಿನ್ನೆಲೆ: ಪೂರ್ವ ಬಂಗಾಳವು ಪ್ರಧಾನವಾಗಿ ಮುಸ್ಲಿಂಬಾಹುಳ್ಯದ ಪ್ರದೇಶ (ಇಂದಿನ ಬಾಂಗ್ಲಾದೇಶ)ವಾಗಿತ್ತು ಆದರೆ ಪಶ್ಚಿಮ ಬಂಗಾಳವು ಹಿಂದೂ ಬಾಹುಳ್ಯದ ಭಾಗವಾಗಿತ್ತು.

ಭಾರತದ ವಿಭಜನೆ (1947): 1947ರಲ್ಲಿ ಭಾರತೀಯ ಉಪಖಂಡವನ್ನು ಧರ್ಮದ ಆಧಾರದಲ್ಲಿ ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ದೇಶಗಳಾಗಿ ವಿಭಜಿಸಲಾಯಿತು. ಈ ವಿಭಜನೆಯಲ್ಲಿ ಸಹಜವಾಗಿಯೇ ಪಶ್ಚಿಮ ಬಂಗಾಳವು ಭಾರತದ ಭಾಗವಾದರೆ ಪೂರ್ವ ಬಂಗಾಳವನ್ನು ಪಾಕಿಸ್ತಾನಕ್ಕೆ (ಪೂರ್ವ ಪಾಕಿಸ್ತಾನವಾಗಿ) ಸೇರಿಸಲಾಯಿತು. ಪಶ್ಚಿಮ ಪಾಕಿಸ್ತಾನದಿಂದ ಸುಮಾರು ಸಾವಿರ ಮೈಲು ದೂರದಲ್ಲಿ ಭಾರತವನ್ನು ಹಾದುಬಂದರೆ ಪೂರ್ವ ಪಾಕಿಸ್ತಾನವನ್ನು ತಲುಪಬಹುದಾಗಿತ್ತು.

ಭಾಷಾ ಮತ್ತು ಸಾಂಸ್ಕೃತಿಕ ವ್ಯತ್ಯಾಸಗಳು: ಈ ವಿಭಜನೆಯ ಬಳಿಕ ಪೂರ್ವ ಮತ್ತು ಪಶ್ಚಿಮ ಪಾಕಿಸ್ತಾನಗಳು ಪಾಕಿಸ್ತಾನದ ಭಾಗಗಳಾಗಿದ್ದರೂ ಭಾಷೆ, ಸಾಂಸ್ಕೃತಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ಹೊಂದಿದ್ದವು. ಇದು ಪೂರ್ವ ಪಾಕಿಸ್ತಾನದಲ್ಲಿ ಅಸಮಾಧಾನಕ್ಕೆ ಕಾರಣವಾಯಿತು. ಪಶ್ಚಿಮ ಪಾಕಿಸ್ತಾನದಲ್ಲಿ ಕೇಂದ್ರ ಸರ್ಕಾರವು ಮಲತಾಯಿ ಧೋರಣೆ ಅನುಸರಿಸುತ್ತಿದೆ ಎಂಬ ಭಾವ ಬೆಳೆಯಿತು.

ಹೋರಾಟಕ್ಕೆ ಕಾರಣಗಳು

ರಾಜಕೀಯ ನಾಯಕರ ಅಸಡ್ಡೆ: ಪಶ್ಚಿಮ ಪಾಕಿಸ್ತಾನದ ರಾಜಕೀಯ ನಾಯಕರು ಪೂರ್ವ ಪಾಕಿಸ್ತಾನದ ಬಗ್ಗೆ ಗಮನ ಹರಿಸುವುದಿಲ್ಲ ಎಂಬ ಅಸಮಾಧಾನ.

ಆರ್ಥಿಕ ಶೋಷಣೆ: ಪಶ್ಚಿಮ ಪಾಕಿಸ್ತಾನಕ್ಕೆ ಅನುಕೂಲವಾಗುವಂತೆ ಪೂರ್ವ ಪಾಕಿಸ್ತಾನದ ಆರ್ಥಿಕ ಸಂಪನ್ಮೂಲಗಳನ್ನು ವ್ಯವಸ್ಥಿತವಾಗಿ ಬರಿದು ಆಗಿ, ವ್ಯಾಪಕ ಬಡತನಕ್ಕೆ ಕಾರಣವಾಯಿತು. ಪೂರ್ವ-ಪಾಕಿಸ್ತಾನಕ್ಕೆ ಹೋಲಿಸಿದರೆ ಪಶ್ಚಿಮ-ಪಾಕಿಸ್ತಾನದ ಜನಸಂಖ್ಯೆಯ ಗಾತ್ರವು ಚಿಕ್ಕದಾಗಿದ್ದರೂ ರಾಷ್ಟ್ರೀಯ ಬಜೆಟ್‌ನ ಪ್ರಮುಖ ಪಾಲನ್ನು (ಶೇ 75) ಪಶ್ಚಿಮ-ಪಾಕಿಸ್ತಾನಕ್ಕೆ ವಿನಿಯೋಗಿಸಲಾಯಿತು. ಪೂರ್ವ-ಪಾಕಿಸ್ತಾನವು ಆದಾಯದ ಶೇ 62ರಷ್ಟು ಉತ್ಪಾದನೆಗೆ ಕಾರಣವಾಗಿದ್ದರೂ ಆರ್ಥಿಕ ಅನುದಾನಗಳಿಂದ ವಂಚಿತಗೊಂಡಿತು.

ಭಾಷಾ ಆಂದೋಲನ: ಪೂರ್ವ ಪಾಕಿಸ್ತಾನದಲ್ಲಿ ಬಂಗಾಳಿ ಭಾಷೆ ಚಾಲ್ತಿಯಲ್ಲಿದ್ದರೆ ಪಶ್ಚಿಮ ಪಾಕಿಸ್ಥಾನದಲ್ಲಿ ಉರ್ದು ಭಾಷೆ ಚಾಲ್ತಿಯಲ್ಲಿತ್ತು. ಉರ್ದು ಭಾಷಿಗರು ಬಂಗಾಳಿ ಭಾಷೆಗೆ ಮನ್ನಣೆ ನೀಡುತ್ತಿರಲಿಲ್ಲ. 1952ರಲ್ಲಿ ಭಾಷಾ ಚಳವಳಿ ನಡೆದು ಇದರಲ್ಲಿ ಬಂಗಾಳಿಗಳು ತಮ್ಮ ಭಾಷೆಯಾದ ಬಂಗಾಳಿಗೆ ಪಾಕಿಸ್ತಾನದ ಅಧಿಕೃತ ಭಾಷೆ ಎಂಬ ಮನ್ನಣೆ ನೀಡಬೇಕೆಂದು ಹೋರಾಡಿದರು.

ಅವಾಮಿ ಲೀಗ್ ಮತ್ತು ಸಿಕ್ಸ್-ಪಾಯಿಂಟ್ ಚಳವಳಿ: ಶೇಖ್ ಮುಜಿಬುರ್ ರೆಹಮಾನ್ ನೇತೃತ್ವದ ಅವಾಮಿ ಲೀಗ್, ಪೂರ್ವ ಪಾಕಿಸ್ತಾನಕ್ಕೆ ಹೆಚ್ಚಿನ ಸ್ವಾಯತ್ತತೆ ಮತ್ತು ಸಿಕ್ಸ್-ಪಾಯಿಂಟ್(ಆರು ಅಂಶಗಳ) ಚಳುವಳಿಯ ಅನುಷ್ಠಾನಕ್ಕೆ ಒತ್ತಾಯಿಸಿತು.

ಆಪರೇಷನ್ ಸರ್ಚ್‌ಲೈಟ್: ಯುದ್ಧಕ್ಕೆ ತಕ್ಷಣದ ಕಾರಣ ಆಪರೇಷನ್ ಸರ್ಚ್‌ಲೈಟ್. ಇದು ಮಾರ್ಚ್ 25, 1971ರಂದು ಪಾಕಿಸ್ತಾನಿ ಮಿಲಿಟರಿಯಿಂದ ನಡೆಸಲಾದ ಮಿಲಿಟರಿ ಕಾರ್ಯಾಚರಣೆಗೆ ಇಟ್ಟ ಹೆಸರು. ಇದು ಪೂರ್ವ ಪಾಕಿಸ್ತಾನದಲ್ಲಿ ಸ್ವಾಯತ್ತತೆಯ ಬೇಡಿಕೆಗಳ ಬಗ್ಗೆ ನಡೆಯುತ್ತಿರುವ ಹೋರಾಟಗಳನ್ನು ನಿಗ್ರಹಿಸುವ ಗುರಿ ಇತ್ತು. ಅನೇಕ ಸಾಮಾನ್ಯ ನಾಗರಿಕರ ಹತ್ಯೆ, ಬುದ್ಧಿಜೀವಿಗಳನ್ನು ಗುರಿಯಾಗಿಸಿದ ಹತ್ಯಾಕಾಂಡಗಳು ನಡೆದವು.

ಯುದ್ಧದ ಪ್ರಮುಖ ಘಟನೆಗಳು:

- **ಸ್ವಾತಂತ್ರ್ಯದ ಘೋಷಣೆ:** ಮಾರ್ಚ್ 26, 1971ರಂದು, ಶೇಖ್ ಮುಜಿಬುರ್ ರೆಹಮಾನ್ ಬಾಂಗ್ಲಾದೇಶದ ಸ್ವಾತಂತ್ರ್ಯವನ್ನು ಘೋಷಿಸಿದ್ದು ಇದಕ್ಕೆ ಬಂಗಾಳೀಯರಿಂದ ವ್ಯಾಪಕ ಬೆಂಬಲ ವ್ಯಕ್ತವಾಯಿತು.
- **ಭಾರತದ ಒಳಗೊಳ್ಳುವಿಕೆ :** ಪ್ರಧಾನಿ ಇಂದಿರಾ ಗಾಂಧಿ ನೇತೃತ್ವದ ಭಾರತವು ಬಾಂಗ್ಲಾದೇಶದ ಪಡೆಗಳಿಗೆ ಬೆಂಬಲವನ್ನು ನೀಡಿತು. ಅಂತಿಮವಾಗಿ ಡಿಸೆಂಬರ್ 1971ರಲ್ಲಿ ಭಾರತದ ಮಿಲಿಟರಿಶಕ್ತಿಯು ನೇರವಾಗಿ ಮಧ್ಯಪ್ರವೇಶಿಸಿತು. ಇದು ಯುದ್ಧದಲ್ಲಿ ನಿರ್ಣಾಯಕ ತಿರುವಿಗೆ ಕಾರಣವಾಯಿತು.
- **ಪಾಕಿಸ್ತಾನಿ ಪಡೆಗಳ ಶರಣಾಗತಿ:** ಡಿಸೆಂಬರ್ 16, 1971 ರಂದು, ಪಾಕಿಸ್ತಾನಿ ಮಿಲಿಟರಿಯು ಢಾಕಾದಲ್ಲಿ ಭಾರತ ಮತ್ತು ಬಾಂಗ್ಲಾದೇಶದ ಪಡೆಗಳಿಗೆ ಶರಣಾಗುವುದರೊಂದಿಗೆ ಯುದ್ಧ ಅಂತ್ಯಗೊಂಡಿತು . ಬಾಂಗ್ಲಾದೇಶ ಸ್ವತಂತ್ರ ರಾಷ್ಟ್ರವಾಯಿತು.

ಪರಿಣಾಮಗಳು

ಅಪಾರ ಜೀವಹಾನಿ : ಯುದ್ಧದಿಂದ ಅಂದಾಜು 3 ಲಕ್ಷದಿಂದ 30 ಲಕ್ಷ ಸಾವು-ನೋವುಗಳು ಸಂಭವಿಸಿರಬಹುದೆಂದು ಅಂದಾಜಿಸಲಾಗಿದೆ. ಪಾಕಿಸ್ತಾನಿ ಮಿಲಿಟರಿಯ ದೌರ್ಜನ್ಯ ಎಲ್ಲೆ ಮೀರಿತು.

ರಾಜಕೀಯ ಬದಲಾವಣೆಗಳು: ಬಾಂಗ್ಲಾದೇಶ ಸಂಸದೀಯ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿತು ಮತ್ತು ರಾಷ್ಟ್ರದ ಪುನರ್‌ನಿರ್ಮಾಣ ಮತ್ತು ಸಾಮಾಜಿಕ-ಆರ್ಥಿಕ ಸವಾಲುಗಳನ್ನು ಎದುರಿಸಲು ಉತ್ತಮ ನೀತಿಗಳನ್ನು ಅನುಸರಿಸಿತು.

ಭಾರತದೊಂದಿಗಿನ ಸಂಬಂಧಗಳು: ಯುದ್ಧವು ಭಾರತ ಮತ್ತು ಬಾಂಗ್ಲಾದೇಶದ ನಡುವಿನ ಸಂಬಂಧಗಳನ್ನು ಬಲಪಡಿಸಿತು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–1 ಸಮಾಂತರ ಶ್ರೇಢಿ

ಅಭ್ಯಾಸ – 1.3

viii) $a_n = 4$, $d = 2$, $S_n = -14$ ಆದರೆ n ಮತ್ತು a ಕಂಡುಹಿಡಿಯಿರಿ

ಪರಿಹಾರ: (........ಹಿಂದಿನ ಸಂಚಿಕೆಯಿಂದ)

ಹೀಗಾಗಿ $n = 7$

ಸಮೀಕರಣ 1ರಲ್ಲಿ n=7 ಹಾಕುವುದರಿಂದ ನಮಗೆ ಕೆಳಗಿನದು ಸಿಗುವುದು

$a + 2(7) = 6$

$a + 14 = 6$

$a = 6 - 14$

$a = -8$

ix) $a = 3$, $n = 8$, $S = 192$ ಆದರೆ d ಕಂಡುಹಿಡಿಯಿರಿ

ಪರಿಹಾರ: ಇಲ್ಲಿ $a = 3$, $n = 8$, $S = 192$

ನಮಗೆ ಗೊತ್ತಿರುವಂತೆ

$$S_n = \frac{n}{2}[2a + (n-1)d]$$

$$192 = \frac{8}{2}[2(3) + (8-1)d]$$

$$192 = 4[6 + 7d]$$

$$\frac{192}{4} = 6 + 7d$$

$$48 = 6 + 7d$$

$$48 - 6 = 7d$$

$$42 = 7d$$

$$d = 42/7$$

$$d = 6$$

x) $l = 28$, $S = 144$ ಮತ್ತು ಪದಗಳ ಸಂಖ್ಯೆ 9 ಇದ್ದರೆ a ಕಂಡುಹಿಡಿಯಿರಿ

ಇಲ್ಲಿ $l = 28$, $S = 144$, $n = 9$

ನಮಗೆ ಗೊತ್ತಿರುವಂತೆ

$$S_n = \frac{n}{2}[a + 1]$$

$$114 = \frac{9}{2}[(a) + 28]$$

$$\frac{(114)(2)}{9} = a + 28$$

$32 = a + 28$

$a + 28 = 32$

$a = 32 - 28$

$a = 4$

4) ಮೊತ್ತ 636 ಸಿಗಬೇಕಾದರೆ 9, 17, 25 .... ಈ ಸಮಾಂತರ ಶ್ರೇಢಿಯ ಎಷ್ಟು ಪದಗಳನ್ನು ತೆಗೆದುಕೊಳ್ಳಬೇಕಾಗುತ್ತದೆ?

ಪರಿಹಾರ: ಸಮಾಂತರ ಶ್ರೇಢಿಯ 9, 17, 25, ...

ಇಲ್ಲಿ $a = 9$, $d = 17 - 9 = 8$, $S_n = 636$

$$\frac{n}{2}[2a + (n-1)d] = 636$$

$$\frac{n}{2}[2(9) + (n-1)8] = 636$$

$$n[9 + (n-1)4] = 636$$

$$n[9 + 4n - 4] = 636$$

$$n[4n + 5] = 636$$

$$4n^2 + 5n = 636$$

$$4n^2 + 5n - 636 = 0$$

$$4n^2 + 53n - 48n - 636 = 0$$

$$n(4n + 53) - 12(4n + 53) = 0$$

$$(4n + 53)(n - 12) = 0$$

$$(4n + 53) = 0$$

or

$$(n - 12) = 0$$

$$n = -\frac{53}{4}$$

$n = -\frac{53}{4}$ ಸಮಾಂತರ ಶ್ರೇಢಿಯ n ಪದವಾಗಿ ಸ್ವೀಕರಿಸಲು ಬರುವುದಿಲ್ಲ ಹೀಗಾಗಿ $\therefore n = 12$

ಸಮಾಂತರ ಶ್ರೇಢಿಯ 9, 17, 25, . . . ಮೊತ್ತ 636 ಸಿಗಬೇಕಾದರೆ 12 ಪದಗಳನ್ನು ತೆಗೆದುಕೊಳ್ಳಬೇಕಾಗುತ್ತದೆ

5) ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಪದಗಳ ಸಂಖ್ಯೆ ಮತ್ತು ಸಾಮಾನ್ಯ ವ್ಯತ್ಯಾಸ ಕಂಡುಹಿಡಿಯಿರಿ.

ಪರಿಹಾರ: ಇಲ್ಲಿ $a = 5$, $l = 45$, $S = 400$

ನಮಗೆ ಗೊತ್ತಿರುವಂತೆ

$$S = \frac{n}{2}[a + l]$$

$$400 = \frac{n}{2}[5 + 45]$$

$$400 = \frac{n}{2}[50]$$

$$400 = 25n$$

$$n = \frac{400}{25}$$

$$n = 16$$

ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಪದಗಳ ಸಂಖ್ಯೆ 16

ನಮಗೆ ಗೊತ್ತಿರುವಂತೆ

$l = a + (n-1)d$

$45 = 5 + (16 - 1)d$

$45 - 5 = 15d$

$15d = 40 \Rightarrow d = 40/15 \Rightarrow d = 8/3$

ಒಂದು ಸಮಾಂತರ ಶ್ರೇಢಿಯಲ್ಲಿ ಮೊದಲ ಪದ 5, ಕೊನೆಯ ಪದ 45 ಮತ್ತು ಮೊತ್ತ 400 ಆದರೆ ಅದರ ಸಾಮಾನ್ಯ ವ್ಯತ್ಯಾಸ = 8/3

6) ಒಂದು ಸಮಾಂತರ ಶ್ರೇಢಿಯ ಮೊದಲ ಮತ್ತು ಕೊನೆಯ ಪದಗಳು ಕ್ರಮವಾಗಿ 17 ಮತ್ತು 350 ಆಗಿವೆ. ಸಾಮಾನ್ಯ ವ್ಯತ್ಯಾಸ 9 ಆದರೆ ಪದಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಮೊತ್ತ ಎಷ್ಟು?

ಪರಿಹಾರ: ಇಲ್ಲಿ $a = 17$, $l = 350$, $d = 9$

ನಮಗೆ ಗೊತ್ತಿರುವಂತೆ

$l = a + (n-1)d$

$350 = 17 + (n-1)9$

$350 - 17 = (n-1)9$

$333 = (n-1)9$

$(n-1)9 = 333$

$n - 1 = 333/9$

$n - 1 = 37 \Rightarrow n = 38$

ಪದಗಳ ಸಂಖ್ಯೆ 38

ನಮಗೆ ಗೊತ್ತಿರುವಂತೆ

$$S_n = \frac{n}{2}[a + l]$$

$$S_{38} = \frac{38}{2}[17 + 350]$$

$$S_{38} = (19)(367)$$

$$S_{38} = 6973$$

ಅವುಗಳ ಮೊತ್ತ 6973

ಎಸ್ಸೆಸ್ಸೆಲ್ಸಿ- ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು


II PUC BIOLOGY

REPRODUCTION

Human Reproduction

3. Draw a diagram showing and Embryo and foetal membranes.

Ans:-



4. Draw a neat diagram of the female reproductive system and label the parts associated with the following –


(a) Production of gametes

(b) Site of fertilization

(c) Site of implantation

(d) Birth canal

Ans:-



a) **Ovary** - Production of gametes.

b) **Site of Fertilization** - Ampulla-Isthmus junction.


c) **Site of Implantation** - Endometrium.

d) **Birth Cannel** - Cervical canal and vaginal canal.

5. With suitable diagram, describe the organization of mammary gland.

Ans:- Mammary gland is milk producing modified compound sweat gland.

It occurs in groups of 15-20 inside two rounded thoracic prominences called **breasts.** The glands lie in lobes separated by fibrous connective tissue and adipose tissue. Each lobe has a number of lobules. The lobules contain secretory tubuloalveoli. They produce milk only after parturition under stimulation from prolactin hormone of anterior pituitary. The secreted milk is stored in cavities of alveoli from where it passes to mammary tubules and ducts. It is again stored in mammary ampulla or lacticiferous sinus below the nipple of the breast.



Sagittal section of female breast

All the lacticiferous or mammary ducts open by their own pores over the nipple. A sensitive circular pigmented area called **areola** lies below the nipple for stimulation of milk production. Milk ejection is under control of hormone oxytocin.

REPRODUCTIVE HEALTH

Answer the following:-

1)Give a brief note on the sexually transmitted diseases.

Ans:- Disease spread by sexual contact are called sexually transmitted diseases. Eg:- Gonorrhoea, Syphilis, AIDS etc.,

Gonorrhoea – It is a infectious sexually transmitted disease caused by the bacterium Neisseria gonorrhoeae (Gonococcus), which affects both men and women. It may even be transmitted to the new born baby during birth from the infected mother.

The Symptoms of this disease are - In men there will be burning sensation in the penis during urination, with a discharge of greenish yellow gleet.

In women there will be burning sensation during urination, with a discharge of pus from the vagina and pain in the lower part of the abdomen.

Syphilis - caused by the bacterium Triponema pallidum, affects both men and women. It may even be transmitted to the new born baby during birth from the infected mother.

The following are the effects caused by this disease - The bacteria attacks the nervous system resulting in blindness, partial paralysis due to nervous disorder and loss of memory. *(Contd)*

ತ್ವರಿತ ಇತ್ಯರ್ಥಕ್ಕೆ ಸಚಿವ ಕೃಷ್ಣಬೈರೇಗೌಡ ಸೂಚನೆ

54 ಸಾವಿರ ಪಹಣಿ ಲೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಹಣಿ ಲೋಪದ (3 ಮತ್ತು 9ನೇ ಕಾಲಂನಲ್ಲಿ ವ್ಯತ್ಯಾಸ) 54,175 ಪ್ರಕರಣಗಳು ರಾಜ್ಯದಲ್ಲಿ ದಾಖಲಾಗಿವೆ. ಇಂತಹ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡಬೇಕು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚಿಸಿದರು.

ವಿಕಾಸಸೌಧದಲ್ಲಿ ಬುಧವಾರ ನಡೆದ ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಅವರು ಮಾತನಾಡಿದರು.

ಸರ್ವೆ ಇಲಾಖೆಯಲ್ಲಿನ ಗೊಂದಲಗಳ ಕಾರಣಕ್ಕೆ ರೈತರು ಸಾಕಷ್ಟು ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಆಕಾರಬಂದು, ಆರ್‌ಟಿಸಿ ವ್ಯತ್ಯಾಸದ ಪ್ರಕರಣಗಳ ಕಾರಣಕ್ಕೆ ರೈತರು ನಿತ್ಯವೂ ಸರ್ಕಾರಿ ಕಚೇರಿಗಳಿಗೆ ಅಲೆಯುವಂತಾಗಿದೆ. ಇಂತಹ 1,12,865 ಪ್ರಕರಣಗಳು ದಾಖಲಾಗಿವೆ. ಎಲ್ಲ ತಿದ್ದುಪಡಿಗಳಿಗೂ ಅಳತೆಯ ಅವಶ್ಯಕತೆ ಇದೆಯೆ ಎನ್ನುವುದನ್ನು ಖಚಿತಪಡಿಸಿಕೊಂಡು ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ತಾಕೀತು ಮಾಡಿದರು.

ಪೋಡಿ ಮುಕ್ತ ಗ್ರಾಮ, ಎಲ್ಲೆಡೆ ಅಭಿಯಾನ: ಈಗಾಗಲೇ 17 ಸಾವಿರ ಗ್ರಾಮಗಳನ್ನು ಪೋಡಿಮುಕ್ತ ಗ್ರಾಮಗಳು ಎಂದು ಘೋಷಿಸಲಾಗಿದೆ. 14 ಸಾವಿರ ಗ್ರಾಮಗಳನ್ನು ಪೋಡಿ ಮುಕ್ತ ಎಂದು ಘೋಷಿಸುವುದು ಬಾಕಿ ಇದೆ. ಈಗಾಗಲೇ ರಾಮನಗರ ಜಿಲ್ಲೆಯಲ್ಲಿ ಡ್ರೋನ್ ತಂತ್ರಜ್ಞಾನ ಆಧಾರಿತ ಭೂ ಮರುಮಾಪನಕ್ಕೆ (ರೀ ಸರ್ವೆ) ಪ್ರಾಯೋಗಿಕವಾಗಿ ಚಾಲನೆ ನೀಡಲಾಗಿತ್ತು. ಈ ಪ್ರಯೋಗ ಯಶಸ್ವಿಯಾಗಿದೆ. ಇದನ್ನೇ ಆಧರಿಸಿ ರಾಜ್ಯದ ಎಲ್ಲೆಡೆ ಭೂ ಮರುಮಾಪನ ಅಭಿಯಾನಕ್ಕೆ ಚಾಲನೆ ನೀಡಬೇಕು ಎಂದರು.

ಕಂದಾಯ- ಅರಣ್ಯ ಗಡಿ ನಿಗದಿಗೆ ಒತ್ತು: ಕಂದಾಯ ಹಾಗೂ ಅರಣ್ಯ ಜಮೀನುಗಳ ನಡುವಿನ ಗಡಿಯ ಕುರಿತು ಸ್ಪಷ್ಟತೆ ಇಲ್ಲದ ಕಾರಣ ಜನರು ತೊಂದರೆಗೆ ಒಳಗಾಗುತ್ತಿದ್ದಾರೆ. ಅಧಿಕಾರಿಗಳು ಅರಣ್ಯ ಹಾಗೂ ಕಂದಾಯ ಭೂಮಿಗಳ ಸರ್ವೆ ಮಾಡಿ, ಗಡಿ ಗುರುತಿಸಬೇಕು. ಹಲವು ಸ್ವರೂಪಗಳಲ್ಲಿರುವ ಸರ್ಕಾರಿ ಜಮೀನುಗಳನ್ನು ಅಳತೆ ಮಾಡಬೇಕು. ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

> ### ರಾಜ್ಯದ ಎಲ್ಲೆಡೆ ಪುನರ್ ಸರ್ವೆ
> ಆರ್‌ಟಿಸಿ, ಆಕಾರಬಂದು ವ್ಯತ್ಯಾಸಗಳು, ಬಗರ್‌ಹುಕುಂ ಅರ್ಜಿಗಳ ಇತ್ಯರ್ಥಕ್ಕಾಗಿ ಪುನರ್ ಸರ್ವೆ ಕಾರ್ಯ ಕೈಗೊಳ್ಳಬೇಕಿದೆ ಎಂದು ಕರಷ್ಣ ಬೈರೇಗೌಡ ಹೇಳಿದರು.
>
> ಬಗರ್‌ಹುಕುಂ ಸಾಗುವಳಿಯಲ್ಲಿ ಭೂಹಕ್ಕು ಕೋರಿ ನಮೂನೆ 57ರ ಅಡಿಯಲ್ಲಿ ಲಕ್ಷಾಂತರ ಅರ್ಜಿಗಳು ಸಲ್ಲಿಕೆಯಾಗಿವೆ. ಎಲ್ಲಾ ಅರ್ಜಿಗಳನ್ನೂ ಕಾನೂನಿನ ಮಿತಿಯೊಳಗೆ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ಸಾಗುವಳಿ ಪತ್ರ ನೀಡಬೇಕು. ಸಾಗುವಳಿ ಪತ್ರ ನೀಡುವ ಮೊದಲು ಭೂಮಿ ಅಳತೆ ಮಾಡಿ ನಕ್ಷೆ ತಯಾರಿಸಬೇಕು. ಪೋಡಿ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಹಕ್ಕು ದಾಖಲೆಗಳನ್ನು ಸಿದ್ಧಪಡಿಸಬೇಕು ಎಂದರು.

ಟ್ಯಾಂಕ್ ಬಿದ್ದು ಬಾಲಕ ಸಾವು

ಇಂಡಿ(ವಿಜಯಪುರ ಜಿಲ್ಲೆ): ಪಟ್ಟಣದ ಆರ್.ಎಂ.ಶಹಾ ಪ್ರಾಥಮಿಕ ಶಾಲಾ ಕಟ್ಟಡದ ಮೇಲಿನ ನೀರಿನ ಟ್ಯಾಂಕ್ ಉರುಳಿ ಬಿದ್ದು, ಕೆಳಗಡೆ ಆಟವಾಡುತ್ತಿದ್ದ ಬಾಲಕ ಶಿವರಾಜ ಸಿದ್ದಪ್ಪ ರೋಡಗಿ (6) ಬುಧವಾರ ಮೃತಪಟ್ಟಿದ್ದಾನೆ. 'ತೀವ್ರವಾಗಿ ಗಾಯಗೊಂಡಿದ್ದ ಬಾಲಕನನ್ನು ಶಾಲಾ ಸಿಬ್ಬಂದಿ ಆಸ್ಪತ್ರೆಗೆ ಕರೆದೊಯ್ಯುವಷ್ಟ ರಲ್ಲಿ ಮೃತಪಟ್ಟಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ. ಇಂಡಿ ಶಹರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಶಿವರಾಜ ರೋಡಗಿ


ಡಿ.ವಿ.ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್

ನಾಲ್ವರು ಕಲಾವಿದರಿಗೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಎಂ.ಆರ್. ಬಾಳಿಕಾಯಿ



ಚಂದ್ರಕಾಂತ ಡಿ.ಜೆಟ್ಟಣ್ಣವರ



ಬಸವರಾಜ ಎಸ್‌.ಕಲೆಗಾರ



ಸುರಭಿ ಕಾಂಚನಾ ಗುಲ್ವೇಲ್ಕರ್

ಧಾರವಾಡ: ಚಿತ್ರಕಲಾ ಶಿಲ್ಪಿ ಡಿ.ವಿ. ಹಾಲಭಾವಿ ರಾಷ್ಟ್ರೀಯ ಸ್ಮಾರಕ ಟ್ರಸ್ಟ್‌ನ ಪ್ರಶಸ್ತಿಗಳಿಗೆ ನಾಲ್ವರು ಕಲಾವಿದರನ್ನು ಆಯ್ಕೆ ಮಾಡಲಾಗಿದ್ದು, ಇಲ್ಲಿನ ಆಲೂರು ವೆಂಕಟರಾವ್ ಭವನದಲ್ಲಿ ನವೆಂಬರ್ 29ರಂದು ಪ್ರಶಸ್ತಿ ಪ್ರದಾನ ನಡೆಯಲಿದೆ.

ಹಿರಿಯ ಕಲಾವಿದ ಎಂ.ಆರ್. ಬಾಳಿಕಾಯಿ ಅವರ ಜೀವಮಾನ ಸಾಧನೆಗಾಗಿ 'ಕುಂಚ ಕಲಾ ತಪಸ್ವಿ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಈ ಪುರಸ್ಕಾರವು ₹ 1 ಲಕ್ಷ ನಗದು ಒಳಗೊಂಡಿದೆ. ಬಾಳಿಕಾಯಿ ಅವರು ಮೂಲತಃ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಹೆಬ್ಬಾಳ ಗ್ರಾಮದವರಾಗಿದ್ದು ಸದ್ಯ ಧಾರವಾಡದಲ್ಲಿ ನೆಲೆಸಿದ್ದಾರೆ. ಹುಬ್ಬಳ್ಳಿಯ ಚಂದ್ರಕಾಂತ ಡಿ.ಜೆಟ್ಟಣ್ಣವರ ಅವರನ್ನು 'ಕುಂಚ ಕಲಾಶ್ರೀ' ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹ 50 ಸಾವಿರ ನಗದು ಒಳಗೊಂಡಿದೆ. ಚಂದ್ರಕಾಂತ ಅವರು ಮೂಲತಃ ಗದಗದವರು. ಧಾರವಾಡದ ಬಸವರಾಜ ಎಸ್.ಕಲೆಗಾರ ಹಾಗೂ ಪುಣೆಯ ಸುರಭಿ ಕಾಂಚನಾ ಗುಲ್ವೇಲ್ಕರ್ ಅವರ ಕಲಾ ಸಾಧನೆಗಾಗಿ 'ಯುವ ಕುಂಚ ಕಲಾಶ್ರೀ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ತಲಾ ₹ 25 ಸಾವಿರ ನಗದು ಒಳಗೊಂಡಿದೆ. ಬಸವರಾಜ ಅವರು ಮೂಲತಃ ಯಾದಗಿರಿಯ ವಡಗೇರಾ ತಾಲ್ಲೂಕಿನ ಕೊಂಕಲ್ ಗ್ರಾಮದವರು.

ಆನೆ ದಾಳಿ: ಕಾಡಾನೆ ನಿಗ್ರಹ ದಳದ ಸಿಬ್ಬಂದಿ ಸಾವು

ಮೂಡಿಗೆರೆ (ಚಿಕ್ಕಮಗಳೂರು): ತಾಲ್ಲೂಕಿನ ಊರುಬಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸ್ಕೆರೆ ಗ್ರಾಮದ ಬಳಿ ಕಾಣಿಸಿಕೊಂಡ ಆನೆಯನ್ನು ಅರಣ್ಯಕ್ಕೆ ಓಡಿಸುವ ವೇಳೆ ಅದು ದಾಳಿ ನಡೆಸಿದ್ದು, ಕಾಡಾನೆ ನಿಗ್ರಹ ದಳದ ಸಿಬ್ಬಂದಿ ಕಾರ್ತಿಕ್ (26) ಸ್ಥಳದಲ್ಲೆ ಮೃತಪಟ್ಟಿದ್ದಾರೆ.



ಕಾರ್ತಿಕ್

ಹೊಸ್ಕೆರೆ ಗ್ರಾಮಕ್ಕೆ ಕಾಡಾನೆ ಬಂದಿರುವ ಮಾಹಿತಿ ತಿಳಿಯುತ್ತಿದ್ದಂತೆ ಸಂಜೆ ವೇಳೆಗೆ ತಂಡದೊಂದಿಗೆ ಇವರು ಸ್ಥಳಕ್ಕೆ ತೆರಳಿದ್ದರು. ಆ ಆನೆಯನ್ನು ಓಡಿಸುವ ವೇಳೆ ಅದು ಏಕಾಏಕಿ ಎರಗಿದೆ. ಸಮೀಪದಲ್ಲಿದ್ದ ಕಾರ್ತಿಕ್ ಮೇಲೆ ದಾಳಿ ನಡೆಸಿದ್ದು, ಅವರು ಸ್ಥಳದಲ್ಲೇ ಮೃತಪಟ್ಟರು. ಇವರೊಂದಿಗೆ ಇದ್ದ ಇನ್ನೂ ನಾಲ್ಕು ಸಿಬ್ಬಂದಿಗೆ ಗಾಯಗಳಾಗಿದ್ದು, ಪಟ್ಟಣದ ಎಂಜಿಎಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಗೌಡಳ್ಳಿ ಗ್ರಾಮದ ಈರಪ್ಪಗೌಡ ಹಾಗೂ ಸರೋಜಮ್ಮ ದಂಪತಿಯ ಏಕೈಕ ಪುತ್ರ ಕಾರ್ತಿಕ್ ಅವರು ಕಾಡಾನೆ ನಿಗ್ರಹ ದಳದಲ್ಲಿ ಹೊರಗುತ್ತಿಗೆ ನೌಕರನಾಗಿ ಕೆಲಸ ಮಾಡುತ್ತಿದ್ದರು. ಒಂದೂವರೆ ವರ್ಷಗಳ ಹಿಂದೆ ಈರಪ್ಪಗೌಡ ಅವರು ನಿಧನರಾಗಿದ್ದು, ಇದ್ದ ಒಬ್ಬ ಮಗನನ್ನು ಕಳೆದುಕೊಂಡ ಹೆತ್ತಮ್ಮನ ಆಕ್ರಂದನ ಮುಗಿಲು ಮುಟ್ಟಿದೆ.

ಅರಣ್ಯ ಇಲಾಖೆ ವಿರುದ್ಧ ಆಕ್ರೋಶ: ಕಾಡಾನೆ ದಾಳಿಗೆ ಶಾಶ್ವತ ಪರಿಹಾರ ರೂಪಿಸುವವರೆಗೂ ಶವ ತೆಗೆಯಲು ಬಿಡುವುದಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟಿಸಿದ್ದರಿಂದ ತಡ ರಾತ್ರಿ ತನಕ ಮೃತ ದೇಹ ಸ್ಥಳದಲ್ಲಿಯೇ ಇತ್ತು.

ನಿಗಮ–ಮಂಡಳಿ: 28ರಂದು ಮತ್ತೆ ಸಭೆ– ಡಿಸಿಎಂ ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಗಮ ಮಂಡಳಿಗಳಿಗೆ ನೇಮಕ ವಿಚಾರವಾಗಿ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಜೊತೆ ಇದೇ 28 ರಂದು ಮತ್ತೊಂದು ಸುತ್ತಿನ ಚರ್ಚೆ ನಡೆಸಿದ ಬಳಿಕ ಪಟ್ಟಿಯನ್ನು ಪಕ್ಷದ ವರಿಷ್ಠರಿಗೆ ಕಳುಹಿಸಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಯಾರನ್ನು ನೇಮಿಸಬೇಕೆಂಬ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಹಿರಿಯ ನಾಯಕರು, ಶಾಸಕರ ಅಭಿಪ್ರಾಯವನ್ನೂ ಪಡೆಯುತ್ತಿದ್ದೇವೆ' ಎಂದರು.

'ನಿಗಮ ಮಂಡಳಿ ನೇಮಕ ವಿಚಾರದಲ್ಲಿ ಗೃಹ ಸಚಿವರು ಅಸಮಾಧಾನ ಹೊಂದಿದ್ದಾರೆಯೇ' ಎಂದು ಕೇಳಿದಾಗ, 'ಅವರು ಕಳೆದ ಮೂರು ದಿನಗಳಿಂದ ಪ್ರವಾಸದಲ್ಲಿದ್ದರು. ಅವರಿಗೆ ಅವರದೇ ಆದ ಕೆಲಸಗಳಿರುತ್ತವೆ. ಸುಮ್ಮನೆ ಯಾರೋ ಹೇಳಿದ್ದನ್ನು ನೀವು (ಮಾಧ್ಯಮಗಳು) ದೊಡ್ಡದಾಗಿ ಬಿಂಬಿಸುತ್ತೀರಿ. ಅವರು ಯಾವ ಕಾರಣಕ್ಕೆ ಅಸಮಾಧಾನಗೊಳ್ಳುತ್ತಾರೆ? ಅಸಮಾಧಾನ ಆಗುವಂಥದ್ದು ಏನಾಗಿದೆ' ಎಂದು ಪ್ರಶ್ನಿಸಿದರು.

'ನಿಗಮ- ಮಂಡಳಿ ಸ್ಥಾನದ ವಿಚಾರದಲ್ಲಿ ಪರಮೇಶ್ವರ ಬೆಂಬಲಿಗರಿಗೆ ಬೇಸರವಾಗಿದೆಯೇ' ಎಂದು ಕೇಳಿದಾಗ, 'ಇಲ್ಲಿ ಅವರ ಬೆಂಬಲಿಗರು, ನನ್ನ ಬೆಂಬಲಿಗರು ಎಂಬುವುದಿಲ್ಲ. ನನಗೆ, ಮುಖ್ಯಮಂತ್ರಿ, ಗೃಹ ಸಚಿವರಿಗೆ ಬೆಂಬಲಿಗರು ಇಲ್ಲ. ಇರುವ ಎಲ್ಲರೂ ಕಾಂಗ್ರೆಸ್ ಬೆಂಬಲಿಗರು. ಮಂತ್ರಿಗಿರಿ ಸಿಗದ ಹಿರಿಯ ಶಾಸಕರಿಗೆ ನಿಗಮ ಮಂಡಳಿ ಸ್ಥಾನ ನೀಡುವ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ' ಎಂದರು.

'ಹಣ ಸಂಗ್ರಹಿಸಲು ನಿಗಮ ಮಂಡಳಿ ನೇಮಕ ವಿಳಂಬ ಮಾಡಲಾಗುತ್ತಿದೆ' ಎಂಬ ಬಿಜೆಪಿ ಆರೋಪದ ಬಗ್ಗೆ ಕೇಳಿದಾಗ, 'ನಾವು ಅಧಿಕಾರಕ್ಕೆ ಬಂದ ಕೆಲವೇ ತಿಂಗಳಲ್ಲಿ ನಿಗಮ ಮಂಡಳಿಗಳಿಗೆ ನೇಮಕ ಮಾಡುತ್ತಿದ್ದೇವೆ. ಅವರು ಅಧಿಕಾರಕ್ಕೆ ಬಂದ ಎಷ್ಟು ವರ್ಷಗಳ ನಂತರ ಮಾಡಿದರು? ಅವರಿಗೆ ನಾಲ್ಕೈದು ಸಚಿವರನ್ನು ನೇಮಕ ಮಾಡಲಾಗದೇ ಮುಖ್ಯಮಂತ್ರಿಯೇ ಎಲ್ಲ ಖಾತೆಯನ್ನು ಇಟ್ಟುಕೊಂಡಿದ್ದರು' ಎಂದರು.

'ವಿರೋಧಿಗಳ ಜತೆ ಬಿವೈವಿ, ಅಶೋಕ ಹೊಂದಾಣಿಕೆ'

ಬೆಳಗಾವಿ: 'ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ (ಬಿವೈವಿ) ವಿರೋಧ ಪಕ್ಷಗಳ ಜತೆಗೆ ಹೊಂದಾಣಿಕೆ ಮಾಡಿಕೊಂಡಿದ್ದಾರೆ. ಹೊಂದಾಣಿಕೆಯಿಂದಲೇ ಅವರು ಲೋಕಸಭೆ ಚುನಾವಣೆಯಲ್ಲಿ ಹೆಚ್ಚಿನ ಸ್ಥಾನವನ್ನೂ ಗೆಲ್ಲಿಸಬಹುದು. ಹಾಗಾಗಿ ಅವರನ್ನು ನೇಮಕ ಮಾಡಲಾಗಿದೆ' ಎಂದು ಮಾಜಿ ಸಚಿವ ಅರವಿಂದ ಲಿಂಬಾವಳಿ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈ ಸಲದ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯಿಂದ ಆಯ್ಕೆಯಾಗಿರುವ 66 ಶಾಸಕರಲ್ಲಿ ಅನೇಕರು ಸ್ವಂತ ಶಕ್ತಿ ಮೇಲೆಯೇ ಗೆದ್ದಿದ್ದಾರೆ. ಕೆಲವರು ಹೊಂದಾಣಿಕೆ ಮೇಲೆ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇದು ಹೊಂದಾಣಿಕೆ ಮಾಡಿಕೊಳ್ಳುವವರ ಕಾಲ' ಎಂದು ಲೇವಡಿ ಮಾಡಿದರು.

'ಬಿ.ವೈ.ವಿಜಯೇಂದ್ರ ಅವರನ್ನು ಅಳೆದು, ತೂಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಿಲ್ಲ' ಎಂದೂ ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಹೆಜ್ಜೇನು ದಾಳಿ; 80 ಮಂದಿ ಅಸ್ವಸ್ಥ, 7 ಜನ ಗಂಭೀರ

ಮೇಲುಕೋಟೆ (ಮಂಡ್ಯ): ಪ್ರಮುಖ ಧಾರ್ಮಿಕ ಕ್ಷೇತ್ರ ಮೇಲುಕೋಟೆ ತೊಟ್ಟಿಲುಮಡು ಜಾತ್ರೆಯಲ್ಲಿ ಪಾಲ್ಗೊಂಡಿದ್ದ ಭಕ್ತರ ಮೇಲೆ ಬುಧವಾರ ಹೆಜ್ಜೇನುಗಳು ದಾಳಿ ನಡೆಸಿದ್ದು, 80 ಮಂದಿ ಅಸ್ವಸ್ಥರಾಗಿದ್ದಾರೆ. 7 ಮಂದಿ ಸ್ಥಿತಿ ಗಂಭೀರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ಬುಧವಾರ ತೊಟ್ಟಿಲುಮಡು ಉತ್ಸವ ವೇಳೆ ಮಧ್ಯಾಹ್ನ 3ರ ಸುಮಾರಿಗೆ ಹೆಜ್ಜೇನುಗಳು ದಾಳಿ ನಡೆಸಿವೆ. ರಾಜ್ಯದ ವಿವಿಧ ಭಾಗದಿಂದ ಸಾವಿರಾರು ಭಕ್ತರು ಕ್ಷೇತ್ರಕ್ಕೆ ಬಂದಿದ್ದರು. ಬಹುತೇಕರು ಉಪವಾಸ ವ್ರತಾಚರಣೆಯೊಂದಿಗೆ ಅಷ್ಟತೀರ್ಥೋತ್ಸವದಲ್ಲಿ ಭಾಗಿಯಾಗಿದ್ದರು.

ಉತ್ಸವದ ಅಂಗವಾಗಿ ಚೆಲುವನಾರಾಯಣಸ್ವಾಮಿ ಪಾದುಕೆ ಮೆರವಣಿಗೆ ಕ್ಷೇತ್ರದಲ್ಲಿರುವ ಕಲ್ಯಾಣಿಗಳ ಮೂಲಕ ಸಾಗುತ್ತಿತ್ತು. ಭಕ್ತರು ಪ್ರತಿ ಕಲ್ಯಾಣಿಗಳಲ್ಲೂ ಪವಿತ್ರ ತೀರ್ಥ ಸ್ನಾನ ಮಾಡುತ್ತಾ ಮುಂದೆ ಸಾಗುತ್ತಿದ್ದರು. ಉತ್ಸವ ನಾಗರತೀರ್ಥದ ಬಳಿ ಬಂದಾಗ ಹೆಜ್ಜೇನುಗಳು ಮುತ್ತಿವೆ. ಇದರಿಂದ ಭೀತರಾದ ಸಾವಿರಾರು ಭಕ್ತರು ದಿಕ್ಕಾಪಾಲಾಗಿ ಓಡಿದರು.

ಅಸ್ವಸ್ಥಗೊಂಡ ಭಕ್ತರನ್ನು ಮೇಲುಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆತರಲಾಯಿತು. ಆದರೆ, ಅಲ್ಲಿ ವೈದ್ಯರಿಲ್ಲದ ಕಾರಣ ಎಲ್ಲರನ್ನೂ ಪಾಂಡವಪುರ ತಾಲ್ಲೂಕು ಆಸ್ಪತ್ರೆಗೆ ಸಾಗಿಸಲಾಯಿತು. ತೀವ್ರ ಅಸ್ವಸ್ಥಗೊಂಡಿರುವ 7 ಮಂದಿಯನ್ನು ಮೈಸೂರು ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ತಿಳಿದುಬಂದಿದೆ.

ನಾಲ್ವರ ಕೊಲೆ: ಆರೋಪಿ ನ್ಯಾಯಾಂಗ ಬಂಧನಕ್ಕೆ

ಉಡುಪಿ: ಒಂದೇ ಕುಟುಂಬದ ನಾಲ್ವರ ಕೊಲೆ ಪ್ರಕರಣದ ಆರೋಪಿ ಪ್ರವೀಣ್ ಅರುಣ್ ಚೌಗಲೆಗೆ ನ್ಯಾಯಾಲಯವು 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿದೆ. ತನಿಖಾಧಿಕಾರಿ ಉಡುಪಿ ಮಂಜುನಾಥ್ ಗೌಡ ನೇತೃತ್ವದ ತಂಡ ಬುಧವಾರ ಬಿಗಿ ಭದ್ರತೆಯಲ್ಲಿ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿತು. ಈ ಸಂದರ್ಭ ನ್ಯಾಯಾಧೀಶರಾದ ದೀಪಾ, ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು. ಆರೋಪಿಯನ್ನು ಹಿರಿಯಡ್ಕ ಉಪ ಕಾರಾಗೃಹಕ್ಕೆ ಕರೆದೊಯ್ಯಲಾಯಿತು.



❦ ಸುಭಾಷಿತ ❦

ಯಶಸ್ಸು ಒಳ್ಳೆಯ ಶಿಕ್ಷಕನಲ್ಲ. ವೈಫಲ್ಯ ನಿಮ್ಮನ್ನು ವಿನಮ್ರರನ್ನಾಗಿಸುತ್ತದೆ.

–ಶಾರುಕ್ ಖಾನ್

ಅಧಿಕಾರ ವ್ಯಾಪ್ತಿ ಮೀರುವ ಕೆಲಸ ಸರ್ಕಾರದೊಡನೆ ಸಂಘರ್ಷ ಬೇಡ

ತಮಿಳುನಾಡಿನ ರಾಜ್ಯಪಾಲರನ್ನು ಉದ್ದೇಶಿಸಿ ಸುಪ್ರೀಂ ಕೋರ್ಟ್ ಕೇಳಿರುವ ಕಠಿಣ ಪ್ರಶ್ನೆಗಳು, ತಮ್ಮ ಮುಂದಿರುವ ಮಸೂದೆಗಳ ವಿಚಾರವಾಗಿ ತ್ವರಿತವಾಗಿ ಕ್ರಮ ಕೈಗೊಳ್ಳದಿರುವ ಇತರ ಕೆಲವು ರಾಜ್ಯಗಳ ರಾಜ್ಯಪಾಲರನ್ನು ಕೂಡ ಉದ್ದೇಶಿಸಿವೆ ಎಂದು ಭಾವಿಸಬಹುದು. ಮಸೂದೆಗಳ ವಿಚಾರವಾಗಿ ಯಾವುದೇ ಕ್ರಮ ಕೈಗೊಳ್ಳದ ಕಾರಣಕ್ಕಾಗಿ ಸುಪ್ರೀಂ ಕೋರ್ಟ್, ತಮಿಳುನಾಡು ರಾಜ್ಯಪಾಲರಿಗೆ ಕೆಲವು ಕಠಿಣ ಪ್ರಶ್ನೆಗಳನ್ನು ಕೇಳಿದೆ. ಕೋರ್ಟ್‌ನ ಪ್ರಶ್ನೆಗಳು ಯಾವುದೇ ಒಬ್ಬ ರಾಜ್ಯಪಾಲರನ್ನು ಉದ್ದೇಶಿಸಿಲ್ಲ, ರಾಜ್ಯಪಾಲ ಹುದ್ದೆಯನ್ನು ಉದ್ದೇಶಿಸಿವೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು ಹೇಳಿದ್ದಾರೆ. ತಮಿಳುನಾಡು ರಾಜ್ಯಪಾಲರು, ರಾಜ್ಯದ ವಿಧಾನಸಭೆಯ ಅಂಗೀಕಾರ ದೊರೆತಿರುವ ಕೆಲವು ಮಸೂದೆಗಳ ವಿಚಾರವಾಗಿ ಮೂರು ವರ್ಷಗಳಿಂದ ಯಾವುದೇ ತೀರ್ಮಾನ ಕೈಗೊಂಡಿರಲಿಲ್ಲ. ಇದೇ ಬಗೆಯ ಪರಿಸ್ಥಿತಿ ಕೇರಳದಲ್ಲಿಯೂ ಇದೆ. ಕೇರಳದಲ್ಲಿ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಎಂಟು ಮಸೂದೆಗಳ ವಿಚಾರವಾಗಿ ತೀರ್ಮಾನ ಕೈಗೊಳ್ಳಬೇಕಿದೆ. ರಾಜ್ಯಪಾಲರ ಅಂಕಿತಕ್ಕಾಗಿ ರವಾನೆಯಾಗಿರುವ ಮಸೂದೆಗಳಲ್ಲಿ ಕೆಲವು ಮೂರು ವರ್ಷಗಳಿಂದ, ಇನ್ನು ಕೆಲವು ಏಳು ತಿಂಗಳುಗಳಿಂದ ಬಾಕಿ ಉಳಿದಿವೆ ಎಂದು ಕೇರಳ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ. ಈ ಮಸೂದೆಗಳಲ್ಲಿ ಕೆಲವು, ರಾಜ್ಯಪಾಲರೇ ಹಿಂದೆ ಒಪ್ಪಿಗೆ ನೀಡಿ, ಅಧಿಸೂಚನೆಯಲ್ಲಿ ಪ್ರಕಟವಾದ ಸುಗ್ರೀವಾಜ್ಞೆಗಳ ಬದಲಿಗೆ ರೂಪಿಸಿದವು ಎಂಬುದು ಗಮನಾರ್ಹ. ಕೋವಿಡ್ ನಂತರದ ಆರೋಗ್ಯ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳು ಸೇರಿದಂತೆ ಸಾರ್ವಜನಿಕ ಮಹತ್ವದ ಹಲವು ವಿಷಯಗಳನ್ನು ಕುರಿತಾದ ಮಸೂದೆಗಳು ಇವು.



ರಾಜ್ಯಪಾಲರಿಗೆ ಕೇಂದ್ರ ಸರ್ಕಾರದ ಬೆಂಬಲ ಇದ್ದಾಗ ಮಾತ್ರ ಅವರು ರಾಜ್ಯ ಸರ್ಕಾರದ ಜೊತೆ ಸಂಘರ್ಷಕ್ಕೆ ಮುಂದಾಗುತ್ತಾರೆ. ಇದು ದೇಶದ ಒಕ್ಕೂಟ ವ್ಯವಸ್ಥೆಗೆ ಗಂಭೀರ ಅಪಾಯ ಕೂಡ ಹೌದು

ಕೇರಳ ರಾಜ್ಯ ಸರ್ಕಾರ ಸಲ್ಲಿಸಿರುವ ಅರ್ಜಿಗೆ ಪ್ರತಿಯಾಗಿ ಸುಪ್ರೀಂ ಕೋರ್ಟ್, ಕೇರಳ ರಾಜ್ಯಪಾಲರ ಪ್ರಧಾನ ಕಾರ್ಯದರ್ಶಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೆ ಆದೇಶಿಸಿದೆ. ಇದೇ ಬಗೆಯ ನೋಟಿಸ್ ಅನ್ನು ಸುಪ್ರೀಂ ಕೋರ್ಟ್, ಈ ಹಿಂದೆ ತಮಿಳುನಾಡು ಸರ್ಕಾರವು ಅಲ್ಲಿನ ರಾಜ್ಯಪಾಲರ ನಿಷ್ಕ್ರಿಯತೆಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಅರ್ಜಿ ಸಲ್ಲಿಸಿದ್ದಾಗಲೂ ನೀಡಿತ್ತು. ತಮಿಳುನಾಡಿನ ರಾಜ್ಯಪಾಲ ಆರ್.ಎನ್. ರವಿ ಅವರು ಕೋರ್ಟ್‌ನಿಂದ ನೋಟಿಸ್ ಬಂದ ನಂತರದಲ್ಲಿ ಎಲ್ಲ ಮಸೂದೆಗಳನ್ನು ವಾಪಸ್ ಕಳುಹಿಸಿದ್ದಾರೆ ಎಂದು ವರದಿಯಾಗಿದೆ. ಇದಾದ ನಂತರ ತಮಿಳುನಾಡು ವಿಧಾನಸಭೆಯು ಆ ಎಲ್ಲ ಮಸೂದೆಗಳಿಗೆ ಮರು ಅಂಗೀಕಾರ ನೀಡಿ, ಅವುಗಳನ್ನು ಮತ್ತೆ ರಾಜ್ಯಪಾಲರ ಒಪ್ಪಿಗೆಗೆ ರವಾನಿಸಿದೆ. ತಮಿಳುನಾಡು ರಾಜ್ಯಪಾಲರ ನಡೆಯು ಕೋರ್ಟ್ ಕೆಲವು ಪ್ರಶ್ನೆಗಳನ್ನು ಕೇಳುವಂತೆ ಮಾಡಿದೆ. ‘ರಾಜ್ಯಪಾಲರು ಮೂರು ವರ್ಷಗಳಿಂದ ಏನು ಮಾಡುತ್ತಿದ್ದರು’ ಎಂದು ಕೂಡ ಕೋರ್ಟ್ ಪ್ರಶ್ನಿಸಿದೆ. ರಾಜ್ಯಪಾಲ ಹುದ್ದೆಯು ಬಹಳ ದೊಡ್ಡ ಸಾಂವಿಧಾನಿಕ ಹುದ್ದೆ. ಇಂತಹ ಹುದ್ದೆಯಲ್ಲಿ ಇರುವವರಿಗೆ ಇಂತಹ ಪ್ರಶ್ನೆಯನ್ನು ಕೇಳಬೇಕಾಗಿ ಬಂದುದು ವಿಷಾದಕರ. ರಾಜ್ಯಪಾಲರು ತಮ್ಮ ಸಾಂವಿಧಾನಿಕ ಹೊಣೆ ನಿಭಾಯಿಸುವಲ್ಲಿ ವಿಫಲರಾಗಿದ್ದಾರೆ ಎಂಬುದು ಕೋರ್ಟ್ ಮಾತಿನ ಅರ್ಥ. ನೋಟಿಸ್ ಜಾರಿಯಾದ ನಂತರವಷ್ಟೇ ರಾಜ್ಯಪಾಲರು ಕೆಲವು ಕ್ರಮಗಳನ್ನು ಕೈಗೊಂಡಿದ್ದಾರೆ ಎಂದು ಕೋರ್ಟ್ ಹೇಳಿದೆ.

ಸರ್ಕಾರಗಳು ಸುಪ್ರೀಂ ಕೋರ್ಟ್ ಮೆಟ್ಟಿಲೇರುವವರೆಗೂ ರಾಜ್ಯಪಾಲರು ಸುಮ್ಮನೆ ಕುಳಿತಿರಬೇಕಾದ ಅಗತ್ಯ ಏನಿದೆ ಎಂದು ಕೋರ್ಟ್ ಕೇಳಿರುವ ಪ್ರಶ್ನೆಯು ಮಹತ್ವದ್ದಾಗುತ್ತದೆ. ಬಿಜೆಪಿ ಆಡಳಿತ ಇಲ್ಲದ ರಾಜ್ಯಗಳಲ್ಲೇ ಇಂತಹ ಸಮಸ್ಯೆಗಳು ಸೃಷ್ಟಿಯಾಗಿವೆ. ಅಲ್ಲಿ ರಾಜ್ಯಪಾಲರು ತಮಗೆ ರವಾನಿಸಿದ ಮಸೂದೆಗಳು ಹಾಗೂ ಕಡತಗಳ ವಿಚಾರದಲ್ಲಿ ಯಾವುದೇ ತೀರ್ಮಾನ ತೆಗೆದುಕೊಳ್ಳುತ್ತಿಲ್ಲ. ಅವರು ಸರ್ಕಾರಗಳ ತೀರ್ಮಾನ ಮತ್ತು ನೀತಿಗಳನ್ನು ಸಾರ್ವಜನಿಕವಾಗಿ ವಿರೋಧಿಸುತ್ತಿದ್ದಾರೆ. ಆಡಳಿತದಲ್ಲಿ ಅಡಚಣೆ ಸೃಷ್ಟಿಸುತ್ತಿದ್ದಾರೆ. ಇಂತಹ ದೂರು ಹೊತ್ತು ಪಂಜಾಬ್ ಮತ್ತು ತೆಲಂಗಾಣ ಕೂಡ ಕೋರ್ಟ್ ಮೆಟ್ಟಿಲೇರಿವೆ. ಸುಪ್ರೀಂ ಕೋರ್ಟ್ ಈ ಪ್ರಶ್ನೆಗಳನ್ನು ಕೇಳಿದ ದಿನವೇ ಕೇರಳದ ರಾಜ್ಯಪಾಲ ಆರಿಫ್ ಮಹಮ್ಮದ್ ಖಾನ್ ಅವರು ವಿಶ್ವವಿದ್ಯಾಲಯವೊಂದರ ಸೆನೆಟ್ ಅನ್ನು ಪುನರ್ ರಚಿಸಿದ್ದಾರೆ. ಆ ಮೂಲಕ, ಕುಲಪತಿಯ ಶಿಫಾರಸನ್ನು ಅನುಮೋದಿಸುವ ಸಂಪ್ರದಾಯವನ್ನು ಮೀರಿದ್ದಾರೆ. ರಾಜ್ಯಪಾಲರಿಗೆ ಕೇಂದ್ರ ಸರ್ಕಾರದ ಬೆಂಬಲ ಇದ್ದಾಗ ಮಾತ್ರ ಅವರು ರಾಜ್ಯ ಸರ್ಕಾರದ ಜೊತೆ ಸಂಘರ್ಷಕ್ಕೆ ಮುಂದಾಗುತ್ತಾರೆ. ಇದು ದೇಶದ ಒಕ್ಕೂಟ ವ್ಯವಸ್ಥೆಗೆ ಗಂಭೀರ ಅಪಾಯ ಕೂಡ ಹೌದು.

ದಿನದ ಟ್ವೀಟ್

ಮಾದರಿ ನಡೆ



ಆಸ್ಟ್ರೇಲಿಯಾದಂತಹ ದೇಶಗಳಿಂದ ನಾವು ಕಲಿಯಬೇಕಾದುದು ಬಹಳಷ್ಟಿದೆ. ಯಾರೊಬ್ಬರೂ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ, ಬಹುಶಃ ಬಹುತೇಕರು ಆಟವನ್ನು ನೋಡುವುದೂ ಇಲ್ಲ ಎನಿಸುತ್ತದೆ. ವ್ಯಕ್ತಿ ಆರಾಧನೆಯ ಬದಲಿಗೆ ಮಾಡಲು ಅವರಿಗೆ ಬೇರೆ ಕೆಲಸ ಇದೆ. ಹೀಗಾಗಿಯೇ ಅವರು ಗೆಲ್ಲುವುದೇನೊ? ಎಷ್ಟೊಂದು ಕಡಿಮೆ ಒತ್ತಡ. ಭಾರತವೇನಾದರೂ ವಿಶ್ವಕಪ್ ಗೆದ್ದಿದ್ದರೆ ಪೊಲೀಸ್ ಬಂದೋಬಸ್ತ್ ಏರ್ಪಡಿಸಬೇಕಾಗುತ್ತಿತ್ತು.

ಶ್ರುತಿ ಚತುರ್ವೇದಿ, ಉದ್ಯಮಿ

ಕಿಡಿನುಡಿ



ಬೆಂಗಳೂರಿನ ಬಹುತೇಕ ರಸ್ತೆಗಳಲ್ಲಿ ಮನೆ ಮಾಲೀಕರು ತಮ್ಮ ಕಟ್ಟಡಗಳ ಎದುರಿನ ಜಾಗವನ್ನು ಖಾಸಗಿ ವಾಹನ ನಿಲುಗಡೆ ಸ್ಥಳ ಎಂದು ವಾದಿಸುತ್ತಾರೆ ಮತ್ತು ಅಲ್ಲಿ ‘ನೋ ಪಾರ್ಕಿಂಗ್’ ಫಲಕಗಳನ್ನೂ ಹಾಕಿಕೊಂಡಿರುತ್ತಾರೆ. ರಸ್ತೆಯ ಜಾಗವು ಸಾರ್ವಜನಿಕರಿಗೆ ಸೇರಿದ್ದೇ ವಿನಾ ಖಾಸಗಿ ವ್ಯಕ್ತಿಗಳಿಗಲ್ಲ. ಸರ್ಕಾರ ಅಂತಹ ಫಲಕಗಳನ್ನು ತೆಗೆಸಬೇಕು ಮತ್ತು ಪ್ರತಿಯೊಬ್ಬರೂ ಅಲ್ಲಿ ವಾಹನ ನಿಲ್ಲಿಸುವುದಕ್ಕೆ ಅನುವು ಮಾಡಿಕೊಡಬೇಕು. ಅವರು ಹಣ ನೀಡಿ ವಾಹನ ನಿಲ್ಲಿಸುವಂತೆ ಮಾಡುವುದು ಉತ್ತಮ ಪರಿಹಾರ.

ಆನಂದ ಗುಂಡೂರಾವ್, ಬಿ–ಪ್ಯಾಕ್ ಸದಸ್ಯ

25 ವರ್ಷಗಳ ಹಿಂದೆ

ಸೋಮವಾರ, 23-11-1998

• **ಸಂಪುಟ ಪುನರ್ರಚನೆ ಪಟೇಲ್ ಹೇಳಿಕೆಗೆ ಭಿನ್ನರ ಆಕ್ಷೇಪ**

ಬೆಂಗಳೂರು, ನ. 22– ರಾಜ್ಯದ ಸಚಿವ ಸಂಪುಟ ಪುನರ್ರಚನೆ ಹಾಗೂ ಜನತಾದಳದ ಸಂಘಟನೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಬಗ್ಗೆ ದಳದ ಭಿನ್ನಮತೀಯ ಶಾಸಕರಲ್ಲಿ ಅಸಮಾಧಾನ ವ್ಯಕ್ತವಾಗಿದೆ.

ನಾಯಕತ್ವ ಬದಲಾವಣೆಯೂ ಸೇರಿದಂತೆ ಜನತಾದಳದ ಅನೇಕ ಆಂತರಿಕ ಸಮಸ್ಯೆಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಅಧಿಕಾರವನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಶರದ್ ಯಾದವ್ ಅವರಿಗೆ ಬಿಟ್ಟಿರುವ ಹಿನ್ನೆಲೆಯಲ್ಲಿ, ಮುಖ್ಯಮಂತ್ರಿಗಳು ಏಕಪಕ್ಷೀಯವಾಗಿ ಈ ರೀತಿ ಹೇಳಿಕೆ ನೀಡಿರುವುದು ಪಕ್ಷದೊಳಗಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಲಕ್ಷಣವಲ್ಲ ಎಂಬುದು ಭಿನ್ನಮತೀಯರ ಅಭಿಪ್ರಾಯವಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 23-11-1973

• **ಪ್ರತಿ ಹಳ್ಳಿಗೂ ಭೇಟಿ: ವೃದ್ಧರನ್ನು ಗುರುತಿಸಿ ವೇತನ ನೀಡಿಕೆಗೆ ಕ್ರಮ**

ಬೆಂಗಳೂರು, ನ. 22– ಮುಂದಿನ ಡಿಸೆಂಬರ್ ಅಥವಾ ಜನವರಿ ತಿಂಗಳಿನಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ರಾಜ್ಯದ ಪ್ರತಿ ಹಳ್ಳಿಗೆ ಭೇಟಿ ನೀಡಿ ವೃದ್ಧಾಪ್ಯ ವೇತನಕ್ಕೆ ಅರ್ಹರಾದವರನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳಲಿದ್ದಾರೆ.

ವೃದ್ಧಾಪ್ಯ ವೇತನ ನಿರ್ಧಾರ ಹಾಗೂ ಪಾವತಿಯಲ್ಲಿ ವಿಳಂಬವಾಗುತ್ತಿರುವುದನ್ನು ಗಮನಿಸಿ, ಈ ಸಂಬಂಧದಲ್ಲಿ ತ್ವರಿತ ಕ್ರಮ ಕೈಗೊಂಡು ಈ ಕೆಲಸವನ್ನು ಮುಗಿಸುವ ಉದ್ದೇಶದಿಂದ ಡಿಸೆಂಬರ್ ಅಥವಾ ಜನವರಿಯಲ್ಲಿ ‘ವೃದ್ಧಾಪ್ಯ ವೇತನ ವಾರ’ ಆಚರಿಸಲಾಗುವುದು.

• **20 ದಿನಗಳಲ್ಲಿ ನಗರಕ್ಕೆ ‘ಕಾವೇರಿ’**

ಬೆಂಗಳೂರು, ನ. 22– ಬೆಂಗಳೂರು ನಗರಕ್ಕೆ ಕಾವೇರಿಯಿಂದ ಕುಡಿಯುವ ನೀರು ಒದಗಿಸುವ 34 ಕೋಟಿ ರೂಪಾಯಿಗಳ ವೆಚ್ಚದ ಯೋಜನೆಯು ಇನ್ನು 20 ದಿನಗಳಲ್ಲಿ ಪೂರ್ತಿಗೊಂಡು, ನೀರು ಹರಿಯಲು ಆರಂಭವಾಗುತ್ತದೆ.

• **ಫೋನ್ ಕದ್ದು ಕೇಳುವುದಕ್ಕೆ ಮದ್ದು**

ನವದೆಹಲಿ, ನ. 22– ಎಲೆಕ್ಟ್ರಾನಿಕ್ ಉಪಕರಣದ ಮೂಲಕ ಟೆಲಿಫೋನ್ ಸಂಭಾಷಣೆಯನ್ನು ಕದ್ದು ಕೇಳುವುದು ಇನ್ನು ಮುಂದೆ ಅಕ್ಷರಶಃ ಅಸಾಧ್ಯವಾಗುತ್ತದೆ.

ಬ್ರಿಟಿಷ್ ಸಂಸ್ಥೆಯೊಂದು ಕದ್ದು ಕೇಳುವುದನ್ನು ತಪ್ಪಿಸುವ ಹೊಸ ಉಪಕರಣವೊಂದನ್ನು ಕಂಡುಹಿಡಿದಿದೆ. ಈ ಉಪಕರಣವನ್ನು ಟೆಲಿಫೋನಿಗೆ ಜೋಡಿಸಬಹುದು. ರಹಸ್ಯ ವಿಚಾರ ಮಾತನಾಡುವಾಗ ಗುಂಡಿ ಒತ್ತುವ ಮೂಲಕ ಈ ಉಪಕರಣವನ್ನು ಚಾಲೂ ಮಾಡಬಹುದು. ಆಗ ಕದ್ದು ಕೇಳುವವರಿಗೆ ಅರ್ಥರಹಿತ ಶಬ್ದ ಕೇಳಿಸುವುದು. ಸ್ಪಷ್ಟವಾಗಿ ಏನೂ ಕೇಳಿಸುವುದಿಲ್ಲ. ಇನ್ನೊಂದು ತುದಿಯ ಟೆಲಿಫೋನಿನಲ್ಲಿ ಗೊಂದಲಮಯ ಶಬ್ದಗಳನ್ನು ಆಡುಭಾಷೆಯಾಗಿ ಭಾಷಾಂತರಿಸುವ ಉಪಕರಣವಿರುತ್ತದೆ.

ಮಕ್ಕಳ ಬಗ್ಗೆ ಹಿರಿಯ ನಾಗರಿಕರಿಗೆ ಯಾವುದೇ ರೀತಿಯ ಭ್ರಮೆ ಸಲ್ಲದು

ಪೋಷಕರ ಪೋಷಣೆ: ಹೊರೆಯಲ್ಲ ಹೊಣೆ



ವಿಶ್ಲೇಷಣೆ

ಡಾ. ಕೆ.ಎಸ್.ಪವಿತ್ರ

ಬದುಕಿನ ಮುಸ್ಸಂಜೆಯಲ್ಲಿರುವ ಅಪ್ಪ- ಅಮ್ಮನನ್ನು ನೋಡಿಕೊಳ್ಳುವುದನ್ನು ಮಕ್ಕಳು ಅವರಿಗೆ ತೋರುವ ಕೃಪೆ ಎಂದು ಭಾವಿಸಬೇಕಾಗಿಲ್ಲ, ಹೆತ್ತವರನ್ನು ನೋಡಿಕೊಳ್ಳುವುದು ಕಾನೂನು ಬಾಧ್ಯತೆಯಷ್ಟೇ ಅಲ್ಲ, ಅದು ಮಕ್ಕಳ ನೈತಿಕ ಜವಾಬ್ದಾರಿಯೂ ಹೌದು; ಪೋಷಕರಿಂದ ಮಕ್ಕಳು ಆಸ್ತಿಯನ್ನು ಪಡೆದಿದ್ದರಂತೂ ಅದು ಅವರು ಕಡ್ಡಾಯವಾಗಿ ನಿರ್ವಹಿಸಬೇಕಾದ ಕಾರ್ಯ ಎಂಬರ್ಥದ ಮಾತುಗಳನ್ನು ಕರ್ನಾಟಕ ಹೈಕೋರ್ಟ್ ಇತ್ತೀಚೆಗೆ ಪ್ರಕರಣವೊಂದರ ವಿಚಾರಣೆ ಸಂದರ್ಭದಲ್ಲಿ ಹೇಳಿರುವುದು ಪತ್ರಿಕೆಗಳಲ್ಲಿ ಸಣ್ಣ ಸುದ್ದಿಯಾಗಿ ಪ್ರಕಟವಾಯಿತು. ಈ ವಿಚಾರವು ನಮ್ಮ ಸುತ್ತಮುತ್ತ ದಿನನಿತ್ಯ ನಾವು ನೋಡುತ್ತಲೇ ಇರುವಂತಹ ಸಂಗತಿಯ ಒಂದು ಭಾಗವಾಗಿ ನಮ್ಮನ್ನು ಚಿಂತನೆಗೆ ಹಚ್ಚಬೇಕು.

ಭಾರತೀಯರ ಸರಾಸರಿ ಆಯುಷ್ಯ ಹೆಚ್ಚಿದೆ. ಇದರಿಂದ ಸಹಜವಾಗಿಯೇ ನಮ್ಮ ಸಮಾಜದಲ್ಲಿ 60 ವರ್ಷ ವಯಸ್ಸಿನ ವ್ಯಕ್ತಿಗಳು ‘ವೃದ್ಧರು’ ಎಂದು ಕರೆಸಿಕೊಳ್ಳುವುದಕ್ಕೇ ನಿರಾಕರಿಸುತ್ತಿದ್ದಾರೆ. 80ರ ಹತ್ತಿರದವರು ಬಹಳಷ್ಟು ಜನ ಇದ್ದಾರೆ! ಇಂತಹ ಸಂದರ್ಭದಲ್ಲಿ ಮಕ್ಕಳು ಅವರೊಡನೆ ಕೊನೆಯವರೆಗೂ ಇರುತ್ತಾರೋ ಇಲ್ಲವೋ ಹಲವು ಕಾಯಿಲೆಗಳಂತೂ ಜೀವಿಸುತ್ತವೆ! ಹಾಗಾಗಿ, ಈಗ ಹಿರಿಯ ನಾಗರಿಕರ ಆರೈಕೆಯು ಸಮಾಜ ಚಿಂತಿಸಲೇಬೇಕಾದ ತುರ್ತಿನ ಸಂಗತಿ ಎಂದೇ ವೈದ್ಯಕೀಯ ಕ್ಷೇತ್ರ ಭಾವಿಸಿದರೆ ಅದು ಅಚ್ಚರಿಯ ಮಾತೇನಲ್ಲ.

ನಾನು ದಿನನಿತ್ಯ ನೋಡುವ ಆರೋಗ್ಯ ಸಮಸ್ಯೆಗಳಲ್ಲಿ ಹಿರಿಯ ನಾಗರಿಕರ ಸಮಸ್ಯೆಗಳು ಇಂದು ಒಟ್ಟು ರೋಗಿಗಳ ಅರ್ಧದಷ್ಟು ಸಂಖ್ಯೆಯನ್ನು ಮೀರುತ್ತವೆ. ಆಸ್ಪತ್ರೆ ಎಂತಹ ಆಧುನಿಕ ಸೌಲಭ್ಯಗಳನ್ನೇ ನೀಡಬಹುದು. ಆದರೂ ಹಿರಿಯ ನಾಗರಿಕರು ಏಕಾಂಗಿಯಾಗಿ ಅಥವಾ ಸಂಗಾತಿಯೊಟ್ಟಿಗೆ ಒದ್ದಾಡಿಕೊಂಡು ಚಿಕಿತ್ಸೆಗೆ ಬರುವುದು ಇಂದು ಸರ್ವೇಸಾಮಾನ್ಯ.

ಎಷ್ಟೋ ಬಾರಿ ಮಕ್ಕಳು ದೂರದ ದೇಶಗಳಲ್ಲಿ, ದೂರದ ಊರುಗಳಲ್ಲಿ ನೆಲೆಸಿರಬಹುದು, ಕಲಹದ ಕಾರಣದಿಂದ ಅಪ್ಪ-ಅಮ್ಮನ ಜೊತೆ ಮಾತೇ ಆಡದೆ ದೂರ ಉಳಿದಿರಬಹುದು ಅಥವಾ ಅಪ್ಪ- ಅಮ್ಮನ ಆರೋಗ್ಯ ಸಮಸ್ಯೆಗಳ ಬಗ್ಗೆ ಕಿಂಚಿತ್ತೂ ಅರಿವಿರದೆ, ಇದ್ದಕ್ಕಿದ್ದಂತೆ ಒಂದು ದಿನ ಬಂದು ವೈದ್ಯರನ್ನೇ ‘ಇವರಿಗೆ ನಿಜವಾಗಿಯೂ ಆರೋಗ್ಯದ ಸಮಸ್ಯೆ ಇದೆಯೇ? ಚಿಕಿತ್ಸೆಗಾಗಿ ಖರ್ಚು ಮಾಡಲೇಬೇಕೆ’ ಎಂದು ಪ್ರಶ್ನಿಸಬಹುದು.

ಕೆಲವೊಮ್ಮೆ ವೈದ್ಯರೇ ಮಕ್ಕಳ ಫೋನ್ ನಂಬರನ್ನು ತೆಗೆದುಕೊಂಡು, ಅವರಿಗೆ ಕರೆ ಮಾಡಿ, ‘ನಿಮ್ಮ ಅಪ್ಪ- ಅಮ್ಮನಿಗೆ ಈ ರೀತಿಯ ಆರೋಗ್ಯ ಸಮಸ್ಯೆಯಿದೆ. ಬಂದು ಮಾಹಿತಿ ಪಡೆಯಿರಿ’ ಎಂದು ಹೇಳಬೇಕಾಗಿಯೂ ಬರಬಹುದು. ಈ ಸಂಗತಿಯನ್ನು ಸ್ವಲ್ಪ ವಿವರವಾಗಿ ಪರಿಶೀಲಿಸಿದಾಗ, ಅದರ ಹಿನ್ನೆಲೆಯಲ್ಲಿ ಕಾಣುವ ಹಲವು ಅಂಶಗಳು ಹೇಳುವುದೇನು? ಸಮಸ್ಯೆ ಅಷ್ಟು ಸರಳವಾಗಿಲ್ಲ, ಸಂಬಂಧಗಳು, ರೂಢಿಗತ ಧೋರಣೆಗಳು, ಆಸ್ತಿ ಹಕ್ಕಿನಂತಹ ಹಲವು ಗೋಜಲು, ಗೊಂದಲಗಳಿಂದ ಕಗ್ಗಂಟಾಗಿವೆ. ಹಾಗಾಗಿ, ಇದು ನಿಧಾನವಾಗಿ, ಸಹನೆಯಿಂದ ಬಿಡಿಸಿಕೊಳ್ಳಬೇಕಾದ ಸಂಕೀರ್ಣ ಸಮಸ್ಯೆ ಎಂಬ ವಾಸ್ತವ ತಿಳಿಯುತ್ತದೆ!

ಕಾನೂನು ಏನೇ ಹೇಳಬಹುದು, ಸಮಾಜದಲ್ಲಿ ಏನೇ ನಡೆಯಬಹುದು, ಗಂಡುಮಕ್ಕಳಿರುವ ತಂದೆ–ತಾಯಿ ‘ವಯಸ್ಸಾದ ನಂತರ ಮಗ ನಮ್ಮ ಆರೈಕೆ ಮಾಡುತ್ತಾನೆ’ ಎಂದು ಬಲವಾಗಿಯೇ ನಂಬುತ್ತಾರೆ. ಹಾಗಾಗಿ, ‘ಆಸ್ತಿ ಅವನದೇ ಹಕ್ಕು’ ಎಂದೇ ಅನ್ನುತ್ತಾರೆ. ಹೆಣ್ಣುಮಕ್ಕಳಷ್ಟೇ ಇರುವ ತಂದೆ- ತಾಯಿ ‘ತಮ್ಮನ್ನು ತಾವು ನೋಡಿಕೊಳ್ಳಬೇಕು’ ಎಂದು ಮಾನಸಿಕವಾಗಿ ಸಿದ್ಧರಾಗುತ್ತಾರೆ. ಆದರೆ ಮಕ್ಕಳು ತಂದೆ– ತಾಯಿಯನ್ನು ನೋಡಿಕೊಳ್ಳಬೇಕು ಎಂದಾದರೆ, ಅವರಿಗೆ ಅದಕ್ಕೆ ಪ್ರತಿಯಾಗಿ ‘ಏನನ್ನಾದರೂ’ ನೀಡಬೇಕು. ಅಂದರೆ, ಆಸ್ತಿ ದಕ್ಕಬೇಕು ಎನ್ನುವ ‘ನಿಯಮ’ ನಮಗೇ ಗೊತ್ತಿಲ್ಲದಂತೆ ನಮ್ಮೆಲ್ಲರ ಗ್ರಹಿಕೆಯಲ್ಲಿ ಗಟ್ಟಿಯಾಗಿ ಕುಳಿತುಬಿಟ್ಟಿದೆ!

ತಂದೆ– ತಾಯಿಯ ಆರೈಕೆಯ ಹೊಣೆ ಎಲ್ಲ ಮಕ್ಕಳದು, ಆಸ್ತಿಯೂ ಎಲ್ಲರದು ಎಂಬ ಸರಳ-ಸುಲಭ ಸೂತ್ರ ಯಾರಿಗೂ ಪಥ್ಯವಾಗದ ಅಂಶ. ಇದರ ಪರಿಣಾಮವೆಂದರೆ, ಹಲವು ರೀತಿಯ ಸಮಸ್ಯೆಗಳು. ಬಹುಶಃ ವೈದ್ಯಕೀಯ ಕ್ಷೇತ್ರದಲ್ಲಿ ಕಾಣಬರುವ ಹಲವು ಸಂದರ್ಭಗಳು ನ್ಯಾಯಾಲಯದ ಹಂತಕ್ಕೆ, ಮಾಧ್ಯಮಗಳ ಗಮನಕ್ಕೆ ಬರಲಾರದ ಸಾಧ್ಯತೆ ಇರುವುದರಿಂದ, ಅವುಗಳ ಸಂಕೀರ್ಣತೆ, ವೈವಿಧ್ಯ ಹೆಚ್ಚಿನವರ ತಿಳಿವಿಗೆ ಸಿಗಲಾರದು. ಉದಾಹರಣೆಗೆ, ಹಳ್ಳಿಯಲ್ಲಿ ತಾಯಿಯು ಗಂಡುಮಕ್ಕಳ ಜೊತೆಗೆ ವಾಸಿಸುತ್ತಾಳೆ. ತಾಯಿಗೆ ಸಾಮಾನ್ಯವಾಗಿ ಮುಪ್ಪಿನಲ್ಲಿ ಬರುವ ಡಿಮೆನ್ಷಿಯಾ ಕಾಯಿಲೆ. ಮನೆಯಲ್ಲಿ ನೋಡಿಕೊಳ್ಳುವ ವ್ಯಕ್ತಿ ಆಕೆಯ ಸೊಸೆ. ವೈದ್ಯರ ಬಳಿ ಕರೆತರುವುದು ನೂರಾರು ಮೈಲಿ ದೂರ ವಾಸಿಸುವ ಮಗಳು. ತನ್ನ ಅಣ್ಣನ ಹೆಂಡತಿ ತಾಯಿಯನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ ಎಂಬುದು ಆಕೆಯ ದೂರು. ‘ನಿಮ್ಮ ಬಳಿಯೇ ಇಟ್ಟುಕೊಂಡು ಸರಿಯಾಗಿ ಆರೈಕೆ ಮಾಡಿ’ ಎಂದರೆ, ಮಗಳಿಗಿಂತ ಮೊದಲು ತಾಯಿ ಹೇಳುವ ಮಾತು, ‘ಹೆಣ್ಣುಮಗಳ ಮನೆಗೆ ಹೋಗಿ ಉಳಿಯಲು ನನ್ನ ಮನಸ್ಸು ಒಪ್ಪೀತೇ? ನೋಡಿದ ಜನ ಏನೆಂದಾರು?’

ಮತ್ತೊಂದು ನಿದರ್ಶನ. ಜೊತೆಯಲ್ಲಿರುವ ಕಿರಿಯ ಮಗ, ಚೆನ್ನಾಗಿ ನೋಡಿಕೊಳ್ಳುವ ಸೊಸೆ. ಆದರೂ ಅಪ್ಪ- ಅಮ್ಮನಿಗೆ, ಆಸ್ತಿಯ ಕಲಹದಿಂದ ಕೋಪಗೊಂಡಿರುವ ತಮ್ಮೊಂದಿಗೆ ಮಾತೇ ಆಡದ ಹಿರಿಯ ಮಗನದ್ದೇ ಕೊರಗು. ಇನ್ನೊಂದು ಉದಾಹರಣೆ, ಮಗಳು ತಾಯಿಯನ್ನು ತನ್ನ ಬಳಿ ಇಟ್ಟುಕೊಂಡು ಸರಿಯಾಗಿ ಚಿಕಿತ್ಸೆ ಕೊಡಿಸುತ್ತಾ ಆರೈಕೆ ಮಾಡುತ್ತಿದ್ದಾಳೆ. ಆಕೆಯ ಸಹೋದರ ಮದ್ಯವ್ಯಸನಿ. ತಾಯಿಯೇನಾದರೂ ಅವನ ಹೆಸರಿಗೆ ಆಸ್ತಿ ಬರೆದು, ಕೊನೆಗೆ ಅವನು ಅದನ್ನೂ ಕಳೆದುಹಾಕಿ ಯಾರಿಗೂ ಇಲ್ಲದಂತೆ ಮಾಡಿಯಾನು ಎಂಬ ಕಳವಳ ಅವಳಿಗೆ. ತಾಯಿಗೆ ಮಾತ್ರ ಮಗನದೇ ಹಂಬಲ. ಇಲ್ಲಿ ಯಾರು ಸರಿ, ಯಾರು ತಪ್ಪು?!

ಇಂತಹ ನಿದರ್ಶನಗಳನ್ನು ನೋಡುತ್ತಾ ಸಾಗಿದರೆ, ಆಸ್ತಿ- ಆರೈಕೆ- ಮಕ್ಕಳ ಕುಟುಂಬ ಎಲ್ಲಕ್ಕೂ ಪರಸ್ಪರ ಕೊಂಡಿಗಳು ಬೆಸೆದುಕೊಳ್ಳುತ್ತಾ ಸಾಗುತ್ತವೆ. ಹಿರಿಯ ನಾಗರಿಕರು ಬರೀ ಪುರಾಣ- ಆಧ್ಯಾತ್ಮಿಕ ಕೃತಿಗಳನ್ನು ಓದಿದರಷ್ಟೇ ಸಾಕಾಗದು. ಅವುಗಳಿಂದ ಕಲಿತದ್ದನ್ನು ಪ್ರಾಯೋಗಿಕವಾಗಿ ಅಳವಡಿಸಿಕೊಂಡು, ‘ಮಕ್ಕಳೆಂಬ ಮೋಹ’ಕ್ಕೆ ಕುರುಡಾಗಿ ಅಂಟದಿರುವುದನ್ನು ಪ್ರಯತ್ನಪೂರ್ವಕವಾಗಿ ಸಾಧಿಸುವುದು ಮಹತ್ವದ್ದು ಎನಿಸುತ್ತದೆ. ತಮ್ಮ ಆರ್ಥಿಕ ಸಂಕಷ್ಟಗಳ ಬಗ್ಗೆ ಮಕ್ಕಳೊಡನೆ ಚರ್ಚಿಸುವುದು, ಆರೋಗ್ಯದ ಸಮಸ್ಯೆಗಳ ಬಗೆಗೆ ಹಂಚಿಕೊಳ್ಳುವುದು, ಮಕ್ಕಳು ತಮ್ಮ ಭಾವನೆಗಳಿಗೆ ಸ್ಪಂದಿಸುವುದನ್ನು ಕಲಿಸುವುದು ಪೋಷಕರು ಅಗತ್ಯವಾಗಿ ಮಾಡಬೇಕಾದ ಕಾರ್ಯಗಳು.

ಗಂಡುಮಕ್ಕಳಿರಲಿ, ಹೆಣ್ಣುಮಕ್ಕಳಿರಲಿ, ಅವರ ಮೇಲೆ ಪೋಷಕರಿಗೆ ಅತಿಯಾದ ಭಾವನಾತ್ಮಕ ಅವಲಂಬನೆ ಸಲ್ಲದು. ‘ನಮ್ಮ ಮಕ್ಕಳು ಹಾಗೆ ಮಾಡುವುದಿಲ್ಲ’, ‘ನಮ್ಮ ಮಕ್ಕಳು ಆ ರೀತಿಯಲ್ಲ’ ಎಂಬ ಭ್ರಮೆ ಯಾರಿಗೂ ಸಲ್ಲದು. ಭಾವನೆಗಳನ್ನು ಬದಿಗಿರಿಸಿ, ಪ್ರಾಯೋಗಿಕವಾಗಿ, ವ್ಯಾವಹಾರಿಕವಾಗಿ ಆಸ್ತಿಯನ್ನು ವಿಂಗಡಿಸುವುದು, ಸರಿಯಾದ ಉಯಿಲು, ತಮ್ಮ ಭಾಗವನ್ನು ಕಡ್ಡಾಯವಾಗಿ ತಮ್ಮ ಹಕ್ಕಿನಲ್ಲಿಯೇ ಇಟ್ಟುಕೊಳ್ಳುವುದು ಇವು ಹಿರಿಯ ನಾಗರಿಕರು ಕೈಗೊಳ್ಳಬೇಕಾದ ಕ್ರಮಗಳು. ಉಯಿಲನ್ನೇ ಮಾಡದಿರುವುದು, ತಾವು ಮೃತರಾದ ಮೇಲೆ ಮಕ್ಕಳು ಏನಾದರೂ ಮಾಡಿಕೊಳ್ಳಲಿ ಎಂಬ ಧೋರಣೆ ಹಿರಿಯ ನಾಗರಿಕರನ್ನೂ ಅವರ ಸಂತತಿಯನ್ನೂ ನರಳಿಸುವ ಸಾಧ್ಯತೆಯೇ ಹೆಚ್ಚು.

‘ಹಿರಿಯ ನಾಗರಿಕರ ಮೇಲಿನ ಹಿಂಸೆ’ ಜಗತ್ತಿನಾದ್ಯಂತ ಕಂಡುಬರುತ್ತಿರುವ ಸಮಸ್ಯೆ. 2022ರಲ್ಲಿ ನಡೆದ ಸಮೀಕ್ಷೆಯೊಂದು, ಭಾರತೀಯ ಹಿರಿಯ ನಾಗರಿಕರಲ್ಲಿ ಶೇ 35ರಷ್ಟು ಮಂದಿ ತಮ್ಮ ಗಂಡುಮಕ್ಕಳಿಂದ, ಶೇ 21ರಷ್ಟು ಮಂದಿ ಸೊಸೆಯಂದಿರಿಂದ, ಶೇ 2ರಷ್ಟು ಮಂದಿ ಇತರರಿಂದ ದೌರ್ಜನ್ಯಕ್ಕೆ ಒಳಗಾಗುತ್ತಾರೆ ಎಂಬುದನ್ನು ತೋರಿಸಿದೆ. ಅಗೌರವ, ಬೈಗುಳ, ಅಲಕ್ಷ್ಯ, ಒತ್ತಾಯಪೂರ್ವಕವಾಗಿ ಆಸ್ತಿ ಬರೆಸಿಕೊಳ್ಳುವುದು ಇದರಲ್ಲಿ ಪ್ರಮುಖವಾದವು. ‘ತಾಮ್ರದ ದುಡ್ಡು ತಾಯಿ ಮಕ್ಕಳನ್ನು ಅಗಲಿಸಿತು’ ಎಂಬ ಗಾದೆ ಇಂದೂ ನಿಜವೇ.

ಮಕ್ಕಳ ಹೊಣೆ ಯಾರದ್ದು ಎಂಬ ಪ್ರಶ್ನೆಗೆ ಉತ್ತರ ಸುಲಭ. ಆದರೆ ಮಕ್ಕಳನ್ನು ತಮ್ಮ ಜೀವನದ ಉದ್ದೇಶ ಸಾಧನೆಯ ಗುರಿಯೊಂದಿಗೆ ಬೆಳೆಸುವ ಪೋಷಕರ ಪೋಷಣೆ ಯಾರ ಹೊಣೆ ಎಂಬ ಪ್ರಶ್ನೆಗೆ ಉತ್ತರ ಇಂದು ಸರಳವಾಗಿ ಉಳಿದಿಲ್ಲ. ಮಾನವೀಯತೆಯ ನೆರಳಲ್ಲಿ, ಕರ್ತವ್ಯನಿಷ್ಠೆಯಲ್ಲಿ ‘ನನ್ನ ತಂದೆ– ತಾಯಿಯ ಹೊಣೆ ನನ್ನದು’ ಎಂದು ಪ್ರತಿ ಮಗ- ಮಗಳು ಇಂದು ಉತ್ತರವನ್ನು ನೀಡಬೇಕಾಗಿದೆ!

ಲೇಖಕಿ: ಮನೋವೈದ್ಯೆ



ಚುರುಮುರಿ



ಸ್ಕ್ರಿಪ್ಟ್ ರೈಟರ್

• ಗುರು ಪಿ.ಎಸ್.

ಫಿಲ್ಮ್ ಸ್ಕ್ರಿಪ್ಟ್ ರೈಟರ್ ಕೆಲಸಕ್ಕಾಗಿ ಅರ್ಜಿ ಹಾಕಿದ್ದ ವಿಜಿ, ಮೊದಲಿಗೆ ಒಂದು ಪರೀಕ್ಷೆ ಬರೆಯಬೇಕಾಯಿತು. ಡೈರೆಕ್ಟರ್ ಪ್ರಶ್ನೆಪತ್ರಿಕೆ ಕೈಗಿತ್ತರು. ಫಸ್ಟ್ ಮುಖ್ಯ ಪ್ರಶ್ನೆ ‘ಸಂದರ್ಭಸಹಿತ ವಿವರಿಸಿ’ ಎಂದಿತ್ತು. ಅದರಲ್ಲಿ, ನಾಲ್ಕು ಉಪ ಪ್ರಶ್ನೆಗಳು.

1. ಹಲೋ ಅಪ್ಪಾ... 2. ಅಖಿಲ್ ಎಲ್ಲಿದೀಯಪ್ಪ... 3. ಭಾಯಿಯೋ ಔರ್ ಬೆಹನೋ... 4. ಸಿಂಗಲ್ ಸಿಂಹ.

ಪ್ರಶ್ನೆಗಳನ್ನು ಓದಿ ವಿಜಿಗೆ ತಲೆ ತಿರುಗಿದಂತಾಯಿತು. ಆದರೂ ಸಾವರಿಸಿಕೊಂಡು, ಪ್ರಶ್ನೆ ಸಂಖ್ಯೆ ಹಾಕಿ ಉತ್ತರ ಬರೆಯತೊಡಗಿದ.

1. ಮೊದಲು ಘಟನೆ ನಡೆಯಿತು, ನಂತರ ಅದಕ್ಕೆ ತಕ್ಕಂತೆ ಸ್ಕ್ರಿಪ್ಟ್ ಬರೆಯಲಾಯಿತು.

2. ಮೊದಲು ಸ್ಕ್ರಿಪ್ಟ್ ಬರೆಯಲಾಯಿತು, ನಂತರ ಅದಕ್ಕೆ ತಕ್ಕಂತೆ ಘಟನೆ ಸೃಷ್ಟಿಸಲಾಯಿತು.

3. ಸ್ಕ್ರಿಪ್ಟ್‌ನಲ್ಲಿರುವ ಅಂಶವನ್ನು ಸಹಜವಾಗಿ ಇರುವಂತೆ ಬಿಂಬಿಸಲು ಬಳಸುವ ಸಂಬೋಧನೆ.

4. ಸಿನಿಮಾಗಳಿಗೆ ಮಾಸ್ ಡೈಲಾಗ್ ಬರೆಯುವವರು ಪೊಲಿಟೀಷಿಯನ್ನರ ಮೀಡಿಯಾ ಅಡ್ವೈಸರ್‌ಗಳಾದಾಗ ಸಂಭವಿಸುವ ಅದ್ಭುತ.

ಉತ್ತರಗಳನ್ನು ಓದಿದ ಡೈರೆಕ್ಟರ್‌ಗೆ ತಲೆ ತಿರುಗತೊಡಗಿತು.

‘ರೀ, ಸಂದರ್ಭ ವಿವರಿಸಿ ಅಂದರೆ, ಸ್ಕ್ರಿಪ್ಟ್ ರೈಟರ್‌ಗಳಿಗೇ ಅವಮಾನ ಆಗೋ ರೀತಿ ಬರೆದಿದೀರಲ್ರ’ ಗದರಿದರು ಡೈರೆಕ್ಟರ್.

‘ಕ್ಷಮಿಸಿ ಸರ್, ಬೇರೆ ಟಾಸ್ಕ್ ಕೊಡಿ ಮಾಡ್ತೀನಿ’ ಅಂಗಲಾಚಿದ ವಿಜಿ.

‘ಸರಿ, ಎರಡು ಪವರ್‌ಫುಲ್ ಡೈಲಾಗ್ ಬರೀರಿ ನೋಡೋಣ’.

‘ಒತ್ತುವರಿ ಮಾಡಿಕೊಂಡು ಈ ಮಾಲ್ ಕಟ್ಟಲಾಗಿದೆ, ಬೇರೆಯವರ ಜಾಗ ಕಬಳಿಸಿ ಆ ತೋಟ ಮಾಡಲಾಗಿದೆ...’ ಡೈಲಾಗ್ ಹೇಳತೊಡಗಿದ ವಿಜಿ.

‘ಏನ್ರೀ ನೀವು ಮತ್ತೂ ಬೇರೆಯವರಿಗೆ ಅವಮಾನ ಆಗೋ ಹಾಗೇ ಬರಿತೀರಲ್ಲ’ ಸಿಡುಕಿದರು ಡೈರೆಕ್ಟರ್.

‘ಸರ್, ಇದು ನನ್ನ ಕಲ್ಪನೆ ಸರ್’.

‘ಸತ್ಯಘಟನೆ ಆಧಾರಿತ ಅಂತ ಹೇಳಿದ್ದರೆ ಒಪ್ಕೊತಿದ್ದೆ. ಸುಳ್ಳು ಹೇಳಿದ್ದರಿಂದ ನಿಮಗಿಲ್ಲಿ ಕೆಲಸ ಇಲ್ಲ, ಎದ್‌ಹೋಗ್ರಿ’ ತಲೆ ಮೇಲಿನ ಕ್ಯಾಪ್ ಬಿಸಾಕಿ ಹೋದ್ರು ನಿರ್ದೇಶಕ.

ಸಂಗತ

ಗೆಲುವು ಮತ್ತು ಮಾನಸಿಕ ದಣಿವು

ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಸತತವಾದ ಗೆಲುವು ಆಟಗಾರರ ಮೇಲೆ ಬಹು ಸೂಕ್ಷ್ಮ ರೀತಿಯ ಪರಿಣಾಮಗಳನ್ನು ಬೀರಬಲ್ಲದು

• ಎ.ಶ್ರೀಧರ

ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯದ ಮರುದಿನ, ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಬೆಳಗಿನ ವಾಡಿಕೆ ನಡಿಗೆದಾರರ ಮಾತು ಮತ್ತು ಹೆಜ್ಜೆಯಲ್ಲಿ ಸಾಮಾನ್ಯವಾಗಿ ಇರುತ್ತಿದ್ದ ಹುರುಪು ಇರಲಿಲ್ಲ. ಎಲ್ಲರ ಬಾಯಲ್ಲೂ ಭಾರತ ತಂಡ ಸೋಲಬಾರದಿತ್ತು ಎನ್ನುವ ಭಾವವೇ ಪ್ರಧಾನವಾಗಿದ್ದ ಮಾತುಕತೆ. ಕೆಲವರಿಗಂತೂ ಇಂತಹದ್ದೊಂದು ಸೋಲು ಹೇಗೆ ಸಾಧ್ಯವಾಯಿತು ಎನ್ನುವ ಪ್ರಶ್ನೆ. ಅದಕ್ಕೆ ಹತ್ತಾರು ಬಗೆಯ ಉತ್ತರಗಳು.

ನಮ್ಮವರ ಫೀಲ್ಡಿಂಗ್, ಬೌಲಿಂಗ್ ಸನ್ನಿವೇಶಕ್ಕೆ ತಕ್ಕಂತೆ ಬದಲಾಗಬೇಕಿತ್ತು, ಗೆದ್ದ ಮ್ಯಾಚುಗಳಲ್ಲಿದ್ದ ವಿಶ್ವಾಸ ಇಲ್ಲಿರಲಿಲ್ಲ, ನಮ್ಮ ಬ್ಯಾಟ್ಸ್‌ಮನ್‌ಗಳು ಆರಂಭದ ಓವರುಗಳಲ್ಲಿಯೇ ಗಮನ ಕಳೆದುಕೊಳ್ಳು-ವಂತೆ ಮಾಡಿದ್ದು ಆಸ್ಟ್ರೇಲಿಯಾದ ಪಾದರಸದಂತಹ ಚುರುಕು ಫೀಲ್ಡಿಂಗು... ಎನ್ನುವಂತಹ ವಿಶ್ಲೇಷಣೆ. ಈ ಸೋಲು ತಮ್ಮಲ್ಲಿ ನಿದ್ದೆ ಕೆಡಿಸುವಷ್ಟು ಜುಗುಪ್ಸೆ ಹುಟ್ಟಿಸಿದ್ದನ್ನೂ ಕೆಲ ಹಿರಿಯರು ಹಂಚಿಕೊಂಡರು.

ಕ್ರಿಕೆಟ್ ಆಟದಲ್ಲಿ ಹುದುಗಿರುವ ಅತ್ಯಾಕರ್ಷಕ ಗುಣವೆಂದರೆ, ಸಾಮೂಹಿಕ ಮಾನಸಿಕತೆಯ ಸೃಷ್ಟಿ. ಆಟಗಾರನಿಗಿಂತಲೂ ಹೆಚ್ಚು ಖುಷಿಯನ್ನು ಪ್ರೇಕ್ಷಕನಿಗೆ ಕೊಡುವ ಗುಣ ಅದರದ್ದು. ಪ್ರತಿ ಅಭಿಮಾನಿಯೂ ಆಟದ ಪಕ್ವ ವಿಮರ್ಶಕನೆಂಬ ಹೆಮ್ಮೆ ಮೂಡಿಸುವಂತಹ ಪ್ರೇಕ್ಷಣೀಯ ಆಟ.

ಇಂದಿನ ತಂತ್ರಜ್ಞಾನವು ಪಂದ್ಯದ ಕ್ಷಣಕ್ಷಣವನ್ನೂ ಪ್ರೇಕ್ಷಕನ ಕಣ್ಣಿಗೆ ಕಟ್ಟುವಂತೆ ಮಾಡುತ್ತದೆ. ಹೀಗಾಗಿ, ನಿದ್ದೆಗೆಂದು ಕಣ್ಣು ಮುಚ್ಚಿದಾಗ, ಹುಸಿ ಹಂಬಲಗಳಿಂದ ತುಂಬಿಹೋಗಿರುವ ಮನಸ್ಸು ಎಚ್ಚರಗೊಳ್ಳುತ್ತದೆ. ಇದರೊಂದಿಗೇ ಕ್ರೀಡಾಂಗಣದ ವರ್ಣಮಯ ಪ್ರೇಕ್ಷಕ ವರ್ಗ, ಅವರ ಏರಿಳಿತದ ಹಾವಭಾವಗಳು ಕ್ರಿಕೆಟ್‌ಪ್ರೇಮಿಗಳ ಮನದಾಳದಲ್ಲಿ ಸೋಲಿನ ಭಯ, ಗೆಲ್ಲುವ ಬಯಕೆಯನ್ನು ನಿರಂತರವಾಗಿ ಹುಟ್ಟಿಸುತ್ತಲೇ ಇರುತ್ತವೆ. ಈ ಬಗೆಯ ಪ್ರತಿಕ್ರಿಯೆಗಳನ್ನು ಯಾವುದೇ ಕ್ರೀಡೆಯಲ್ಲಾದರೂ ಹೊರತರುವಂತೆ ಮಾಡುವ ಪ್ರಬಲ ಶಕ್ತಿಯು ಸರ್ವಶಕ್ತ ದೃಶ್ಯ ಮಾಧ್ಯಮಗಳಿಗಿದೆ ಎನ್ನುವುದೇ ಹೊಸ ಸತ್ಯ. ಅದರಲ್ಲಿಯೂ ವಿಶ್ವರೂಪಿ ಕ್ರಿಕೆಟ್ ವಿಷಯದಲ್ಲಂತೂ ಇಂತಹ ಶಕ್ತಿ ಅತಿಹೆಚ್ಚಾಗಿಯೇ ಇರುತ್ತದೆ.

ಕಾರ್ಪೊರೇಟ್ ಸಂಸ್ಥೆಗಳ ನಿಯಂತ್ರಣದಲ್ಲಿ ಸಿಲುಕಿಕೊಳ್ಳುವ ಪ್ರೇಕ್ಷಕಕೇಂದ್ರಿತ ಕ್ರೀಡೆಗಳು ಸಾಮೂಹಿಕ ಸಂಭ್ರಮದ ಜೊತೆಯಲ್ಲಿ ಸಮೂಹಸನ್ನಿಗೂ ಪ್ರೇರಕ. ವಿಕೆಟ್ ಉರುಳಿಸಿದ ಬೌಲರ್‌ನ ಹೆಮ್ಮೆಯು ನೆಲಕ್ಕೆ ಗುದ್ದುವಷ್ಟು ರೋಷವನ್ನು ಆತನಲ್ಲಿ ಹೊರತರುತ್ತದೆ, ಕ್ಯಾಚ್ ಹಿಡಿದ ಫೀಲ್ಡರ್ ಚೆಂಡನ್ನು ಹಿಡಿದು ನೆಗೆದಾಡುವ ಸಂಭ್ರಮದ ದೃಶ್ಯ ನೋಡುವುದಕ್ಕೆ ಚೆನ್ನ. ಹಾಗೆಯೇ ಪಂದ್ಯ ಕೈತಪ್ಪಿದಾಗ ಕಣ್ಣೀರು, ಕಳೆಗುಂದಿದ ಮುಖಭಾವವೆಲ್ಲವೂ ಕ್ರೀಡಾಮನೋಭಾವದ ಅಭಾವ ಇರುವುದರ ಹೊಸ ಸಂಕೇತ.

ನಾವು ಸೋಲಬಾರದು, ಎದುರಾಳಿಗಳೇ ಸೋಲಬೇಕು ಎನ್ನುವ ಮಾನಸಿಕತೆಯನ್ನು ಬಲಪಡಿಸುವ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಸತತವಾದ ಗೆಲುವು ಬಹು ಸೂಕ್ಷ್ಮ ರೀತಿಯ ಮಾನಸಿಕ ಪರಿಣಾಮಗಳನ್ನು ಆಟಗಾರರ ಮೇಲೆ ಬೀರಬಲ್ಲದು. ಹೆಚ್ಚಿನ ರೀತಿಯಲ್ಲಿ ಇದು, ಗೆಲ್ಲಲೇಬೇಕೆಂಬ ಒಳತುಡಿತವನ್ನು ಮೂಡಿಸುವ ಅಸ್ಪಷ್ಟ ಒತ್ತಡ. ಅದರಲ್ಲಿಯೂ ಆಡಿದ ಎಲ್ಲ ಪಂದ್ಯಗಳಲ್ಲಿಯೂ ಗೆಲುವು ಸಿಕ್ಕಾಗ, ಹತ್ತಕ್ಕೆ ಹತ್ತು ಪಂದ್ಯಗಳಲ್ಲಿಯೂ ಗೆಲುವು ಗ್ಯಾರಂಟಿ ಎಂಬ ಮನಸ್ಸಿರುವುದು ಸಹಜ.

ನಮ್ಮ ತಂಡದವರು ಫೈನಲ್ ತಲುಪುವುದಕ್ಕೆ ಮುಂಚಿತವಾಗಿ ಆಡಿದ ಎಲ್ಲ ಪಂದ್ಯಗಳಲ್ಲಿಯೂ ಸತತವಾಗಿ ಗೆಲುವನ್ನು ಸಾಧಿಸಿದ್ದರು. ಪರಿಶ್ರಮ, ಸಾಮರ್ಥ್ಯವೇ ಈ ಜಯಕ್ಕೆ ಕಾರಣವಾಗಿದ್ದರಿಂದ ಕೊನೆಯ ನಿರ್ಣಾಯಕ ಪಂದ್ಯದಲ್ಲಿಯೂ ಗೆಲುವು ತಮ್ಮದೆನ್ನುವ ಬಲವಾದ ವಿಶ್ವಾಸ ಅವರಲ್ಲಿತ್ತು. ಆದರೆ ಮನದಾಳದಲ್ಲಿ ಇಂತಹ ಸ್ಥಿತಿ ಬೇರೆಯ ರೀತಿಯಲ್ಲೇ ಇರುತ್ತದೆ. ಅಲ್ಲಿರುವುದು ತವಕ, ಗೊಂದಲ, ಸೋಲಿನ ಭಯವನ್ನು ಸಹಿಸಲಾಗದಂತಹ ಛಾಯೆ. ಅದನ್ನು ನಿಗ್ರಹಿಸುವ ಸಲುವಾಗಿ ಮೂಡುವ ಆಲೋಚನಾ ತಂತ್ರಗಳು ಮಾನಸಿಕ ದಣಿವನ್ನು ಹುಟ್ಟಿಸಿ, ನುರಿತ ಆಟಗಾರನ ಸಮಯಸ್ಫೂರ್ತಿ, ಚೈತನ್ಯವನ್ನು ಕಸಿಯುತ್ತವೆ. ಆಟಗಾರನಲ್ಲಿರುವ ವಿಶಿಷ್ಟ ಕೌಶಲ, ತಂತ್ರಗಳು ಸನ್ನಿವೇಶಕ್ಕೆ ತಕ್ಕಂತೆ ಹೊರಬರುವುದಿಲ್ಲ.



ಗೆಲುವು ಕೊಡುವ ಸುಖ, ಸಂತೃಪ್ತಿ, ವಿಶ್ವಾಸ ಮತ್ತು ದರ್ಪವು ಹೊಸ ಪ್ರಜ್ಞೆಯನ್ನು ಸೃಷ್ಟಿಸಿಬಿಡುತ್ತದೆ. ಗೆಲ್ಲುವುದೇ ಒಂದು ಸ್ವಭಾವವಾದಾಗ ಇನ್ನು ಅಭ್ಯಾಸಕ್ಕೆ ಉಳಿಯುವುದಾದರೂ ಏನು? ಮನಸ್ಸಿನ ಕಾರ್ಯರೀತಿಗೆ ಸಂಬಂಧಿಸಿದ ಈ ಪ್ರಶ್ನೆಗೆ ಮನೋವಿಜ್ಞಾನದಲ್ಲಿ ವಿವರಣೆಯನ್ನು ಕಾಣಬಹುದು.

ಸೋಲು ಹೊಸಹೊಸ ವಿಷಯಗಳನ್ನು ಬೆಳಕಿಗೆ ತರುವಂತೆಯೇ ಸತತ ಗೆಲುವು ಮಾನಸಿಕ ದಣಿವನ್ನು ಸೃಷ್ಟಿಸುವ ಸಾಧ್ಯತೆ ಇರುತ್ತದೆ. ಇದು ಸನ್ನಿವೇಶಕ್ಕೆ ತಕ್ಕಂತೆ ಬರಬೇಕಾದ ಸಮಯಸ್ಫೂರ್ತಿ ಇಲ್ಲವಾಗುವಂತೆ ಮಾಡಬಲ್ಲದು. ಅದರಲ್ಲಿಯೂ ತೀವ್ರ ನಿರೀಕ್ಷೆಗಳನ್ನು ಹುಟ್ಟಿಸುವ ಕ್ರಿಕೆಟ್ ಆಟದಲ್ಲಿ ಇಂತಹ ಮಾನಸಿಕತೆ ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತಲೇ ಇರುತ್ತದೆ.

ಸತತವಾಗಿ ಜಯಭೇರಿ ಬಾರಿಸಿರುವವರನ್ನೂ ಕೆಡವಿದ ಅನೇಕ ಉದಾಹರಣೆಗಳಲ್ಲಿ ಈ ಫಲಿತಾಂಶವೂ ಒಂದು. ಅಂತರರಾಷ್ಟ್ರೀಯ ಕ್ರಿಕೆಟ್ ಸರಣಿಗಳು ಇಂದು ಆಟ ಎನ್ನುವುದಕ್ಕಿಂತಲೂ ಕಾದಾಟ ಎನ್ನುವಂತೆ ಬಿಂಬಿತಗೊಂಡಿವೆ. ಸೋಲು-ಗೆಲುವು ಎರಡರಲ್ಲಿಯೂ ಕಲಿಯುವ, ನಲಿಯುವ ಗುಣ ಇರುವುದರಿಂದಲೇ ಕ್ರೀಡೆಗಳು ಮನೋಲ್ಲಾಸದ ಪರಿ ಎನ್ನುವುದೀಗ ಮಹತ್ವ ಕಳೆದುಕೊಳ್ಳುತ್ತಿರುವುದು ದುರದೃಷ್ಟಕರ.

ಲೇಖಕ: ಮನೋವಿಜ್ಞಾನಿ

ವಾಚಕರ ವಾಣಿ

ಬೆಸ್ಕಾಂಗೆ ಬೇಕು ತುರ್ತು ದುರಸ್ತಿ ದಳ

ಬೆಂಗಳೂರಿನ ರಸ್ತೆಬದಿಯೊಂದರಲ್ಲಿ ತುಂಡಾಗಿ ಬಿದ್ದಿದ್ದ, ವಿದ್ಯುತ್ ಪ್ರವಹಿಸುತ್ತಿದ್ದ ತಂತಿ ತುಳಿದು ತಾಯಿ ಮತ್ತು ಮಗು ಸಾವನ್ನಪ್ಪಿರುವುದಕ್ಕೆ ಬೆಸ್ಕಾಂ ವಿರುದ್ಧ ನಾಗರಿಕರು ಆಕ್ರೋಶ ವ್ಯಕ್ತಪಡಿಸುತ್ತಿರುವುದು ಸರಿಯಾಗಿಯೇ ಇದೆ. ಮೃತರ ಕುಟುಂಬಕ್ಕೆ ಈ ಸಂಬಂಧ ಪರಿಹಾರ ಕೊಡುವುದೂ ಸರಿ. ಆದರೆ ಈ ಪ್ರಕರಣ ಇಷ್ಟಕ್ಕೇ ಮುಕ್ತಾಯವಾದರೆ ಏನೂ ಪ್ರಯೋಜನವಾಗುವುದಿಲ್ಲ. ಯಾರು ಎಷ್ಟು ಎಚ್ಚರ ವಹಿಸಿದರೂ ಇಂತಹ ಅಪಘಾತಗಳು ತಪ್ಪಿದ್ದಲ್ಲ. ಗಾಳಿ, ಮಳೆಯಿಂದ ವಿದ್ಯುತ್ ತಂತಿ ತುಂಡಾಗಿ ಬೀಳುವುದನ್ನು ಶೇ 100ರಷ್ಟು ಪ್ರಮಾಣದಲ್ಲಿ ತಪ್ಪಿಸುವುದು ಕಷ್ಟಸಾಧ್ಯ. ಆದರೆ ಸಿಬ್ಬಂದಿಯು ಸಮಯಕ್ಕೆ ಸರಿಯಾಗಿ ಧಾವಿಸಿಬಂದು ಕರ್ತವ್ಯ ನಿರ್ವಹಿಸಿದರೆ ಮತ್ತು ಅಲ್ಲಿಯವರೆಗೆ ಅಲ್ಲಿನ ಜನ ಎಚ್ಚರ ವಹಿಸಿದರೆ ಮಾತ್ರ ದುರಂತ ತಪ್ಪಿಸಬಹುದು.

ಇಂತಹ ಕಾರ್ಯಕ್ಕೆ ಬೆಸ್ಕಾಂ ವತಿಯಿಂದ ಸುರಕ್ಷಾ ವಿಧಾನಗಳ ಬಗೆಗೆ ಟಿ.ವಿ. ಮತ್ತು ಪತ್ರಿಕಾ ಮಾಧ್ಯಮಗಳಲ್ಲಿ ಆಗಿಂದಾಗ್ಗೆ ಜಾಗೃತಿ ಮೂಡಿಸುತ್ತಿರಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ಪ್ರತಿ ವಿಭಾಗದಲ್ಲೂ ಬೆಸ್ಕಾಂ ಒಂದು ತುರ್ತು ದುರಸ್ತಿ ದಳವನ್ನೂ ವಾಹನ ಮತ್ತು ಸಾಮಗ್ರಿಗಳ ಜೊತೆಯಲ್ಲಿ ಸದಾ ಸನ್ನದ್ಧ ಸ್ಥಿತಿಯಲ್ಲಿ ಇಟ್ಟಿರಬೇಕು.

ಚಂದ್ರಶೇಖರ ಎಚ್.ಎಸ್., ಬೆಂಗಳೂರು

ಪರೀಕ್ಷಾ ನಿಯಮ: ಮುಜುಗರ ತಾರದಿರಲಿ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಜಾರಿಗೆ ತಂದಿರುವ ವಸ್ತ್ರಸಂಹಿತೆ ಇರುವುದೇ ಒಂದು ರೀತಿಯಲ್ಲಾದರೆ, ಕ್ಷೇತ್ರ ಕಾರ್ಯನಿರ್ವಾಹಕರ (ಫೀಲ್ಡ್ ಇನ್‌ಸ್ಪೆಕ್ಟರ್) ಹುದ್ದೆಗೆ ಸಂಬಂಧಿಸಿದಂತೆ ನಡೆದ ಪರೀಕ್ಷೆಯ ಸಂದರ್ಭದಲ್ಲಿ ಶಿವಮೊಗ್ಗದ ಕಾಲೇಜೊಂದರಲ್ಲಿ ಅದು ಪಾಲನೆಯಾಗಿದ್ದೇ ಇನ್ನೊಂದು ರೀತಿಯಲ್ಲಿ. ಹೆಣ್ಣುಮಕ್ಕಳು ಕೆಇಎ ವಸ್ತ್ರಸಂಹಿತೆ ನೀತಿಗೆ ಅನುಸಾರವಾಗಿಯೇ ಪರೀಕ್ಷಾ ಕೇಂದ್ರಕ್ಕೆ ಬಂದಿದ್ದರು. ಆದರೂ ಅವರು ಹಾಕಿದ್ದ ದುಪಟ್ಟಾವನ್ನು ಬ್ಯಾಗ್‌ನಲ್ಲಿ ಇಟ್ಟು ಬರುವಂತೆ ಪರೀಕ್ಷೆ ನಿರ್ವಹಣಾ ಸಿಬ್ಬಂದಿ ತಿಳಿಸಿದರು. ಅದನ್ನು ಪ್ರಶ್ನೆ ಮಾಡಿದ್ದಕ್ಕೆ, ವೇಲ್ ಧರಿಸುವಂತಿಲ್ಲ ಎಂಬ ಸೂಚನೆ ಇದೆ ಎಂದು ಹೇಳಿದ್ದಲ್ಲದೆ, ಸರಿಯಾಗಿ ಪರೀಕ್ಷಾ ನಿಯಮಗಳನ್ನು ಓದಿ ಎಂದು ಪರೀಕ್ಷಾರ್ಥಿಗಳಿಗೇ ಬೈದರು.

ಪರೀಕ್ಷೆಯನ್ನು ಎದುರಿಸುವ ಮನಃಸ್ಥಿತಿಯಲ್ಲಿ ಪರೀಕ್ಷಾ ಕೇಂದ್ರವನ್ನು ತಲುಪಿದರೆ, ಅಲ್ಲಿ ಇಂತಹ ಕಿರಿಕಿರಿಯ ಪರಿಸ್ಥಿತಿ ನಿರ್ಮಾಣ ಮಾಡುವವರ ವಿರುದ್ಧ ದೂರು ತೆಗೆದುಕೊಳ್ಳುವವರು ಯಾರೂ ಇರುವುದಿಲ್ಲ. ಇರುವ ಪೊಲೀಸರು ಹಾಲ್ ಟಿಕೆಟ್ ತಪಾಸಣೆ ಮಾಡುವುದಕ್ಕಷ್ಟೇ ಸೀಮಿತವಾಗಿ ಉಳಿಯುತ್ತಾರೆ. ಇಂತಹ ಅವಾಂತರದಲ್ಲಿ ಎಷ್ಟೋ ಮಂದಿಗೆ ಪರೀಕ್ಷೆ ಬರೆಯುವ ಮನಃಸ್ಥಿತಿಯೇ ಇಲ್ಲದಂತಾಗುತ್ತದೆ. ದೂರದ ಜಿಲ್ಲೆಗಳಿಂದ ಸಿದ್ಧತೆ ನಡೆಸಿ ಬಂದಿದ್ದ ಹಲವು ಸ್ನೇಹಿತೆಯರು ಬಹಳ ನೋವಿನಲ್ಲಿಯೇ ಪರೀಕ್ಷೆ ಬರೆದು ತೆರಳಿದರು. ಇಂತಹ ಇಕ್ಕಟ್ಟಿನ ಸ್ಥಿತಿಗೆ ಹೆಣ್ಣುಮಕ್ಕಳನ್ನು ದೂಡದಂತೆ ಕೆಇಎ ಇನ್ನು ಮುಂದಾದರೂ ಎಚ್ಚರ ವಹಿಸಲಿ, ಪರೀಕ್ಷಾರ್ಥಿಗಳ ಕಷ್ಟಕ್ಕೆ ಸ್ಪಂದಿಸಲಿ.

ಹರ್ಷಿತಾ ಕೆ., ಶಿವಮೊಗ್ಗ

ಮಾಲೆ ಹಾಕುವುದೇ ಹಿಂದುತ್ವವಲ್ಲ

‘ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಜತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ದತ್ತಪೀಠಕ್ಕೆ ಮಾಲೆ ಧರಿಸಿ ಬರಲಿ’ ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಮನವಿ ಮಾಡಿದ್ದಾರೆ (ಪ್ರ.ವಾ., ನ. 22). ಹಿಂದೂ ಧರ್ಮದಲ್ಲಿ ದೇವರ ಭಕ್ತಿಯ ಅಭಿವ್ಯಕ್ತಿಗೆ ಹಲವಾರು ಮಾರ್ಗಗಳಿವೆ. ಏಕದೇವೋಪಾಸನೆ, ಬಹುದೇವೋಪಾಸನೆ, ಸಾಕಾರ ಪೂಜೆ, ನಿರಾಕಾರ ಪೂಜೆಯಂತಹವು ಇದರಲ್ಲಿ ಸೇರಿವೆ. ಎಲ್ಲರೂ ಎಲ್ಲವನ್ನೂ ಅಳವಡಿಸಿಕೊಳ್ಳಲು ಸಾಧ್ಯವಿಲ್ಲ. ರಾಜಕೀಯ ಸ್ಥಿತ್ಯಂತರದ ಕಾರಣಕ್ಕಾಗಿ ಕುಮಾರಸ್ವಾಮಿ ಅವರು ಮಾಲೆ ಧರಿಸಬಹುದೇ ವಿನಾ ಈ ಮೊದಲು ಅವರು ಮಾಲೆ ಧರಿಸಿಲ್ಲ. ‘ನೀವು ಧರಿಸಿದರೆ ಜಮೀರ್ ಕೂಡ ಮಾಲೆ ಹಾಕೇ ಹಾಕುತ್ತಾರೆ’ ಎನ್ನುವುದು ವಿವೇಕದ ನುಡಿಯಲ್ಲ.

ಸಿದ್ದರಾಮಯ್ಯನವರು ಭಂಡಾರ ಹಚ್ಚಿಕೊಂಡು ಡೊಳ್ಳು ಬಾರಿಸುತ್ತಾ ಕುಣಿಯುತ್ತಾರಲ್ಲ ಅದು ಹಿಂದುತ್ವ ಅಲ್ಲವೇ? ಅಘೋರಿಗಳ ಮಾರ್ಗವೂ ಹಿಂದುತ್ವದಲ್ಲಿ ಬರುತ್ತದೆ. ಅದನ್ನು ಅನುಸರಿಸಲು ಎಲ್ಲ ಹಿಂದೂಗಳಿಗೆ ಸಾಧ್ಯವೇ? ಹಿಂದೂಗಳಲ್ಲಿನ ಶಿವರಾಮ ಕಾರಂತ, ಎ.ಎನ್.ಮೂರ್ತಿರಾಯರಂಥ ಮಾನವತಾವಾದಿ ನಾಸ್ತಿಕರ ಬಗ್ಗೆ ಏನು ಹೇಳಬೇಕು? ನಾವು ಹೆಮ್ಮೆ ಪಡಬೇಕಾಗಿರುವುದು ವಿವಿಧತೆಯಲ್ಲಿ ಏಕತೆ ಸಾರುವ ಹಿಂದುತ್ವದ ಕುರಿತು.

ಶಿವಕುಮಾರ ಬಂಡೋಳಿ, ಹುಣಸಗಿ

ಅಧಿಕಾರಿಗಳಿಂದ ಕರ್ತವ್ಯದ್ರೋಹ

ಕಾಡು ಕಾಯಲು ಐಎಫ್‌ಎಸ್ ಅಧಿಕಾರಿಗಳು ನಿರಾಸಕ್ತಿ ತೋರುತ್ತಿರುವುದರ ಬಗೆಗಿನ ವಿಶೇಷ ವರದಿ (ಪ್ರ.ವಾ., ನ. 21) ಸಕಾಲಿಕ, ಸಮಯೋಚಿತ ಹಾಗೂ ಅರ್ಥಪೂರ್ಣವಾಗಿದೆ. ಅರಣ್ಯ ಕಾಯಬೇಕಾದ ಈ ಅಧಿಕಾರಿಗಳು ತಮ್ಮ ಹಣಬಲ, ರಾಜಕೀಯ ಶಿಫಾರಸಿನಿಂದ ರಾಜಧಾನಿಯ ಆಯಕಟ್ಟಿನ ಮತ್ತು ಐಷಾರಾಮಿ ಜಾಗಗಳಲ್ಲಿ ಬಹುಕಾಲದಿಂದ ಬೇರುಬಿಟ್ಟಿದ್ದಾರೆ. ಹೀಗೆ ಮಾಡುವ ಮೂಲಕ ಅವರು ತಮ್ಮ ಗುರಿ ಮತ್ತು ಸೇವೆಯ ಉದ್ದೇಶವನ್ನೇ ಮರೆತು ಅರಣ್ಯವನ್ನು ಬಹುಪಾಲು ನಿರ್ಲಕ್ಷ್ಯ ಮಾಡುವುದು ಕರ್ತವ್ಯದ್ರೋಹವಲ್ಲದೆ ಮತ್ತೇನಲ್ಲ.

ಈ ಧೋರಣೆಗೆ ಮತ್ತು ಇಂತಹ ಪ್ರಭೃತಿಗಳಿಗೆ ಶಾಸಕರೂ ಮಂತ್ರಿಗಳೂ ಸಹಕರಿಸುವುದು ನಾಚಿಕೆಗೇಡು. ಅರಣ್ಯ ಸಚಿವರು ಸಹ ಈ ಬಗ್ಗೆ ತಮ್ಮ ಸೊಲ್ಲೆತ್ತುವುದಿಲ್ಲ. ಇಂತಹ ಅಕ್ರಮದ ವಿರುದ್ಧ ದನಿಯೆತ್ತಿದರೂ ಅದು ಅರಣ್ಯರೋದನ ಆಗಬಹುದು. ಈ ಮನಃಸ್ಥಿತಿ ಮತ್ತು ಅನುಕೂಲಸಿಂಧು ವ್ಯವಸ್ಥೆ ಬರೀ ಐಎಫ್‌ಎಸ್ ಕೇಡರ್‌ಗೆ ಸೀಮಿತವಾಗಿಲ್ಲ. ಕಾನೂನು, ಶಾಂತಿ, ಸುವ್ಯವಸ್ಥೆ ಕಾಪಾಡಲು ನಿಯುಕ್ತರಾದ ಐಪಿಎಸ್ ಅಧಿಕಾರಿಗಳಲ್ಲಿ ಕೆಲವರು ತಮ್ಮ ನಿಯುಕ್ತ ಕರ್ತವ್ಯಕ್ಕೆ ಸಂಬಂಧಪಡದ ಲಾಭದಾಯಕ ಹುದ್ದೆಗಳಲ್ಲಿ ಬೆಚ್ಚಗೆ ಕುಳಿತುಕೊಂಡಿರುವುದು ಕಣ್ಣಿಗೆ ರಾಚುವಂತಿದೆ. ಇದಕ್ಕೆಲ್ಲ ಸರ್ಕಾರವು ಸ್ಪಷ್ಟ ನೀತಿ ರೂಪಿಸಬೇಕು ಅಥವಾ ಈಗಾಗಲೇ ಅಂತಹ ನೀತಿ ಇದ್ದಲ್ಲಿ ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ದಿಟ್ಟ ಕ್ರಮ ಕೈಗೊಂಡು ಈ ಕೆಟ್ಟ ಚಾಳಿಗೆ ಕಡಿವಾಣ ಹಾಕಬೇಕು.

ಎಸ್.ಕೆ.ನಿತ್ಯಾನಂದ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಕರಾವಳಿ ಕಂಬಳದ ಸೀಮೋಲ್ಲಂಘನ

ಘಟ್ಟ ಏರಲಿರುವ ಕೋಣಗಳು

ಕಕ್ಕೆಪದವು ಎಂಬಲ್ಲಿ ನ.18ರಂದು ನಡೆದ ಈ ಋತುವಿನ ಮೊದಲ ಕಂಬಳವು ಬೆಂಗಳೂರು ಕಂಬಳಕ್ಕೆ ಆಯ್ಕೆ ಟ್ರಯಲ್ಸ್ ಕೂಡ ಆಗಿತ್ತು. ಅಲ್ಲಿ 'ಸಾಲಿಗೆ ಬಂದ ಕೋಣಗಳು' (ಅರ್ಹತಾ ಮಟ್ಟ ಮೀರಿದವು) ಬೆಂಗಳೂರಿಗೆ ಪಯಣಿಸಲಿವೆ ಎನ್ನುವುದು ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲಾ ಕಂಬಳ ಸಮಿತಿ ಅಧ್ಯಕ್ಷ ದೇವಿಪ್ರಸಾದ್ ಶೆಟ್ಟಿ ಅವರ ವಿವರಣೆ. ಕಂಬಳದ ತಜ್ಞರ ಪ್ರಕಾರ, ಮಂಗಳೂರಿನ ವ್ಯಕ್ತಿಯೊಬ್ಬರು ತುಳು ಕಾರ್ಯಕ್ರಮಕ್ಕಾಗಿ ಕೋಣಗಳ ಜೋಡಿಯೊಂದನ್ನು ಮುಂಬೈಗೆ ಕರೆದುಕೊಂಡು ಹೋದದ್ದು ಬಿಟ್ಟರೆ ಕರಾವಳಿ ಗಡಿಯನ್ನು ದಾಟಿ ಮತ್ತೊಂದು ಕಡೆಯಲ್ಲಿ ಕಂಬಳದ ಕೋಣಗಳು ಓಡಿಲ್ಲ. ಈಗ ಕೋಣಗಳು ಘಟ್ಟ ಹತ್ತಿ ಬೆಂಗಳೂರಿಗೆ ಯಾನ ಬೆಳೆಸಿವೆ

• ಗಣೇಶ ಚಂದನಶಿವ, ವಿಕ್ರಂ ಕಾಂತಿಕೆರೆ

ಸಾಂಪ್ರದಾಯಿಕ 'ಕರಾವಳಿ ಕಂಬಳ' ಆಧುನಿಕತೆಯನ್ನು ಅಪ್ಪಿಕೊಳ್ಳುತ್ತ ಈಗ ಸೀಮೋಲ್ಲಂಘನದ ಪರ್ವದಲ್ಲಿದೆ. ಇದೇ 25 ಮತ್ತು 26ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆಯಲಿರುವ 'ಬೆಂಗಳೂರು ಕಂಬಳ ನಮ್ಮ ಕಂಬಳ'ಕ್ಕೆ ತಾರಾ ಮೆರುಗು ನೀಡಿ ಅದರ ಕೀರ್ತಿಯನ್ನು ಎಲ್ಲೆಡೆ ಪಸರಿಸಲು ಸಂಘಟಕರು ಮುಂದಾಗಿದ್ದಾರೆ.

ಬತ್ತ ಬೆಳೆಯುವ ಕೆಸರು ಗದ್ದೆಯಲ್ಲಿ ಗುತ್ತು, ಸೀಮೆ ಅಥವಾ ಬರ್ಕೆಯ ಸಂಪನ್ನತೆಯನ್ನು ಪ್ರತಿಫಲಿಸುವ, ಮನುಷ್ಯ-ಪ್ರಾಣಿಗಳ ಬದುಕಿನ ನಂಟಿನ ಸೂಚಕದಂತೆ ಆರಂಭವಾದ ಕೋಣಗಳ ಓಟದ ಸಂಪ್ರದಾಯ ನಂತರ ವೀರ ಜಾನಪದ ಕ್ರೀಡೆಯಾಗಿ ಮಾರ್ಪಟ್ಟಿದೆ.

ದಕ್ಷಿಣ ಕನ್ನಡ, ಉಡುಪಿ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಪ್ರತಿ ವರ್ಷ ನವೆಂಬರ್‌ನಿಂದ ಏಪ್ರಿಲ್ ತಿಂಗಳ ಅವಧಿಯಲ್ಲಿ ಕಂಬಳ ಸ್ಪರ್ಧೆಗಳನ್ನು ಸಂಘಟಿಸಲಾಗುತ್ತದೆ. ಈ ವರ್ಷ 23 ಕಂಬಳ ಸ್ಪರ್ಧೆಗಳು ನಿಗದಿಯಾಗಿವೆ.

ಬೆಂಗಳೂರು ತುಳು ಕೂಟದ 50ನೇ ವರ್ಷಾಚರಣೆ ಅಂಗವಾಗಿ ಬೆಂಗಳೂರು ಕಂಬಳ ನಡೆಸಲಾಗುತ್ತಿದೆ. ರಾಜ್ಯದಲ್ಲಿ ಕನ್ನಡದ ಜೊತೆಗೆ ತುಳುವಿಗೆ ಅಧಿಕೃತ ಭಾಷೆಯ ಸ್ಥಾನ ಮಾನ ಕೊಡಬೇಕು ಎಂದು ಸರ್ಕಾರವನ್ನು ಒತ್ತಾಯಿಸುವುದು ಹಾಗೂ ತುಳು ಭವನಕ್ಕೆ ಸರ್ಕಾರದಿಂದ ಬೆಂಗಳೂರಿನಲ್ಲಿ ಜಾಗ ಪಡೆಯುವುದು ಬೆಂಗಳೂರಿನಲ್ಲಿ ಕಂಬಳ ಆಯೋಜಿಸುವ ಉದ್ದೇಶಗಳಲ್ಲೊಂದು ಎನ್ನುತ್ತಾರೆ ಬೆಂಗಳೂರು ಕಂಬಳ ಸಮಿತಿಯ ಅಧ್ಯಕ್ಷರೂ ಆಗಿರುವ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ. ಈ ಎಲ್ಲಾ ಕಾರಣದಿಂದಲೂ ಬೆಂಗಳೂರು ಕಂಬಳ ಒಂದು ಮೈಲುಗಲ್ಲು ಆಗಲಿದೆ.

ಕಂಬಳದ ಮೂಲ: ಕಂಬಳದ ಮುಖ್ಯ ರೆಫರಿ ಹಾಗೂ ಕಂಬಳ ಅಕಾಡೆಮಿಯ ಸಂಚಾಲಕ ಕೆ.ಗುಣಪಾಲ ಕಡಂಬ ಅವರ ಪ್ರಕಾರ ಕೆಸರು ಮಣ್ಣಿನಿಂದ ಕೂಡಿದ ವಿಶಾಲ ಗದ್ದೆಯೇ ಕಂಬಳದ ಮೂಲವಾಗಿದ್ದು ಈ ಕ್ರೀಡೆಯ ಕುರಿತು ತಾಳಿಪ್ಪಾಡಿ ಶಾಸನ, ಶೃಂಗೇರಿ ಶಾಸನ, ಕಲ್ಲುಮಾಗಣೆ ಶಾಸನ ಹಾಗೂ ಸೂರಾಲಿನ ಶಾಸನಗಳಲ್ಲಿ ಉಲ್ಲೇಖವಿದೆ.

'ಕೆಸರು ಮಣ್ಣಿನಿಂದ ಕೂಡಿದ ವಿಶಾಲ ಗದ್ದೆಗಳ ಉಳುಮೆಯಲ್ಲಿ ಅನೇಕ ಜೊತೆ ಕೋಣಗಳು, ಹತ್ತಾರು ಜನರು ಪಾಲ್ಗೊಳ್ಳುತ್ತಿದ್ದರು. ಅದು ಉತ್ಸವದಂತೆ ನಡೆಯುತ್ತಿತ್ತು. ಉಳುಮೆಯ ಕೊನೆಯಲ್ಲಿ ಕೋಣಗಳನ್ನು ಸಾಲಾಗಿ ನಿಲ್ಲಿಸಿ ಓಡಿಸುವ ಸಂಪ್ರದಾಯ ಇತ್ತು. ಭೂತಾರಾಧನೆ, ನಾಗಾರಾಧನೆ, ನಂಬಿದ ದೇವರಿಗೆ ಪ್ರಾರ್ಥನೆ, ಹರಕೆಯ ಹಿನ್ನೆಲೆಯಲ್ಲಿ ಕಂಬಳದ ಗದ್ದೆಗಳಲ್ಲಿ ಆರಾಧನೆಯ ಸಂಪ್ರದಾಯ ಬೆಳೆಯಿತು. ನೇಗಿಲು, ಹಗ್ಗ, ಅಡ್ಡಹಲಗೆ, ಕನೆ ಹಲಗೆ ವಿಭಾಗಗಳು ಕಂಬಳದಲ್ಲಿದ್ದು ಈಗ ಆಧುನಿಕ ಕಂಬಳವೂ ಪ್ರಸಿದ್ಧಿ ಪಡೆದಿದೆ' ಎನ್ನುತ್ತಾರೆ ಅವರು.

ನವೆಂಬರ್‌ನಿಂದ ಏಪ್ರಿಲ್ ಯಾಕೆ?: ನೀರಿನ ಲಭ್ಯತೆಗೆ ಅನುಗುಣವಾಗಿ ಕರಾವಳಿ ಭಾಗದಲ್ಲಿ ಬೆಳೆಯನ್ನು ಏಣೇಲ್, ಕೊಳಕೆ ಮತ್ತು ಸುಗ್ಗಿ ಎಂದು ವಿಂಗಡಣೆ ಮಾಡಲಾಗಿದೆ. ಏಣೇಲ್ ಗದ್ದೆಗೆ ಮಳೆ ನೀರೇ ಆಶ್ರಯ. ಮಳೆಗಾಲದಲ್ಲಿ ಸುರಿದ ನೀರನ್ನು ನಿಲ್ಲಿಸಿ ಮಾಡುವುದು ಕೊಳಕೆ ಬೇಸಾಯ. ಇದಾದ ನಂತರ ಸುಗ್ಗಿಕಾಲಕ್ಕೆ ಸಿದ್ಧತೆ ಮಾಡಲಾಗುತ್ತದೆ. ಆಗ ಸ್ವಲ್ಪ ಸಮಯಾವಕಾಶ ಸಿಗುವುದರಿಂದ ಕೋಣಗಳನ್ನು ಓಡಿಸುವ ಕ್ರೀಡೆಯಲ್ಲಿ ಪಾಲ್ಗೊಳ್ಳುತ್ತಿದ್ದರು. ಮಾರ್ಚ್ ನಂತರ ಕೋಣಗಳಿಗೆ ಕೂದಲು ಬೆಳೆಯುತ್ತದೆ. ಆಗ ಮೈ ನೋವು ಇರುತ್ತದೆ. ಆಷಾಢದಲ್ಲಿ ತುಂಬ ಬಿಸಿಲು ಇರುತ್ತದೆ. ಮಳೆಗಾಲ ಮುಗಿದು ಹದವಾದ ನೀರು, ಸುಂದರ ನೋಟದ ಪ್ರಕೃತಿಯ ನಡುವೆ ಕಂಬಳ ಆಯೋಜಿಸಲು ಪೂರ್ವಿಕರು ನಿರ್ಧರಿಸಿದ್ದರು ಎನ್ನುತ್ತಾರೆ, ಜಿಲ್ಲಾ ಕಂಬಳ ಸಮಿತಿಯ ಪ್ರಧಾನ ಕಾರ್ಯದರ್ಶಿ ಮುಚ್ಚೂರು ಕಲ್ಕುಡೆ ಲೋಕೇಶ್ ಶೆಟ್ಟಿ.

ಬಾರುಕೋಲು ರಹಿತವಾಗಿ ಮಾಡುವ ಸವಾಲು: ಪ್ರಾಣಿ ದಯಾಪರರ ಗುಂಪು (ಪೇಟಾ) ಸಲ್ಲಿಸಿದ ಅರ್ಜಿ ಪರಿಗಣಿಸಿ 2014ರಲ್ಲಿ ಕಂಬಳ, ತಮಿಳುನಾಡಿನ ಜಲ್ಲಿಕಟ್ಟು, ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕ ಭಾಗದ ಹೋರಿ ಹಾಯಿಸುವ ಕ್ರೀಡೆಯನ್ನು ಸುಪ್ರೀಂ ಕೋರ್ಟ್ ನಿಷೇಧಿಸಿತ್ತು. ಹೀಗಾಗಿ ಮಂಗಳೂರು ಮತ್ತು ಮೂಡುಬಿದಿರೆಯಲ್ಲಿ ಕೋಣಗಳ ಮಾಲೀಕರು ಮತ್ತು ಕಂಬಳ ಪ್ರಿಯರು ಭಾರಿ ಪ್ರತಿಭಟನೆ ನಡೆಸಿದ್ದರು. ಕಾನೂನು ಹೋರಾಟವೂ ನಡೆದಿತ್ತು. ಸರ್ಕಾರ ಈ ಕ್ರೀಡೆಗಳನ್ನು ಆಯೋಜಿಸಲು 2016ರಲ್ಲಿ ಷರತ್ತುಬದ್ಧ ಒಪ್ಪಿಗೆ ನೀಡಿತ್ತು.

ಆದರೂ ಪ್ರಾಣಿ ದಯಾ ಸಂಘಟನೆಗಳ ಹದ್ದಿನ ಕಣ್ಣು ತಮ್ಮ ಮೇಲೆ ಇದೆ ಎಂಬ ಆತಂಕ ಸದಾ ಕಾಡುತ್ತಿತ್ತು. 2019ರಲ್ಲಿ ಕಕ್ಕೆಪದವು ಮತ್ತು ಮೂಡುಬಿದಿರೆ ಕಂಬಳವನ್ನು 'ಬಾರುಕೋಲು ರಹಿತ'ವಾಗಿ ಆಯೋಜಿಸಲಾಗಿತ್ತು. ರಾಜ್ಯ ಸರ್ಕಾರ ಮಾಡಿರುವ ಕಾನೂನು ತಿದ್ದುಪಡಿಯನ್ನು ಮಾನ್ಯ ಮಾಡಿ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠ ಈ ವರ್ಷದ ಮೇ ತಿಂಗಳಲ್ಲಿ ಆದೇಶ ಹೊರಡಿಸಿತ್ತು. ಇದರಿಂದ ಕಂಬಳದ ಮೇಲೆ ಇದ್ದ ಆತಂಕದ ಕಾರ್ಮೋಡ ಸರಿದರೂ ಕಾನೂನು ಚೌಕಟ್ಟಿನಲ್ಲಿ ಕಂಬಳ ಆಯೋಜಿಸುವ ಸವಾಲು ಇನ್ನೂ ಇದೆ.

ಕರಾವಳಿಯ ನೀರು

ಕಂಬಳದ ಕೋಣಗಳಿಗೆ ಕುಡಿಯಲು ಮಾಲೀಕರ ಬಾವಿಯ ನೀರನ್ನೇ ನೀಡಲಾಗುತ್ತದೆ. ಕರಾವಳಿಯಲ್ಲಿ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ತೆರಳಿದಾಗ ನೀರು ಬದಲಾದರೂ ಭೇದಿ ಆರಂಭವಾಗುತ್ತದೆ. ಹೀಗಾಗಿ ಬೆಂಗಳೂರಿಗೆ ಕರಾವಳಿಯ ಬಾವಿ ನೀರನ್ನೇ ತೆಗೆದುಕೊಂಡು ಹೋಗಲು ನಿರ್ಧರಿಸಲಾಗಿದೆ. ಕೋಣಗಳನ್ನು ಕರೆದುಕೊಂಡು ಹೋಗುವಾಗ ನೀರು ತುಂಬಿದ ಟ್ಯಾಂಕರ್‌ಗಳು ಕೂಡ ಜೊತೆಯಲ್ಲಿ ಸಾಗಲಿವೆ.

'ವರ್ಷಗಟ್ಟಲೆ ಒಂದೇ ಬಾವಿಯ ನೀರು ಕುಡಿದ ಕೋಣಗಳಿಗೆ ಇಲ್ಲಿನ ನದಿ ನೀರು ಕುಡಿದರೂ ತೊಂದರೆಯಾಗುತ್ತದೆ. ಹುರುಳಿ, ಬೈ ಹುಲ್ಲಿನ ಸಮಸ್ಯೆ ಇಲ್ಲ. ನೀರಿನ ವಿಷಯದಲ್ಲಿ ಅತಿಸೂಕ್ಷ್ಮವಾಗಿ ಇರಬೇಕು' ಎಂದು ಲೋಕೇಶ್ ಶೆಟ್ಟಿ ಹೇಳಿದರು.

ಕೋಣ ಸಾಕುವುದು ಪ್ರತಿಷ್ಠೆ

ಕಂಬಳ ಕೋಣ ಸಾಕುವುದು ಮಾಲೀಕರಿಗೆ ಪ್ರತಿಷ್ಠೆಯ ವಿಷಯ. ಇದು ಶ್ರೀಮಂತಿಕೆಯ ಸಂಕೇತವೂ ಹೌದು. ಒಂದು ಜೋಡಿ ಕೋಣಗಳ ನಿರ್ವಹಣೆಗೆ ವರ್ಷಕ್ಕೆ ಅಂದಾಜು ₹15 ಲಕ್ಷದ ವರೆಗೆ ಖರ್ಚಾಗುತ್ತದೆ ಎಂದು ಕೆಲ ಕೋಣಗಳ ಮಾಲೀಕರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಕೋಣಗಳನ್ನು ಬಹಳ ಕಾಳಜಿ ವಹಿಸಿ ಸಾಕಲಾಗುತ್ತದೆ. ಋತುಮಾನಕ್ಕೆ ತಕ್ಕಂತೆ ಆಹಾರ ಪದ್ಧತಿಯನ್ನೂ ಬದಲಿಸುತ್ತ ಹೋಗಲಾಗುತ್ತದೆ. ಕಂಬಳದ ಋತುವಿನಲ್ಲಿ ನವೆಂಬರ್‌ನಿಂದ ಮಾರ್ಚ್‌ವರೆಗೆ ನಿತ್ಯ ಒಣಹುಲ್ಲು. ಒಂದು ಕೋಣಕ್ಕೆ ನಿತ್ಯ ಸರಾಸರಿ 5 ಕೆ.ಜಿ. ಹುರುಳಿ ಕಾಳು, ಹಣ್ಣು, ತರಕಾರಿ. ಮಾರ್ಚ್ ತಿಂಗಳಲ್ಲಿ ಒಣಹುಲ್ಲು, ಹುರುಳಿ ಜೊತೆಗೆ ದೇಹ ತಂಪಾಗಿಸಲು ಕುಂಬಳಕಾಯಿ, ಬಿಟ್‌ರೂಟ್, ಗಜ್ಜರಿ. ಮಳೆಗಾಲದಲ್ಲಿ ಹಸಿ ಹುಲ್ಲು, ಮೊಳಕೆ ಕಾಳು, ಹುರುಳಿಯನ್ನು ರುಬ್ಬಿ ಹಿಟ್ಟಿನ ರೂಪದಲ್ಲಿ ಕೊಡಲಾಗುತ್ತದೆ. ಬೇಸಿಗೆಯಲ್ಲಿ ದೇಹ ತಂಪಾಗಿಸಲು ಹುರುಳಿ ಹಿಟ್ಟಿನಲ್ಲಿ 180 ಮಿಲಿ ಲೀಟರ್ ಒಳ್ಳೆಣ್ಣೆ ಮಿಶ್ರಣ ಮಾಡಿ ವಾರದಲ್ಲಿ ಎರಡು ಬಾರಿ ಕೊಡಲಾಗುತ್ತದೆ. ಸಿದ್ಧ ಪಶು ಆಹಾರ ನಿಷಿದ್ಧ.

ಎಳೆಬಿಸಿಲು ಕಾಯಿಸುವುದು, ಈಜು, ಎಣ್ಣೆಯಲ್ಲಿ ಮಸಾಜ್ ಇವು ಕೋಣಗಳ ದಿನಚರಿಯ ಭಾಗ. ಕಂಬಳ ಋತು ಆರಂಭಕ್ಕೆ ಮೂರು ತಿಂಗಳು ಇರುವಂತೆ ಫಿಟ್‌ನೆಸ್‌ಗೆ ಹೆಚ್ಚು ಒತ್ತು. ಈ ಅವಧಿಯಲ್ಲಿ ಬಿಸಿನೀರ ಸ್ನಾನ ಹೆಚ್ಚುವರಿ ಸೇರ್ಪಡೆಯಾಗುತ್ತದೆ. ಆಗಸ್ಟ್‌ನಿಂದ ಅಕ್ಟೋಬರ್ ವರೆಗೆ ನಿತ್ಯ 2 ತಾಸು ನೇಗಿಲಿನ ಮೂಲಕ ಭೂಮಿ ಉಳುಮೆ. ಕಂಬಳದ ವೇಳೆ ವಾರಕ್ಕೆ 3 ದಿನ ಉಳುಮೆ ಕಡ್ಡಾಯ. ಉಳುಮೆಯ ನಂತರ ಸ್ನಾನ ಮಾಡಿಸಿ, ಕೊಟ್ಟಿಗೆಯಲ್ಲಿ ಕಟ್ಟಲಾಗುತ್ತದೆ. ಕಂಬಳ ಸ್ಪರ್ಧೆ ಹತ್ತಿರವಾಗುತ್ತಿದ್ದಂತೆ 'ಕುದಿ' (ಟ್ರಯಲ್ ಓಟ) ಇರುತ್ತದೆ.

ಫೇಸ್ ಫಿನಿಶಿಂಗ್ ತಂತ್ರಜ್ಞಾನ

ಕಕ್ಕೆಪದವು ಕಂಬಳದಲ್ಲಿ 100 ಮೀಟರ್ ಓಟದ ಕರೆಯಲ್ಲಿ 8.78 ಸೆಕೆಂಡುಗಳಲ್ಲಿ ಕೋಣಗಳನ್ನು ದಾಟಿಸಿ ಹೆಸರು ಮಾಡಿದ ಮಿಜಾರು ಅಶ್ವತ್ಥಪುರದ ಶ್ರೀನಿವಾಸ ಗೌಡ ಅವರು ಸುದ್ದಿಯಾದ ನಂತರ ಕಂಬಳದ 'ಟೈಮರ್' ಬಗ್ಗೆ ಅಸಮಾಧಾನದ ಹೊಗೆಯೂ ಎದ್ದಿತ್ತು. ಈ ಸಂದರ್ಭದಲ್ಲಿ ಕಂಬಳದ ಖ್ಯಾತಿಯೂ ಹೆಚ್ಚಾಗಿತ್ತು. ಹೀಗಾಗಿ ಹೊಸ ತಂತ್ರಜ್ಞಾನದ ಬಳಕೆಗೆ ಕಂಬಳ ಸಮಿತಿ ಮುಂದಾಗಿತ್ತು. ಟಿವಿ ಅಂಪೈರ್, ಲೇಜರ್ ಬೀಮ್ ತಂತ್ರಜ್ಞಾನ, ವಿಡಿಯೊ ಫಿನಿಶಿಂಗ್ ಇತ್ಯಾದಿ ಸೌಲಭ್ಯಗಳು ಬಂದವು. ಕೋಣಗಳ ಓಟದ ವೇಗವನ್ನು ಖಾತರಿಪಡಿಸಿಕೊಳ್ಳಲು ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ದಕ್ಷಿಣ ಪ್ರಾದೇಶಿಕ ಕೇಂದ್ರದ ಅಧಿಕಾರಿಗಳು ಪೈವಳಿಕೆ ಕಂಬಳಕ್ಕೆ ಭೇಟಿ ನೀಡಿದರು.

ಈ ಬಾರಿ ಕಾಲದ ನಿಖರ ದಾಖಲಾತಿಗಾಗಿ ಲೆಗ್ ಫಿನಿಶಿಂಗ್ ಬದಲಿಗೆ ಫೇಸ್ ಫಿನಿಶಿಂಗ್ ತಂತ್ರಜ್ಞಾನ ಅಳವಡಿಸಲು ನಿರ್ಧರಿಸಲಾಗಿದೆ. ಕಾಲಮಿತಿಯಲ್ಲಿ ಸ್ಪರ್ಧೆ ಮುಗಿಸುವುದಕ್ಕಾಗಿ ಸೈರನ್ ವ್ಯವಸ್ಥೆಯನ್ನೂ ಜಾರಿಗೆ ತರಲಾಗಿದೆ. ಇವೆರಡರ ಪರೀಕ್ಷೆ ಇದೇ ತಿಂಗಳ 11ರಂದು ಕಾರ್ಕಳದ ಮಿಯಾರಿನಲ್ಲಿ ನಡೆದಿದ್ದು ಬೆಂಗಳೂರು ಕಂಬಳದಲ್ಲಿ ಅಧಿಕೃತವಾಗಿ ಪ್ರಯೋಗಿಸಲು ಕಂಬಳ ಸಮಿತಿ ಮುಂದಾಗಿದೆ.

200 ಜೋಡಿ ಕೋಣಗಳು ಭಾಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಕಂಬಳಕ್ಕೆ ಸುಮಾರು 228 ಜೋಡಿಗಳು ನೋಂದಾಯಿಸಿಕೊಂಡಿದ್ದವು. ಆದರೆ, 200 ಜೊತೆ ಕೋಣಗಳನ್ನು ಆಯ್ಕೆ ಮಾಡಿದ್ದೇವೆ. ಸಾಮಾನ್ಯವಾಗಿ ಕಂಬಳ ನಡೆಯುವ 'ಕರೆ' (ಕೋಣಗಳು ಓಡುವ ಟ್ರ್ಯಾಕ್) 147 ಮೀ. ಉದ್ದ ಇರುತ್ತದೆ. ಆದರೆ, ಇಲ್ಲಿ 155 ಮೀ. ಉದ್ದದ ಕರೆಯನ್ನು ನಿರ್ಮಿಸಿದ್ದೇವೆ' ಎಂದು ಬೆಂಗಳೂರು ಕಂಬಳ ಸಮಿತಿ ಅಧ್ಯಕ್ಷ ಹಾಗೂ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.



'23ರಂದು (ಗುರುವಾರ) ಬೆಳಿಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯಿಂದ ಕೋಣಗಳು ಒಟ್ಟಿಗೆ ಲಾರಿಗಳಲ್ಲಿ ಹೊರಡಲಿವೆ. ಸಂಜೆ 4 ಗಂಟೆಗೆ ಹಾಸನ ತಲುಪಲಿವೆ. ಅಲ್ಲಿ ಅವುಗಳನ್ನು ಇಳಿಸಿ ಕೆಲಹೊತ್ತು ವಿಶ್ರಾಂತಿ ನೀಡಿ ತಿನಿಸು ನೀಡಲಾಗುವುದು. ಅಲ್ಲಿಂದ ಹೊರಡುವ ಕಂಬಳದ ಕೋಣಗಳು ರಾತ್ರಿ ಬೆಂಗಳೂರು ತಲುಪಲಿವೆ' ಎಂದು ವಿವರಿಸಿದರು.

'ಕಂಬಳಕ್ಕೆ ₹7.50 ಕೋಟಿಯಿಂದ ₹8 ಕೋಟಿ ವೆಚ್ಚ ತಗಲುವ ನಿರೀಕ್ಷೆಯಿದೆ. ಸರ್ಕಾರ ಒಂದು ಕೋಟಿ ರೂಪಾಯಿ ಅನುದಾನ ಪ್ರಕಟಿಸಿದೆ. ಪ್ರೆಸ್ಟೀಜ್ ಡೆವಲಪರ್ಸ್, ಆಭರಣ ಜುವೆಲರ್ಸ್, ಕೆನರಾ ಬ್ಯಾಂಕ್, ಗೋಲ್ಡ್‌ಫಿಂಚ್ ಸಮೂಹ, ಎಂಆರ್‌ಜಿ ಸಮೂಹ ಮತ್ತಿತರರ ಉದ್ಯಮಗಳು ಹಣಕಾಸು ನೆರವು ನೀಡುತ್ತಿವೆ. ಬೆಂಗಳೂರು ಹೋಟೆಲ್ ಮಾಲೀಕರ ಸಂಘವೂ ಕೈಜೋಡಿಸಿದೆ' ಎಂದರು.

'ಒಂದೇ ಸಮಾಜಕ್ಕೆ ಸೀಮಿತವಾಗಿಲ್ಲ': ಬೆಂಗಳೂರು ಕಂಬಳವು ಯಾವುದೇ ಒಂದು ಪಕ್ಷ ಅಥವಾ ಸಮುದಾಯಕ್ಕೆ ಸೀಮಿತಗೊಂಡಿಲ್ಲ. ಮುಸ್ಲಿಂ ಸಮುದಾಯಕ್ಕೆ ಸೇರಿದವರು ಒಟ್ಟು ಆರು ಜೋಡಿ ಕೋಣಗಳನ್ನು ತರಲಿದ್ದಾರೆ. ನಾಲ್ಕು ಜೋಡಿ ಕೋಣಗಳು ಕ್ರೈಸ್ತ ಸಮುದಾಯದವರು ತರಲಿದ್ದಾರೆ' ಎಂದು ಅಶೋಕ್ ಕುಮಾರ್ ವಿವರಿಸಿದರು.

24ರಂದು (ಶುಕ್ರವಾರ) ಬೆಳಿಗ್ಗೆಯಿಂದ ಸಂಜೆಯವರೆಗೆ ತುಳು ಕೂಟದಿಂದ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯಲಿವೆ.

ಕಂಬಳ: ಏನು ವೈಶಿಷ್ಟ್ಯ

- ಕಂಬಳ 'ಕರೆ' (ಟ್ರ್ಯಾಕ್)ಗೆ 'ರಾಜ ಮಹಾರಾಜ' ಹೆಸರು.
- ಕಾರ್ಯಕ್ರಮದ ಮುಖ್ಯವೇದಿಕೆಗೆ ಪುನೀತ್ ರಾಜಕುಮಾರ್ ಹೆಸರು. ಸಾಂಸ್ಕೃತಿಕ ವೇದಿಕೆಗೆ ಕೃಷ್ಣರಾಜ ಒಡೆಯರ್ ಹೆಸರು.
- ಕರಾವಳಿಯ ಯಕ್ಷಗಾನ, ಹುಲಿವೇಷ ಕುಣಿತ
- ಕಂಬಳಕ್ಕೆ ಪ್ರವೇಶ ಉಚಿತ. 180ಕ್ಕೂ ಹೆಚ್ಚು ಮಳಿಗೆಗಳು. ಹಲಸಿನ ಹಪ್ಪಳದಿಂದ ಕೋರಿ (ಕೋಳಿ) ರೊಟ್ಟಿಯವರೆಗೆ ಕರಾವಳಿಯ ಸಾಂಪ್ರದಾಯಿಕ ತಿನಿಸುಗಳು ಲಭ್ಯ, ವಸ್ತು ಪ್ರದರ್ಶನ
- ಗ್ಯಾಲರಿಯಲ್ಲಿ 6ರಿಂದ 7ಸಾವಿರ ಜನರು ಕುಳಿತುಕೊಳ್ಳಲು ಅವಕಾಶ
- 24 ಎಕರೆ ಪ್ರದೇಶದಲ್ಲಿ ಪಾರ್ಕಿಂಗ್ ವ್ಯವಸ್ಥೆ
- 25ರಂದು ಬೆಳಿಗ್ಗೆ 10.30ಕ್ಕೆ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರಿಂದ ಉದ್ಘಾಟನೆ

₹1 ಲಕ್ಷ ನಗದು

'ಕಂಬಳದಲ್ಲಿ ವಿಜೇತರಾಗುವ ಕೋಣದ ಯಜಮಾನರಿಗೆ ₹1 ಲಕ್ಷ ನಗದು, 16 ಗ್ರಾಂ ಚಿನ್ನ ನೀಡಲಾಗುತ್ತದೆ. ಎರಡನೇ ಸ್ಥಾನ ಪಡೆದವರಿಗೆ ₹50,000 ನಗದು, 8 ಗ್ರಾಂ ಚಿನ್ನ ಹಾಗೂ ಮೂರನೇ ಸ್ಥಾನ ಪಡೆದವರಿಗೆ ₹25,000 ನಗದು ಹಾಗೂ 4 ಗ್ರಾಂ ಚಿನ್ನದ ಪದಕವನ್ನು ಬಹುಮಾನವಾಗಿ ನೀಡಲಾಗುವುದು' ಎಂದು ಅಶೋಕ್ ತಿಳಿಸಿದರು.

'ವಿವಾದಿತರನ್ನು ಕೈಬಿಟ್ಟದ್ದೇವೆ....'

'ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ದೌರ್ಜನ್ಯ ನೀಡಿದ ಆರೋಪ ಹೊತ್ತಿರುವ ಕುಸ್ತಿ ಸಂಸ್ಥೆ ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಹೆಸರನ್ನು ಆಹ್ವಾನಪತ್ರಿಕೆಯಲ್ಲಿ ಸೇರಿಸಿದ್ದು ವಿವಾದವಾಗಿತ್ತು. ಅವರ ಹೆಸರನ್ನು ನಂತರ ತೆಗೆದುಹಾಕಲಾಗಿತ್ತು. ಅಪರಾಧ ಕೃತ್ಯಗಳ ಮೇಲೆ ಜೈಲುಶಿಕ್ಷೆ ಅನುಭವಿಸಿದ್ದ ಶ್ಯಾಮ್‌ಕಿಶೋರ್ ಗರಕಪಟ್ಟಿ ಅವರ ಹೆಸರೂ ಇತ್ತು. ನಮಗೆ ಗೊತ್ತಾದ ಮೇಲೆ ಅವರ ಹೆಸರನ್ನೂ ತೆಗೆದುಹಾಕಿ ಬರಬೇಡಿ ಎಂದಿದ್ದೇವೆ' ಎಂದು ಅಶೋಕ್ ಕುಮಾರ್ ಸ್ಪಷ್ಟನೆ ನೀಡಿದರು.

ಸಿನಿ ಬಿಟ್ಸ್

'ಉತ್ತರಕಾಂಡ' ಪ್ರವೇಶಿಸಿದ ಸೆಂಚುರಿ ಸ್ಟಾರ್



'ಉತ್ತರಕಾಂಡ' ಸೆಟ್‌ಗೆ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಹೆಜ್ಜೆ

ನಟ 'ಡಾಲಿ' ಧನಂಜಯ ನಟನೆಯ 'ಉತ್ತರಕಾಂಡ-ಮುನ್ನುಡಿ' ಸಿನಿಮಾ ಸೆಟ್‌ಗೆ ಸೆಂಚುರಿ ಸ್ಟಾರ್ ಹೆಜ್ಜೆ ಇಟ್ಟಿದ್ದಾರೆ. 'ಗುದ್ದಾಂ ಗುದ್ದಿ ಚಾಲು!' ಎನ್ನುತ್ತಾ ಎಕ್ಸ್ ನಲ್ಲಿ ಈ ಕುರಿತು ನಟ ಶಿವರಾಜ್‌ಕುಮಾರ್ ಅವರು ಫೋಟೊ ಹಂಚಿಕೊಂಡಿದ್ದಾರೆ. ಚಿತ್ರ ನಿರ್ಮಾಣ ಸಂಸ್ಥೆ ಕೆಆರ್‌ಜಿ ಸ್ಟುಡಿಯೋಸ್ ಕೂಡ ಈ ಕುರಿತು ಎಕ್ಸ್ ಮಾಡಿದೆ.

ಚಿತ್ರತಂಡಕ್ಕೆ ಶಿವರಾಜ್‌ಕುಮಾರ್ ಅವರನ್ನು ಸ್ವಾಗತಿಸಿದೆ ಕೆಆರ್‌ಜಿ. ಆದರೆ ಅವರ ಪಾತ್ರದ ಬಗ್ಗೆ ಮಾಹಿತಿಯನ್ನು ಚಿತ್ರತಂಡ ಬಿಟ್ಟುಕೊಟ್ಟಿಲ್ಲ. 'ರತ್ನನ್ ಪ್ರಪಂಚ' ಸಿನಿಮಾ ಯಶಸ್ಸಿನ ಬಳಿಕ ಕೆ.ಆರ್.ಜಿ ಸ್ಟುಡಿಯೋಸ್, ಧನಂಜಯ ಮತ್ತು ರೋಹಿತ್ ಪದಕಿ ಕಾಂಬಿನೇಷನ್‌ನ ತಂಡ ಈ ಸಿನಿಮಾ ಮೂಲಕ ಇನ್ನೊಂದು ಯತ್ನಕ್ಕೆ ಕೈಹಾಕಿದೆ. ರೋಹಿತ್ ಪದಕಿ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾವನ್ನು ಕಾರ್ತಿಕ್ ಮತ್ತು ಯೋಗಿ ಜಿ.ರಾಜ್ ಅವರು ನಿರ್ಮಿಸುತ್ತಿದ್ದಾರೆ.

ಉತ್ತರ ಕರ್ನಾಟಕದ ಹಿನ್ನೆಲೆಯಲ್ಲಿ ನಡೆಯುವ ಈ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಯಾಗಿ ಪ್ರೇಕ್ಷಕರನ್ನು ಸೆಳೆದಿತ್ತು. ಚಿತ್ರ ಸಂಪೂರ್ಣ ಉತ್ತರ ಕರ್ನಾಟಕದ ಸೊಗಡಲ್ಲಿ, ಭಾಷೆಯಲ್ಲಿ ಇದ್ದು, ಅಲ್ಲಿಯೇ ಚಿತ್ರೀಕರಣವೂ ನಡೆಯುತ್ತಿದೆ. ಚಿತ್ರದಲ್ಲಿ ಧನಂಜಯ ಅವರ ಜೊತೆಗೆ ನಟಿ ರಮ್ಯಾ ನಟಿಸುತ್ತಿದ್ದು, ಈ ಸಿನಿಮಾ ಮೂಲಕ ಅವರು ಬಹಳ ವರ್ಷಗಳ ನಂತರ ಬೆಳ್ಳಿತೆರೆಗೆ ಮರಳುತ್ತಿದ್ದಾರೆ. 'ಉತ್ತರಕಾಂಡ'ದಲ್ಲಿ ಧನಂಜಯ ಮುಖ್ಯಭೂಮಿಕೆಯಲ್ಲಿದ್ದು, ಇದು ಅವರ ವೃತ್ತಿಯಲ್ಲೇ ಅತಿ ದೊಡ್ಡ ಬಜೆಟ್ ಸಿನಿಮಾ ಎನ್ನಲಾಗಿದೆ. ಅರವಿಂದ ಕಶ್ಯಪ್ ಛಾಯಾಚಿತ್ರಗ್ರಹಣ, ಚರಣ್ ರಾಜ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ.

ಲಿಂಕ್: https://twitter.com/NimmaShivanna/status/1726172078850883658

ಪ್ರೇಮಕಾವ್ಯ ಮುಕ್ತಾಯ

ಸೌರಭ್ ಹಾಗೂ ದಿವ್ಯಾ ಸುರೇಶ್ ಜೋಡಿಯಾಗಿ ನಟಿಸಿರುವ 'ಪ್ರೇಮಕಾವ್ಯ' ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಪೂರ್ಣಗೊಂಡಿದೆ. ಎನ್. ಎಸ್.ಶ್ರೀಧರ್ ಕಥೆ ಬರೆದು ನಿರ್ದೇಶಿಸಿದ್ದು, ಸೂರಜ್ ಪ್ರೊಡಕ್ಷನ್ ಚಿತ್ರವನ್ನು ನಿರ್ಮಿಸುತ್ತಿದೆ.

'ನನ್ನ ಹಿಂದಿನ ಚಿತ್ರಕ್ಕೆ ಖ್ಯಾತ ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ಐಟಂ ಮಾಡಿದ್ದರು. ಕಾರಣಾಂತರಗಳಿಂದ ಅದನ್ನು ಚಿತ್ರದಲ್ಲಿ ಬಳಸಿಕೊಂಡಿರಲಿಲ್ಲ. ಆ ಹಾಡನ್ನು ಈ ಚಿತ್ರದಲ್ಲಿ ಬಳಸಿಕೊಂಡು ಚಿತ್ರೀಕರಣ ಮುಗಿಸಿದ್ದೇವೆ. ಹಲವು ಸಿನಿಮಾಗಳಲ್ಲಿ ನಾಯಕಿಯಾಗಿ ಕಾಣಿಸಿಕೊಂಡಿದ್ದ ಸಂಭ್ರಮಶ್ರೀ ಐಟಂ ಹಾಡಿಗೆ ಹೆಜ್ಜೆ ಹಾಕಿದ್ದಾರೆ' ಎಂದರು ನಿರ್ದೇಶಕರು.

ಬೆಂಗಳೂರು, ಹೈದರಾಬಾದ್, ಕುಶಾಲನಗರ ಮತ್ತು ಮಡಿಕೇರಿಯಲ್ಲಿ ಚಿತ್ರೀಕರಣ ಮಾಡಲಾಗಿದೆ. ಹರೀಶ್ ರೈ, ಎಂ.ಡಿ. ಕೌಶಿಕ್ ಮುಂತಾದವರು ಅಭಿನಯಿಸಿದ್ದಾರೆ. ಎಂ.ಎಂ. ಮೋಹನ್ ಸಂಗೀತ, ಸುರೇಶ್‌ಬಾಬು-ವಿನ್ಸೆಂಟ್ ಛಾಯಾಗ್ರಹಣ ಚಿತ್ರಕ್ಕಿದೆ. ಕನ್ನಡ, ತೆಲುಗು, ಮಲೆಯಾಳ ಭಾಷೆಗಳಲ್ಲಿ ಚಿತ್ರ ತೆರೆಗೆ ಬರಲಿದೆ.



ದಿವ್ಯಾ ಸುರೇಶ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಪರಿಪೂರ್ಣತೆಯೆಂಬ ಭ್ರಮೆ

ನುಡಿ ಬೆಳಗು



ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ತೊಂಬತ್ತು ವರ್ಷದ ಒಬ್ಬ ಶ್ರೀಮಂತ ಉದ್ಯಮಿ ಸಾವಿನ ಹೊಸ್ತಿಲಲ್ಲಿ ಮಲಗಿದ್ದ. ದಾನ ಧರ್ಮದಲ್ಲಿ ಎತ್ತಿದ ಕೈ ಆತ. ಊರಿನ ಜನರಿಗೆಲ್ಲ ಬಹು ಪ್ರೀತಿಪಾತ್ರ. ಆದರೆ ಆತ ಅವಿವಾಹಿತ. ಆತ ಯಾಕೆ ಮದುವೆಯಾಗಲಿಲ್ಲ ಎಂಬ ವಿಚಾರವನ್ನು ತಿಳಿದುಕೊಳ್ಳಲು ಬಹಳಷ್ಟು ಜನರು ಯತ್ನಿಸಿದರೂ ಆತ ಮುಗುಳ್ನಕ್ಕು ಅವರನ್ನು ಸುಮ್ಮನಾಗಿಸುತ್ತಿದ್ದ.

ಕೊನೆಗಾಲದಲ್ಲಿ ಆತನನ್ನು ನೋಡಲು ಬಂದ ಒಬ್ಬ ಪತ್ರಕರ್ತ ಕೇಳಿದ, 'ನೀವೇಕೆ ಮದುವೆಯಾಗಲಿಲ್ಲ ಎಂಬ ಗುಟ್ಟನ್ನು ಈಗಲಾದರೂ ಹೇಳುತ್ತೀರಾ?' ಆಗ ಉದ್ಯಮಿಯೆಂದ, 'ನಿಜ, ಒಂದು ಗುಟ್ಟು ಇದೆ. ನಾನು ಮದುವೆಯ ವಿರೋಧಿಯಲ್ಲ. ಆದರೆ ನಾನು ಸಂಗಾತಿಯಾಗಿ ಪರಿಪೂರ್ಣ ಹೆಣ್ಣನ್ನು ಹುಡುಕುತ್ತಲೇ ಹೋದೆ. ಮುಷ್ಟಿಯಲ್ಲಿದ್ದ ಮರಳ ಕಣಗಳ ಹಾಗೆ ಆಯಸ್ಸು ಸೋರಿ ಹೋಯಿತು' ಎಂದು ನಿಟ್ಟುಸಿರಿಟ್ಟ.

ಆಗ ಪತ್ರಕರ್ತ, 'ಅಲ್ಲ ಇಷ್ಟು ದೊಡ್ಡ ಜಗತ್ತು, ಅದರಲ್ಲಿ ಅರ್ಧದಷ್ಟು ಜನ ಮಹಿಳೆಯರು, ಇಷ್ಟೆಲ್ಲ ಜನರಲ್ಲಿ ನಿಮಗಾಗಿ ಒಬ್ಬಳೇ ಒಬ್ಬಳು ಸಿಗಲಿಲ್ಲವೇ' ಎಂದು ಅಚ್ಚರಿಯಿಂದ ಕೇಳಿದ. ವಿಷಾದದ ಒಂದು ನಗು ಉದ್ಯಮಿಯ ತುಟಿಗಳನ್ನು ಸವರಿ ಮಾಯವಾಯಿತು. ಆತನೆಂದ, 'ಯಾಕಿಲ್ಲ ಒಬ್ಬಳು ಸಿಕ್ಕಿದ್ದಳಲ್ಲ...'

ಮತ್ತೂ ಆಶ್ಚರ್ಯದಿಂದ ಪತ್ರಕರ್ತ ಕೇಳಿದ, 'ಹಾಗಾದರೆ ಏನಾಯಿತು, ಏಕೆ ನೀವು ಮದುವೆ ಆಗಲಿಲ್ಲ?' ಆಗ ಉದ್ಯಮಿ ನಿಧಾನವಾಗಿ ಹೇಳಿದ, 'ಅವಳು ಒಪ್ಪಲಿಲ್ಲ'. ಪತ್ರಕರ್ತನಿಗೋ ಗೊಂದಲ ಹೆಚ್ಚಾಯಿತು, ಅರೇ ಇಂತಹ ಯೋಗ್ಯ ಗಂಡನ್ನು ಆಕೆ ಹೇಗೆ ನಿರಾಕರಿಸಿದಳು ಎಂದು ಯೋಚಿಸುತ್ತಿರುವಾಗ ಆ ಉದ್ಯಮಿ ಹೇಳಿದ, 'ಏಕೆಂದರೆ ಅವಳೂ ಪರಿಪೂರ್ಣ ಗಂಡಸಿನ ಹುಡುಕಾಟದಲ್ಲಿದ್ದಳಲ್ಲ'.

ಕೇಳಿದಾಗ ನಗು ಬರುವ ಈ ಪುಟ್ಟ ಕಥೆಯಲ್ಲಿ ಅದೆಂಥ ಸತ್ಯ ಅಡಗಿದೆ. ಬದುಕಿನಲ್ಲಿ ಪರಿಪೂರ್ಣತೆ ಎನ್ನುವುದು ಅಸಾಧ್ಯವಾದ ಮಾತು. ನಾವೋ... ಪರಿಪೂರ್ಣತೆಗಾಗಿ ಹುಡುಕುತ್ತ ಎಷ್ಟೋ ಅವಕಾಶಗಳನ್ನು ಕಳೆದುಕೊಂಡುಬಿಡುತ್ತೇವೆ. ಜಗತ್ತಿನಲ್ಲಿ ಯಾವುದೂ ಏನೂ ಯಾರೂ ಪರಿಪೂರ್ಣವಲ್ಲ ಎಂಬುದನ್ನು ತಿಳಿಯದೇ ಪರಿಪೂರ್ಣ ವ್ಯಕ್ತಿಯನ್ನು ಜತೆಯಲ್ಲಿರುವವರಲ್ಲಿ ಹುಡುಕಲು ಹೊರಟು ಅದು ಸಾಧ್ಯವಾಗದೇ ಭ್ರಮನಿರಸನ ಹೊಂದುತ್ತೇವೆ.

ಪರಿಪೂರ್ಣ ಸಮಯಕ್ಕಾಗಿ ಕಾಯುತ್ತ ನಮ್ಮ ಎಷ್ಟೋ ಆಸೆ ಆಕಾಂಕ್ಷೆಗಳನ್ನು ಎದೆಯಲ್ಲೇ ಉಳಿಸಿಕೊಂಡು ಕೊನೆಗೆ ಕೊರಗುತ್ತೇವೆ. ಆದರೆ ಪರಿಪೂರ್ಣತೆಯೆಂಬುದೊಂದು ಕಾಲ್ಪನಿಕ ಸಂಗತಿ. ಏಕೆಂದರೆ ನಮ್ಮನ್ನು ನಾವು ಸುಧಾರಿಸಿಕೊಳ್ಳುವ, ಜಗತ್ತನ್ನು ಅರಿತುಕೊಳ್ಳುವ, ವ್ಯಕ್ತಿಗಳನ್ನು ಅರ್ಥ ಮಾಡಿಕೊಳ್ಳುವ ಪ್ರಕ್ರಿಯೆಗೆ ಕೊನೆಯೆಂಬುದಿಲ್ಲ. ಅದೊಂದು ನಿರಂತರ ಕಲಿಕೆ. ಮತ್ತು ಈ ಕಲಿಕೆಗೆ ಕೊನೆಯಿಲ್ಲ. ಹಾಗಾಗಿ ಪರಿಪೂರ್ಣತೆಯನ್ನು ಸಾಧಿಸುವುದೆಂದರೆ ನಿರಂತರತೆಯನ್ನು ಹಿಂಬಾಲಿಸುತ್ತಿರುವುದು. ನಿನ್ನೆಗಿಂತ ಇಂದಿನ ದಿನವನ್ನು ಹೇಗೆ ಉತ್ತಮಗೊಳಿಸಿಕೊಳ್ಳಬೇಕು, ನಿನ್ನೆಗಿಂತ ಈ ದಿನ ನಾನು ಹೇಗೆ ಉತ್ತಮಗೊಳ್ಳಬೇಕು ಎಂಬುದರ ಕುರಿತು ಯೋಚಿಸಿ ಕಾರ್ಯತತ್ಪರರಾಗುವುದು, ಅಷ್ಟೇ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಗುರುವಾರ ನವೆಂಬರ್ 23, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಏಕಾದಶಿ ಗಂ. 21-03 ನಕ್ಷತ್ರ: ಉತ್ತರಾಭಾದ್ರ ಗಂ. 17-16 ಯೋಗ: ವಜ್ರ ಗಂ 11-53 ಕರಣ: ವಣಿಜ ಗಂ 10-03, ವೃಶ್ಚಿಕ ಮಾಸದ 07 ನೇ ದಿನ, ಮಳೆನಕ್ಷತ್ರ: ಅನುರಾಧ 2.

ರಾಹುಕಾಲ: ಮಧ್ಯಾಹ್ನ 01-30 - 03-00

ಸೂರ್ಯೋದಯ: 06-37 ಸೂರ್ಯಾಸ್ತ : 05-57

ಮುಸ್ಲಿಂ ದಿನಾಂಕ: 08 ಜುಮಾದುಲ್ಲಾವಲ್

ದಿನ ವಿಶೇಷ: ದೇವ ಪ್ರಬೋಧಿನಿ ಏಕಾದಶಿ, ಅದೃಷ್ಟ ಸಂಖ್ಯೆ : 7, 2

ಮೇಷ: ಮಕ್ಕಳ ಅನಾರೋಗ್ಯದ ಕಾರಣ ಗಾಬರಿಯ ವಾತಾವರಣ ಸೃಷ್ಟಿಯಾಗಬಹುದು. ಕೇವಲ ಮನರಂಜನೆಗಾಗಿ ಅಧಿಕ ಮಟ್ಟದಲ್ಲಿ ಧನ ಹಾನಿ ಆಗಲಿದೆ. ತರಕಾರಿ ಬೆಳೆಗಾರರಿಗೆ ನಷ್ಟವಾಗುವ ಸಂಭವವಿದೆ.

ವೃಷಭ: ಆರೋಗ್ಯದ ಕಡೆ ಹೆಚ್ಚಿನ ಗಮನವಿರಲಿ, ಆಹಾರದಲ್ಲಿ ವಾಯು ಪದಾರ್ಥದ ಬಳಕೆ ಕಡಿಮೆಮಾಡಿ. ಖಾದ್ಯ ತೈಲ ವ್ಯಾಪಾರಿಗಳಿಗೆ ಹೆಚ್ಚಿನ ಲಾಭದ ನಿರೀಕ್ಷೆ ಇರುವುದು. ದಿನೇ ದಿನೇ ಸಂಸಾರದಲ್ಲಿ ನೆಮ್ಮದಿ ವೃದ್ಧಿಯಾಗಲಿದೆ.

ಮಿಥುನ: ಬರವಣಿಗೆ ಕೆಲಸದವರು ಸಾಕ್ಷಿಗಳ ಅಧ್ಯಯನ ಸಮಂಜಸವಾಗಿ ಮಾಡುವುದು ಉತ್ತಮ. ಹೊಸ ಜಾಗದಲ್ಲಿ ಕೆಲಸ ನಿರ್ವಹಿಸ ಬೇಕಾಗುವುದು. ಖರ್ಚಿನ ವಿಚಾರದಲ್ಲಿ ಮಿತವ್ಯಯಿಗಳಾಗುವಿರಿ.

ಕರ್ಕಾಟಕ: ನಿಮ್ಮ ಅಭಿರುಚಿಗೆ ತಕ್ಕಂತಹ ವ್ಯಕ್ತಿತ್ವ ಹೊಂದಿದ ವ್ಯಕ್ತಿಗಳೊಂದಿಗೆ ವ್ಯವಹರಿಸುವುದು ಹೆಚ್ಚು ಸೂಕ್ತ. ನಿಮ್ಮ ಬಹುಮಟ್ಟಿನ ಪ್ರಯತ್ನದಿಂದ ಆರ್ಥಿಕತೆಯಲ್ಲಿ ಸುಧಾರಣೆಯಾಗುವುದು. ರಾಜಕೀಯ ವ್ಯಕ್ತಿಗಳ ಪರಿಚಯವಾಗಲಿದೆ.

ಸಿಂಹ: ವಕೀಲರಿಗೆ ತಯಾರಿ ಕೊರತೆಯಿಂದಾಗಿ ಸಮಸ್ಯೆ ಸೃಷ್ಟಿಸಿಕೊಂಡಂತಾಗಲಿದೆ. ವಸ್ತ್ರ ವಿನ್ಯಾಸದ ಕೆಲಸಗಳಿಂದ ಹೇರಳವಾಗಿ ಸಂಪಾದನೆ ಯಾಗುತ್ತದೆ. ಸಂಜೆಯೊಳಗೆ ಮನಸ್ಸಿಗೆ ಮುದ ನೀಡುವ ಸುದ್ದಿ ಬರಲಿದೆ

ಕನ್ಯಾ: ಉನ್ನತಾಧಿಕಾರಿಯ ದಿಢೀರ್ ವರ್ಗಾವಣೆಯಿಂದಾಗಿ ಜವಾಬ್ದಾರಿ ಹೆಚ್ಚಾಗುವುದು. ಅನಿರೀಕ್ಷಿತ ಸಂಗತಿ ಜರುಗಿ ಕೆಲಸಗಳು ಪೂರ್ಣಗೊಳ್ಳುವುದು ವಿಳಂಬವಾಗಬಹುದು. ಹೊಸ ಯೋಜನೆಗಳು ಕೈಗೂಡಲಿವೆ.

ತುಲಾ: ಸಂದರ್ಭಕ್ಕೆ ಅನುಗುಣವಾಗಿ ವರ್ತಿಸುವ ನಿಮ್ಮ ಗುಣದಿಂದಾಗಿ ಸ್ನೇಹ-ಸಂಬಂಧಗಳಲ್ಲಿ ಬಿರುಕು ಮೂಡುವ ಪ್ರಸಂಗವಿರುವುದು. ವಿಜ್ಞಾನಿಗಳಿಗೆ ನಿರೀಕ್ಷಿತ ಯಶಸ್ಸು ದೊರೆತು ಸಂತಸವಾಗುವುದು.

ವೃಶ್ಚಿಕ: ಅವಿವಾಹಿತರಿಗೆ ಕಂಕಣ ಬಲ ಒದಗಿ ಬರಲಿದೆ. ಚರ್ಮದ ವಸ್ತುಗಳ ಉದ್ಯಮದವರಿಗೆ ರಫ್ತು ವ್ಯಾಪಾರಗಳಿಂದ ಲಾಭವಾಗುವುದು. ಮಿತ ಆಹಾರ ಸೇವನೆಯಿಂದ ಆರೋಗ್ಯ ಉತ್ತಮವಾಗಿರುವುದು.

ಧನು: ಗೋಪ್ಯತೆಯಿಂದ ಪ್ರಯತ್ನಪಟ್ಟಲ್ಲಿ ಎಲ್ಲಾ ಕೆಲಸಗಳಲ್ಲೂ ಜಯ ಗಳಿಸುವಿರಿ. ವೈದ್ಯರಿಗೆ ವೃತ್ತಿಯಲ್ಲಿ ಸವಾಲೆನಿಸುವ ವಿಷಯಗಳಲ್ಲಿ ಯಶಸ್ಸು ಸಿಗಲಿದೆ. ದೈವಾನುಗ್ರಹದಿಂದ ಕೆಲಸ ನೆರವೇರುವುದು.

ಮಕರ: ಅನಿರೀಕ್ಷಿತ ಘಟನೆಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡುವ ಅವಶ್ಯಕತೆಯಿಲ್ಲ. ಸೇವಾನಿರತ ವ್ಯಕ್ತಿಗಳಿಗೆ ಜನಪ್ರಿಯತೆ ಹೆಚ್ಚುತ್ತದೆ. ಅರ್ಥಶಾಸ್ತ್ರದ ವಿದ್ಯಾರ್ಥಿಗಳಿಗೆ ಜ್ಞಾನಸಂಪಾದನೆಗೆ ಅಡೆತಡೆಗಳು ಉಂಟಾಗಬಹುದು.

ಕುಂಭ: ವಿಭಿನ್ನ ರೀತಿಯ ಕೆಲಸವೊಂದನ್ನು ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ, ಒಪ್ಪಿಕೊಳ್ಳಿ ಅದು ನಿಮಗೆ ಸಾಕಷ್ಟು ಆದಾಯ ಮತ್ತು ಹೆಸರನ್ನು ತರಲಿದೆ. ಯಂತ್ರೋಪಕರಣಗಳ ಬಳಸುವಿಕೆಯ ಅರಿವಿಲ್ಲದೆ ಬಳಸಬೇಡಿ.

ಮೀನ: ಸಿಬ್ಬಂದಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡಲ್ಲಿ ನೀವಂದುಕೊಂಡ ಹಾಗೆಯೇ ಕೆಲಸಗಳು ನಡೆಯಲಿವೆ. ಸಾಲ ಮರುಪಾವತಿಯಾಗಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಅನಗತ್ಯದ ಅಲೆದಾಟಗಳು ತಪ್ಪಲಿವೆ.

ಪದಬಂಧ 5508


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಇದು ಕನ್ನಡಿಗನ ಯೂನಿವರ್ಸಿಟಿ (6)
4.ಹೀಗೆ ಕಡೆಗಣಿಸುವಿಕೆ (4)
5.ಬಿಡದಿ ಹತ್ತಿರವಿರುವ ಪತ್ನಿ (3)
7.ಪದ ಹೇಳಿ ಗಳಿಸಿರುವ ಬಿಲ್ಲೆ (3)
10.ಇದು ನಿಶ್ಚಯವಾದುದು (3)
12.ಮರಿ ಬಿದ್ದಿರುವ ಪ್ರಪಾತ (3)
13.ಆರೋಪದಲ್ಲೇ ಕೊನೆಗೊಂಡ ಮುಕ್ತಾಯ ಸಮಾರಂಭ! (4)
15.ಪ್ರಪಂಚದ ನಡುವಳಿಕೆಯ ಕೊನೆಗೆ ಹಾರವಿದೆ (6)

ಮೇಲಿಂದ ಕೆಳಕ್ಕೆ

1.ಕನ್ನಡಿಗನು ಮಾಡಿದ ಎಕ್ಸ್‌ಚೇಂಜ್! (4)
2.ಇಂದ್ರಿಯಗಳನ್ನು ನಿಗ್ರಹ ಮಾಡುವವನು (2)
3.ವನದಲ್ಲಿ ಆಗಿರುವ ಗಳಿಕೆ (4)
6.ಎಲ್ಲಾ ದಿಕ್ಕುಗಳಲ್ಲಿರುವ ರಾಜ್ಯಗಳನ್ನು ಗೆಲ್ಲುವುದು (4)
7.ದ್ರವ್ಯ ಅಥವಾ ವಸ್ತು (3)
8.ಕನ್ನಡಿಗರ ನಾಡು (4)
9.ಸಭೆಯ ಸದಸ್ಯ (4)
11.ಸುತ್ತಲಿನ ಜನ (4)
14.ಲೋಲುಪನು ತಿರುಗಿದರೆ ಕುಂದು ಕಾಣುತ್ತಿದೆಯಲ್ಲಾ! (2)



5507ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಳಸುಮಾತು 4.ವಾರ್ಧಕ್ಯ 5.ರಭಸ 6.ನೆಗಡಿ 8.ಮರವೆ 9.ವಸತಿ 12.ಲಿಕನ 15.ವಿನೋದ 16.ಗುಲಾಲು 17.ವಿಮಾನಯಾನ

ಮೇಲಿಂದ ಕೆಳಕ್ಕೆ:
1.ಬಹಿಷ್ಕಾರ 2.ಸುಮನೋಹರ 3.ತುರಗ 4.ವಾಸನೆ 7.ಗಣತಿ 8.ಮರುಕ 10.ಸಮುದ್ರಯಾನ 11.ಅಭಿಮಾನ 13.ನವಿಲು 14.ಪದವಿ

ಸುಡೊಕು 5894

1		3	5		6		4	7
				4				
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.


5893 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತಿಪಟೂರು	₹7100-8010
ತುರುವೇಕೆರೆ	₹7900-8100

ಷೇರುಪೇಟೆ ವಹಿವಾಟು 93



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,783
ಇಂದಿನ ಅಂತ್ಯ	19,811
▲	28
ದಿನದ ಗರಿಷ್ಠ	19,825

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹550
12 ಮೊಟ್ಟೆಗೆ	₹75

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1580 (1570)
ಸೋಯಾ (ರಿಫೈಂಡ್)	₹962 (967)
ಸೂರ್ಯಕಾಂತಿ (ರಿಫೈಂಡ್)	₹965 (970)
ಪಾಮೋಲಿನ್	₹850 (848)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150.50
ಆರ್‌ಎಸ್‌ಎಸ್-5	₹146.50
ಗುಡ್ ಲಾಟ್	₹130.50

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹3600-4400
ಮಧ್ಯಮ	₹2800-3600
ಸಣ್ಣ	₹2000-2800

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹321-486
ದ್ವಿತಳಿ (ಬಿ.ವಿ)	₹333-580

ಮತ್ತೆ ಓಪನ್‌ಎಐಗೆ ಆಲ್ಟ್‌ಮನ್



ಆಲ್ಟ್‌ಮನ್

ಸ್ಯಾನ್ ಫ್ರಾನ್ಸಿಸ್ಕೋ (ಎಎಫ್‌ಪಿ): ಓಪನ್‌ಎಐ ಕಂಪನಿಯು ಸ್ಯಾಮ್ ಆಲ್ಟ್‌ಮನ್ ಅವರನ್ನು ಮತ್ತೆ ಸಿಇಒ ಆಗಿ ನೇಮಿಸಿಕೊಳ್ಳುವುದಾಗಿ ಹೇಳಿದೆ.

ಸ್ಯಾಮ್ ಆಲ್ಟ್‌ಮನ್ ಅವರು ಪುನಃ ಓಪನ್‌ಎಐ ಸಿಇಒ ಆಗಿ ಮುಂದುವರಿಯಲಿದ್ದಾರೆ. ಅಧ್ಯಕ್ಷರಾಗಿ ಬ್ರೆಟ್ ಟೇಲರ್, ಸದಸ್ಯರಾಗಿ ಲ್ಯಾರಿ ಸಮ್ಮರ್ಸ್ ಮತ್ತು ಆಡಮ್ ಡಿ ಏಂಜೆಲೊ ಆಡಳಿತ ಮಂಡಳಿಯಲ್ಲಿ ಇರಲಿದ್ದಾರೆ ಎಂದು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಕಂಪನಿ ತಿಳಿಸಿದೆ.

ಆಲ್ಟ್‌ಮನ್ ಅವರನ್ನು ಕಂಪನಿಯು ಶುಕ್ರವಾರ ವಜಾ ಮಾಡಿತ್ತು. ಆ ಬಳಿಕ ಕಂಪನಿಯ ನೂರಾರು ಸಿಬ್ಬಂದಿ ಮತ್ತು ಹೂಡಿಕೆದಾರರು ಅವರನ್ನು ಮತ್ತೆ ಸೇರಿಸಿಕೊಳ್ಳುವಂತೆ ಒತ್ತಾಯಿಸಿದ್ದರು.

ಈ ಬೆನ್ನಲ್ಲೇ ಆಲ್ಟ್‌ಮನ್ ಅವರನ್ನು ಎ.ಐ. ಸಂಶೋಧನಾ ತಂಡವನ್ನು ಮುನ್ನಡಲು ನೇಮಿಸಿಕೊಳ್ಳುವುದಾಗಿ ಮೈಕ್ರೊಸಾಫ್ಟ್ ಸಿಇಒ ಸತ್ಯ ನಾದೆಲ್ಲ ಹೇಳಿದ್ದರು. ಆದರೆ ಇದೀಗ ಓಪನ್‌ಎಐ ಕಂಪನಿಯು ಮತ್ತೆ ಆಲ್ಟ್‌ಮನ್ ಅವರನ್ನು ಕಂಪನಿಗೆ ಮತ್ತೆ ಕರೆತರಲು ಮುಂದಾಗಿದೆ.

ಹೊಸ ಮಂಡಳಿ ಮತ್ತು ಸತ್ಯ ಅವರ ಬೆಂಬಲದೊಂದಿಗೆ, ನಾನು ಓಪನ್‌ಎಐಗೆ ಮರಳಲಿದ್ದೇನೆ. ಮೈಕ್ರೊಸಾಫ್ಟ್ ಜೊತೆಗಿನ ಪಾಲುದಾರಿಕೆ ಮುಂದುವರಿಯಲಿದೆ ಎಂದು ಆಲ್ಟ್‌ಮನ್ 'ಎಕ್ಸ್'ನಲ್ಲಿ ತಿಳಿಸಿದ್ದಾರೆ.

ಅಡಮಾನರಹಿತ ವೈಯಕ್ತಿಕ ಸಾಲ ನಿಯಮದಲ್ಲಿ ಬದಲಾವಣೆ: ದಾಸ್ ವಿವರಣೆ

'ಬಿಗಿ ನಿಯಮ: ಮುನ್ನೆಚ್ಚರಿಕೆ ಕ್ರಮ'



ಶಕ್ತಿಕಾಂತ ದಾಸ್ – ಪಿಟಿಐ ಚಿತ್ರ

ಮುಂಬೈ (ಪಿಟಿಐ): ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಎದುರಾಗಬಹುದಾದ ಅಪಾಯವನ್ನು ತಡೆಯುವ ನಿಟ್ಟಿನಲ್ಲಿ ಮುನ್ನೆಚ್ಚರಿಕೆಯ ಹೆಜ್ಜೆಯಾಗಿ ಅಡಮಾನರಹಿತ ವೈಯಕ್ತಿಕ ಸಾಲ ನೀಡಿಕೆಯ ನಿಯಮಗಳನ್ನು ಬಿಗಿಗೊಳಿಸಲಾಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರು ಬುಧವಾರ ಹೇಳಿದ್ದಾರೆ.

ಬ್ಯಾಂಕಿಂಗ್ ವ್ಯವಸ್ಥೆಯ ಚೇತರಿಕೆಯು ಮುಂದುವರಿಯಲಿದೆ. ವ್ಯವಸ್ಥೆಗೆ ತಕ್ಷಣಕ್ಕೆ ಯಾವುದೇ ಅಪಾಯ ಇಲ್ಲ ಎಂದು ಅವರು ಹೇಳಿದ್ದಾರೆ. ಬಹಳ ಎಚ್ಚರಿಕೆಯಿಂದ ಇದ್ದು, ಯಾವುದಾದರೂ ಅಪಾಯ ಎದುರಾಗುತ್ತಿದೆಯೇ ಎನ್ನುವುದನ್ನು ಮುಂಚಿತವಾಗಿಯೇ ಪತ್ತೆ ಮಾಡುವಂತೆ ಹಣಕಾಸು ಸಂಸ್ಥೆಗಳಿಗೆ ಅವರು ಸಲಹೆ ನೀಡಿದ್ದಾರೆ.

ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಘ (ಫಿಕ್ಕಿ) ಮತ್ತು ಭಾರತೀಯ ಬ್ಯಾಂಕ್‌ಗಳ ಒಕ್ಕೂಟ (ಐಬಿಎ) ಆಯೋಜಿಸಿದ್ದ ಎಫ್‌ಐಬಿಎಸಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬ್ಯಾಂಕಿಂಗ್ ವ್ಯವಸ್ಥೆಯನ್ನು ಸ್ಥಿರವಾಗಿ ಇರಿಸುವ ಉದ್ದೇಶದಿಂದ ಮುನ್ನೆಚ್ಚರಿಕೆಯ ಭಾಗವಾಗಿ ಈಚೆಗೆ ಕೆಲವೊಂದು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ಅಡಮಾನರಹಿತ ವೈಯಕ್ತಿಕ ಸಾಲ ನೀಡುವುದರಿಂದ ಆಗಬಹುದಾದ ನಷ್ಟವನ್ನು ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವನ್ನು (ರಿಸ್ಕ್ ವೇಯ್ಟ್) ಈಗಿರುವ ಶೇ 100ರಿಂದ ಶೇ 125ಕ್ಕೆ ಆರ್‌ಬಿಐ ಹೆಚ್ಚಿಸಿದೆ. ಈ ಕುರಿತು ಅವರು ವಿವರಿಸಿದ್ದಾರೆ.

ಗೃಹ, ವಾಹನ ಮತ್ತು ಸಣ್ಣ ಪ್ರಮಾಣದಲ್ಲಿ ವಹಿವಾಟು ನಡೆಸುವುದಕ್ಕೆ ನೀಡುವ ಸಾಲಗಳನ್ನು ಈ ನಿಯಮದಿಂದ ಹೊರಗಿಡಲಾಗಿದೆ. ಈ ರೀತಿಯ ಸಾಲಗಳನ್ನು ನೀಡುವುದರಿಂದ ಆಗಲಿರುವ ಪ್ರಯೋಜನವನ್ನು ಗಮನದಲ್ಲಿ ಇಟ್ಟುಕೊಂಡು ಈ ನಿರ್ಧಾರಕ್ಕೆ ಬರಲಾಗಿದೆ. ಅಲ್ಲದೆ, ಈ ರೀತಿಯ ಸಾಲಗಳಿಂದ ಅಪಾಯ ಎದುರಾಗುವ ಸಾಧ್ಯತೆ ಕಡಿಮೆ ಎಂದು ದಾಸ್ ಹೇಳಿದ್ದಾರೆ.

ಅಪಾಯ ನಿರ್ವಹಿಸುವ ವ್ಯವಸ್ಥೆಯನ್ನು ಬಲಪಡಿಸಿಕೊಳ್ಳುವಂತೆ ಮತ್ತು ಯಾವುದೇ ರೀತಿಯ ಅಡಚಣೆಗಳನ್ನು ಎದುರಿಸಲು ಸಜ್ಜಾಗುವಂತೆ ಬ್ಯಾಂಕ್‌ಗಳಿಗೆ ಸಲಹೆ ನೀಡಿದ್ದಾರೆ. ನಿಯಂತ್ರಣ ಮತ್ತು ಮೇಲ್ವಿಚಾರಣೆಯನ್ನು ಆರ್‌ಬಿಐ ಇನ್ನಷ್ಟು ಬಲಪಡಿಸಿದೆ ಎಂದೂ ತಿಳಿಸಿದ್ದಾರೆ.

ಬ್ಯಾಂಕ್‌ಗಳು ಮತ್ತು ಎನ್‌ಬಿಎಫ್‌ಸಿಗಳ ಸ್ಥಿತಿ ಉತ್ತಮವಾಗಿದೆ. ಇಂತಹ ಸಂದರ್ಭದಲ್ಲಿ ಅಪಾಯವು ಎಲ್ಲಿಂದ ಎದುರಾಗಬಹುದು ಎನ್ನುವುದನ್ನು ಪರಿಶೀಲಿಸಿಕೊಳ್ಳುವ ಅಗತ್ಯ ಇದೆ ಎಂದು ದಾಸ್ ಸಲಹೆ ನೀಡಿದ್ದಾರೆ.

'ಬಡ್ಡಿ ವಿಚಾರದಲ್ಲಿ ವಿವೇಚನೆಯಿಂದ ವರ್ತಿಸಿ'

ಬಡ್ಡಿದರದ ವಿಚಾರದಲ್ಲಿ ವಿವೇಚನೆಯಿಂದ ವರ್ತಿಸುವಂತೆ ಎನ್‌ಬಿಎಫ್‌ಸಿ ಮತ್ತು ಕಿರು ಹಣಕಾಸು ಸಂಸ್ಥೆಗಳಿಗೆ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಸೂಚನೆ ನೀಡಿದ್ದಾರೆ.

ಬಡ್ಡಿ ದರಗಳು ನಿಯಂತ್ರಣಕ್ಕೆ ಒಳಪಡದೇ ಇದ್ದರೂ ಕೆಲವು ಎನ್‌ಬಿಎಫ್‌ಸಿ ಮತ್ತು ಕಿರು ಹಣಕಾಸು ಸಂಸ್ಥೆಗಳು ಗರಿಷ್ಠ ಬಡ್ಡಿ ವಿಧಿಸುವ ಮೂಲಕ ಹೆಚ್ಚಿನ ಲಾಭ ಮಾಡಿಕೊಳ್ಳುತ್ತಿವೆ. ಹೀಗಾಗಿ ಕಿರು ಹಣಕಾಸು ಸಂಸ್ಥೆಗಳು ಬಡ್ಡಿದರ ನಿಗದಿಪಡಿಸುವಾಗ ವಿವೇಚನೆಯಿಂದ ವರ್ತಿಸುವ ಅಗತ್ಯ ಇದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಬಡ್ಡಿದರ ನಿಗದಿಪಡಿಸುವಾಗ ಸಾಲ ಪಡೆಯುವವರ ಮರುಪಾವತಿ ಸಾಮರ್ಥ್ಯವನ್ನು ಗಮನದಲ್ಲಿ ಇಟ್ಟುಕೊಳ್ಳುವಂತೆ ದಾಸ್ ಹೇಳಿದ್ದಾರೆ.

ತಗ್ಗಲಿದೆ ಎನ್‌ಬಿಎಫ್‌ಸಿ ಬೆಳವಣಿಗೆ: ಕ್ರಿಸಿಲ್

ನವದೆಹಲಿ (ಪಿಟಿಐ): ಬ್ಯಾಂಕೇತರ ಹಣಕಾಸು ಕಂಪನಿಗಳ (ಎನ್‌ಬಿಎಫ್‌ಸಿ) ಬೆಳವಣಿಗೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 16-18ರ ಮಟ್ಟಕ್ಕಿಂತಲೂ ಕಡಿಮೆ ಆಗುವ ಅಂದಾಜು ಮಾಡಲಾಗಿದೆ ಎಂದು ಕ್ರಿಸಿಲ್ ರೇಟಿಂಗ್ಸ್ ಸಂಸ್ಥೆಯು ಬುಧವಾರ ಹೇಳಿದೆ.

ಅಡಮಾನರಹಿತ ವೈಯಕ್ತಿಕ ಸಾಲ ನೀಡಿಕೆಯ ನಿಯಮಗಳನ್ನು ಆರ್‌ಬಿಐ ಬಿಗಿಗೊಳಿಸಿದೆ. ಇದರಿಂದಾಗಿ ಎನ್‌ಬಿಎಫ್‌ಸಿಗಳು ಅಡಮಾನರಹಿತ ಸಾಲ ನೀಡುವ ಪ್ರಮಾಣ ಕಡಿಮೆ ಆಗಲಿದ್ದು, ಒಟ್ಟಾರೆ ಬೆಳವಣಿಗೆ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂದು ಅದು ತಿಳಿಸಿದೆ.

ಎನ್‌ಬಿಎಫ್‌ಸಿಗಳ ಒಟ್ಟು ನಿರ್ವಹಣಾ ಸಂಪತ್ತು ಮೌಲ್ಯದಲ್ಲಿ ಅಡಮಾನರಹಿತ ಸಾಲಗಳ ವಿಭಾಗವು ಮೂರನೇ ಸ್ಥಾನದಲ್ಲಿದೆ. ಹೀಗಾಗಿ ಆರ್‌ಬಿಐ ನಿರ್ಧಾರದಿಂದ ಈ ವಿಭಾಗದ ಬೆಳವಣಿಗೆ ಮೇಲೆ ಪರಿಣಾಮ ಉಂಟಾಗಲಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಗುರುಪ್ರೀತ್ ಛಟ್ವಾಲ್ ಹೇಳಿದ್ದಾರೆ.

ಅಡಮಾನರಹಿತ ಸಾಲ ನೀಡಿಕೆ ತಗ್ಗಲಿದೆ: ಆರ್‌ಬಿಐನ ನಿಯಮದಿಂದಾಗಿ ಎಸ್‌ಬಿಐನ ಅಡಮಾನರಹಿತ ಸಾಲ ನೀಡಿಕೆಯ ಪ್ರಮಾಣವು ಕಡಿಮೆ ಆಗಲಿದೆ ಎಂದು ಅಧ್ಯಕ್ಷ ದಿನೇಶ್ ಕುಮಾರ್ ಖರಾ ಹೇಳಿದ್ದಾರೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಬಡ್ಡಿ ಗಳಿಕೆಯು ಶೇ 0.02 ರಿಂದ ಶೇ 0.03ರವರೆಗೆ ಕಡಿಮೆ ಆಗುವ ಅಂದಾಜು ಮಾಡಲಾಗಿದೆ ಎಂದಿದ್ದಾರೆ. ಬ್ಯಾಂಕ್‌ನ ಅಡಮಾನರಹಿತ ಸಾಲಗಳ ಎನ್‌ಪಿಎ ಪ್ರಮಾಣವು ಶೇ 0.70ರಷ್ಟು ಇದೆ ಎಂದು ಅವರು ತಿಳಿಸಿದ್ದಾರೆ.

ಪಂಜಾಬ್, ಹರಿಯಾಣದ 12 ಕಡೆ ಎನ್‌ಐಎ ಶೋಧ

ನವದೆಹಲಿ (ಪಿಟಿಐ): ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋದಲ್ಲಿರುವ ಭಾರತದ ಕಾನ್ಸುಲೇಟ್ ಕಚೇರಿ ಮೇಲೆ ನಡೆದ ದಾಳಿ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಪಂಜಾಬ್ ಮತ್ತು ಹರಿಯಾಣದದ 14 ಕಡೆಗಳಲ್ಲಿ ಬುಧವಾರ ಶೋಧ ಕಾರ್ಯ ನಡೆಸಿತು.

ಮಾರ್ಚ್ 19 ಮತ್ತು ಜುಲೈ 2ರಂದು ನಡೆದಿದ್ದ ದಾಳಿಗೆ ಸಂಚು ರೂಪಿಸಿದ್ದವರನ್ನು ಪತ್ತೆ ಮಾಡುವ ನಿಟ್ಟಿನಲ್ಲಿ ಶೋಧ ಕಾರ್ಯಾಚರಣೆ ನಡೆಸಲಾಗಿದೆ ಎಂದು ಎನ್‌ಐಎ ವಕ್ತಾರರು ತಿಳಿಸಿದ್ದಾರೆ.

ಪಂಜಾಬ್‌ನ ಮೋಗಾ, ಜಲಂಧರ್, ಲೂಧಿಯಾನ, ಗುರುದಾಸ್‌ಪುರ, ಮೊಹಾಲಿ ಮತ್ತು ಪಟಿಯಾಲ ಜಿಲ್ಲೆಗಳ ಹಾಗೂ ಹರಿಯಾಣದ ಕುರುಕ್ಷೇತ್ರ ಮತ್ತು ಯಮುನಾನಗರದ ಜಿಲ್ಲೆಗಳ ವಿವಿಧೆಡೆ ಶೋಧ ನಡೆದಿದೆ ಎಂದು ವಿವರಿಸಿದ್ದಾರೆ.

ಆರೋಪಿಗಳ ಕುರಿತ ಮಾಹಿತಿ ಇರುವ ಡಿಜಿಟಲ್ ಸಾಧನಗಳನ್ನು ಹಾಗೂ ಇತರ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ.

ದಾಳಿಯ ಹಿಂದಿರುವ ವ್ಯಕ್ತಿಗಳನ್ನು ಕಾನೂನಿನ ಮುಂದೆ ತರುವ ಮೂಲಕ ದೇಶ ವಿರೋಧಿ ಚಟುವಟಿಕೆಗಳನ್ನು ನಡೆಸುವವರಿಗೆ ಸ್ಪಷ್ಟ ಸಂದೇಶ ರವಾನಿಸುವ ಉದ್ದೇಶದಿಂದ ಎನ್‌ಐಎ ತನಿಖೆ ನಡೆಸುತ್ತಿದೆ ಎಂದು ಹೇಳಿದ್ದಾರೆ.

ಅಮೆರಿಕ ಮೂಲದ ಸಂಸ್ಥೆಗಳು ಮತ್ತು ಕೆಲವು ವ್ಯಕ್ತಿಗಳು ಈ ದಾಳಿಯಲ್ಲಿ ಭಾಗಿಯಾಗಿರುವುದಾಗಿ ತನಿಖೆಯಿಂದ ತಿಳಿದು ಬಂದಿದೆ ಎಂದು ಎನ್‌ಐಎ ತಿಳಿಸಿದೆ.

ಒರ್ಹಾ ಎನರ್ಜೀಸ್‌ನಿಂದ ಇ-ಬೈಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಿಕ್ ವಾಹನ ತಯಾರಿಕಾ ನವೋದ್ಯಮ, 'ಒರ್ಹಾ ಎನರ್ಜೀಸ್', ಮ್ಯಾಂಟಿಸ್ ಎಂಬ ಇವಿ ಬೈಕ್ ಬಿಡುಗಡೆ ಮಾಡಿದೆ. ನಗರದ ಬೊಮ್ಮಸಂದ್ರ ಕೈಗಾರಿಕಾ ಪ್ರದೇಶದಲ್ಲಿರುವ ಕಂಪನಿಯ ಕೇಂದ್ರ ಕಚೇರಿಯಲ್ಲಿ ಮ್ಯಾಂಟಿಸ್ ಬೈಕ್ ಬಿಡುಗಡೆ ಮಾಡಿದೆ.



ಮ್ಯಾಂಟಿಸ್ ಇ–ಬೈಕ್

'ಬೆಂಗಳೂರು ಮೂಲದ ಒರ್ಹಾ ಎನರ್ಜೀಸ್ ಕಳೆದ 8 ವರ್ಷಗಳಿಂದ ಮ್ಯಾಂಟಿಸ್ ಅಭಿವೃದ್ಧಿಯಲ್ಲಿ ತೊಡಗಿದೆ. ಇದು 20.5 ಕಿಲೋ ವ್ಯಾಟ್ ಮೋಟಾರ್ ಬೈಕ್ ಆಗಿದ್ದು, ಒಂದು ಬಾರಿ ಪೂರ್ಣ ಚಾರ್ಜ್‌ಗೆ 221 ಕಿ.ಮೀ ದೂರ ಕ್ರಮಿಸುವ ಕ್ಷಮತೆ ಹೊಂದಿದೆ' ಎಂದು ಸಂಸ್ಥಾಪಕಿ ರಂಜಿತಾ ರವಿ ತಿಳಿಸಿದರು.

'95ಎನ್‌ಎಂ ಟಾರ್ಕ್ ಹೊಂದಿರುವ ಈ ಬೈಕ್ ಶೂನ್ಯದಿಂದ 100 ಕಿ.ಮೀ ವೇಗ ಕ್ರಮಿಸಲು 8.9 ಸೆಕೆಂಡ್ ಸಾಕು. ಗರಿಷ್ಠ 135 ಕಿ.ಮೀ ವೇಗ ಇದರದ್ದು. ಐಪಿ65 ವಾಟರ್ ರೆಸಿಸ್ಟೆಂಟ್ ಇರುವ ಬ್ಯಾಟರಿ 30 ಸಾವಿರ ಕಿ.ಮೀ ಅಥವಾ 3 ವರ್ಷ ವಾರಂಟಿ ಹೊಂದಿದೆ' ಎಂದು ಸಹ ಸಂಸ್ಥಾಪಕ ಪ್ರಜ್ವಲ್ ಸಬ್ನಿಸ್ ವಿವರಿಸಿದರು.

'ಬೈಕ್ ಎಕ್ಸ್ ಷೋರೂಂ ಬೆಲೆ ಬೆಂಗಳೂರಿನಲ್ಲಿ ₹3.60ಲಕ್ಷ ನಿಗದಿಪಡಿಸಲಾಗಿದೆ. 2024ರ ಏಪ್ರಿಲ್‌ನಲ್ಲಿ ಬೈಕ್ ಲಭ್ಯ. ಬುಕ್ಕಿಂಗ್ (mantis.orxaenergies.com) ಆರಂಭವಾಗಿದ್ದು ಮೊದಲ 1 ಸಾವಿರ ಗ್ರಾಹಕರಿಗೆ ₹10 ಸಾವಿರ ಮುಂಗಡ ಹಣ, ನಂತರ ಇದು ₹25 ಸಾವಿರ ಆಗಲಿದೆ' ಎಂದು ತಿಳಿಸಿದರು.

ಮುಂಬೈ ಧಾರಣೆ

ಶೇಂಗಾ

22-11-2023

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1580)
ಒಂದು ವಾರದ ಡೆಲಿವರಿ	1585 (1575)
ಸೋಯಾ ಕಚ್ಚಾ	950 (945)
ಪಾಮ್ ವಾರದ ಡೆಲಿವರಿ	852 (846)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 61,400 (61,100)

ಬೆಳ್ಳಿ ಕೆ.ಜಿ 73,500 (72,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಟಾಟಾ ಟೆಕ್ ಐಪಿಒಗೆ ಭಾರಿ ಸ್ಪಂದನೆ

ನವದೆಹಲಿ (ಪಿಟಿಐ): ಟಾಟಾ ಟೆಕ್ನಾಲಜೀಸ್‌ನ ಆರಂಭಿಕ ಸಾರ್ವಜನಿಕ ಕೊಡುಗೆಗೆ (ಐಪಿಒ) ಮೊದಲ ದಿನವೇ ಹೂಡಿಕೆದಾರರಿಂದ ಉತ್ತಮ ಸ್ಪಂದನೆ ದೊರೆತಿದೆ.

ರಾಷ್ಟ್ರೀಯ ಷೇರುಪೇಟೆಯಲ್ಲಿ ಇರುವ ಮಾಹಿತಿಯ ಪ್ರಕಾರ, 4.50 ಕೋಟಿ ಷೇರುಗಳಿಗೆ ಬಿಡ್ ಆಹ್ವಾನಿಸಲಾಗಿತ್ತು. 29.43 ಕೋಟಿ ಷೇರುಗಳಿಗೆ ಬಿಡ್ ಸಲ್ಲಿಕೆ ಆಗಿದ್ದು 6.54 ಪಟ್ಟು ಹೆಚ್ಚಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಹಳತು	43500-48500
ಕೋಕ	15000-27500
ಹೊನ್ನಾವರ	
ಹಳೆಚಾಲಿ	36000-39000
ಕುಮಟ	
ಚಿಪ್ಪು	27089-34590
ಕೋಕ	19099-31599
ಫ್ಯಾಕ್ಟರಿ	11509-25399
ಹಳೆಚಾಲಿ	37399-39509
ಹೊಸಚಾಲಿ	33099-34509
ಪುತ್ತೂರು	
ಕೋಕ	11000-25000
ಹೊಸತು	27000-36500
ಸಾಗರ	
ಸಿಪ್ಪೆಗೋಟು	21105-21105
ಸಿದ್ದಾಪುರ	
ಬಿಳಿಗೋಟು	32109-35099
ಚಾಲಿ	38399-40212
ಕೋಕ	30009-31699
ರಾಶಿ	43099-45699
ತಟ್ಟಿಬೆಟ್ಟೆ	36399-43099
ಶಿರಸಿ	
ಬೆಟ್ಟೆ	30099-40799
ಬಿಳಿಗೋಟು	29899-35589
ಚಾಲಿ	37111-40761
ಕೆಂಪುಗೋಟು	30131-34899
ರಾಶಿ	45109-48209

ಸಂಕ್ಷಿಪ್ತ ಸುದ್ದಿ

ಏರ್ ಇಂಡಿಯಾಗೆ ₹10 ಲಕ್ಷ ದಂಡ

ನವದೆಹಲಿ (ಪಿಟಿಐ): ಪ್ರಯಾಣಿಕರಿಗೆ ಒದಗಿಸಬೇಕಾದ ಸೌಲಭ್ಯಗಳಿಗೆ ಸಂಬಂಧಿಸಿದ ಮಾನದಂಡ ಅನುಸರಿಸಲು ವಿಫಲವಾದ ಏರ್ ಇಂಡಿಯಾ ಕಂಪನಿಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯ (ಡಿಜಿಸಿಎ) ₹10 ಲಕ್ಷ ದಂಡ ವಿಧಿಸಿದೆ.

ಬೆಂಗಳೂರು, ದೆಹಲಿ ಮತ್ತು ಕೊಚ್ಚಿ ವಿಮಾನ ನಿಲ್ದಾಣಗಳಲ್ಲಿ ಪರಿಶೀಲನೆ ನಡೆಸಿದ ಬಳಿಕ ನವೆಂಬರ್ 3ರಂದು ನೋಟಿಸ್ ನೀಡಲಾಗಿತ್ತು ಎಂದು ತಿಳಿಸಿದೆ.

ವಿಮಾನ ವಿಳಂಬ ಆಗಿದ್ದರಿಂದ ಪ್ರಯಾಣಿಕರಿಗೆ ಉಳಿದುಕೊಳ್ಳಲು ಹೋಟೆಲ್ ವ್ಯವಸ್ಥೆಯನ್ನು ಕಂಪನಿ ಕಲ್ಪಿಸಿಲ್ಲ. ಅಂತರರಾಷ್ಟ್ರೀಯ ಬಿಸಿನೆಸ್ ಕ್ಲಾಸ್ ಪ್ರಯಾಣಿಕರಿಗೆ ಸರಿಯಾಗಿ ಇರದ ಆಸನ ನೀಡಿರುವುದಕ್ಕೆ ಪರಿಹಾರ ಪಾವತಿಸದೇ ಇರುವುದು ಸೇರಿದಂತೆ ಹಲವು ಕಾರಣಗಳಿಗಾಗಿ ದಂಡ ವಿಧಿಸಿರುವುದಾಗಿ ತಿಳಿಸಿದೆ. ಕಂಪನಿ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ವಿನಯ್ ತೋನ್ಸೆ ಎಸ್‌ಬಿಐ ಎಂ.ಡಿ

ನವದೆಹಲಿ (ಪಿಟಿಐ): ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ವ್ಯವಸ್ಥಾಪಕ ನಿರ್ದೇಶಕರಾಗಿ (ಎಂ.ಡಿ) ವಿನಯ್ ಎಂ. ತೋನ್ಸೆ ನೇಮಕ ಆಗಿದ್ದಾರೆ.

ತೋನ್ಸೆ ಅವರು ಎಸ್‌ಬಿಐನ ಉಪ ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ನಿರ್ವಹಿಸುತ್ತಿದ್ದರು. ಸಂಸತ್‌ನ ನೇಮಕಾತಿ ಸಮಿತಿಯ (ಎಸಿಸಿ) ಅನುಮೋದನೆಯಂತೆ ತೋನ್ಸೆ ಅವರು 2025ರ ನವೆಂಬರ್ 30ರವರೆಗೆ ಅಧಿಕಾರದಲ್ಲಿ ಇರಲಿದ್ದಾರೆ ಎಂದು ಸಿಬ್ಬಂದಿ ಸಚಿವಾಲಯವು ಆದೇಶದಲ್ಲಿ ತಿಳಿಸಿದೆ.

10 ಕೋಟಿ ಡಿ–ಮ್ಯಾಟ್ ಖಾತೆ

ನವದೆಹಲಿ (ಪಿಟಿಐ): ಸೆಂಟ್ರಲ್ ಡೆಪಾಸಿಟರಿ ಸರ್ವಿಸಸ್ ಲಿಮಿಟೆಡ್‌ನಲ್ಲಿ (ಸಿಡಿಎಸ್‌ಎಲ್) ಡಿ–ಮ್ಯಾಟ್ ಖಾತೆಗಳ ಸಂಖ್ಯೆಯು 10 ಕೋಟಿಯ ಮೈಲಿಗಲ್ಲನ್ನು ದಾಟಿದೆ.

ಸಕ್ರಿಯ ಡಿ–ಮ್ಯಾಟ್ ಖಾತೆಗಳನ್ನು ಹೊಂದಿರುವ ದೃಷ್ಟಿಯಿಂದ ಸಿಡಿಎಸ್‌ಎಲ್ ದೇಶದ ಅತಿದೊಡ್ಡ ಡೆಪಾಸಿಟರಿ ಆಗಿದೆ. ಡಿ–ಮ್ಯಾಟ್ ಖಾತೆಗಳನ್ನು ತೆರೆಯುವ ಮೂಲಕ ಸಾಲಪತ್ರಗಳ ವಹಿವಾಟು ನಡೆಸಲು ಇದು ಅನುವುಮಾಡಿಕೊಡುತ್ತದೆ.

ಅದಾನಿ ಗ್ರೀನ್ ಎನರ್ಜಿಗೆ ದಂಡ

ನವದೆಹಲಿ (ಪಿಟಿಐ): ನಿಯಮಗಳನ್ನು ಅನುಸರಿಸದೇ ಇರುವ ಕಾರಣಕ್ಕಾಗಿ ಅದಾನಿ ಗ್ರೀನ್ ಎನರ್ಜೀಸ್ ಕಂಪನಿಗೆ ಒಟ್ಟು ₹11.22 ಲಕ್ಷ ದಂಡ ವಿಧಿಸಿರುವುದಾಗಿ ಮುಂಬೈ ಮತ್ತು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರಗಳು ತಿಳಿಸಿವೆ.

ಮುಂಬೈ ಷೇರುವಿನಿಮಯ ಕೇಂದ್ರ ₹5.61 ಲಕ್ಷ ಮತ್ತು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರ ₹5.61ಲಕ್ಷ ದಂಡ ವಿಧಿಸಿದೆ ಎಂದು ಕಂಪನಿ ತಿಳಿಸಿದೆ.

ಸೆಪ್ಟೆಂಬರ್ 7ರಿಂದ ಜಾರಿಗೆ ಬರುವಂತೆ ಇನ್ನಿಬ್ಬರು ಸ್ವತಂತ್ರ ನಿರ್ದೇಶಕರನ್ನು ನೇಮಿಸಿಕೊಳ್ಳಲಾಗಿದೆ. ನಾಮನಿರ್ದೇಶನ ಮತ್ತು ವೇತನ ಸಮಿತಿಯನ್ನೂ ರಚಿಸಲಾಗಿದೆ. ಈ ಮೂಲಕ ಸೆಬಿಯ ಲಿಸ್ಟಿಂಗ್ ನಿಯಮಗಳನ್ನು ಸಂಪೂರ್ಣವಾಗಿ ಪಾಲಿಸಲಾಗಿದೆ ಎಂದು ಅದು ಷೇರುಪೇಟೆಗಳಿಗೆ ಸ್ಪಷ್ಟಪಡಿಸಿದೆ.

ಜೊಮಾಟೊ, ಸ್ವಿಗ್ಗಿಗೆ ಜಿಎಸ್‌ಟಿ ನೋಟಿಸ್

ಬೆಂಗಳೂರು (ರಾಯಿಟರ್ಸ್): ಜೊಮಾಟೊ ಮತ್ತು ಸ್ವಿಗ್ಗಿ ಕಂಪನಿಗಳಿಗೆ ₹750 ಕೋಟಿ ತೆರಿಗೆ ಪಾವತಿಸುವಂತೆ ಜಿಎಸ್‌ಟಿ ಗುಪ್ತಚರ ಮಹಾನಿರ್ದೇಶನಾಲಯವು (ಡಿಜಿಜಿಐ) ನೋಟಿಸ್ ನೀಡಿರುವುದಾಗಿ ವರದಿ ಆಗಿದೆ.

2017ರ ಜುಲೈನಿಂದ 2023ರ ಮಾರ್ಚ್ ಅವಧಿಯಲ್ಲಿ ಸೇವೆಗಳಿಗೆ ಕಡಿಮೆ ಪ್ರಮಾಣದ ತೆರಿಗೆ ಪಾವತಿಸಿರುವ ಕಾರಣಕ್ಕೆ ಡಿಜಿಜಿಐ ಈ ನೋಟಿಸ್ ನೀಡಿದೆ. ಒಟ್ಟು ಮೊತ್ತದಲ್ಲಿ ಜೊಮಾಟೊ ₹400 ಕೋಟಿ ಮತ್ತು ಸ್ವಿಗ್ಗಿ ಕಂಪನಿಯು ₹350 ಕೋಟಿಯಷ್ಟು ತೆರಿಗೆ ಪಾವತಿಸಬೇಕಿದೆ.

ಈ ಕುರಿತು ಪ್ರತಿಕ್ರಿಯೆ ನೀಡಲು ಜೊಮಾಟೊ ನಿರಾಕರಿಸಿದೆ. ಸ್ವಿಗ್ಗಿ ಮತ್ತು ಡಿಜಿಜಿಐ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.

ಜೀವನಾಂಶದ ಕುರಿತ ವಿವರಣೆ ಲಿಂಗ ನಿರಪೇಕ್ಷ ಎಂದು ಸ್ಪಷ್ಟಪಡಿಸಿದ ದೆಹಲಿ ಹೈಕೋರ್ಟ್

ಸಂಗಾತಿಗೆ ಜೀವನಾಂಶ ಹೊರೆಯಾಗಬಾರದು

ನವದೆಹಲಿ (ಪಿಟಿಐ): ದುಡಿಯುವ ಶಕ್ತಿ ಇದ್ದರೂ ಸೂಕ್ತ ಕಾರಣವಿಲ್ಲದೆ ನಿರುದ್ಯೋಗಿಯಾಗಿರುವ ವ್ಯಕ್ತಿಯು ತನ್ನ ಸಂಗಾತಿಯ ಪಾಲಿಗೆ ಹೊರೆಯಾಗಲು ಅವಕಾಶ ಕೊಡಲಾಗದು ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ತನ್ನನ್ನು ತೊರೆದುಹೋಗಿರುವ ಪತ್ನಿಗೆ, ಪತಿಯು ನೀಡಬೇಕಿರುವ ಮಾಸಿಕ ಜೀವನಾಂಶದ ಮೊತ್ತವನ್ನು ಹಿಂದೂ ವಿವಾಹ ಕಾಯ್ದೆಯ (ಎಚ್‌ಎಂಎ) ಅಡಿಯಲ್ಲಿ ₹30 ಸಾವಿರದಿಂದ ₹21 ಸಾವಿರಕ್ಕೆ ತಗ್ಗಿಸುವ ಸಂದರ್ಭದಲ್ಲಿ ಹೈಕೋರ್ಟ್ ಈ ಮಾತು ಹೇಳಿದೆ.

ಮಹಿಳೆಯು ತನಗೆ ಸ್ವತಂತ್ರ ಆದಾಯ ಮೂಲ ಇಲ್ಲ ಎಂದು ಹೇಳಿದ್ದರೂ, ಆಕೆಗೆ ತಕ್ಕಮಟ್ಟಿನ ಶೈಕ್ಷಣಿಕ ಅರ್ಹತೆ ಇದೆ. ಆಕೆ ದೆಹಲಿ ವಿಶ್ವವಿದ್ಯಾಲಯದಿಂದ ಪದವಿ ಪಡೆದಿದ್ದಾರೆ ಎಂದು ಕೋರ್ಟ್ ಹೇಳಿದೆ.

'ಹಣ ಸಂಪಾದಿಸಲು ಸೂಕ್ತವಾದ ಸಾಮರ್ಥ್ಯ ಇದ್ದರೂ ಸರಿಯಾದ ವಿವರಣೆ ನೀಡದೆ ನಿರುದ್ಯೋಗಿಯಾಗಿ ಇರಲು ಬಯಸುವ ಸಂಗಾತಿಯ ಖರ್ಚುಗಳನ್ನು ಇನ್ನೊಬ್ಬ ಸಂಗಾತಿಯ ಮೇಲೆ ಏಕಪಕ್ಷೀಯವಾಗಿ ಹೊರಿಸಲು ಅವಕಾಶ ಕೊಡಬಾರದು' ಎಂದು ನ್ಯಾಯಮೂರ್ತಿಗಳಾದ ವಿ. ಕಾಮೇಶ್ವರ ರಾವ್ ಮತ್ತು ಅನೂಪ್ ಕುಮಾರ್ ಮೆಂದಿರತ್ತಾ ಅವರು ಇದ್ದ ನ್ಯಾಯಪೀಠ ಹೇಳಿದೆ.

ಜೀವನಾಂಶ ಕೊಡಬೇಕು ಎನ್ನುವುದು ವಿಚ್ಛೇದನದ ಪ್ರಕ್ರಿಯೆ ನಡೆಯುತ್ತಿರುವ ಸಂದರ್ಭದಲ್ಲಿ ಸಂಗಾತಿಗೆ ನೆರವು ಒದಗಿಸುವ ಹಾಗೂ ಸಂಗಾತಿಯು ಆದಾಯ ಇಲ್ಲದೆ ತೊಂದರೆಗೆ ಒಳಗಾಗಬಾರದು ಎಂಬ ಉದ್ದೇಶದಿಂದ ಎಂದು ಕೂಡ ಪೀಠ ಹೇಳಿದೆ. ಎಚ್‌ಎಂಎ ಅಡಿಯಲ್ಲಿ ಜೀವನಾಂಶ ಕೊಡುವುದರ ಕುರಿತು ಇರುವ ವಿವರಣೆಯು ಲಿಂಗ ನಿರಪೇಕ್ಷವಾಗಿದೆ ಎಂದು ಪೀಠ ಸ್ಪಷ್ಟಪಡಿಸಿದೆ.

ಮನೆ ಬಿಟ್ಟು ಹೋಗಿರುವ ಪತ್ನಿಗೆ ತಿಂಗಳಿಗೆ ₹30 ಸಾವಿರ ಜೀವನಾಂಶ ಹಾಗೂ ಕೋರ್ಟ್ ವೆಚ್ಚವಾಗಿ ₹51 ಸಾವಿರ ಪಾವತಿಸಬೇಕು ಎಂದು ವಿಚಾರಣಾ ನ್ಯಾಯಾಲಯ ನೀಡಿರುವ ಆದೇಶವನ್ನು ಪತಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ. ವಿಚಾರಣಾ ನ್ಯಾಯಾಲಯವು ಈ ಮೊದಲು ₹21 ಸಾವಿರ ಜೀವನಾಂಶ ನೀಡಬೇಕು ಎಂದು ಆದೇಶಿಸಿತ್ತು. ಆದರೆ ಪರಿಸ್ಥಿತಿಯಲ್ಲಿ ಯಾವುದೇ ಬದಲಾವಣೆ ಆಗದಿದ್ದರೂ, ಮೊತ್ತವನ್ನು ₹30 ಸಾವಿರಕ್ಕೆ ಹೆಚ್ಚಿಸಿತು ಎಂದು ಪತಿ ದೂರಿದ್ದಾರೆ.

ತನಗೆ ಕೈಗೆ ಸಿಗುವ ಸಂಬಳದ ಮೊತ್ತ ₹47 ಸಾವಿರ. ಈ ಹಣದಲ್ಲಿಯೇ ಕುಟುಂಬವನ್ನು ಸಾಕಬೇಕು. ಜೀವನಾಂಶದ ರೂಪದಲ್ಲಿ ತಿಂಗಳಿಗೆ ₹30 ಸಾವಿರ ಕೊಡಲು ಸಾಧ್ಯವಿಲ್ಲ ಎಂಬುದು ಅವರ ಅಳಲು.

'ವಾಸ್ತವಾಂಶಗಳನ್ನು ಹಾಗೂ ಪರಿಸ್ಥಿತಿಯನ್ನು ಗಮನಿಸಿ, ಜೀವನಾಂಶದ ಮೊತ್ತವನ್ನು ಪರಿಗಣಿಸುವಾಗ ಪತಿಗೆ ಇರುವ ಹೊಣೆಗಾರಿಕೆ ಹಾಗೂ ಕುಟುಂಬದ ಇತರ ಸದಸ್ಯರ ವಿಚಾರವಾಗಿ ಇರುವ ಕರ್ತವ್ಯಗಳನ್ನು ಕಡೆಗಣಿಸಲಾಗದು' ಎಂದು ಪೀಠ ಹೇಳಿದೆ. ವಿಚಾರಣಾ ನ್ಯಾಯಾಲಯದಲ್ಲಿನ ಪ್ರಕರಣ ಇತ್ಯರ್ಥ ಆಗುವವರೆಗೆ ಮಹಿಳೆಗೆ ₹21 ಸಾವಿರ ಜೀವನಾಂಶ ಸಾಕು ಎಂದು ಹೇಳಿದೆ. ವಿಚ್ಛೇದನ ಆಗುವವರೆಗೆ ಜೀವನಾಂಶದ ಮೊತ್ತವನ್ನು ವರ್ಷಕ್ಕೆ ₹1,500ರಷ್ಟು ಹೆಚ್ಚಿಸಬೇಕು ಎಂದು ಸೂಚಿಸಿದೆ.

ಅನ್ನದಾತರ ಸಿಟ್ಟು ಅಧಿಕಾರಕ್ಕೆ ಪೆಟ್ಟು

ರಾಜಸ್ಥಾನದಲ್ಲಿ ಪ್ರವಾಸೋದ್ಯಮ ಮತ್ತು ಕಲ್ಲು ಗಣಿಗಾರಿಕೆ ಪ್ರಧಾನ ಉದ್ಯಮಗಳಾದರೂ, ಮುಕ್ಕಾಲು ಪಾಲು ಜನರ ಕಸುಬು ಕೃಷಿ. ಗೊಬ್ಬರದ ಕೊರತೆ, ಬೆಲೆ ಹೆಚ್ಚಳ, ನೀರಾವರಿ ಯೋಜನೆಗೆ ತಡೆ... ಇಂತಹ ವಿಚಾರಗಳ ಬಗ್ಗೆ ರೈತ ಸಮುದಾಯದಲ್ಲಿ ಅಸಮಾಧಾನ ಇದೆ. ಈ ಕುರಿತು ಕಾಂಗ್ರೆಸ್ ಮತ್ತು ಬಿಜೆಪಿ ಆರೋಪ–ಪ್ರತ್ಯಾರೋಪ ಮಾಡಿದರೂ ಸಮಸ್ಯೆಗಳಿಗೆ ಏನು ಕಾರಣ ಎಂಬುದನ್ನು ಇಲ್ಲಿನ ರೈತ ಸಮುದಾಯ ಗುರುತಿಸಿದೆ



ಚುನಾವಣಾ ಪಯಣ
ರಾಜಸ್ಥಾನ
ಜಯಸಿಂಹ ಆರ್.

ಸಿರ್ಕಾ/ನಾಗೌರ್/ಅಲ್ವರ್: ರಾಜಸ್ಥಾನದ ವಿಧಾನ ಸಭಾ ಚುನಾವಣೆಯಲ್ಲಿ ರೈತರ ಸಮಸ್ಯೆಗಳು ನಿರ್ಣಾಯಕ ಪಾತ್ರವಹಿಸಲಿವೆ. ಪ್ರವಾಸೋದ್ಯಮ, ಗ್ರಾನೈಟ್ ಗಣಿಗಾರಿಕೆ ರಾಜಸ್ಥಾನದಲ್ಲಿ ದೊಡ್ಡ ಉದ್ಯಮವಾದರೂ ಕೃಷಿಯನ್ನು ನೆಚ್ಚಿಕೊಂಡವರ ಸಂಖ್ಯೆಯೇ ದೊಡ್ಡದು. 29ರಲ್ಲಿ 24 ಜಿಲ್ಲೆಗಳಲ್ಲಿ ಕೃಷಿಯೇ ಪ್ರಧಾನ ಕಸುಬು. ಕೃಷಿ ಚಟುವಟಿಕೆಗಳನ್ನು ಬಾಧಿಸುವ ಸಂಗತಿಗಳು ಚುನಾವಣೆಯಲ್ಲಿ ಮತದಾರರನ್ನು ಪ್ರಭಾವಿಸುತ್ತವೆ. ಈ ಬಾರಿಯ ಚುನಾವಣೆಯೂ ಇದಕ್ಕೆ ಹೊರತಲ್ಲ.

ರಾಜಸ್ಥಾನದ ಬಹುತೇಕ ಜಿಲ್ಲೆಗಳಲ್ಲಿ ವರ್ಷವೊಂದರಲ್ಲಿ ಎರಡು ಬೆಳೆಗಳನ್ನು ಬೆಳೆಯಲಾಗುತ್ತದೆ. ಅಕ್ಟೋಬರ್, ಹಿಂಗಾರು ಬೇಸಾಯದ ಆರಂಭದ ತಿಂಗಳು. ಕುಂಟೆ ಹೊಡೆದು, ಹೊಲವನ್ನು ಹದವಾಗಿಸಿ ಬಿತ್ತನೆಗೆ ಸಿದ್ಧವಾಗಿಸಿರುವ ದೃಶ್ಯವು ರಾಜಸ್ಥಾನದ ಉದ್ದಗಲಕ್ಕೂ ಕಾಣುತ್ತಿತ್ತು. ಹೊಲಗಳು ಬಿತ್ತನೆಗೆ ಸಿದ್ಧವಾಗಿದ್ದರೂ, ಗೊಬ್ಬರ ಇಲ್ಲದೆ ಬಹುತೇಕ ಕಡೆ ಬಿತ್ತನೆಯೇ ಆಗಿಲ್ಲ. ರಸಗೊಬ್ಬರ ಬಳಸಿಯೇ ವರ್ಷಕ್ಕೆ ಎರಡು ಬೆಳೆ ತೆಗೆಯುವ ರಾಜಸ್ಥಾನದಲ್ಲಿ, ರೈತರು ಗೊಬ್ಬರ ಸಂಗ್ರಹಿಸಿಕೊಳ್ಳದೆ ಬಿತ್ತನೆ ಮಾಡುವುದೇ ಇಲ್ಲ.

'ಗೊಬ್ಬರವೇ ಸಿಗುತ್ತಿಲ್ಲ. ಮೊದಲೆಲ್ಲಾ ಗೊಬ್ಬರಕ್ಕಾಗಿ ಕಾಯುವ ಸ್ಥಿತಿಯೇ ಇರಲಿಲ್ಲ. ಈಗ ಗೊಬ್ಬರಕ್ಕಾಗಿ ಸೊಸೈಟಿ ಎದುರು ಎರಡು–ಮೂರು ದಿನ ನಿಲ್ಲಬೇಕು. ಗೊಬ್ಬರ ಇಲ್ಲದೆ ಬೇಸಾಯ ಮಾಡಲಾಗಿಲ್ಲ. ಅಶೋಕ್‌ಜೀ ಅವರ ಸರ್ಕಾರ ಕೊಡುತ್ತಿರುವ ಉಚಿತ ಪಡಿತರದಿಂದ ಜೀವನ ನಡೆಸಿದ್ದೇವೆ. ನಮ್ಮ ಕಷ್ಟಕ್ಕೆ ನೆರವಾಗುತ್ತಿರುವ ರಾಜ್ಯ ಸರ್ಕಾರಕ್ಕೇ ಮತ ಹಾಕಬೇಕಲ್ಲವೇ' ಎಂದರು ನೌಗಾರ್‌ನ ಕೃಷಿಕ ಕಮಲಾಕರ್ ಕರ್ಮಾಕರ್.

ನಾಗೌರ್ ಹೊರವಲಯದಲ್ಲಿರುವ ಸಿರ್ಕಾ ಹೆದ್ದಾರಿಯ ಸೊಸೈಟಿ ಎದುರು ಗೊಬ್ಬರಕ್ಕಾಗಿ ಕಾದುನಿಂತ ಇನ್ನೂರಕ್ಕೂ ಹೆಚ್ಚು ರೈತರಲ್ಲಿ ಕಮಲಾಕರ್ ಸಹ ಒಬ್ಬರು. ಕೇಂದ್ರ ಸರ್ಕಾರ ಗೊಬ್ಬರ ಪೂರೈಸದೇ ಇರುವುದರಿಂದಲೇ ಗೊಬ್ಬರದ ಕೊರತೆ ಉಂಟಾಗಿದೆ ಎಂದು ಕಾಂಗ್ರೆಸ್ ಪ್ರಚಾರ ಮಾಡುತ್ತಿದೆ. ರೈತ ಸಮುದಾಯದ ಹಲವರು ಇದನ್ನು ಒಪ್ಪುತ್ತಾರೆ.

'ಕೇಂದ್ರ ಸರ್ಕಾರವೇ ಗೊಬ್ಬರ ಪೂರೈಸಬೇಕಲ್ಲವೇ. ಪಕ್ಕದ ಹರಿಯಾಣದಲ್ಲಿ ಗೊಬ್ಬರ ಬೇಕಾದಂತೆ ಸಿಗುತ್ತದೆ. ನನ್ನ ಮನೆಯಾಕೆಯ ಅಪ್ಪ ಹರಿಯಾಣದವರು. ಅವರಿಗೆ ಗೊಬ್ಬರ ಬೇಕಾದಷ್ಟು ಸಿಗುತ್ತಿದೆ. ಆದರೆ ಇಲ್ಲಿ ರಾಜಸ್ಥಾನದಲ್ಲಿ ಮಾತ್ರ ಗೊಬ್ಬರ ಸಿಗುತ್ತಿಲ್ಲ. ಇದು ಕೇಂದ್ರ ಸರ್ಕಾರ ಮಾಡುತ್ತಿರುವ ರಾಜಕಾರಣವಲ್ಲವೇ? ಅವರಿಗೆ ನಾವು ಮತ ಹಾಕಬೇಕೇ' ಎಂದು ಪ್ರಶ್ನಿಸಿದವರು ಅಲ್ವರ್‌ನ ಗಡಿಗ್ರಾಮ ಹರಸೋಲಿಯ ಮೋನಕ್ ಸಿಂಗ್ ಯಾದವ್.

'ಗೊಬ್ಬರದ ದರ ಎರಡರಷ್ಟಾಗಿದೆ. ಮೊದಲು 45 ಕೆ.ಜಿ.ಯ ಚೀಲ ₹250ಕ್ಕೆ ಸಿಗುತ್ತಿತ್ತು. ಈಗ ₹500 ಆಗಿದೆ. ಅಷ್ಟು ಕೊಟ್ಟರೂ ಸಿಗುತ್ತಿಲ್ಲ. ಬಿಜೆಪಿ ಸರ್ಕಾರ ಎಲ್ಲದರ ದರವನ್ನೂ ಹೆಚ್ಚಿಸಿದೆ. ಡೀಸೆಲ್ ದರ ಹೆಚ್ಚಿಸಿದೆ. ಉಳುಮೆ ಮಾಡಲೇ ಹೆಚ್ಚು ದುಡ್ಡು ಹೋಗುತ್ತದೆ. ಎಲ್ಲಾ ಖರ್ಚು ಕಳೆದರೂ ನಮಗೆ ಉಳಿಯುವ ಲಾಭ ಕಡಿಮೆ. ಬಿಜೆಪಿಗೆ ಈ ಬಾರಿ ಬುದ್ಧಿಕಲಿಸಬೇಕು' ಎಂದು ಮೋನಕ್‌ನ ಮಾತಿಗೆ ದನಿಗೂಡಿಸಿದರು ರೂಪಾರಾಮ್ ಗೋಶಾಲಾ.

ಗೋಶಾಲೆ ನಡೆಸುತ್ತಿರುವ ರೂಪಾರಾಮ್ ಅವರಿಗೆ ಮೇವನ್ನು ರಾಜಸ್ಥಾನದಲ್ಲಿ ಖರೀದಿಸುವುದಕ್ಕಿಂತ, ಹರಿಯಾಣದಿಂದ ತರಿಸಿಕೊಳ್ಳುವುದಕ್ಕೇ ಕಡಿಮೆ ಖರ್ಚಾಗುತ್ತದಂತೆ. ರಾಜ್ಯ ಸರ್ಕಾರ ಒದಗಿಸುತ್ತಿರುವ ಮೇವು ಸಹಾಯಧನ, ಉಚಿತ ವಿದ್ಯುತ್, ಗ್ರಾಮೀಣ ಪ್ರದೇಶದ ಮನೆಗಳಿಗೆ ಉಚಿತ ವಿದ್ಯುತ್, ಉಚಿತ ಪಡಿತರ... ಇವೆಲ್ಲವೂ ಬಡರೈತರು ಜೀವನ ನಡೆಸಲು ನೆರವಾಗಿವೆ. ಅವರು ಕಾಂಗ್ರೆಸ್‌ಗೇ ಮತ ಹಾಕುತ್ತಾರೆ ಎನ್ನುತ್ತಾರೆ ಹರಸೋಲಿಯ ರೈತ ಮಂದಿ.

ಚುನಾವಣೆಯಲ್ಲಿ ರೈತರ ಸಮಸ್ಯೆ ಮುಂದು ಮಾಡುವಲ್ಲಿ ಬಿಜೆಪಿ ಸಹ ಹಿಂದೆ ಬಿದ್ದಿಲ್ಲ. ಗೊಬ್ಬರದ ಸಮಸ್ಯೆ ಬಿಗಡಾಯಿಸಿದ್ದು ರಾಜ್ಯ ಸರ್ಕಾರದ ವೈಫಲ್ಯದಿಂದಲೇ ಎಂದು ಸ್ಥಳೀಯ ಬಿಜೆಪಿ ನಾಯಕರು ಹೇಳುತ್ತಾರೆ. 'ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿ ಗೊಬ್ಬರವನ್ನು ತರಿಸಿಕೊಳ್ಳಬೇಕಾಗಿದ್ದು ರಾಜ್ಯ ಸರ್ಕಾರದ ಕೆಲಸವಲ್ಲವೇ. ಬಿಜೆಪಿ ಮೇಲೆ ಗೂಬೆ ಕೂರಿಸಿ ಏನು ಪ್ರಯೋಜನ? ಹರಿಯಾಣದಲ್ಲಿ ಬಿಜೆಪಿ ಸರ್ಕಾರವಿದೆ. ಅಲ್ಲಿಗೆ ಗೊಬ್ಬರ ಸುಲಭವಾಗಿ ಪೂರೈಕೆಯಾಗುತ್ತಿದೆ. ರಾಜ್ಯದಲ್ಲೂ ಕೇಂದ್ರದಲ್ಲೂ ಒಂದೇ ಸರ್ಕಾರ ಬಂದರೆ, ಇಲ್ಲಿ ಗೊಬ್ಬರ ಸುಲಭವಾಗಿ ಸಿಗುತ್ತದೆ. ಇದಕ್ಕಾಗಿ ಬಿಜೆಪಿಗೆ ಮತ ಹಾಕಬೇಕು' ಎನ್ನುವುದು ಸಿರ್ಕಾದ ಗೋಧಿ ವರ್ತಕ ರಾಧೇಶ್ಯಾಮ್ ಸೂತ್ರಧಾರ್ ಅವರ ಪ್ರತಿಪಾದನೆ.

ಕೇಂದ್ರದ ಬಿಜೆಪಿ ಸರ್ಕಾರವು ದೊಡ್ಡ ಉದ್ಯಮಿಗಳಿಗೆ ಅನುಕೂಲ ಮಾಡಿಕೊಡಲು ಕೃಷಿ ಕಾಯ್ದೆಗಳನ್ನು ಬದಲಿಸಿತು ಎಂಬುದನ್ನು ರಾಜಸ್ಥಾನದ ಹನುಮಾನ್‌ಗಢ್, ಶೆಖಾವತಿ ಪ್ರಾಂತ್ಯದ ರೈತರು ಬಹಳ ಗಟ್ಟಿಯಾಗಿ ಹೇಳುತ್ತಾರೆ. ಕೇಂದ್ರ ಸರ್ಕಾರದ ನೂತನ ಕೃಷಿ ಕಾಯ್ದೆಗಳ ವಿರುದ್ಧ ದೆಹಲಿ ಗಡಿಯಲ್ಲಿ ನಡೆಸಿದ ಪ್ರತಿಭಟನೆಯಲ್ಲಿ ಈ ಪ್ರಾಂತ್ಯದ ಸಾವಿರಾರು ರೈತರು ಭಾಗಿಯಾಗಿದ್ದರು. ಆ ಕಾಯ್ದೆಗಳ ಕಾರಣದಿಂದ ಕೇಂದ್ರ ಸರ್ಕಾರದ ಮೇಲೆ ಈ ರೈತರಲ್ಲಿ ಉಂಟಾಗಿದ್ದ ಸಿಟ್ಟು ಇನ್ನೂ ಕಡಿಮೆಯಾಗಿಲ್ಲ.

'ರೈತ ವಿರೋಧಿ ಬಿಜೆಪಿ ಅಧಿಕಾರಕ್ಕೆ ಬರಬಾರದು. ಅದು ನಮಗಾಗಿ ಕೆಲಸವೇ ಮಾಡುವುದಿಲ್ಲ. ಕೃಷಿ ಕಾಯ್ದೆಗಳ ಕಾರಣದಿಂದ ನಮಗೆ ತೊಂದರೆಯಾಗಿದೆ. ಅದನ್ನು ತೆಗೆದುಹಾಕಿ ಎಂದು ಹೇಳಿದರೂ ಬಿಜೆಪಿ ನಮ್ಮ ಮಾತನ್ನು ಕೇಳಲಿಲ್ಲ. ನಮ್ಮಂತಹ ರೈತರು ಅದಕ್ಕಾಗಿ ಒಂದು ವರ್ಷ ಪ್ರತಿಭಟನೆ ನಡೆಸಬೇಕೇ? ಇಂತಹ ಪಕ್ಷ ಅಧಿಕಾರಕ್ಕೆ ಏಕೆ ಬರಬೇಕು' ಎಂದು ಸಿಟ್ಟನ್ನು ಹೊರಹಾಕಿದರು ಅಲ್ವರ್‌ನ ದಿವ್ಯೇಂದ್ರು ಯಾದವ್.

ರೈತ ಸಮುದಾಯದ ಪ್ರಾಬಲ್ಯವಿರುವ ಈ ಎಲ್ಲಾ ಪ್ರಾಂತಗಳಲ್ಲಿ ಇಂತಹ ಮಾತು ಪ್ರತಿಧ್ವನಿಸುತ್ತದೆ. ❖

'ರಾಜಕೀಯ ಮಾಡಿದರೆ ಮಾರಕ'

ರಾಜಸ್ಥಾನದ ದಕ್ಷಿಣ ಭಾಗದ ನದಿಗಳನ್ನು ಜೋಡಿಸಿ, ಉತ್ತರ ಮತ್ತು ಈಶಾನ್ಯ ಜಿಲ್ಲೆಗಳಿಗೆ ನೀರು ಕೊಂಡೊಯ್ಯುವ 'ಪಶ್ಚಿಮ ರಾಜಸ್ಥಾನ ಕಾಲುವೆ ಯೋಜನೆ' ಈ ಚುನಾವಣೆಯಲ್ಲಿ ಪ್ರಮುಖ ವಿಷಯಗಳಲ್ಲಿ ಒಂದು.

ವಸುಂಧರಾ ರಾಜೇ ನೇತೃತ್ವದ ಸರ್ಕಾರ ಇದ್ದಾಗ 2017ರಲ್ಲಿ ಈ ಯೋಜನೆಯನ್ನು ಆರಂಭಿಸಲಾಗಿತ್ತು. ಈ ಯೋಜನೆಗೆ ಕೇಂದ್ರದ ಬಿಜೆಪಿ ನೇತೃತ್ವದ ಸರ್ಕಾರವು ಅನುಮೋದನೆ ನೀಡಲಿಲ್ಲ ಮತ್ತು ಹಣಕಾಸು ನೆರವು ನೀಡಲು ನಿರಾಕರಿಸಿತ್ತು. ಹೀಗೆ ಸ್ಥಗಿತವಾದ ಯೋಜನೆಗೆ ಮರುಚಾಲನೆ ನೀಡಿದ್ದು, ಅಶೋಕ್ ಗೆಹಲೋತ್ ಅವರ ಕಾಂಗ್ರೆಸ್ ಸರ್ಕಾರ. ಸರ್ಕಾರವು ಯೋಜನೆಯ ಸಂಪೂರ್ಣ ವೆಚ್ಚವನ್ನು ಭರಿಸುವುದಾಗಿ ಹೇಳಿ, ರಾಜ್ಯ ಯೋಜನೆಯಾಗಿ ಘೋಷಿಸಿತು. ಮೊದಲ ಹಂತದಲ್ಲಿ ₹13,000 ಕೋಟಿಯನ್ನು ತೆಗೆದಿರಿಸಿತು. ಆದರೆ ಪಕ್ಕದ ಮಧ್ಯ ಪ್ರದೇಶ ಸರ್ಕಾರದಿಂದ ನಿರಾಕ್ಷೇಪಣಾ ಪತ್ರ ದೊರೆಯದೇ ಇರುವುದರಿಂದ ಕಾಮಗಾರಿ ಆರಂಭವಾಗಿಲ್ಲ.

ಯೋಜನೆ ವಿಫಲವಾಗಿದೆ ಎಂದು ಬಿಜೆಪಿಯ ನಾಯಕರು ಮಾತನಾಡುತ್ತಿದ್ದಾರೆ. ಬಿಜೆಪಿ ಪ್ರಣಾಳಿಕೆಯಲ್ಲೂ ಇದನ್ನು ಪ್ರಸ್ತಾಪಿಸಲಾಗಿದೆ. ಇದು, 'ಬಿಜೆಪಿಯ ಯೋಜನೆ. ಹೀಗಾಗಿ ಕಾಂಗ್ರೆಸ್ ಸರ್ಕಾರ ಆಸಕ್ತಿ ತೋರಿಸುತ್ತಿಲ್ಲ' ಎನ್ನುತ್ತಾರೆ ಜಾಲಾವಾಡ್‌ನ ಎ2 ದರ್ಜೆಯ ಗುತ್ತಿಗೆದಾರ ರೂಬಲ್ ಜೈನ್.


ಆದರೆ ಈ ಮಾತನ್ನು ರೈತ ಸಮುದಾಯ ನಿರಾಕರಿಸುತ್ತದೆ. 'ಜನರಿಗಾಗಿ ಕೆಲಸ ಮಾಡಿದರಷ್ಟೇ ಮತ ಹಾಕುತ್ತಾರೆ ಎಂಬುದು ಇಲ್ಲಿನ ರಾಜಕಾರಣಿಗಳಿಗೆ ಚೆನ್ನಾಗಿ ಗೊತ್ತಿದೆ. ಹೀಗಿದ್ದೂ ರಾಜಕೀಯಕ್ಕಾಗಿ ಯೋಜನೆಗೆ ಅಡ್ಡಗಾಲು ಹಾಕಿದರೆ ಅದು ಕಾಂಗ್ರೆಸ್‌ಗೂ ಮಾರಕ, ಬಿಜೆಪಿಗೂ ಮಾರಕ. ಇದರಲ್ಲಿ ಯಾರು ರಾಜಕಾರಣ ಮಾಡುತ್ತಿದ್ದಾರೆ ಎಂಬುದು ನಮಗೆ ಗೊತ್ತಿದೆ' ಎನ್ನುತ್ತಾರೆ ಅಲ್ವರ್‌ನ ಲಕ್ಷೀಕಾಂತ್ ಸಿಂಗ್.

ನುಡಿ-ಕಿಡಿ



ತೆಲಂಗಾಣವನ್ನು ಅಸ್ಥಿರಗೊಳಿಸುವ ಸಲುವಾಗಿ ಬಿಆರ್‌ಎಸ್ ಶಾಸಕರನ್ನು ಖರೀದಿಸಲು ರಾಜ್ಯ ಕಾಂಗ್ರೆಸ್ ಮುಖ್ಯಸ್ಥ ರೇವಂತ್ ರೆಡ್ಡಿ ಪ್ರಯತ್ನಿಸಿದ್ದರು. ಆ ವೇಳೆ ಸಿಕ್ಕಿಬಿದ್ದ ಅವರನ್ನು ಪೊಲೀಸರು ಬಂಧಿಸಿ ಜೈಲಿನಲ್ಲಿರಿಸಿದ್ದರು. ಆದರೂ ಅವರಿಗೆ ನಾಚಿಕೆಯಿಲ್ಲ. ಬಿಆರ್‌ಎಸ್ ಸರ್ಕಾರದ ವಿರುದ್ಧ ಮಾತನಾಡಲು ಅವರಿಗೆ ನೈತಿಕ ಹಕ್ಕು ಇಲ್ಲ.

ಕೆ.ಚಂದ್ರಶೇಖರ ರಾವ್, ತೆಲಂಗಾಣ ಮುಖ್ಯಮಂತ್ರಿ



ನೇಮಕಾತಿ ಪರೀಕ್ಷೆಗಳ ಪ್ರಶ್ನೆಪತ್ರಿಕೆಯನ್ನು ಸೋರಿಕೆ ಮಾಡುವ ಮೂಲಕ ರಾಜಸ್ಥಾನದ ಕಾಂಗ್ರೆಸ್ ನೇತೃತ್ವದ ಸರ್ಕಾರವು ಯುವಜನರ ಭವಿಷ್ಯದ ಜೊತೆ ಆಟವಾಡಿದೆ. ರಾಜ್ಯದಲ್ಲಿ ಶಾಸಕಿಯೇ ತಾನು ಅಸುರಕ್ಷತೆಯ ಭಾವನೆ ಹೊಂದಿರುವುದಾಗಿ ಹೇಳುತ್ತಾರೆ. ಇನ್ನು ಸಾಮಾನ್ಯರು ಸುರಕ್ಷತಾ ಭಾವ ಹೊಂದಲು ಹೇಗೆ ಸಾಧ್ಯ?

ರಾಜನಾಥ್ ಸಿಂಗ್, ರಕ್ಷಣಾ ಸಚಿವ

ರಾಹುಲ್ ವಿರುದ್ಧ ಆಯೋಗಕ್ಕೆ ದೂರು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು ಉದ್ದೇಶಿಸಿ 'ಪನೌತಿ' (ಅಪಶಕುನ) ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಜರಿದಿರುವುದರ ವಿರುದ್ಧ ಬಿಜೆಪಿಯು ಚುನಾವಣಾ ಆಯೋಗಕ್ಕೆ ದೂರು ಸಲ್ಲಿಸಿದೆ.

ಮೋದಿ ಗುಜರಾತ್ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಅಲ್ಲಿ ಮೋದಿ ಅವರ ಜಾತಿಯನ್ನು ಒಬಿಸಿ ಪಟ್ಟಿಗೆ ಸೇರಿಸಲಾಗಿತ್ತು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿರುವುದು ತಪ್ಪು ಮಾಹಿತಿ. ಈ ವಿಚಾರವಾಗಿ ಖರ್ಗೆ ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಕೂಡ ಅದು ಮನವಿ ಮಾಡಿದೆ.

'ಖರ್ಗೆ ಮತ್ತು ರಾಹುಲ್ ಅವರ ಹೇಳಿಕೆಗಳು ಅವರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸುವುದಕ್ಕೆ ಸೂಕ್ತವಾಗಿವೆ. ಅವರಿಗೆ ನೈತಿಕ ಮೌಲ್ಯಗಳ ಬಗ್ಗೆ ಗೌರವವಿಲ್ಲ. ಚುನಾವಣಾ ನೀತಿ ಸಂಹಿತೆಯ ಬಗ್ಗೆಯೂ ಗೌರವ ಇಲ್ಲ' ಎಂದು ಬಿಜೆಪಿ ಸಲ್ಲಿಸಿರುವ ದೂರಿನಲ್ಲಿ ಹೇಳಲಾಗಿದೆ.

ರಾಹುಲ್ ಅವರು 'ವಿವೇಕವಿಲ್ಲದ, ಅಶಿಕ್ಷಿತ, ಮೌಲ್ಯವಿಲ್ಲದ ವ್ಯಕ್ತಿ, ಅವರದ್ದು ಕೀಳು ಮನಃಸ್ಥಿತಿ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ರಾಧಾ ಮೋಹನ ದಾಸ್ ಅಗರ್ವಾಲ್ ಅವರು ಆಯೋಗಕ್ಕೆ ಮನವಿ ಸಲ್ಲಿಸಿದ ನಂತರ ವಾಗ್ದಾಳಿ ನಡೆಸಿದರು.

ರಾಜಸ್ಥಾನದಲ್ಲಿ ಮಾಡಿದ ಚುನಾವಣಾ ಭಾಷಣದಲ್ಲಿ ರಾಹುಲ್ ಅವರು ಮೋದಿ ಅವರನ್ನು ಉದ್ದೇಶಿಸಿ 'ಅಪಶಕುನ' ಎಂದಿದ್ದರು.

'ಕೆಂಪು ಡೈರಿ ಉಲ್ಲೇಖವೇ ಅಸಂಬದ್ಧ'

ಜೈಪುರ (ಪಿಟಿಐ): ಚುನಾವಣಾ ಪ್ರಚಾರದ ವೇಳೆ ಬಿಜೆಪಿ ನಾಯಕರು ಪ್ರಸ್ತಾಪಿಸಿರುವ 'ಕೆಂಪು ಡೈರಿ' ವಿಚಾರ ಅಸಂಬದ್ಧ ಎಂದು ಹೇಳಿರುವ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಅವರ ಆರೋಪದಲ್ಲಿ ಯಾವುದೇ ಹುರುಳಿದ್ದರೆ, ಡೈರಿಯನ್ನು ಜಾರಿ ನಿರ್ದೇಶನಾಲಯ, ಆದಾಯ ತೆರಿಗೆ ಇಲಾಖೆ ಅಥವಾ ಸಿಬಿಐಗೆ ಹಸ್ತಾಂತರಿಸಬೇಕು ಎಂದು ಹೇಳಿದ್ದಾರೆ.

ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ, ರಾಜ್ಯದಲ್ಲಿ ಪಕ್ಷದ ಭವಿಷ್ಯ, ಕೆಂಪು ಡೈರಿ ವಿಷಯ ಮತ್ತು ಗ್ಯಾರಂಟಿಗಳ ಬಗ್ಗೆ ಮಾತನಾಡಿದರು.

ಗೆಹಲೋತ್ ಸರ್ಕಾರ ನಡೆಸಿದ ಹಣ ವರ್ಗಾವಣೆ ಅವ್ಯವಹಾರದ ವಿವರ ಕೆಂಪು ಡೈರಿಯಲ್ಲಿದೆ (ರೆಡ್ ಡೈರಿ) ಎಂದು ವಜಾಗೊಂಡಿದ್ದ ಸಚಿವರೊಬ್ಬರು ಆರೋಪಿಸಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ರ್‍ಯಾಲಿಗಳಲ್ಲಿ 'ಗೆಹಲೋತ್ ಒಬ್ಬ ಜಾದೂಗಾರ' ಎಂದು ಕರೆದಿರುವ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಮ್ಯಾಜಿಕ್ ಕೆಲಸ ಮಾಡುತ್ತದೆ. ಕಾಂಗ್ರೆಸ್ ಕಣ್ಮರೆಯಾಗುತ್ತದೆ ಎಂದು ಅವರು ಹೇಳುತ್ತಾರೆ. ಆದರೆ, ಕಣ್ಮರೆ ಆಗುವುದು ಯಾರು ಎಂಬುದನ್ನು ನಾವು ಹೇಳುತ್ತೇವೆ' ಎಂದರು.

ಕನ್ಹಯ್ಯ ಲಾಲ್ ಹತ್ಯೆ ಪ್ರಕರಣವನ್ನು ಚುನಾವಣಾ ವಿಷಯವಾಗಿ ಮಾಡಲು ಪ್ರಯತ್ನಿಸಿದ್ದಕ್ಕಾಗಿ ಬಿಜೆಪಿಗೆ ತಿರುಗೇಟು ನೀಡಿದ ಅವರು, ಆರೋಪಿಗಳು ಬಿಜೆಪಿಯೊಂದಿಗೆ ಸಂಪರ್ಕ ಹೊಂದಿದ್ದಾರೆ ಮತ್ತು ಎನ್‌ಐಎ ನಡೆಸುತ್ತಿರುವ ತನಿಖೆಯಲ್ಲಿ ವಿಳಂಬವಾಗಿದೆ ಎಂದು ಹೇಳಿದರು.

'ಈ ವೇಳೆಗೆ ತಪ್ಪಿತಸ್ಥರನ್ನು ಗಲ್ಲಿಗೇರಿಸಬೇಕಿತ್ತು. ಚುನಾವಣೆ ಕಾರಣಕ್ಕೆ ತನಿಖೆ ವಿಳಂಬವಾಗಿದೆ ಎಂದು ಭಾವಿಸುತ್ತೇನೆ. ಅದರ ಬಗ್ಗೆ ಅವರು (ಬಿಜೆಪಿ) ಮಾತನಾಡುತ್ತಲೇ ಇರುತ್ತಾರೆ. ಅದಕ್ಕಾಗಿಯೇ ಎನ್‌ಐಎ ಪ್ರಗತಿ ಸಾಧಿಸುತ್ತಿಲ್ಲ, ಇದು ನನ್ನ ಅನುಮಾನ. ಎನ್‌ಐಎ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ಹೇಳುತ್ತಿಲ್ಲ ಎಂದು ಈಗ ಕನ್ಹಯ್ಯ ಕುಟುಂಬದವರು ಹೇಳಿದ್ದಾರೆ' ಎಂದರು.

'ಮೋದಿ ಗ್ಯಾರಂಟಿ ಇಲ್ಲಿ ನಡೆಯುವುದಿಲ್ಲ. ರಾಜಸ್ಥಾನದಲ್ಲಿ ನವೆಂಬರ್ 23ರವರೆಗೆ ಅವರು ಇರುತ್ತಾರೆ. ಬಳಿಕ ಐದು ವರ್ಷ ಬರುವುದಿಲ್ಲ. ಎಲ್ಲಾ ಕೆಲಸಗಳನ್ನು ರಾಜಸ್ಥಾನದ ನಾಯಕರೇ ಮಾಡಬೇಕು. ಯಾವ ಗ್ಯಾರಂಟಿ ಕೊಡುತ್ತಿದ್ದಾರೆ' ಎಂದು ಪ್ರಶ್ನಿಸಿದರು.

ಲಕ್ಷಾಂತರ ಯುವಕರ ಕನಸು ಕೊಂದ ಕೇಂದ್ರ: ರಾಹುಲ್

ಜೈಪುರ (ಪಿಟಿಐ): ಅಗ್ನಿಪಥ ಯೋಜನೆಯನ್ನು ಜಾರಿ ಮಾಡುವ ಮೂಲಕ ಕೇಂದ್ರ ಸರ್ಕಾರವು ದೇಶ ರಕ್ಷಣೆಯ ಕನಸು ಕಾಣುತ್ತಿದ್ದ ಲಕ್ಷಾಂತರ ಯುವಕರ ಕನಸುಗಳನ್ನು ಕೊಂದಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಹೇಳಿದರು.

ಧೌಲ್‌ಪುರದಲ್ಲಿ ಸಾರ್ವಜನಿಕ ಸಭೆ ನಡೆಸಿದ ಅವರು, 'ದೇಶದ ದಲಿತರು ಮತ್ತು ಹಿಂದುಳಿದ ವರ್ಗಗಳ ಜನರಿಗೆ ತಮ್ಮ ಸಮುದಾಯದ ಜನಸಂಖ್ಯೆ ಎಷ್ಟಿದೆ ಎಂಬುದನ್ನು ತಿಳಿಯಲು ಜಾತಿ ಗಣತಿ ಬಹಳ ಮುಖ್ಯ. ದೇಶದಲ್ಲಿ ಸಂಪತ್ತು ಹೇಗೆ ಹಂಚಿಕೆಯಾಗುತ್ತಿದೆ ಎಂದು ತಿಳಿಯುವುದು ಎಲ್ಲದಕ್ಕಿಂತಲೂ ಮುಖ್ಯ. ಅದಕ್ಕಾಗಿ ರಾಜ್ಯದಲ್ಲಿ ಸರ್ಕಾರ ರಚಿಸುತ್ತಿದ್ದಂತೆ ಜಾತಿ ಗಣತಿಗೆ ಚಾಲನೆ ನೀಡಲಾಗುವುದು' ಎಂದರು.

ಭರತ್‌ಪುರದಲ್ಲಿ ರ್‍ಯಾಲಿ ನಡೆಸಿದ ಅವರು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ವಾಗ್ದಾಳಿ ನಡೆಸಿದರು. 'ಮೋದಿ ಅವರು ಮೊದಲಿಗೆ ಬರುತ್ತಾರೆ. ಟಿ.ವಿ.ಯಲ್ಲಿ ಹಿಂದೂ– ಮುಸ್ಲಿಂ ಎಂದು ಮಾತನಾಡಿ ನಿಮ್ಮ ಗಮನ ಬೇರಡೆ ಸೆಳೆಯುತ್ತಾರೆ. ಆ ವೇಳೆ ಗೌತಮ್ ಅದಾನಿ ಅವರು ಹಿಂದಿನಿಂದ ಬಂದು ನಿಮ್ಮ ಜೇಬಿಗೆ ಕನ್ನ ಹಾಕುತ್ತಾರೆ. ಗೃಹಸಚಿವ ಅಮಿತ್ ಶಾ ಅವರು ಪಕ್ಕದಲ್ಲಿ ನಿಂತು ಕೋಲು ಹಿಡಿದು ಇವೆಲ್ಲವನ್ನು ನೋಡುತ್ತಿರುತ್ತಾರೆ. ಈ ಸರ್ಕಾರ ಹೀಗೆಯೇ ನಡೆಯುತ್ತಿರುವುದು' ಎಂದು ಟೀಕಿಸಿದರು.

'ಮೋದಿ ಅವರನ್ನು ನೀವು ಸದಾಕಾಲ ಟಿವಿಯಲ್ಲಿ ನೋಡಬಹುದು ಏಕೆಂದರೆ ಬಹುತೇಕ ವಾಹಿನಿಗಳು ಅದಾನಿ ಒಡೆತನದಲ್ಲಿವೆ' ಎಂದರು.



ರಾಜಸ್ಥಾನದ ಡೌಲ್‌ಪುರದಲ್ಲಿ ಗುರುವಾರ ರಾಹುಲ್ ಗಾಂಧಿ ವ್ಯಕ್ತಿಯೊಬ್ಬರ ಜೊತೆ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

'ನಮ್ಮ ಪಕ್ಷ ಏನೇ ಮಾಡಿದರೂ ಅದು ಬಡವರಿಗಾಗಿ, ಆದರೆ ಮೋದಿ ಏನೇ ಮಾಡಿದರೂ ಅದು ಇಬ್ಬರು ಅಥವಾ ಮೂವರು ದೊಡ್ಡ ಉದ್ಯಮಿಗಳಿಗಾಗಿ ಮಾತ್ರ. ನಿಮಗೆ ಅದಾನಿ ಸರ್ಕಾರ ಬೇಕೆ ಅಥವಾ ಸಾಮಾನ್ಯರಿಗಾಗಿ ಇರುವ ಸರ್ಕಾರ ಬೇಕೆ ಎಂದು ನೀವೇ ನಿರ್ಧರಿಸಿ' ಎಂದು ಹೇಳಿದರು.

ಯುಪಿಎ ಸರ್ಕಾರವಿದ್ದಾಗ ಅಡುಗೆ ಅನಿಲ ಸಿಲಿಂಡರ್ ಬೆಲೆ ₹400ಕ್ಕೆ ತಲುಪಿದ್ದಕ್ಕೆ ಮೋದಿ ಟೀಕಾಪ್ರಹಾರ ನಡೆಸುತ್ತಿದ್ದರು. ಈಗ ಸಿಲಿಂಡರ್ ಬೆಲೆ ₹1,200 ಆದರೂ ಮೋದಿ ಒಂದು ಪದವನ್ನೂ ಮಾತನಾಡುತ್ತಿಲ್ಲ ಎಂದು ದೂರಿದರು.

ಚುನಾವಣಾ ಕಣದಲ್ಲಿ

- **'ಕರ್ನಾಟಕದ ಜನರಿಗೆ ಕಾಂಗ್ರೆಸ್‌ನಿಂದ ಮೋಸ':** ಕರ್ನಾಟಕದಲ್ಲಿ ಕಳೆದ ವಿಧಾನಸಭೆ ಚುನಾವಣೆಯಲ್ಲಿ ಗೆದ್ದು ಸರ್ಕಾರ ರಚಿಸಿದ ಕಾಂಗ್ರೆಸ್, ಚುನಾವಣೆಗೂ ಮುನ್ನ ನೀಡಿದ್ದ ಗ್ಯಾರಂಟಿಗಳನ್ನು ಜಾರಿ ಮಾಡದೇ ರಾಜ್ಯದ ಜನರಿಗೆ ದ್ರೋಹಬಗೆದಿದೆ ಎಂದು ಬಿಜೆಪಿಯ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಬುಧವಾರ ಆರೋಪಿಸಿದರು.
ಹೈದರಾಬಾದ್‌ನಲ್ಲಿ ಮಾತನಾಡಿದ ಅವರು, ಕಾಂಗ್ರೆಸ್‌ನ ಹುಸಿ ಭರವಸೆಗಳಿಗೆ ಮರುಳಾಗಬೇಡಿ ಎಂದು ತೆಲಂಗಾಣದ ಜನರಿಗೆ ಎಚ್ಚರಿಕೆ ನೀಡಿದರು. ಇತರ ರಾಜ್ಯಗಳಲ್ಲಿ ಕಾಂಗ್ರೆಸ್ ಅನುಸರಿಸುತ್ತಿರುವ ಚುನಾವಣಾ ಮಾಡೆಲ್‌ಅನ್ನೇ 'ಕರ್ನಾಟಕ ಮಾಡೆಲ್' ಎಂದು ಕರೆಯಲಾಗುತ್ತದೆ ಎಂದರು.
- **'ಉದ್ಯೋಗ ನೀಡದ ಬಿಆರ್‌ಎಸ್':** ನಿರುದ್ಯೋಗ ಸಮಸ್ಯೆಯು ತೆಲಂಗಾಣದಲ್ಲಿ ದೊಡ್ಡ ಪಿಡುಗಾಗಿದೆ ಎಂದು ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ಬುಧವಾರ ಹೇಳಿದರು.
ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಿರುದ್ಯೋಗಿ ಯುವಕರಿಗೆ ಉದ್ಯೋಗ ನೀಡುವ ಭರವಸೆಯನ್ನು ರಾಜ್ಯದ ಬಿಆರ್‌ಎಸ್ ಸರ್ಕಾರ ಈಡೇರಿಸಿಲ್ಲ. ರಾಜ್ಯದ 40 ಲಕ್ಷ ಯುವಕರು ನಿರುದ್ಯೋಗಿಗಳಾಗಿದ್ದಾರೆ. 1.9 ಲಕ್ಷ ಸರ್ಕಾರಿ ಉದ್ಯೋಗಗಳು ಖಾಲಿ ಇವೆ. ಪ್ರತಿ ಕುಟುಂಬಕ್ಕೂ ಒಂದು ಉದ್ಯೋಗ ನೀಡುವುದಾಗಿ ಮತ್ತು ₹ 3,000 ನಿರುದ್ಯೋಗ ಭತ್ಯೆ ನೀಡುವುದಾಗಿ ಕೆ.ಚಂದ್ರಶೇಖರ್ ರಾವ್ ಅವರು ಪ್ರತ್ಯೇಕ ತೆಲಂಗಾಣಕ್ಕಾಗಿ ಹೋರಾಟ ನಡೆಸುವ ವೇಳೆ ಭರವಸೆ ನೀಡಿದ್ದರು. ಆದರೆ ಭರವಸೆ ಈಡೇರಿಸಲಿಲ್ಲ. 10 ವರ್ಷಗಳ ಬಿಆರ್‌ಎಸ್ ಸರ್ಕಾರವು ರಾಜ್ಯದ ಯುವಜನರ ಕನಸುಗಳನ್ನು ಕಸಿದಿದೆ' ಎಂದರು.
- **ಮತದಾನ ಆರಂಭ:** ತೆಲಂಗಾಣದ ಹಿರಿಯ ನಾಗರಿಕರಿಗಾಗಿ ಜಾರಿಗೆ ತಂದಿರುವ 'ಮನೆಯಿಂದಲೇ ಮತದಾನ' ವ್ಯವಸ್ಥೆ ಮಂಗಳವಾರ ದಿಂದಲೇ ಜಾರಿಗೆ ಬಂದಿದೆ. ಈ ಪ್ರಕ್ರಿಯೆ ನ.26ರಂದು ಮುಕ್ತಾಯಗೊಳ್ಳಲಿದೆ ಎಂದು ಮುಖ್ಯ ಚುನಾವಣಾ ಅಧಿಕಾರಿ ವಿಕಾಸ್ ಹೇಳಿದರು.
- **ಮೋದಿ ಬಹಿರಂಗ ಪತ್ರ:** ರಾಜಸ್ಥಾನವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಭರವಸೆ ನೀಡಿ ಪ್ರಧಾನಿ ನರೇಂದ್ರ ಮೋದಿ ರಾಜಸ್ಥಾನ ಜನರಿಗೆ ಬುಧವಾರ ಬಹಿರಂಗ ಪತ್ರ ಬರೆದಿದ್ದಾರೆ.
ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು, ಭ್ರಷ್ಟಾಚಾರದಂಥ ಹಲವಾರು ಸಮಸ್ಯೆಗಳನ್ನು ಉಲ್ಲೇಖಿಸಿ ಮಾತಿನ ದಾಳಿ ಮಾಡಿರುವ ಅವರು, ಅಪರಾಧಗಳ ವಿಚಾರದಲ್ಲಿ ರಾಜಸ್ಥಾನವು ದೇಶದಲ್ಲೇ ಮೊದಲ ಸ್ಥಾನಕ್ಕೇರುವಂತೆ ಕಾಂಗ್ರೆಸ್ ಪಕ್ಷ ಮಾಡಿದೆ ಎಂದು ದೂರಿದ್ದಾರೆ. ಆ ಪಕ್ಷದ ಓಲೈಕೆ ನೀತಿಯಿಂದಾಗಿ ಸರ್ಕಾರವು ಅಪರಾಧಿಗಳು, ಸಮಾಜಘಾತುಕರ ವಿರುದ್ಧ ಕ್ರಮ ಕೈಗೊಂಡಿಲ್ಲ. ಧಾರ್ಮಿಕ ಶ್ರದ್ಧೆಯನ್ನು ಪಾಲಿಸುವುದೂ ರಾಜ್ಯದಲ್ಲಿ ದುಸ್ತರವಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಡಬಲ್ ಎಂಜಿನ್ ಸರ್ಕಾರ ಬಂದರೆ ರಾಜ್ಯದ ಅಭಿವೃದ್ಧಿಗೆ ವೇಗ ನೀಡಲಾಗುತ್ತದೆ ಎಂದಿದ್ದಾರೆ.

ಸುದೀರ್ಘ ಮಾತುಕತೆ ಫಲಪ್ರದ

ಜೆರುಸಲೇಂ (ಪಿಟಿಐ): ಇಸ್ರೇಲ್ ಹಾಗೂ ಹಮಾಸ್ ನಡುವಿನ ಕದನ ವಿರಾಮಕ್ಕೆ ಸಂಬಂಧಿಸಿದಂತೆ ಟೆಲ್ ಅವೀವ್‌ನಲ್ಲಿ ಬುಧವಾರ ಬೆಳಿಗ್ಗೆ ಆರು ಗಂಟೆ ಕಾಲ ಸುದೀರ್ಘ ಸಭೆ ನಡೆಯಿತು.

ಕತಾರ್, ಈಜಿಪ್ಟ್, ಅಮೆರಿಕ ಮಧ್ಯಸ್ಥಿಕೆಯಡಿ ಮಂಡಿಸಿದ ಒಪ್ಪಂದಕ್ಕೆ ಇಸ್ರೇಲ್‌ನ ಸಚಿವ ಸಂಪುಟ ಸಭೆಯಲ್ಲಿ 35–3 ಮತಗಳ ಬೆಂಬಲ ದೊರೆಯಿತು. ಆದರೆ, ಇದಕ್ಕೆ ಬಲಪಂಥೀಯವಾದ ಪ್ರತಿಪಾದಿಸುವ ಒಟ್ಜ್ಮಾ ಯೆಹುದಿತ್ ಪಕ್ಷದ ರಾಷ್ಟ್ರೀಯ ರಕ್ಷಣಾ ಸಚಿವ ಇಟಮಾರ್ ಬೆನ್ ಜಿವಿರ್ ತೀವ್ರವಾಗಿ ವಿರೋಧಿಸಿದರು. ಒಪ್ಪಂದಕ್ಕೆ ವಿರುದ್ಧವಾಗಿ ಅವರು ಮತ ಚಲಾಯಿಸಿದರು.

ಮೊದಲ ಹಂತದಲ್ಲಿ 50 ಮಹಿಳೆಯರು ಹಾಗೂ ಮಕ್ಕಳ ಬಿಡುಗಡೆ ಹೊರತುಪಡಿಸಿ ಹೆಚ್ಚುವರಿಯಾಗಿ 10 ಒತ್ತೆಯಾಳುಗಳ ಬಿಡುಗಡೆಗಾಗಿ ಮತ್ತೆ ಕದನ ವಿರಾಮ ವಿಸ್ತರಣೆಯಾಗಲಿದೆ ಎಂದು ಇಸ್ರೇಲ್ ಪ್ರಧಾನಿ ಕಚೇರಿ ಹೇಳಿದೆ. ಆದರೆ, ಇದಕ್ಕೆ ಬದಲಾಗಿ ಸೆರೆಯಲ್ಲಿರುವ ಪ್ಯಾಲೆಸ್ಟೀನ್‌ನ ಎಷ್ಟು ಜನರನ್ನು ಬಿಡುಗಡೆಗೊಳಿಸಲಾಗುತ್ತದೆ ಎಂಬ ಬಗ್ಗೆ ಮಾಹಿತಿ ನೀಡಿಲ್ಲ.

ಇಸ್ರೇಲ್ ಕಾನೂನಿನ ಅನ್ವಯ ಇಂತಹ ಒಪ್ಪಂದದ ಜಾರಿಗೂ ಮೊದಲು ಸಾರ್ವಜನಿಕರ ಅಭಿಪ್ರಾಯಕ್ಕೆ ಮಂಡಿಸಲಾಗುತ್ತದೆ. ಈ ಬಗ್ಗೆ ಅವರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ಅವಕಾಶವಿದೆ. ಯಾವುದೇ ಅಡೆತಡೆ ಇಲ್ಲದಿದ್ದರೆ ಅಂತಿಮವಾಗಿ ಸರ್ಕಾರ ಅನುಮೋದನೆ ನೀಡುತ್ತದೆ.

ಯುದ್ಧ ಸ್ಥಗಿತಗೊಳಿಸಲ್ಲ–ನೆತನ್ಯಾಹು: 'ಹಮಾಸ್ ನಿರ್ಮೂಲನೆಯೇ ನಮ್ಮ ಗುರಿ. ಅದಕ್ಕಾಗಿಯೇ ಯುದ್ಧ ನಡೆಸುತ್ತಿದ್ದೇವೆ. ಗುರಿ ಈಡೇರುವವರೆಗೂ ಯುದ್ಧ ಮುಂದುವರಿಯಲಿದೆ. ಒತ್ತೆಯಾಳುಗಳ ಸುರಕ್ಷಿತ ಬಿಡುಗಡೆಗಾಗಿ ಈಗ ಒಪ್ಪಂದಕ್ಕೆ ಆದ್ಯತೆ ನೀಡಿದ್ದೇವೆ' ಎಂದು ಇಸ್ರೇಲ್ ಪ್ರಧಾನಿ ನೆತನ್ಯಾಹು ಘೋಷಿಸಿದ್ದಾರೆ.



ಹಮಾಸ್ ಬಂಡುಕೋರರು 240 ಇಸ್ರೇಲಿಗರನ್ನು ಒತ್ತೆಯಾಳುಗಳಾಗಿಟ್ಟುಕೊಂಡಿದ್ದು, ಟೆಲ್‌ಅವೀವ್‌ನ ಗೋಡೆ ಮೇಲೆ ಅಂಟಿಸಿರುವ ಅವರ ಭಾವಚಿತ್ರಗಳ ಮುಂದೆ ಬುಧವಾರ ಯೋಧರೊಬ್ಬರು ನಡೆದುಹೋದರು ಎಎಫ್‌ಪಿ ಚಿತ್ರ

> **ಕದನ ವಿರಾಮ ಪ್ಯಾಲೆಸ್ಟೀನ್‌ನ ಸಾವಿರಾರು ಮುಗ್ಧ ಕುಟುಂಬಗಳಿಗೆ ಮಾನವೀಯ ನೆರವು ಕಲ್ಪಿಸಲು ಸಹಕಾರಿಯಾಗಲಿದೆ. ಈ ಕುರಿತು ಬದ್ಧತೆ ತೋರಿದ ನೆತನ್ಯಾಹು ನಡೆ ಅಭಿನಂದನೀಯ**
>
> **ಜೋ ಬೈಡನ್,** ಅಧ್ಯಕ್ಷ, ಅಮೆರಿಕ

ರಕ್ಷಣೆ ಕಾರ್ಯ ಕೊನೆ ಹಂತಕ್ಕೆ

ಒಂದನೇ ಪುಟದಿಂದ

ಸಿಲ್ಕ್ಯಾರಾದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಎನ್‌ಎಚ್‌ಐಡಿಸಿಎಲ್) ವ್ಯವಸ್ಥಾಪಕ ನಿರ್ದೇಶಕ ಮಹಮೂದ್ ಅಹಮದ್, 'ರಕ್ಷಣಾ ಕಾರ್ಯ ಮಹತ್ವದ ಘಟ್ಟ ತಲುಪಿದ್ದು, ಯಾವುದೇ ಅಡೆತಡೆ ಎದುರಾಗದಿದ್ದರೆ ಮತ್ತು ಇದೇ ವೇಗದಲ್ಲಿ ಸಾಗಿದರೆ ಶೀಘ್ರ ಒಳ್ಳೆಯ ಸುದ್ದಿ ಸಿಗಬಹುದು' ಎಂದು ಹೇಳಿದರು.

ಪರ್ಯಾಯ ಯೋಜನೆ ಬಗ್ಗೆ ಮಾತನಾಡಿದ ಅಹಮದ್, 'ಬಾರ್ಕೋಟ್ ಕಡೆಯಿಂದ ಅಡ್ಡವಾಗಿ ಸುರಂಗ ಕೊರೆಯುವ ಕೆಲಸ ಮಾಡು ತ್ತಿದ್ದೇವೆ. ಮೂರು ಸ್ಫೋಟ ನಡೆಸಲಾಗಿದೆ ಮತ್ತು ಈಗಾಗಲೇ ಆ ತುದಿಯಿಂದ ಎಂಟು ಮೀಟರ್ ಪ್ರವೇಶಿಸಿದ್ದೇವೆ. ಆದರೆ ಈ ಕಡೆಯಿಂದ ಸುರಂಗ ಕೊರೆದು, ಕಾರ್ಮಿಕರ ಬಳಿ ಹೋಗಲು ಹೆಚ್ಚು ಸಮಯ ಬೇಕು ಎಂದರು.

'ಕಾರ್ಮಿಕರಿಗೆ ಆಹಾರ ಮತ್ತು ಇತರ ಅಗತ್ಯ ವಸ್ತುಗಳನ್ನು ರವಾನಿಸಲು ಸೋಮವಾರ ಅಳವಡಿಸಿರುವ ಆರು ಇಂಚು ವ್ಯಾಸದ ಪೈಪ್ ಲೈನ್ 57 ಮೀಟರ್ ಉದ್ದವಾಗಿದೆ' ಎಂದು ಅಹಮದ್ ಹೇಳಿದರು.

ರಕ್ಷಣಾ ಕಾರ್ಯಾಚರಣೆ ನೋಡಲ್ ಅಧಿಕಾರಿ ನೀರಜ್ ಖೈರ್ವಾಲ್, 'ಆಹಾರ ಪೈಪ್ ಬಳಸಿ ಅವರೊಂದಿಗೆ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಆಡಿಯೊ ಸಂವಹನ ಸ್ಥಾಪಿಸಿವೆ' ಎಂದು ಹೇಳಿದರು.

'ಒಂದು ತಂತಿ, ಮೈಕ್ರೊಫೋನ್ ಮತ್ತು ಸ್ಪೀಕರ್ ಅನ್ನು ಕಾರ್ಮಿಕರು ಇರುವಲ್ಲಿಗೆ ಕಳುಹಿಸಲಾಗಿದೆ. ಕಳೆದ ಕೆಲವು ದಿನಗಳಿಂದ ಕಾರ್ಮಿಕರು ಸೀಮಿತ ಪ್ರಮಾಣದಲ್ಲಿ ಆಹಾರ ಸೇವಿಸುತ್ತಿರುವುದರಿಂದ ಮಲಬದ್ಧತೆ ಆಗಿದೆ ಎಂದು ಹೇಳಿದ್ದಾರೆ. ಅಗತ್ಯ ಔಷಧಿಗಳನ್ನು ಅವರಿಗೆ ಕಳುಹಿಸಲಾಗಿದೆ. ವೈದ್ಯರು ಅವರೊಂದಿಗೆ ಮಾತನಾಡಿದ್ದಾರೆ' ಎಂದು ಖೈರ್ವಾಲ್ ಹೇಳಿದರು.

ಈ ರೀತಿಯ ಸಂದರ್ಭಗಳಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳು ಸಹ ಎದುರಾಗಬಹುದು. ಮನೋವೈದ್ಯರು ಸಹ ಅವರೊಂದಿಗೆ ಮಾತನಾಡುತ್ತಾರೆ ಎಂದರು. ಕಾರ್ಮಿಕರಿಗೆ ಟವೆಲ್ ಮತ್ತು ಒಳ ಉಡುಪುಗಳಂತಹ ಇತರ ಅಗತ್ಯ ವಸ್ತುಗಳನ್ನು ಸಹ ಪೂರೈಸಲಾಗಿದೆ.

ಪಿಎಂಒ ಮಾಜಿ ಸಲಹೆಗಾರ ಭಾಸ್ಕರ್ ಖುಲ್ಬೆ, '45 ಮೀಟರ್‌ವರೆಗೆ ಪೈಪ್ ಅಳವಡಿಸಲಾಗಿದೆ' ಎಂದರು.

ಕಾರ್ಮಿಕರ ಸ್ಥಳಾಂತರಿಸುವ ಸಮಯದ ಬಗ್ಗೆ ಕೇಳಿದಾಗ, 'ನಾವು ಅವರೊಂದಿಗೆ ಬಗ್ವಾಲ್ ಆಚರಿಸುವ ವಿಶ್ವಾಸ ಹೊಂದಿದ್ದೇವೆ' ಎಂದು ಅವರು ಹೇಳಿದರು. ದೀಪಾವಳಿ ಬಳಿಕ ಗರ್ವಾಲ್ ಪ್ರದೇಶದಲ್ಲಿ ಈ ಹಬ್ಬ ಆಚರಿಸಲಾಗುತ್ತದೆ.

ಸುರಂಗ: ಪರಿಶೀಲನೆ

ನವದೆಹಲಿ: ಉತ್ತರಕಾಶಿಯ ಸುರಂಗದಲ್ಲಿ 41 ಕಾರ್ಮಿಕರು ಸಿಲುಕಿಕೊಂಡ ಪ್ರಕರಣದ ಬೆನ್ನಲ್ಲೇ, ದೇಶದಲ್ಲಿ ನಿರ್ಮಾಣ ಹಂತದಲ್ಲಿರುವ 29 ಸುರಂಗಗಳ ಸುರಕ್ಷತಾ ಪರಿಶೀಲನೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ತೀರ್ಮಾನಿಸಿದೆ.

ಸುರಂಗ ತಜ್ಞರ ತಂಡವು 79 ಕಿ.ಮೀ. ಉದ್ದದ ಎಲ್ಲ ಸುರಂಗಗಳ ಪರಿಶೀಲನೆ ನಡೆಸಲಿದೆ. ಈ ತಂಡವು ಏಳು ದಿನಗಳಲ್ಲಿ ವರದಿ ಸಲ್ಲಿಸಲಿದೆ. ಹಿಮಾಚಲ ಪ್ರದೇಶದಲ್ಲಿ 12, ಜಮ್ಮು ಮತ್ತು ಕಾಶ್ಮೀರದಲ್ಲಿ ಆರು, ಮಹಾರಾಷ್ಟ್ರ, ಒರಿಸ್ಸಾ, ರಾಜಸ್ಥಾನದಲ್ಲಿ ತಲಾ ಎರಡು, ಕರ್ನಾಟಕ, ಮಧ್ಯ ಪ್ರದೇಶ, ಛತ್ತೀಸಗಢ, ಉತ್ತರಾಖಂಡ ಹಾಗೂ ನವದೆಹಲಿಯಲ್ಲಿ ತಲಾ ಒಂದು ಸುರಂಗ ಇವೆ.

ಬಿಜೆಪಿ ಮುಖಂಡ ರವಿಶಂಕರ್ ಪ್ರಸಾದ್ ಹೇಳಿಕೆ

'ಪಾಪಕೃತ್ಯಕ್ಕೆ ಗಾಂಧಿ ಕುಟುಂಬ ಬೆಲೆ ತೆರಬೇಕು'

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್‌ಗೆ ಸೇರಿದ ಆಸ್ತಿಯನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮುಟ್ಟುಗೋಲು ಹಾಕಿಕೊಂಡಿರುವುದಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ಬಿಜೆಪಿ, 'ಗಾಂಧಿ ಕುಟುಂಬವು ತನ್ನ ಪಾಪ ಕೃತ್ಯಗಳಿಗೆ ಬೆಲೆ ತೆರಬೇಕು' ಎಂದು ಹೇಳಿದೆ.

ಗಾಂಧಿ ಕುಟುಂಬವು ನ್ಯಾಷನಲ್ ಹೆರಾಲ್ಡ್‌ಗೆ ಸೇರಿದ ಆಸ್ತಿಯನ್ನು ಖಾಸಗಿ ಆಸ್ತಿಯನ್ನಾಗಿ ಪರಿವರ್ತಿಸಿ, ಹಿಡಿದಿಟ್ಟುಕೊಂಡಿದೆ ಎಂದು ಬಿಜೆಪಿ ಮುಖಂಡ ರವಿ ಶಂಕರ್ ಪ್ರಸಾದ್ ಆರೋಪಿಸಿದರು. ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ಮುದ್ರಣ ಸ್ಥಗಿತಗೊಂಡಿದೆ. ಆದರೆ ಪತ್ರಿಕೆಯು ಆನ್‌ಲೈನ್ ಮೂಲಕ ಲಭ್ಯವಿದೆ.

ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಹಲವು ನಗರಗಳ ಪ್ರಮುಖ ಕಡೆಗಳಲ್ಲಿ ಆಸ್ತಿ ಇತ್ತು. ಕಾಂಗ್ರೆಸ್ ಮುಖಂಡರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಈ ಆಸ್ತಿಗಳನ್ನು, ಪತ್ರಿಕೆ ಮಾಲೀಕತ್ವ ಹೊಂದಿರುವ ಕಂಪನಿಯ ಷೇರುಗಳನ್ನಾಗಿಸಿದರು, ಅವುಗಳನ್ನು ತಾವು ಶೇ 76ರಷ್ಟು ಷೇರುಪಾಲು ಹೊಂದಿರುವ ಕಂಪನಿಗೆ ವರ್ಗಾವಣೆ ಮಾಡಿದರು ಎಂದು ಪ್ರಸಾದ್ ಅವರು ಸುದ್ದಿಗೋಷ್ಠಿಯಲ್ಲಿ ದೂರಿದರು.

ಸ್ವಾತಂತ್ರ್ಯ ಹೋರಾಟಕ್ಕೆ ಕಾಂಗ್ರೆಸ್ ಪಕ್ಷ ನೀಡಿದ ನಾಯಕತ್ವವನ್ನು ಗಾಂಧಿ ಕುಟುಂಬವು ತನ್ನದಾಗಿಸಿಕೊಂಡಿದ್ದಷ್ಟೇ ಅಲ್ಲದೆ, ಪಕ್ಷದ ಆಸ್ತಿಯನ್ನು ಕೂಡ ತನ್ನದಾಗಿಸಿಕೊಂಡಿತು ಎಂದು ಪ್ರಸಾದ್ ಆರೋಪಿಸಿದರು.

ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಸೋಲುವ ಭಯ ಬಿಜೆಪಿಗೆ ಇದೆ, ಹೀಗಾಗಿ ಇ.ಡಿ. ಅಧಿಕಾರಿಗಳು ಆಸ್ತಿ ಮುಟ್ಟುಗೋಲು ಹಾಕಿಕೊಂಡಿದ್ದಾರೆ ಎಂದು ಕಾಂಗ್ರೆಸ್ ಮಾಡಿರುವ ಆರೋಪವನ್ನು ಪ್ರಸಾದ್ ಅಲ್ಲಗಳೆದರು. ಚುನಾವಣೆಯಲ್ಲಿ ಕಾಂಗ್ರೆಸ್ ಸೋಲು ಕಾಣಲಿದೆ. ಅಲ್ಲದೆ, ನ್ಯಾಷನಲ್ ಹೆರಾಲ್ಡ್ ಪ್ರಕರಣದ ತನಿಖೆಯು ನರೇಂದ್ರ ಮೋದಿ ನೇತೃತ್ವದ ಸರ್ಕಾರ ರಚನೆಯಾಗುವ ಮೊದಲೇ ಆರಂಭವಾಗಿತ್ತು ಎಂದು ನೆನಪಿಸಿದರು.

ಹಣದ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ. ಅಧಿಕಾರಿಗಳು ನ್ಯಾಷನಲ್ ಹೆರಾಲ್ಡ್‌ಗೆ ಸೇರಿದ ₹751.9 ಕೋಟಿ ಮೌಲ್ಯದ ಆಸ್ತಿಗಳನ್ನು ಮಂಗಳವಾರ ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಅಸೋಸಿಯೇಟೆಡ್ ಜರ್ನಲ್ಸ್ ಲಿಮಿಟೆಡ್ (ಎಜೆಎಲ್) ಮತ್ತು ಕಾಂಗ್ರೆಸ್ ಪದಾಧಿಕಾರಿಗಳು ದೇಣಿಗೆ ನೀಡಿದವರಿಗೆ, ಷೇರುದಾರರಿಗೆ ವಂಚಿಸಿದ್ದಾರೆ ಎಂದು ಇ.ಡಿ. ಆರೋಪಿಸಿದೆ.

ಯುವಪಡೆಗೆ ಸರಣಿ ಜಯದ ಛಲ

ಟಿ20 ಸರಣಿಯ ಮೊದಲ ಪಂದ್ಯ ಇಂದು: ಆಸ್ಟ್ರೇಲಿಯಾಕ್ಕೆ ಸೂರ್ಯಕುಮಾರ್ ಬಳಗ ಸವಾಲು

ವಿಶಾಖಪಟ್ಟಣ (ಪಿಟಿಐ): ನಾಲ್ಕು ದಿನಗಳ ಹಿಂದಷ್ಟೇ ಅಹಮದಾಬಾದಿನಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಜಯಿಸಿ ಬೀಗಿದ್ದ ಆಸ್ಟ್ರೇಲಿಯಾ ತಂಡವು ಗುರುವಾರ ಆರಂಭವಾಗುವ ಭಾರತದ ಎದುರಿನ ಟ್ವೆಂಟಿ-20 ಸರಣಿಯ ಮೊದಲ ಪಂದ್ಯದಲ್ಲಿ ಕಣಕ್ಕಿಳಿಯಲಿದೆ. ಯುವಪ್ರತಿಭೆಗಳಿಗೆ ಇದು ಅಗ್ನಿಪರೀಕ್ಷೆಯಾಗಲಿದೆ.

ಉಭಯ ತಂಡಗಳಲ್ಲಿಯೂ ಕೆಲವು ಖ್ಯಾತನಾಮ ಆಟಗಾರರು ಇಲ್ಲ. ಯುವ ಆಟಗಾರರು ಹಣಾಹಣಿ ನಡೆಸಲಿದ್ದಾರೆ. ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ಭಾರತ ತಂಡದಲ್ಲಿದ್ದ ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್ ಮತ್ತು ಪ್ರಸಿದ್ಧಕೃಷ್ಣ ಅವರು ಇಲ್ಲಿ ಆಡಲಿದ್ದಾರೆ. ಐದು ಪಂದ್ಯಗಳ ಸರಣಿಯಲ್ಲಿ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್ ಹಾಗೂ ಹಾರ್ದಿಕ್ ಪಾಂಡ್ಯ ಅವರ ಗೈರುಹಾಜರಿಯಲ್ಲಿ ಸೂರ್ಯಕುಮಾರ್ ತಂಡವನ್ನು ಮುನ್ನಡೆಸಲಿದ್ದಾರೆ.

ಆಸ್ಟ್ರೇಲಿಯಾ ತಂಡವನ್ನು ಮ್ಯಾಥ್ಯೂ ವೇಡ್ ಮುನ್ನಡೆಸುವರು. ಫೈನಲ್ ಪಂದ್ಯದಲ್ಲಿ ಶತಕ ಹೊಡೆದು ಮಿಂಚಿದ್ದ ಟ್ರಾವಿಸ್ ಹೆಡ್, ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್, ವಿಕೆಟ್‌ಕೀಪರ್ ಜೋಶ್ ಇಂಗ್ಲಿಷ್, ಮಾರ್ಕಸ್ ಸ್ಟೋಯಿನಿಸ್ ಮತ್ತು ಆ್ಯಡಂ ಜಂಪಾ ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದರು. ಇವರನ್ನು ಬಿಟ್ಟು ಉಳಿದ ಆಟಗಾರರು ತವರಿಗೆ ಮರಳಿದ್ದಾರೆ. ಸೆಪ್ಟೆಂಬರ್‌ನಲ್ಲಿ ನಡೆದಿದ್ದ ಮೂರು ಏಕದಿನ ಪಂದ್ಯಗಳ ಸರಣಿಯಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದವು.



ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್

ಆ ಸರಣಿಯನ್ನು ಭಾರತ 2-1ರಿಂದ ಜಯಿಸಿತ್ತು.

ಇದೀಗ ಚುಟುಕು ಸರಣಿಯ ಸವಾಲು ಆತಿಥೇಯರ ಮುಂದಿದೆ. ಇನ್ನೂ ಆರು ತಿಂಗಳು ಕಳೆದರೆ ವೆಸ್ಟ್ ಇಂಡೀಸ್ -ಅಮೆರಿಕ ಜಂಟಿ ಆಶ್ರಯದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡಗಳ ಆಯ್ಕೆ ಪ್ರಕ್ರಿಯೆಯ ಆರಂಭವೂ ಈ ಸರಣಿ ಎನ್ನಲಾಗಿದೆ. ಆದ್ದರಿಂದ ಭಾರತದ ಯುವಪ್ರತಿಭೆಗಳಾದ ಯಶಸ್ವಿ ಜೈಸ್ವಾಲ್, ತಿಲಕ್ ವರ್ಮಾ, ರಿಂಕು ಸಿಂಗ್ ಮತ್ತು ವಿಕೆಟ್ ಕೀಪರ್ ಜಿತೇಶ್ ಶರ್ಮಾ ಅವರಿಗೆ ತಮ್ಮ ಸಾಮರ್ಥ್ಯವನ್ನು ತೋರಿಸಲು ಉತ್ತಮ ವೇದಿಕೆಯಾಗಿದೆ.

ತಂಡಗಳು

ಭಾರತ: ಸೂರ್ಯಕುಮಾರ್ ಯಾದವ್ (ನಾಯಕ), ಋತುರಾಜ್ ಗಾಯಕವಾಡ (ಉಪನಾಯಕ), ಇಶಾನ್ ಕಿಶನ್, ಯಶಸ್ವಿ ಜೈಸ್ವಾಲ್, ತಿಲಕ್ ವರ್ಮಾ, ರಿಂಕು ಸಿಂಗ್, ಜಿತೇಶ್ ಶರ್ಮ (ವಿಕೆಟ್‌ಕೀಪರ್), ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್, ಶಿವಂ ದುಬೆ, ರವಿ ಬಿಷ್ಣೋಯಿ, ಅರ್ಷದೀಪ್ ಸಿಂಗ್, ಪ್ರಸಿದ್ಧ ಕೃಷ್ಣ, ಆವೇಶ್ ಖಾನ್, ಮುಕೇಶ್ ಕುಮಾರ್.

ಆಸ್ಟ್ರೇಲಿಯಾ: ಮ್ಯಾಥ್ಯೂ ವೇಡ್ (ನಾಯಕ), ಆ್ಯರನ್ ಹಾರ್ಡೀ, ಜೇಸನ್ ಬೆಹ್ರೆನ್‌ಡಾರ್ಫ್, ಸೀನ್ ಅಬಾಟ್, ಟಿಮ್ ಡೇವಿಡ್, ನೇಥನ್ ಎಲಿಸ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಷ್, ಗ್ಲೆನ್ ಮ್ಯಾಕ್ಸ್‌ವೆಲ್, ತನ್ವೀರ್ ಸಂಘಾ, ಮ್ಯಾಥ್ಯೂ ಶಾರ್ಟ್, ಸ್ಟೀವ್ ಸ್ಮಿತ್, ಮಾರ್ಕಸ್ ಸ್ಟೊಯಿನಿಸ್, ಕೇನ್ ರಿಚರ್ಡ್ಸನ್, ಆ್ಯಡಂ ಜಂಪಾ.

ಪಂದ್ಯ ಆರಂಭ: ರಾತ್ರಿ 7

ನೇರಪ್ರಸಾರ: ಸ್ಪೋರ್ಟ್ಸ್ 18

ಏಕದಿನ ಮಾದರಿಯಲ್ಲಿ ಬ್ಯಾಟಿಂಗ್‌ನಲ್ಲಿ ಸತತ ವೈಫಲ್ಯ ಅನುಭವಿಸಿರುವ ಸೂರ್ಯಕುಮಾರ್‌ಗೆ ಇದು ತಮ್ಮ ಆಟದ ಜೊತೆಗೆ ನಾಯಕತ್ವದ ಕೌಶಲ ತೋರಿಸುವ ವೇದಿಕೆಯಾಗಿದೆ. ಅಲ್ಲದೇ ಅವರು ಭವಿಷ್ಯದಲ್ಲಿ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಉಳಿಸಿಕೊಳ್ಳುವಂತಹ ಆಟವನ್ನು ಇಲ್ಲಿ ತೋರಬೇಕಾದ ಒತ್ತಡವಿದೆ. ಉಳಿದಂತೆ ತಂಡವು ಸಮತೋಲನದಿಂದ ಕೂಡಿದೆ. ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತ ನಾಯಕ ಋತುರಾಜ್ ಗಾಯಕವಾಡ ಮತ್ತು ಯಶಸ್ವಿ ಜೈಸ್ವಾಲ್ ಇನಿಂಗ್ಸ್ ಆರಂಭಿಸುವುದು ಬಹುತೇಕ ಖಚಿತ. ಇಶಾನ್, ವರ್ಮಾ, ರಿಂಕು ಮತ್ತು ಸೂರ್ಯ ಮಧ್ಯಮ ಕ್ರಮಾಂಕದ ಶಕ್ತಿಯಾಗಿದ್ದಾರೆ. ಸ್ಪಿನ್-ಆಲ್‌ರೌಂಡರ್‌ಗಳಾದ ವಾಷಿಂಗ್ಟನ್ ಸುಂದರ್ ಮತ್ತು ಅಕ್ಷರ್ ಪಟೇಲ್ ಪಂದ್ಯ ಗೆಲ್ಲಿಸಿಕೊಡಬಲ್ಲ ಸಮರ್ಥ ಆಟಗಾರರಾಗಿದ್ದಾರೆ.



ಆಸ್ಟ್ರೇಲಿಯಾ ತಂಡದ ನಾಯಕ ಮ್ಯಾಥ್ಯೂ ವೇಡ್ –ಎಎಫ್‌ಪಿ ಚಿತ್ರ

ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ತಂಡವೂ ತನ್ನ ಸಂಪೂರ್ಣ ಸಾಮರ್ಥ್ಯ ವಿನಿಯೋಗಿಸಿ, ಸರಣಿ ಗೆಲುವಿನೊಂದಿಗೆ ಸ್ವದೇಶಕ್ಕೆ ಮರಳುವ ಛಲದಲ್ಲಿದೆ.

ತಿರುವನಂತಪುರ (ನ.26), ಗುವಾಹಟಿ (ನ.28), ರಾಯಪುರ (ಡಿ 1) ಮತ್ತು ಬೆಂಗಳೂರು (ಡಿ 3) ನಗರಗಳಲ್ಲಿ ಪಂದ್ಯಗಳು ನಡೆಯಲಿವೆ.

ಟೆನಿಸ್: ಶ್ರೇಯಾಂಕಿತ ಆಟಗಾರ್ತಿಯರ ಮುನ್ನಡೆ

ಪ್ರಿ ಕ್ವಾರ್ಟರ್‌ಗೆ ರುತುಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊದಲ ಮೂರು ಶ್ರೇಯಾಂಕಿತ ಆಟಗಾರ್ತಿಯರು ಇಲ್ಲಿ ನಡೆಯುತ್ತಿರುವ ಐಟಿಎಫ್ ಮಹಿಳಾ ವಿಶ್ವ ಟೂರ್ ಟೆನಿಸ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಬೌರಿಂಗ್ ಇನ್‌ಸ್ಟಿಟ್ಯೂಟ್ ಕೋರ್ಟ್‌ನಲ್ಲಿ ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಮೂರನೇ ಶ್ರೇಯಾಂಕದ ರುತುಜಾ 6-4, 7-5 ರಿಂದ ಸ್ಮೃತಿ ಭಸೀನ್ ಅವರನ್ನು ಮಣಿಸಿದರು. ಜ್ವರದಿಂದ ಬಳಲುತ್ತಿದ್ದರೂ ಅದನ್ನು ಲೆಕ್ಕಿಸದೆ ಆಡಿದ ರುತುಜಾ, ಎದುರಾಳಿ ಒಡ್ಡಿದ ಸ್ಫೂರ್ತಿಯುತ ಸವಾಲನ್ನು ಮೆಟ್ಟಿನಿಂತರು.

ಎರಡನೇ ಸೆಟ್‌ನಲ್ಲಿ ಜಿದ್ದಾಜಿದ್ದಿನ ಪೈಪೋಟಿ ನಡೆಯಿತು. 20 ವರ್ಷದ ಸ್ಮೃತಿ ಅವರು 1-3 ರಿಂದ ಹಿನ್ನಡೆಯಲ್ಲಿದ್ದರೂ ಅನುಭವಿ ಎದುರಾಳಿಗೆ ತಕ್ಕ ಪೈಪೋಟಿ ಒಡ್ಡಿ 5-5 ರಲ್ಲಿ ಸಮಬಲ ಸಾಧಿಸಿದರು. ಈ ವೇಳೆ ಎಚ್ಚರಿಕೆಯ ಆಟವಾಡಿದ 27 ವರ್ಷದ ರುತುಜಾ ಬಳಿಕದ ಎರಡೂ ಗೇಮ್‌ಗಳನ್ನು ಗೆದ್ದುಕೊಂಡು ಮುಂದಿನ ಸುತ್ತು ಪ್ರವೇಶಿಸಿದರು.

ಅಗ್ರಶ್ರೇಯಾಂಕದ ಆಟಗಾರ್ತಿ ಉಜ್ಬೇಕಿಸ್ತಾನದ ನಿಗಿನಾ ಅಬ್ದುರೈಮೋವಾ 6-2, 6-3 ರಿಂದ ಏಕ್ತರಿನಾ ಯಶಿನಾ ಅವರನ್ನು ಸುಲಭವಾಗಿ ಮಣಿಸಿದರು. ವಿಶ್ವ ಕ್ರಮಾಂಕದಲ್ಲಿ 244 ನೇ ಸ್ಥಾನದಲ್ಲಿರುವ ಆಟಗಾರ್ತಿ, ಶಕ್ತಿಶಾಲಿ ಗ್ರೌಂಡ್‌ಸ್ಟ್ರೋಕ್‌ಗಳು ಮತ್ತು ಡ್ರಾಪ್ ಶಾಟ್‌ಗಳ ಮೂಲಕ ಎದುರಾಳಿಯನ್ನು ಕಾಡಿದರು.



ಥಾಯ್ಲೆಂಡ್‌ನ ಲನ್ಲನಾ ತರಾರುದಿ ಅವರು ಶರ್ಮದಾ ಅವರಿಗೆ ಚೆಂಡನ್ನು ರಿಟರ್ನ್ ಮಾಡಲು ಮುಂದಾದರು –ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಎರಡನೇ ಶ್ರೇಯಾಂಕಿತೆ ಥಾಯ್ಲೆಂಡ್‌ನ ಲನ್ಲನಾ ತರಾರುದಿ 6-0, 6-1 ರಿಂದ ಕರ್ನಾಟಕದ ಶರ್ಮದಾ ಬಾಲು ಅವರ ವಿರುದ್ಧ ಸುಲಭ ಜಯ ಸಾಧಿಸಿದರು. ಮೊದಲ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಪ್ರಾಂಜಲಾ ಯಡ್ಲಪಳ್ಳಿ 6-1, 6-0 ರಿಂದ ವಂಶಿತಾ ಪಠಾನಿಯಾ ಅವರನ್ನು ಸೋಲಿಸಿದರು.

ಇತರ ಪಂದ್ಯಗಳಲ್ಲಿ ಝಿಬೆಕ್ ಕುಲಂಬಯೇವಾ 6-4, 6-3 ರಿಂದ ತನಿಷಾ ಕಶ್ಯಪ್ ವಿರುದ್ಧ; ಥಾಯ್ಲೆಂಡ್‌ನ ಪುನ್ನಿನ್ ಕೋವಪಿಟುಕ್ತೆಡ್ 6-0, 6-1 ರಿಂದ ಸೌಮ್ಯಾ ವಿಜ್ ವಿರುದ್ಧ; ಝೀಲ್ ದೇಸಾಯಿ 6-1, 6-1 ರಿಂದ ಅರುಣ್‌ಕುಮಾರ್ ಲಕ್ಷ್ಮಿ ಪ್ರಭಾ ವಿರುದ್ಧ; ಜರ್ಮನಿಯ ಆಂಟೋನಿಯಾ ಶ್ಮಿತ್ 6-3, 6-3 ರಿಂದ ಕುಂಡಲಿ ಮಜ್‌ಗೈನ್ ವಿರುದ್ಧವೂ ಗೆದ್ದರು.

ಸರ್ಬಿಯದ ಎದುರಾಳಿ ತಮಾರ ಕುರೊವಿಚ್ ಅರ್ಧದಲ್ಲೇ ಪಂದ್ಯ ತ್ಯಜಿಸಿದ ಕಾರಣ ಪೂಜಾ ಇಂಗಳೆ ಅವರು 16ರ ಘಟ್ಟ ಪ್ರವೇಶಿಸಿದರು. ಉತ್ತಮ ಆರಂಭ ಪಡೆದಿದ್ದ ಪೂಜಾ 4-1 ರಲ್ಲಿ ಮೇಲುಗೈ ಸಾಧಿಸಿದ್ದಾಗ ತಮಾರ ಹಿಂದೆ ಸರಿದರು.

ಮುಖ್ಯಾಂಶಗಳು

- ಸ್ಮೃತಿ ಭಸೀನ್ ವಿರುದ್ಧ ರುತುಜಾಗೆ 6-4, 7-5 ರಿಂದ ಗೆಲುವು
- ಅಗ್ರಶ್ರೇಯಾಂಕದ ಆಟಗಾರ್ತಿ ಉಜ್ಬೇಕಿಸ್ತಾನದ ನಿಗಿನಾಗೆ ಮುನ್ನಡೆ

ಐಪಿಎಲ್: ಡೆಲ್ಲಿಯಿಂದ ಮನೀಷ್ ಪಾಂಡೆ ಬಿಡುಗಡೆ

ಲಖನೌ ತಂಡಕ್ಕೆ ದೇವದತ್ತ ಪಡಿಕ್ಕಲ್

ನವದೆಹಲಿ (ಪಿಟಿಐ): ಕರ್ನಾಟಕದ ದೇವದತ್ತ ಪಡಿಕ್ಕಲ್ ಅವರು ಮುಂಬರುವ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಪ್ರತಿನಿಧಿಸಲಿದ್ದಾರೆ. ಕರ್ನಾಟಕದ ಮತ್ತೊಬ್ಬ ಆಟಗಾರ ಮನೀಷ್ ಪಾಂಡೆ ಅವರನ್ನು ಡೆಲ್ಲಿ ಕ್ಯಾಪಿಟಲ್ಸ್ ತಂಡವು ಬಿಡುಗಡೆ ಮಾಡಿದೆ.

ಅವರ ಬದಲಿಗೆ ವೇಗದ ಬೌಲರ್ ಆವೇಶ್ ಖಾನ್ ಅವರು ಲಖನೌ ತಂಡದಿಂದ ರಾಜಸ್ಥಾನ ರಾಯಲ್ಸ್ ತಂಡಕ್ಕೆ ಸೇರ್ಪಡೆಯಾಗಿದ್ದಾರೆ. ಡಿಸೆಂಬರ್ ತಿಂಗಳಿನಲ್ಲಿ ನಡೆಯಲಿರುವ ಮಿನಿ ಹರಾಜಿಗೂ ಮುನ್ನ ಫ್ರ್ಯಾಂಚೈಸಿಗಳಿಗೆ ನೀಡಲಾಗಿರುವ ಆಟಗಾರರ ಟ್ರೇಡ್ ವಿಂಡೋ ಮತ್ತು ಬಿಡುಗಡೆ ಪ್ರಕ್ರಿಯೆಯಡಿ ಈ ವಿನಿಮಯ ನಡೆದಿದೆ.

ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ತಂಡಕ್ಕೆ ಆರಂಭಿಕ ಬ್ಯಾಟರ್ ದೇವದತ್ತ ಸೇರ್ಪಡೆಯಾಗಿದ್ದಾರೆ. ರಾಜಸ್ಥಾನ ತಂಡವು ಅವರನ್ನು ಈ ಹಿಂದೆ ₹ 7.75 ಕೋಟಿಗೆ ಖರೀದಿಸಿತ್ತು. ಅದಕ್ಕೂ ಮುನ್ನ ಅವರು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿದ್ದರು. ಐಪಿಎಲ್‌ನಲ್ಲಿ ಒಟ್ಟು 57 ಪಂದ್ಯಗಳನ್ನು ಆಡಿರುವ ಅವರು 1521 ರನ್ ಗಳಿಸಿದ್ದಾರೆ. ಅದರಲ್ಲಿ ಒಂದು ಶತಕ ಮತ್ತು ಒಂಬತ್ತು ಅರ್ಧಶತಕಗಳಿವೆ.



ದೇವದತ್ತ ಪಡಿಕ್ಕಲ್

2022ರಲ್ಲಿ ನಡೆದಿದ್ದ ಮೆಗಾ ಹರಾಜು ಪ್ರಕ್ರಿಯೆಯಲ್ಲಿ ಲಖನೌ ತಂಡವು ಆವೇಶ್ ಅವರನ್ನು ₹ 10 ಕೋಟಿಗೆ ಖರೀದಿಸಿತ್ತು.

ಐಪಿಎಲ್‌ನಲ್ಲಿ 47 ಪಂದ್ಯಗಳನ್ನು ಆಡಿರುವ ಅವರು 55 ವಿಕೆಟ್ ಗಳಿಸಿದ್ದಾರೆ.

ಕಳೆದ ಕೆಲವು ಪಂದ್ಯಗಳಲ್ಲಿ ಲಯ ಕಳೆದುಕೊಂಡಿದ್ದ ಬ್ಯಾಟರ್ ಸರ್ಫರಾಜ್ ಖಾನ್ ಮತ್ತು ಮನೀಷ್ ಪಂಡೆ ಅವರಿಬ್ಬರನ್ನೂ ಡೆಲ್ಲಿ ತಂಡವು ಬಿಡುಗಡೆ ಮಾಡಿದೆ. ಪಾಂಡೆ ಅವರು ₹ 2.40 ಕೋಟಿ ಮತ್ತು ಖಾನ್ ಅವರಿಗೆ ₹ 20 ಲಕ್ಷ ನೀಡಲಾಗಿತ್ತು.

ಮೆಂಟರ್ ಆಗಿ ಕೆಕೆಆರ್ ತಂಡಕ್ಕೆ ಮರಳಿದ ಗಂಭೀರ್

ಕೋಲ್ಕತ್ತ (ಪಿಟಿಐ): ಗೌತಮ್ ಗಂಭೀರ್ ಅವರು ಶಾರೂಖ್ ಖಾನ್ ಒಡೆತನದ ಕೋಲ್ಕತ್ತ ನೈಟ್ ರೈಡರ್ಸ್ ತಂಡಕ್ಕೆ 'ಮೆಂಟರ್' ಆಗಿ ಮರಳಿದ್ದಾರೆ. ಈ ಹಿಂದೆ ಕೋಲ್ಕತ್ತದ ತಂಡ ಅವರ ನಾಯಕತ್ವದಡಿ ಎರಡು ಬಾರಿ (2012, 2014) ಚಾಂಪಿಯನ್ ಆಗಿತ್ತು.

ಭಾರತದ ಟಿ20 ಮತ್ತು ಏಕದಿನ ವಿಶ್ವಕಪ್ ವಿಜಯಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಗಂಭೀರ್ 2011 ರಿಂದ 2017ರವರೆಗೆ ಕೋಲ್ಕತ್ತದ ಐಪಿಎಲ್ ತಂಡಕ್ಕೆ ನಾಯಕರಾಗಿದ್ದರು. ಕಳೆದ ಎರಡು ವರ್ಷಗಳಿಂದ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಮೆಂಟರ್ ಆಗಿ ಕಾರ್ಯನಿರ್ವಹಿಸಿದ್ದರು.

ಅವರ ಮಾರ್ಗದರ್ಶನದಡಿ ಲಖನೌ ಎರಡು ಬಾರಿ ಪ್ಲೇ ಆಫ್ ಹಂತಕ್ಕೆ ತಲುಪಿದ್ದರೂ, ಅದರಿಂದ ಮುಂದಕ್ಕೆ ಹೋಗಿರಲಿಲ್ಲ.

ಟಿ20 ಕ್ರಿಕೆಟ್‌ನಿಂದ ದೂರ ಉಳಿಯಲು ರೋಹಿತ್ ನಿರ್ಧಾರ

ನವದೆಹಲಿ (ಪಿಟಿಐ): ಏಕದಿನ ಮತ್ತು ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತ ತಂಡದ ನಾಯಕರಾಗಿರುವ ರೋಹಿತ್ ಶರ್ಮಾ ಅವರು ಮುಂಬರುವ ದಿನಗಳಲ್ಲಿ ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಿಂದ ಹೊರಗುಳಿಯುವ ಸಾಧ್ಯತೆ ದಟ್ಟವಾಗಿದೆ.

2022ರ ನವೆಂಬರ್‌ನಲ್ಲಿ ಟಿ20 ವಿಶ್ವಕಪ್ ಸೆಮಿಫೈನಲ್‌ನಲ್ಲಿ ತಂಡವು ಸೋತಿತ್ತು. ಆಗಿನಿಂದ ಇದುವರೆಗೆ ಅವರು ಚುಟುಕು ಮಾದರಿಯಲ್ಲಿ ಆಡಿಲ್ಲ.

36 ವರ್ಷದ ರೋಹಿತ್, 148 ಚುಟುಕು ಪಂದ್ಯಗಳನ್ನು ಆಡಿದ್ದಾರೆ. 3853 ರನ್ ಗಳಿಸಿದ್ದಾರೆ. ನಾಲ್ಕು ಶತಕಗಳು ಅದರಲ್ಲಿ ಸೇರಿವೆ.

'ಇದೇನೂ ಹೊಸ ಬೆಳವಣಿಗೆ ಅಲ್ಲ. ಕಳೆದ ಒಂದು ವರ್ಷದಿಂದ ಅವರು ಟಿ20 ಕ್ರಿಕೆಟ್ ಆಡಿಲ್ಲ. ಅವರು ಏಕದಿನ ವಿಶ್ವಕಪ್ ಟೂರ್ನಿಯ ಮೇಲೆ ಹೆಚ್ಚು ಗಮನ ಕೇಂದ್ರಿಕರಿಸಿದ್ದರು. ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರೊಂದಿಗೆ ಈ ಕುರಿತು ಸುದೀರ್ಘ ಚರ್ಚೆ ನಡೆಸಿದ್ದರು. ಟಿ20ಯಿಂದ ದೂರವಿರುವ ನಿರ್ಧಾರವನ್ನು ತಿಳಿಸಿದ್ದಾರೆ. ಇದು ಅವರದ್ದೇ ನಿರ್ಧಾರವಾಗಿದೆ' ಎಂದು ಬಿಸಿಸಿಐ ಮೂಲಗಳು ಖಚಿತಪಡಿಸಿವೆ.

ರೋಹಿತ್ ಜಾಗದಲ್ಲಿ ಗಿಲ್, ಯಶಸ್ವಿ ಜೈಸ್ವಾಲ್, ಇಶಾನ್ ಕಿಶನ್ ಮತ್ತು ಋತುರಾಜ್ ಅವರು ಆರಂಭಿಕ ಬ್ಯಾಟರ್‌ಗಳಾಗಲು ಸ್ಪರ್ಧೆಯಲ್ಲಿದ್ದಾರೆ.

ಬ್ರೆಜಿಲ್ ಮಣಿಸಿದ ಅರ್ಜೆಂಟೀನಾ

ರಿಯೊ ಡಿ ಜನೈರೊ (ಎಎಫ್‌ಪಿ): ಹಿರಿಯ ಡಿಫೆಂಡರ್ ನಿಕೊಲಸ್ ಒಟಮೆಂಡಿ ಗಳಿಸಿದ ಗೋಲಿನ ನೆರವಿನಿಂದ ಅರ್ಜೆಂಟೀನಾ ತಂಡ ಫಿಫಾ ವಿಶ್ವಕಪ್ ಫುಟ್‌ಬಾಲ್ ಕ್ವಾಲಿಫೈರ್ ಪಂದ್ಯದಲ್ಲಿ 1-0 ಗೋಲಿನಿಂದ 'ಬದ್ಧ ಎದುರಾಳಿ' ಬ್ರೆಜಿಲ್ ತಂಡವನ್ನು ಮಣಿಸಿತು.

ಮರಕಾನಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದ 63ನೇ ನಿಮಿಷದಲ್ಲಿ ಗೆಲುವಿನ ಗೋಲು ದಾಖಲಾಯಿತು. ಕಳೆದ ವಾರ ಉರುಗ್ವೆ ಕೈಯಲ್ಲಿ ಸೋತಿದ್ದ ವಿಶ್ವಚಾಂಪಿಯನ್ನರು ಪುಟಿದೆದ್ದು ನಿಲ್ಲುವಲ್ಲಿ ಯಶಸ್ವಿಯಾದರು.

ಈ ಗೆಲುವಿನ ಮೂಲಕ ಅರ್ಜೆಂಟೀನಾ ತಂಡ ಒಟ್ಟು 15 ಪಾಯಿಂಟ್ಸ್‌ಗಳೊಂದಿಗೆ ದಕ್ಷಿಣ ಅಮೆರಿಕ ವಲಯದ ಕ್ವಾಲಿಫೈರ್‌ನಲ್ಲಿ ಅಗ್ರಸ್ಥಾನದಲ್ಲಿದೆ. ಆರು ಪಂದ್ಯಗಳನ್ನು ಆಡಿರುವ ಬ್ರೆಜಿಲ್ ಏಳು ಪಾಯಿಂಟ್ಸ್‌ಗಳೊಂದಿಗೆ ಆರನೇ ಸ್ಥಾನದಲ್ಲಿದೆ. ಐದು ಬಾರಿಯ ಚಾಂಪಿಯನ್ ಬ್ರೆಜಿಲ್ ತಂಡಕ್ಕೆ ಎದುರಾದ ಮೂರನೇ ಸೋಲು ಇದು.

ಪ್ರೇಕ್ಷಕರ ಹೊಡೆದಾಟ: ಪಂದ್ಯದ ಆರಂಭಕ್ಕೂ ಮುನ್ನ ಬ್ರೆಜಿಲ್ ಮತ್ತು ಅರ್ಜೆಂಟೀನಾ ತಂಡಗಳ ಅಭಿಮಾನಿಗಳ ಮಧ್ಯೆ ಹೊಡೆದಾಟ ನಡೆಯಿತು. ಇದರಿಂದ ಪಂದ್ಯ 30 ನಿಮಿಷ ತಡವಾಗಿ ಆರಂಭವಾಯಿತು. ಬ್ರೆಜಿಲ್ ಪೊಲೀಸರು ಅರ್ಜೆಂಟೀನಾ ಅಭಿಮಾನಿಗಳ ಮೇಲೆ ಲಾಠಿ ಪ್ರಹಾರ ನಡೆಸಿದ್ದು ಕಂಡುಬಂತು. ಲಯೊನೆಲ್ ಮೆಸ್ಸಿ ಒಳಗೊಂಡಂತೆ ಅರ್ಜೆಂಟೀನಾ ಆಟಗಾರರು ಅಭಿಮಾನಿಗಳಲ್ಲಿ ಶಾಂತವಾಗಿರುವಂತೆ ಮನವಿ ಮಾಡಿದರು.

ತಮ್ಮ ತಂಡದ ಬೆಂಬಲಿಗರ ಮೇಲೆ ಬಲ ಪ್ರಯೋಗಿಸಿದ್ದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಅರ್ಜೆಂಟೀನಾ ತಂಡದ ಗೋಲ್‌ಕೀಪರ್ ಎಮಿಲಿಯಾನೊ ಮಾರ್ಟಿನೆಜ್, ಬ್ಯಾರಿಕೇಡ್ ದಾಟಿ ಪೊಲೀಸರತ್ತ ನುಗ್ಗಲು ಪ್ರಯತ್ನಿಸಿದ ಘಟನೆಯೂ ನಡೆಯಿತು.



ಅರ್ಜೆಂಟೀನಾ ತಂಡದ ಅಭಿಮಾನಿಗಳು ಮತ್ತು ಬ್ರೆಜಿಲ್ ಪೊಲೀಸರ ನಡುವಿನ ಜಟಾಪಟಿ –ಎಎಫ್‌ಪಿ ಚಿತ್ರ

ರ‍್ಯಾಂಕಿಂಗ್: ಮೂರನೇ ಸ್ಥಾನಕ್ಕೆ ವಿರಾಟ್ ಕೊಹ್ಲಿ

ದುಬೈ (ಪಿಟಿಐ): ಕಳೆದ ಭಾನುವಾರ ಮಕ್ತಾಯಗೊಂಡ ಏಕದಿನ ವಿಶ್ವಕಪ್‌ನಲ್ಲಿ ಗರಿಷ್ಠ ರನ್ ಗಳಿಸಿದ್ದ ವಿರಾಟ್ ಕೊಹ್ಲಿ ಅವರು ಐಸಿಸಿಯ ತಾಜಾ ರ‍್ಯಾಂಕಿಂಗ್ ಪಟ್ಟಿಯಲ್ಲಿ ಒಂದು ಸ್ಥಾನ ಬಡ್ತಿ ಪಡೆದು ಮೂರನೇ ಸ್ಥಾನಕ್ಕೆ ಏರಿದ್ದಾರೆ. ಆರಂಭ ಆಟಗಾರ ಶುಭಮನ್ ಗಿಲ್ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ವಿಶ್ವಕಪ್‌ನಲ್ಲಿ ಒಟ್ಟು 765 ರನ್ ಕಲೆಹಾಕಿದ್ದ ಕೊಹ್ಲಿ 791 ರ‍್ಯಾಂಕಿಂಗ್ ಪಾಯಿಂಟ್ ಗಳಿಸಿದ್ದಾರೆ. ಗಿಲ್ 826 ಪಾಯಿಂಟ್ಸ್ ಗಳಿಸಿದ್ದಾರೆ. ಪಾಕಿಸ್ತಾನ ತಂಡದ ಮಾಜಿ ನಾಯಕ ಬಾಬರ್ ಆಜಂ (824 ಪಾಯಿಂಟ್ಸ್) ಎರಡನೇ ಸ್ಥಾನದಲ್ಲಿದ್ದಾರೆ.

ವಿಶ್ವಕಪ್‌ನಲ್ಲಿ 597 ರನ್ ಕಲೆಹಾಕಿ ಉತ್ತಮ ಪ್ರದರ್ಶನ ನೀಡಿದ್ದ ರೋಹಿತ್ ಶರ್ಮಾ ಅವರೂ ರ‍್ಯಾಂಕಿಂಗ್‌ನಲ್ಲಿ ಬಡ್ತಿ ಪಡೆದಿದ್ದು ನಾಲ್ಕನೇ ಸ್ಥಾನಕ್ಕೆ (769 ಪಾಯಿಂಟ್ಸ್) ಏರಿದ್ದಾರೆ.

ಶ್ರೀಕಾಂತ್, ಸೇನ್ ನಿರ್ಗಮನ

ಶೆನ್‌ಝೆನ್ (ಪಿಟಿಐ): ಭಾರತದ ಪ್ರಮುಖ ಆಟಗಾರರಾದ ಲಕ್ಷ್ಯ ಸೇನ್ ಮತ್ತು ಕಿದಂಬಿ ಶ್ರೀಕಾಂತ್ ಅವರು ಋತುವಿನ ಕೊನೆಯ ಬಿಡಬ್ಲ್ಯುಎಫ್ ಸೂಪರ್ 750 ಸರಣಿಯಾದ ಚೀನಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲೇ ಸೋಲನುಭವಿಸಿದರು.

ವಿಶ್ವ ಕ್ರಮಾಂಕದಲ್ಲಿ 17ನೇ ಸ್ಥಾನದಲ್ಲಿರುವ ಲಕ್ಷ್ಯ ಸೇನ್ ಬುಧವಾರ ನಡೆದ ಪಂದ್ಯದಲ್ಲಿ 19-21, 18-21 ರಲ್ಲಿ ಏಳನೆ ಶ್ರೇಯಾಂಕದ ಷಿ ಯುಕಿ (ಚೀನಾ) ಅವರಿಗೆ ಮಣಿದರು. ವಿಶ್ವ ಕ್ರಮಾಂಕದಲ್ಲಿ 24ನೇ ಸ್ಥಾನದಲ್ಲಿರುವ ಶ್ರೀಕಾಂತ್ ಮೂರು ಗೇಮ್‌ಗಳ ಸೆಣಸಾಟದಲ್ಲಿ 15-21, 21-14, 13-21 ರಲ್ಲಿ ವಿಶ್ವ ಚಾಂಪಿಯನ್ ಕುನ್ಲಾವುತ್ ವಿಟಿಡ್‌ಸರ್ನ್ (ಥಾಯ್ಲೆಂಡ್) ಎದುರು ಪರಾಭವಗೊಂಡರು.

ಯುವ ಆಟಗಾರ ಪ್ರಿಯಾಂಶು ರಾಜಾವತ್ ಅವರೂ ಮೊದಲ ಸುತ್ತನ್ನು ದಾಟಲಾಗಲಿಲ್ಲ. ಜಪಾನ್‌ನ ಕೆಂಟಾ ನಿಶಿಮೊಟೊ ಅವರು 46 ನಿಮಿಷಗಳ ಕಾಲ ನಡೆದ ಪಂದ್ಯದಲ್ಲಿ ಪ್ರಿಯಾಂಶು ಅವರನ್ನು 17-21, 14-21 ರಿಂದ ಸೋಲಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಋತುಪರ್ಣ ಪಾಂಡಾ -ಶ್ವೇತಪರ್ಣ ಪಾಂಡಾ ಜೋಡಿ 15-21, 9-21 ರಿಂದ ಚೀನಾದ ಝಾಂಗ್ ಶು ಕ್ಸಿಯಾನ್- ಝೆಂಗ್ ಯು ಕೈಯಲ್ಲಿ ಪರಾಭವಗೊಂಡಿತು.

ಮುಂಬೈ ರೇಸ್

ಜೋಕ್ವಿನ್ ಗೆಲ್ಲುವ ನಿರೀಕ್ಷೆ

ರಾಯಲ್ ಕೋಲ್ಕತ್ತ ಟರ್ಫ್ ಕ್ಲಬ್ ಟ್ರೋಫಿ ಗುರುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜೋಕ್ವಿನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡೆಮೊಕ್ರಸಿ 1, ನ್ಯೂಡೈಮನ್ಷನ್ 3, ಮೈಟಿ ಥಂಡರ್ 5

2ನೇ ರೇಸ್: ಜುಕ್ಕಾರೊ 1, ಕಿಮಿಕೊ 2, ಚೆವೆನಿಕ್ಸ್ ಟ್ರೆಂಚ್ 6

3ನೇ ರೇಸ್: ಕಾರ್ಡೆಲಿಯಾ 10, ಗೋಲ್ಡನ್ ಗ್ಲೋ 8, ಬಿಲೀವ್ 1

4ನೇ ರೇಸ್: ಜೋಕ್ವಿನ್ 1, ದಿ ಪ್ರೊಟೆಕ್ಟರ್ 3, ಸ್ಪೈಫಾಲ್ 2

5ನೇ ರೇಸ್: ಫ್ಯಾಷನ್ ಐಕಾನ್ 1, ಡ್ಯಾಗರ್ಸ್ ಸ್ಟ್ರೈಕ್ 4, ಬಿಟ್ವೀನ್ ಫ್ರೆಂಡ್ಸ್ 5

6ನೇ ರೇಸ್: ಡೌಸಾಬೆಲ್ 6, ಜ್ಯೂಕೋರ್ 2, ಫಿಡಾಟೊ 1

ಉತ್ತಮ ಬೆಟ್: ಜುಕ್ಕಾರೊ

ಜಾಕ್‌ಪಾಟ್ 2,3,,4,5,6 ಟ್ರಿಬಲ್ 3,4,5

ಫುಟ್‌ಬಾಲ್: ರೆಬೆಲ್ಸ್ ಎಫ್‌ಸಿಗೆ ಜಯ

ಬೆಂಗಳೂರು: ರೆಬೆಲ್ಸ್ ಎಫ್‌ಸಿ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಬುಧವಾರ 3-2 ಗೋಲುಗಳಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಮಣಿಸಿದರು.

ರೆಬೆಲ್ಸ್ ಪರ ಸೂರಜ್ ಗುರಂಗ್ (9 ಮತ್ತು 68ನೇ ನಿ.) ಹಾಗೂ ಬಿಬಿನ್ ಬಾಬು (89) ಗೋಲು ಗಳಿಸಿದರು.

ಕೊಡಗು ಎಫ್‌ಸಿ ಮತ್ತು ಎಫ್‌ಸಿ ಅಗ್ನಿಪುತ್ರ ನಡುವಣ ಪಂದ್ಯ 2-2 ಗೋಲುಗಳ ಡ್ರಾದಲ್ಲಿ ಕೊನೆಗೊಂಡಿತು.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಇಂದಿನಿಂದ

ಕರ್ನಾಟಕಕ್ಕೆ ಜಮ್ಮು–ಕಾಶ್ಮೀರ ಸವಾಲು

ಅಹಮದಾಬಾದ್: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ಕ್ರಿಕೆಟ್ ತಂಡವು ಗುರುವಾರ ಇಲ್ಲಿ ಆರಂಭವಾಗಲಿರುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯದಲ್ಲಿ ಕಣಕ್ಕಿಳಿಯಲಿದೆ.

ಕರ್ನಾಟಕ ತಂಡವು ಈ ಸಲ ಸಿ ಗುಂಪಿನಲ್ಲಿದೆ. ಮೊದಲ ಪಂದ್ಯದಲ್ಲಿ ಜಮ್ಮು-ಕಾಶ್ಮೀರದ ವಿರುದ್ಧ ಆಡಲಿದೆ. ಏಕದಿನ ಮಾದರಿಯ ಪಂದ್ಯಗಳ ಈ ಟೂರ್ನಿಯಲ್ಲಿ ಯುವ ಆಟಗಾರರಾದ ಕೆ. ಶ್ರೀಜಿತ್ ಹಾಗೂ ಶುಭಾಂಗ್ ಹೆಗ್ಡೆ ಆಡಲಿದ್ದಾರೆ.

ಅನುಭವಿಗಳಾದ ಮನೀಷ್ ಪಾಂಡೆ, ಆಫ್‌ಸ್ಪಿನ್ನರ್ ಕೆ. ಗೌತಮ್, ಆರ್. ಸಮರ್ಥ್ ಅವರಿದ್ದಾರೆ. ಬೌಲಿಂಗ್ ವಿಭಾಗದಲ್ಲಿ ವಿದ್ವತ್ ಕಾವೇರಪ್ಪ, ವೈಶಾಖ ವಿಜಯಕುಮಾರ್ ಮತ್ತು ವಾಸುಕಿ ಕೌಶಿಕ್ ಅವರು ತಂಡದ ಪ್ರಮುಖ ಶಕ್ತಿಯಾಗಿದ್ದಾರೆ. ಕಳೆದ ದೇಶಿ ಋತುವಿನಲ್ಲಿ ಈ ಮೂವರು ಬೌಲರ್‌ಗಳು ಉತ್ತಮವಾಗಿ ಆಡಿದ್ದರು.

ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್, ಬ್ಯಾಟರ್ ಕರುಣ್ ನಾಯರ್ ಅವರು ಪರರಾಜ್ಯದ ತಂಡಗಳಿಗೆ ವಲಸೆ ಹೋಗಿದ್ದಾರೆ.

ಪ್ರಸಿದ್ಧ ಕೃಷ್ಣ ಆಸ್ಟ್ರೇಲಿಯಾ ಎದುರಿನ ಟಿ20 ಸರಣಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ. ಆಲ್‌ರೌಂಡರ್ ಮನೋಜ್ ಬಾಂಢಗೆ, ಎಡಗೈ ಸ್ಪಿನ್ನರ್ ಜೆ. ಸುಚಿತ್ ಹಾಗೂ ಬಿರುಸಿನ ಹೊಡೆತಗಾರ ಅಭಿನವ್ ಮನೋಹರ್ ಕೂಡ ತಂಡದಲ್ಲಿದ್ದಾರೆ.

ಕರ್ನಾಟಕದ ಪಂದ್ಯಗಳು: ಟೂರ್ನಿಯಲ್ಲಿ ಕರ್ನಾಟಕ ತಂಡವು ಜಮ್ಮು-ಕಾಶ್ಮೀರ (ನ.23), ಉತ್ತರಾಖಂಡ (ನ.25), ದೆಹಲಿ (ನ.27), ಬಿಹಾರ (ನ.29), ಚಂಡೀಗಡ (ಡಿ.1), ಹರಿಯಾಣ (ಡಿ.3) ಮತ್ತು ಮಿಜೋರಾಂ (ಡಿ.5) ವಿರುದ್ಧ ಆಡಲಿದೆ.

ಬೆಂಗಳೂರಿನಲ್ಲಿ ಪಂದ್ಯಗಳು

ಆಲೂರು: ಕರ್ನಾಟಕದ ಶ್ರೇಯಸ್ ಗೋಪಾಲ್ ಅವರು ಈ ಟೂರ್ನಿಯಲ್ಲಿ ಕೇರಳ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಕೇರಳ ತಂಡವು ಬೆಂಗಳೂರು ಹೊರವಲಯದ ಆಲೂರಿನಲ್ಲಿ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಹಾಲಿ ಚಾಂಪಿಯನ್ ಸೌರಾಷ್ಟ್ರ ತಂಡವನ್ನು ಎದುರಿಸಲಿದೆ.

ಕೇರಳ ತಂವನ್ನು ವಿಕೆಟ್ ಕೀಪರ್ ಸಂಜು ಸ್ಯಾಮ್ಸನ್ ಮುನ್ನಡೆಸುವರು. ಸೌರಾಷ್ಟ್ರಕ್ಕೆ ಜಯದೇವ್ ಉನದ್ಕತ್ ನಾಯಕರಾಗಿದ್ದಾರೆ.

ಎ ಗುಂಪಿನ ಪಂದ್ಯಗಳು ಬೆಂಗಳೂರಿನಲ್ಲಿ ನಡೆಯಲಿವೆ. ಇದರಲ್ಲಿ ಒಡಿಶಾ, ತ್ರಿಪುರಾ, ಪುದುಚೇರಿ, ಸೌರಾಷ್ಟ್ರ, ಮುಂಬೈ, ರೈಲ್ವೆಸ್, ಕೇರಳ, ಸಿಕ್ಕಿಂ, ರೈಲ್ವೆಸ್ ತಂಡಗಳು ಆಡಲಿವೆ.

ಆಸ್ಟ್ರೇಲಿಯಾ ತಂಡದ ಜೊತೆ ದಕ್ಷಿಣ ಕನ್ನಡದ ಕಿನ್ನಿಗೋಳಿ ದಂಪತಿ ಪುತ್ರಿ ಊರ್ಮಿಳಾ

ಟೆನಿಸ್‌ಗೆ ವಿದಾಯ; ವಿಶ್ವಕಪ್ ಗೆದ್ದ ಸಂಭ್ರಮ

ಪ್ರಜಾವಾಣಿ ವಾರ್ತೆ

ಮಂಗಳೂರು: ಇಷ್ಟದ ಕ್ರೀಡೆ ಟೆನಿಸ್‌ನಿಂದ ವೈಯಕ್ತಿಕ ಕಾರಣಗಳಿಂದ ದೂರ ಉಳಿಯಬೇಕಾಗಿ ಬಂದ ಊರ್ಮಿಳಾ ರೊಜಾರಿಯೊ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಪ್ರಶಸ್ತಿ ಗೆದ್ದ ಆಸ್ಟ್ರೇಲಿಯಾ ತಂಡದ ಜೊತೆ ಸಂಭ್ರಮಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ಕಿನ್ನಿಗೋಳಿ ಮೂಲದ ಐವಿ ರೊಜಾರಿಯೊ ಮತ್ತು ವೆಲೆಂಟೈನ್ ಅವರ ಪುತ್ರಿ ಊರ್ಮಿಳಾ. ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮ್ಯಾನೇಜರ್ ಆಗಿರುವ ಅವರು ಈ ಬಾರಿ ವಿಶ್ವಕಪ್ ಗೆದ್ದ ತಂಡದ ಜೊತೆ ಭಾರತದಲ್ಲಿದ್ದರು. ಬುಧವಾರ ಬೆಂಗಳೂರಿನಿಂದ ಆಸ್ಟ್ರೇಲಿಯಾಗೆ ತೆರಳಿದ್ದು ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾ ಮಹಿಳಾ ತಂಡದ ಜೊತೆ ಭಾರತಕ್ಕೆ ಬರಲಿದ್ದಾರೆ.

ಉದ್ಯಮಿ ಐವಿ ಮತ್ತು ಶಿಕ್ಷಕಿ ವೆಲೆಂಟೈನ್ ಅವರು 40 ವರ್ಷ ದೋಹಾದಲ್ಲಿ ನೆಲೆಸಿದ್ದರು. ಊರ್ಮಿಳಾ ಜನಿಸಿದ್ದು ಮತ್ತು ಬೆಳೆದದ್ದು ಅಲ್ಲೇ. ಟೆನಿಸ್ ಪಟು ಆಗಿದ್ದ ಅವರು ಏಕಾಏಕಿ ಕ್ರೀಡಾ ವ್ಯವಸ್ಥಾಪನೆಯ ಕಡೆಗೆ ಸಾಗಿದರು. ಆಸ್ಟ್ರೇಲಿಯಾಗೆ ತೆರಳಿ ಅಡಿಲೇಡ್ ಕ್ರಿಕೆಟ್ ತಂಡದ ವ್ಯವಸ್ಥಾಪಕಿ ಆಗಿ ಕಾರ್ಯನಿರ್ವಹಿಸಿದರು.



ಊರ್ಮಿಳಾ ರೊಜಾರಿಯೊ

ಈ ವರ್ಷದ ಸೆಪ್ಟೆಂಬರ್‌ನಲ್ಲಿ ಆಸ್ಟ್ರೇಲಿಯಾ ರಾಷ್ಟ್ರೀಯ ತಂಡದ ವ್ಯವಸ್ಥಾಪಕಿಯಾಗಿ ನೇಮಕಗೊಂಡಿದ್ದರು.

ದೋಹಾದಿಂದ ಮರಳಿದ ಐವಿ ಮತ್ತು ಶಿಕ್ಷಕಿ ವೆಲೆಂಟೈನ್ ದಂಪತಿ ಈಗ ಸಕಲೇಶಪುರದ ತೋಟದ ಮನೆಯಲ್ಲಿ ನೆಲೆಸಿದ್ದಾರೆ. ಪುತ್ರಿ ಇದ್ದ ತಂಡ ವಿಶ್ವಕಪ್ ಗೆದ್ದ ನಂತರ ಅವರೂ ಖುಷಿಯ ಅಲೆಯಲ್ಲಿದ್ದಾರೆ. ಬೆಂಗಳೂರಿನಲ್ಲಿದ್ದ ಊರ್ಮಿಳಾ ಅವರನ್ನು ಬುಧವಾರ ಆಸ್ಟ್ರೇಲಿಯಾಗೆ ಕಳುಹಿಸಿದ್ದಾರೆ. 'ಪ್ರಜಾವಾಣಿ' ಜೊತೆ ದೂರವಾಣಿ ಮೂಲಕ ಮಾತನಾಡಿದ ವೆಲೆಂಟೈನ್ 'ನಮಗೆ ನಾಲ್ವರು ಮಕ್ಕಳು. ಎಲ್ಲರೂ ಕ್ರೀಡಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ವಿಶ್ವಕಪ್ ಗೆದ್ದ ತಂಡದಲ್ಲಿ ಊರ್ಮಿಳಾ ಇದ್ದದ್ದು ಖುಷಿಯ ಸಂಗತಿ' ಎಂದರು.

ಐಸಿಸಿ ಮಹಿಳಾ ಚಾಂಪಿಯನ್‌ಷಿಪ್ ಅಂಗವಾಗಿ ಡಿ. 28ರಿಂದ ಭಾರತದಲ್ಲಿ ನಡೆಯಲಿರುವ ಭಾರತ-ಆಸ್ಟ್ರೇಲಿಯಾ ಏಕದಿನ ಸರಣಿಯ ವೇಳೆ ಮಹಿಳಾ ತಂಡದ ವ್ಯವಸ್ಥಾಪಕಿಯಾಗಿ ಊರ್ಮಿಳಾ ಭಾರತಕ್ಕೆ ಬರುವ ನಿರೀಕ್ಷೆಯಲ್ಲಿದ್ದಾರೆ ಕುಟುಂಬದವರು.

ಟಿಟಿ: ಬೆಂಗಳೂರು, ಮಂಗಳೂರು ತಂಡಕ್ಕೆ ಗೆಲುವು

ಬೀದರ್: ಪದವಿಪೂರ್ವ ಶಿಕ್ಷಣ ಇಲಾಖೆಯಿಂದ ನಗರದಲ್ಲಿ ಏರ್ಪಡಿಸಿದ್ದ ಪದವಿಪೂರ್ವ ವಿದ್ಯಾರ್ಥಿಗಳ ರಾಜ್ಯ ಟೇಬಲ್ ಟೆನಿಸ್ ಟೂರ್ನಿಯ ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ದಕ್ಷಿಣ ಮತ್ತು ಬಾಲಕರ ವಿಭಾಗದಲ್ಲಿ ಮಂಗಳೂರು ತಂಡ ಪ್ರಶಸ್ತಿ ಗೆದ್ದುಕೊಂಡಿತು. ಇದರೊಂದಿಗೆ ರಾಷ್ಟ್ರಮಟ್ಟದ ಸ್ಪರ್ಧೆಗೂ ಆಯ್ಕೆಯಾಗಿದ್ದಾರೆ.

ಬೆಂಗಳೂರು ದಕ್ಷಿಣ ತಂಡದ ತೃಪ್ತಿ ಪಿ. ಹಾಗೂ ಸಹನಾ ಎಚ್.ಎಂ. ಅವರು ಬೆಂಗಳೂರು ಉತ್ತರದ ಶ್ರೇಯಾ ನಾಯಕ ಮತ್ತು ನಿಹಾರಿಕಾ ಎ. ಅವರನ್ನು ಮಣಿಸಿದರು.

ಮಂಗಳೂರಿನ ಪೃಥ್ವಿ ಮತ್ತು ಮಂಜುನಾಥ ಅವರು ಉಡುಪಿಯ ಆದಿತ್ಯ, ಕೃಷ್ಣ ಅವರನ್ನು ಪರಾಭವಗೊಳಿಸಿದರು.